GOVERNMENT OF TAMILNADU

ಕನ್ನಡ ಸಿರಿ

KANNADA READER

ಎಂಟನೆಯ ತರಗತಿ

VIII STANDARD

Department of School Education

Untouchability is Inhuman and a Crime

8th_Kannada_Reader Term I_U4-9.indd 1 18-06-2019 10.46.48 AM

Government of Tamil Nadu

First Edition - 2019

Reprint - 2020, 2021, 2022, 2023, 2024

(Published under New Syllabus)

Content Creation

State Council of Educational Research and Training

© SCERT 2019

Printing & Publishing

Tamil Nadu Textbook and Educational Services Corporation

www.textbooksonline.tn.nic.in



ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ವಿದ್ಯಾರ್ಥಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



8th_Kannada_Reader Term I_U4-9.indd 3 18-06-2019 10.46.49 AM

ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ
ತವಶುಭ ನಾಮೆ ಜಾಗೇ
ತವಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ!


–ಮಹಾಕವಿ ರವೀಂದ್ರನಾಥ್ ಠಾಗೂರ್.

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್ , ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.

ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!




8th_Kannada_Reader Term I U4-9.indd 4 18-06-2019 10.46.49 AM

ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕಿಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಪಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿ–
ರುವ ದಕ್ಷನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ
ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ
ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ
ಮೈಮರೆತು ಹಾಡಿ ಹೊಗಳುತ್ತೇನೆ.

8th_Kannada_Reader Term I_U4-9.indd 5 18-06-2019 10.46.50 AM



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



8th_Kannada_Reader Term I_U4-9.indd 6 18-06-2019 10.46.50 AM

ನಾಡ ಗೀತೆ

ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು

8th_Kannada_Reader Term I_U4-9.indd 7 18-06-2019 10.46.50 AM

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕ ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯಲೋಕ, ಕಾವ್ಯ ಕಣಜ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....

8th_Kannada_Reader Term I_U4-9.indd 8 18-06-2019 10.46.50 AM

ಪರಿವಿಡಿ

ಘಟಕ	ಶೀರ್ಷಿಕೆ			ಪುಟ ಸಂಖ್ಯೆ
1. ಭಾಷೆ				01
ಕಾವ್ಯ ಕಣಜ	ವಿಶ್ವಭಾರತಿಗೆ ಕನ್ನಡದಾರತಿ *	–	ಚನ್ನವೀರ ಕಣವಿ	02
ಪೂರಕ ಪದ್ಯ	ಕನ್ನಡಾಂಬೆಯ ಹಿರಿಮೆ	–	ಬೆನಗಲ್ ರಾಮರಾಯ	06
ಗದ್ಯ ವಿಹಾರ	ರೆ॥ ಜಾರ್ಜ್ ಫರ್ಡಿನಾಂಡ್ ಕಿಟೆಲ್	–	ಡಾ. ಆರ್.ಸಿ.ಹಿರೇಮಠ	08
ಉಪಪಠ್ಯ	ಮಹಾಕವಿ ಪಂಪ	–	ಟಿ.ಆರ್.ಕಣ್ಣನ್	16
ವ್ಯಾಕರಣ	ಕನ್ನಡ ವರ್ಣಮಾಲೆ			18
2. ಪ್ರಕೃತಿ				19
ಕಾವ್ಯ ಕಣಜ	ನಿಸರ್ಗ	–	ಜಿ.ವರದರಾಜರಾವ್	20
ಪೂರಕ ಪದ್ಯ	ಮಳೆ	–	ದೇಶಾಂಶ ಹುಡಗಿ	24
ಗದ್ಯ ವಿಹಾರ	ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು	–	ಶ್ರೀನಿವಾಸ	26
ಉಪಪಠ್ಯ	ಸೌಂದರ್ಯಕ್ಕೆ ರೆಕ್ಕೆ ಬಂದ ಲೋಕದವರು	–	ಹಾ.ಮಾ.ನಾಯಕ	33
ವ್ಯಾಕರಣ	ನಾಮಪದಗಳು			37
3. ಆರೋಗ್ಯ				38
ಕಾವ್ಯ ಕಣಜ	ಗುರಿ	–	ಡಾ. ಎಂ.ಗೋಪಾಲಕೃಷ್ಣ ಅಡಿಗ	39
ಗದ್ಯ ವಿಹಾರ	ಆಹಾರ ಮತ್ತು ಆರೋಗ್ಯ			43
ಉಪಪಠ್ಯ	ಯೋಗಾಭ್ಯಾಸ			48
ವ್ಯಾಕರಣ	ಲಿಂಗ–ವಚನ			51
4. ಶಿಕ್ಷಣ				52
ಕಾವ್ಯ ಕಣಜ	ನಮ್ಮ ಕನಸು	–	ಶಂ.ಗು. ಬಿರಾದಾರ	53
ಪೂರಕ ಪದ್ಯ	ಮಹಾತ್ಮ	–	ಗಂಗಾಧರ ಚಿತ್ತಾಲ	56
ಗದ್ಯ ವಿಹಾರ	ಪುಸ್ತಕಗಳು	–	ಹಿರೇಮಲ್ಲೂರು ಈಶ್ವರನ್	60
ಉಪಪಠ್ಯ	ಸಪ್ತಾಕ್ಷರೀ ಮಂತ್ರ	–	ಮುದ್ದಣ	64
ವ್ಯಾಕರಣ	ವಿಭಕ್ತಿ ಪ್ರತ್ಯಯಗಳು ಮತ್ತು ವಾಕ್ಯಗಳು			69
5. ಕಲೆ, ಸೌಂದರ್ಯ ಮತ್ತು ಸಂಸ್ಕೃತಿ				70
ಕಾವ್ಯ ಕಣಜ	ಹಳ್ಳಿಯ ಹೂಗಳಿಗೆ *	–	ಡಾ. ಡಿ.ಎಸ್. ಕರ್ಕಿ	71
ಪೂರಕ ಪದ್ಯ	ನಿನ್ನ ಕರೆಯ ಕೇಳಿ	–	ರವೀಂದ್ರನಾಥ್ ಟ್ಯಾಗೂರ್	75
ಗದ್ಯ ವಿಹಾರ	ಚೋಳರ ಪ್ರಮುಖ ದೇವಾಲಯಗಳು	–	ಪ್ರೊ. ತಮಿಳ್ ಸೆಲ್ವಿ	78
ಉಪಪಠ್ಯ	ನಾವು, ನಮ್ಮ ಮಕ್ಕಳು	–	(ಸಂಗ್ರಹ)	87
ವ್ಯಾಕರಣ	ಕಾಲಸೂಚಕಗಳು			91

8th_Kannada_Reader Term I_U4-9.indd 9 18-06-2019 10.46.50 AM

ಘಟಕ	ಶೀರ್ಷಿಕೆ		ಪುಟ ಸಂಖ್ಯೆ
6. ನಾಗರಿಕತೆ, ವೃತ್ತಿ, ವಾಣಿಜ್ಯ			93
ಕಾವ್ಯ ಕಣಜ	ಏಣಿ	– ಸುಕನ್ಯಾ ಮಾರುತಿ	94
ಪೂರಕ ಪದ್ಯ	ಒಗ್ಗಟ್ಟು	– (ಸಂಗ್ರಹ)	97
ಗದ್ಯ ವಿಹಾರ	ಮಲ್ಲಗಂಬ	– (ಸಂಗ್ರಹ)	99
ಉಪಪಠ್ಯ	ಗಂಧರ್ವ ಸೇನ	– (ಸಂಗ್ರಹ)	103
ವ್ಯಾಕರಣ	ಸಂಧಿಗಳು		107
7. ನಾಡು, ಸಮಾಜ			109
ಕಾವ್ಯ ಕಣಜ	ಮತ್ತೆ ಹುಟ್ಟುವುದಾದರೆ	– ಸವಿತಾ ನಾಗಭೂಷಣ	110
ಪೂರಕ ಪದ್ಯ	ನನ್ನ ಹಾಗೆಯೇ	– ಸು.ರಂ.ಎಕ್ಕುಂಡಿ	114
ಗದ್ಯ ವಿಹಾರ	ಮನದಣಿಯೆ ನೋಡಿ ಮಣಿದೆ	– ಎಂ.ಕೆ.ಇಂದಿರಾ	118
ಉಪಪಠ್ಯ	ಆ ದೇಶವೇ ಅವರ ತಾಯಿ	– ಹೊಯ್ಸಳ	123
ವ್ಯಾಕರಣ	ಸಂಸ್ಕೃತ ಸಂಧಿಗಳು		127
8. ಧರ್ಮ–ತತ್ವ–ಚಿಂತನೆ			129
ಕಾವ್ಯ ಕಣಜ	ಮುಂದಕೆ ಲೇಸುಂಟು ನಮಗೆ	– ಹೆಳವನಕಟ್ಟೆ ಗಿರಿಯಮ್ಮ	130
ಪೂರಕ ಪದ್ಯ	ನುಡಿಮುತ್ತುಗಳು	– ಎಸ್.ವಿ.ಪರಮೇಶ್ವರಭಟ್ಟ	134
ಗದ್ಯ ವಿಹಾರ	ಶ್ರೀಕೃಷ್ಣಸಂಧಾನ	– ಎ.ಆರ್.ಕೃಷ್ಣಶಾಸ್ತ್ರಿ	136
ಉಪಪಠ್ಯ	ಸಾಲೊಮನ್ನನ ನ್ಯಾಯ	– (ಸಂಗ್ರಹ: ಬೈಬಲ್)	144
ವ್ಯಾಕರಣ	ದ್ವಿರುಕ್ತಿ ಹಾಗೂ ಜೋಡಿ ಪದಗಳು		147
9. ಮಾನವೀಯತೆ			148
ಕಾವ್ಯ ಕಣಜ	ನೇಸರು ನಗುತಾನೆ *	– ಡಾ.ದೊಡ್ಡರಂಗೇಗೌಡ	149
ಪೂರಕ ಪದ್ಯ	ನನ್ನ ದೇಹದ ಬೂದಿ	– ದಿನಕರ ದೇಸಾಯಿ	152
ಗದ್ಯ ವಿಹಾರ	ಗುರುದಕ್ಷಿಣೆ	– (ಸಂಗ್ರಹ)	155
ಉಪಪಠ್ಯ	ಮಕ್ಕಳ ಮಹತ್ವ	– ಸದಾಶಿವಮೂರ್ತಿ ಗುಮಟಾಪುರ	160
ವ್ಯಾಕರಣ	ಗಾದೆಗಳು		164

* ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.

8th_Kannada_Reader Term I_U4-9.indd 10 18-06-2019 10.46.50 AM

ಘಟಕ ಒಂದು

1. ಭಾಷೆ



ಕಾವ್ಯ ಕಣಜ	:	ವಿಶ್ವಭಾರತಿಗೆ ಕನ್ನಡದಾರತಿ	– ಚನ್ನವೀರ ಕಣವಿ
ಪೂರಕ ಪದ್ಯ	:	ಕನ್ನಡಾಂಬೆಯ ಹಿರಿಮೆ	– ಬೆನಗಲ್ ರಾಮರಾಯ
ಗದ್ಯ ವಿಹಾರ	:	ರೆ॥ ಜಾರ್ಜ್ ಫರ್ಡಿನಾಂಡ್ ಕಿಟೆಲ್	– ಡಾ. ಆರ್.ಸಿ.ಹಿರೇಮಠ
ಉಪಪಠ್ಯ	:	ಮಹಾಕವಿ ಪಂಪ	– ಟಿ.ಆರ್.ಕಣ್ಣನ್
ವ್ಯಾಕರಣ	:	ಕನ್ನಡ ವರ್ಣಮಾಲೆ	

8th_Kannada_Reader Term I_U4-9.indd 1 18-06-2019 10.46.51 AM

ಕಾವ್ಯ ಕಣಜ


ಘಟಕ ಒಂದು

ವಿಶ್ವಭಾರತಿಗೆ ಕನ್ನಡದಾರತಿ

– ಚನ್ನವೀರ ಕಣವಿ



ಕವಿಯಾದವನಿಗೆ ತಾಯ್ನಾಡು ಹಾಗೂ ತಾಯ್ನುಡಿಯ ಬಗೆಗಿನ ಅಭಿಮಾನ ಹೆಚ್ಚು. ನಮ್ಮ ಭಾರತ ದೇಶವು ಹಲವು ಮತಧರ್ಮಗಳಿಗೆ ತವರೂರಾಗಿದೆ. ಭಾರತಾಂಬೆಯ ಮಗಳಾದ ಕನ್ನಡಾಂಬೆಯು ತನ್ನ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಧರ್ಮ ಸಹಿಷ್ಣುತೆ, ಮಾನವೀಯತೆ ಮುಂತಾದ ಗುಣಗಳಿಂದ ವಿಶ್ವವಿಖ್ಯಾತವಾಗಿದ್ದಾಳೆ. ಸನಾತನ ಮಹತ್ವ ಸಾರಿರುವ ಆಚಾರ್ಯ ಪುರುಷರು, ಭಕ್ತಿವರೇಣ್ಯರಾದ ದಾಸ ಶ್ರೇಷ್ಠರು, ದಾರ್ಶನಿಕರು, ಶಿವಶರಣರು, ಮಹಾಕವಿವರ್ಯರ ನೆಲೆವೀಡು ಈ ಭವ್ಯ ಕನ್ನಡನಾಡು. ಈ ಕವನದಲ್ಲಿ ಭಾರತವನ್ನು ಒಳಗೊಂಡ ವಿಶ್ವಮಾತೆಗೆ ಕನ್ನಡಾಂಬೆಯು ಆರತಿಯನ್ನು ಬೆಳಗುವ ಪವಿತ್ರ ಸಂದರ್ಭದತ್ತ ಬೆಳಕು ಚೆಲ್ಲುತ್ತದೆ.



8th_Kannada_Reader Term I_U4-9.indd 2 18-06-2019 10.46.52 AM

ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯ ಸಂಸ್ಕಾರಿ
ಜಯಭಾರತಿ, ಕರುನಾಡ ಸರಸ್ವತಿ
ಗುಡಿಗೋಪುರ ಸುರಶಿಲ್ಪ ಕಲಾಕೃತಿ
ಕೃಷ್ಣೆ, ತುಂಗೆ, ಕಾವೇರಿ ಪವಿತ್ರಿತ ಕ್ಷೇತ್ರ
ಮನೋಹಾರಿ ವಿಶ್ವವಿನೂತನ... ||

ಗಂಗ ಕದಂಬ ರಾಷ್ಟ್ರಕೂಟ ಬಲ
ಚಾಲುಕ್ಯ ಹೊಯ್ಸಳ, ಬಲ್ಲಾಳ
ಹಕ್ಕ–ಬುಕ್ಕ, ಪುಲಕೇಶಿ ವಿಕ್ರಮರ, ಚನ್ನಮ್ಮಾಜಿಯ
ವೀರಶ್ರೀ ವಿಶ್ವವಿನೂತನ... ||

ಆಚಾರ್ಯತ್ರಯ ಮತಸಂಸ್ಥಾಪನ
ಬಸವಾಲ್ಲಮ ಅನುಭಾವ ನಿಕೇತನ
ಶರಣ–ದಾಸ–ತೀರ್ಥಂಕರ ನಡೆ–ನುಡಿ
ವಿಶ್ವತಮೋಹಾರಿ ವಿಶ್ವವಿನೂತನ... ||

ಪಂಪ ರನ್ನ ನೃಪತುಂಗ ಹರೀಶ್ವರ
ರಾಘವಾಂಕ ಸರ್ವಜ್ಞ ಪುರಂದರ
ಕುವರವ್ಯಾಸ ರತ್ನಾಕರ ಜನಪದ ಕಾವ್ಯ
ಸಮುದ್ರವಿಹಾರಿ ವಿಶ್ವವಿನೂತನ... ||

ಸಾಯಣ ವಿದ್ಯಾರಣ್ಯ ಭಾಸ್ಕರ
ಮಹಾದೇವಿ ಮುಕ್ತಾಯಿ ಮಹಂತರ
ಕಂತಿ–ಹಂಪ, ಸುಮನೋರಮೆ–ಮುದ್ದಣ
ಸರಸ ಹೃದಯ ವಿಶ್ವವಿನೂತನ... ||

ತ್ಯಾಗ–ಭೋಗ ಸಮಯೋಗದ ದೃಷ್ಟಿ
ಬೆಳವೊಲ, ಮಲೆ, ಕರೆ, ಸುಂದರ ಸೃಷ್ಟಿ
ಜ್ಞಾನದ, ವಿಜ್ಞಾನದ, ಕಲೆಯೈಸಿರಿ ಸಾರೋದಯ
ಧಾರಾನಗರಿ ವಿಶ್ವವಿನೂತನ... ||

ಅರಿವೇ ಗುರು, ನುಡಿ ಜ್ಯೋತಿರ್ಲಿಂಗ
ದಯವೇ ಧರ್ಮದ ಮೂಲ ತರಂಗ
ವಿಶ್ವಭಾರತಿಗೆ ಕನ್ನಡದಾರತಿ ! ಮೊಳಗಲಿ ಮಂಗಲ
ಜಯಭೇರಿ ವಿಶ್ವವಿನೂತನ... ||

8th_Kannada_Reader Term I_U4-9.indd 3 18-06-2019 10.46.52 AM

ಕವಿ–ಕಾವ್ಯ ಪರಿಚಯ



ಚನ್ನವೀರ ಕಣವಿ

ಕನ್ನಡ ಸಾಹಿತ್ಯ ನವೋದಯದ ಪ್ರಸಿದ್ಧ ಕವಿಗಳಾಗಿರುವ ಚನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಜೂನ್ 28, 1928ರಂದು ಜನಿಸಿದರು. ತಂದೆ : ಸಕ್ಕರೆಪ್ಪ; ತಾಯಿ : ಪಾರ್ವತವ್ವ. ಇವರು ಪ್ರಾಥಮಿಕ ಶಿಕ್ಷಣವನ್ನು ಗದಗದಲ್ಲಿಯೂ, ಉನ್ನತ ವ್ಯಾಸಂಗವನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿಯೂ ಪಡೆದರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದ ಶ್ರೀಯುತರು 1950ರಲ್ಲಿ ಅದೇ ಸಂಸ್ಥೆಯ ನಿರ್ದೇಶಕರಾದರು. ಇವರ ದೀಪದಾರಿ, ನೆಲಮುಗಿಲು ಎಂಬ ಕೃತಿಗಳಿಗೆ ರಾಜ್ಯ ಸರ್ಕಾರದ ಬಹುಮಾನ ದೊರೆತಿದೆ. 'ಆಕಾಶ ಬುಟ್ಟಿ' ಎನ್ನುವ ಕೃತಿಗೆ ಮುಂಬಯಿ ರಾಜ್ಯದ ಪ್ರಶಸ್ತಿ ಲಭಿಸಿದೆ. ಇವರ 'ಜೀವ ಧ್ವನಿ' ಎನ್ನುವ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಇವರ ಸಾಹಿತ್ಯ ಸೇವೆಯನ್ನು ಮನ್ನಿಸಿ 1989ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಗಿದೆ. ಇವರು ಹಾಸನದಲ್ಲಿ ನಡೆದ 65ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪದಗಳ ಅರ್ಥ

ವಿಶ್ವ–ಪ್ರಪಂಚ; ನೂತನ–ಹೊಸದು; ವಿದ್ಯೆ–ಜ್ಞಾನಾರ್ಜನೆ, ಕಲಿಕೆ; ಕರುನಾಡು–ಕನ್ನಡನಾಡು, ಕರ್ನಾಟಕ; ಸರಸ್ವತಿ–ವಿದ್ಯಾಧಿದೇವತೆ; ಸುರಶಿಲ್ಪ–ದೇವತೆಗಳ ಶಿಲ್ಪಕಲಾಕೃತಿಗಳು; ಆಚಾರ್ಯತ್ರಯರು–ಶಂಕರ, ರಾಮಾನುಜ, ಮಧ್ವಾಚಾರ್ಯರು; ತಮೋ–ಕತ್ತಲು, ಅಜ್ಞಾನ; ಸಮುದ್ರ–ಕಡಲು, ಸಾಗರ; ಧಾರಾನಗರಿ–ಧಾರವಾಡ ನಗರ; ಅರಿವು–ತಿಳುವಳಿಕೆ, ಜ್ಞಾನ, ಬುದ್ಧಿವಂತಿಕೆ; ನುಡಿ–ಮಾತು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಜಯ ಭಾರತಿಯು ಎಂತಹವಳು ?
2. ಕನ್ನಡ ನಾಡಿನ ಪವಿತ್ರ ನದಿಗಳನ್ನು ಹೆಸರಿಸಿ?
3. ಕನ್ನಡ ನಾಡನ್ನು ಆಳಿದ ರಾಜ ಮನೆತನಗಳು ಯಾವುವು ?
4. ಯಾರ ವೀರಶ್ರೀ ಕನ್ನಡ ನಾಡಿನ ತುಂಬೆಲ್ಲಾ ಮೆರೆದಿದೆ ?
5. ಆಚಾರ್ಯತ್ರಯರು ಯಾರು ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಯಾರ ಬೋಧನೆ ಹಾಗೂ ಮಾರ್ಗದರ್ಶನದಿಂದ ಜನರ ಅಜ್ಞಾನವು ದೂರವಾಗಿದೆ ?
2. ಕನ್ನಡ ನಾಡಿನ ಪ್ರಸಿದ್ಧ ಕವಿಗಳು–ಕವಯತ್ರಿಯರು ಯಾರು ಯಾರು ?
3. ಕನ್ನಡ ನಾಡು ಯಾವ ಯಾವ ಕಲೆಗಳಿಗೆ ಆಗರವಾಗಿದೆ ?

8th_Kannada_Reader Term I_U4-9.indd 4 18-06-2019 10.46.52 AM

4. ದಯವೇ ಧರ್ಮದ ಮೂಲವೆಂದು ಸಾರಿದ ಮಹಾಪುರುಷ ಯಾರು ? ಆತನ ಸಂದೇಶದ ಮಹತ್ವವನ್ನು ತಿಳಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಿಶ್ವಭಾರತಿಗೆ ಕನ್ನಡವು ಆರತಿಯನ್ನು ಬೆಳಗುತ್ತಿದ್ದಾಳೆ. ಹೇಗೆ ? ವಿವರಿಸಿ.
2. ಕನ್ನಡ ನಾಡಿನಲ್ಲಿ ಹರಿದು, ಜನ ಮಾನಸವನ್ನು ಪಾವನಗೊಳಿಸುತ್ತಿರುವ ನದಿಗಳನ್ನು ಕುರಿತು ಬರೆಯಿರಿ.

ಭಾಷಾಭ್ಯಾಸ

1. **ಈ ಕೆಳಗೆ ಕೊಟ್ಟಿರುವ ಪದಗಳ ಅರ್ಥ ಬರೆಯಿರಿ**

   ಸರಸ್ವತಿ, ಸುರ, ವಿಶ್ವ, ತಮ, ಸಮುದ್ರ, ಅರಿವು.

2. **ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

   ಅಸುರ, ಜಯ, ಮಾಪನ, ದಯೆ, ಸರಸ, ಜ್ಞಾನ, ಧರ್ಮ.

3. **ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**


   ಗುಡಿಗೋಪುರ, ಅನುಭಾವ, ವಿಹಾರ, ಸುಂದರ, ಜಯಭೇರಿ

4. **ಈ ಕೆಳಗಿನ ಪದಗಳನ್ನು ಗಮನಿಸಿ.**

   ಬೆಳುವೊಲ, ಗುಡಿಗೋಪುರ, ಸುರಶಿಲ್ಪ, ಕಲಾಕೃತಿ, ಆಚಾರ್ಯತ್ರಯ

ಚಟುವಟಿಕೆ

1. ಕನ್ನಡ ನಾಡಿನಲ್ಲಿ ಜನಿಸಿದ ಮಹಾಪುರುಷರ ಜೀವನ ಚರಿತ್ರೆಯನ್ನು ಸಂಗ್ರಹಿಸಿ ಓದಿರಿ
2. ಕರ್ನಾಟಕದ ಭೂಪಟದಲ್ಲಿ ಕಾವೇರಿ, ಕೃಷ್ಣೆ, ತುಂಗಭದ್ರಾ ನದಿಗಳ ಉಗಮ ಸ್ಥಾನವನ್ನು ಗುರುತಿಸಿರಿ.
3. ಕರ್ನಾಟಕದ ಶಿಲ್ಪಕಲೆಗಳ ಚಿತ್ರಗಳನ್ನು ಸಂಗ್ರಹಿಸಿರಿ.



8th_Kannada_Reader Term I_U4-9.indd 5 18-06-2019 10.46.52 AM

ಪೂರಕ ಪದ್ಯ

ಘಟಕ ಒಂದು

ಕನ್ನಡಾಂಬೆಯ ಹಿರಿಮೆ

– ಬೆನಗಲ್ ರಾಮರಾಯ

ಕನ್ನಡವನುಳಿದೆನಗೆ – ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು – ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ – ಕನ್ನಡವೆ ಮನೆ ಮಾನ್ಯ
ಕನ್ನಡವೆಯೆನಗಾಯ್ತು – ಕಣ್ಣು ಕಿವಿ ಬಾಯಿ ‖1‖

ಕನ್ನಡದ ಸವಿಮಾತು – ಮನ್ನಣೆಯ ಪಳಮಾತು
ಕನ್ನಡ ಸರಸ್ವತಿಯು – ನವ ಕಲ್ಪಲತೆಯು
ಕನ್ನಡದ ವರಚರಿತೆ – ವಿಮಲ ಗಂಗಾಸರಿತೆ
ಕನ್ನಡದ ಸಿರಿಪೆಂಪು – ಎನಗೆ ನರುಗಂಪು ‖2‖

ಕನ್ನಡ ಸನ್ಮಾನ – ಎನಗದುವೆ ವರಮಾನ
ಕನ್ನಡಿಗರ ಸ್ವತಂತ್ರವದೆ – ಪರಮ ಮಂತ್ರ
ಕನ್ನಡದ ಕೀರ್ತಿ – ಎನ್ನ ಚಿತ್ತದ ಸ್ಫೂರ್ತಿ
ಕನ್ನಡದ ಒಗ್ಗೂಟ – ವೆನಗದೆ ಕಿರೀಟ ‖3‖

ಕನ್ನಡದ ಹೊಲ ಮಣ್ಣು – ಎನಗೆ ನವನಿಧಿ ಹೊನ್ನು
ಕನ್ನಡದ ತಿಳಿಜಲವು – ಸುಧೆಯ ಪಲ್ವಲವು
ಕನ್ನಡದ ಹೂಗಿಡವು – ಎನ್ನೊಡಲಿಗಿದೆ ತೊಡವು
ಕನ್ನಡದ ಪಶುಪಕ್ಷಿ – ಚೆಲುವಿಗದೆ ಸಾಕ್ಷಿ ‖4‖

ಕನ್ನಡಿಗರತಿಶಯವು – ಭುವನೇಶ್ವರಿಯ ದಯವು
ಕನ್ನಡಿಗರಿಗೆ ಜಯವು – ಕೃಷ್ಣನಾಶ್ರಯವು
ಕನ್ನಡದ ಜನಕುಲವು – ಎನ್ನ ತೋಳಿಗೆ ಬಲವು
ಕನ್ನಡಾಂಬೆಯ ಮುಕ್ತಿ – ರಾಮನುತೆ – ಶಕ್ತಿ ‖5‖

8th_Kannada_Reader Term I_U4-9.indd 6 18-06-2019 10.46.52 AM

ಕವಿ–ಕಾವ್ಯ ಪರಿಚಯ



ಬೆನಗಲ್ ರಾಮರಾಯ

ಕನ್ನಡ ಸಾಹಿತ್ಯದ, ನವೋದಯದ ಪ್ರಮುಖ ಕವಿಗಳಲ್ಲಿ ಬೆನಗಲ್ ರಾಮರಾಯರು ಪ್ರಸಿದ್ಧರಾದವರು. ಕನ್ನಡ ನಾಡುನುಡಿಯ ಅಭಿವೃದ್ಧಿಗಾಗಿ ದುಡಿದ ಇವರು 3.4.1876ರಲ್ಲಿ ಮಂಗಳೂರಿನಲ್ಲಿ ಜನಿಸಿದರು. ಪ್ರಾರಂಭಿಕ ಶಿಕ್ಷಣವನ್ನು ಮುಲ್ಕಿ, ಮಂಗಳೂರು ಮತ್ತು ಪುತ್ತೂರುಗಳಲ್ಲಿ ಪಡೆದರು. ತದನಂತರ ಮಂಗಳೂರಿನ ಸರ್ಕಾರಿ ಕಾಲೇಜು ಮತ್ತು ಮದರಾಸಿನ ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿದರು. 1896ರಲ್ಲಿ ಬಿ.ಎ., ಪದವಿಯನ್ನೂ, ನಂತರ ಎಂ.ಎ., ಪದವಿಯನ್ನೂ ಪಡೆದರು. 1917ರಲ್ಲಿ ಮದರಾಸು ಸರ್ಕಾರದ ಭಾಷಾಂತರ ಇಲಾಖೆಯಲ್ಲಿ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಇವರದು ಬಹುಮುಖ ಪ್ರತಿಭೆ. ಸಂಸ್ಕೃತ, ಬಂಗಾಲಿ, ಮರಾಠಿ, ತೆಲುಗು ಮತ್ತು ಇಂಗ್ಲಿಷ್ ಭಾಷೆಗಳನ್ನು ಇವರು ಚೆನ್ನಾಗಿ ತಿಳಿದಿದ್ದರು. ತಂಜಾವೂರು ಮತ್ತು ಹಳೇಬೀಡಿನ ಕೈಫಿಯತ್ತುಗಳನ್ನು ಬೆಳಕಿಗೆ ತಂದು, 'ಕೈಫಿಯತ್ತಿನ ರಾಮರಾಯ'ರೆಂದು ಹೆಸರು ಗಳಿಸಿದರು. ಕೆಲಕಾಲ ಮಂಗಳೂರಿನ 'ಸುವಾಸಿನಿ' ಹಾಗೂ ಧಾರವಾಡದ 'ವಾಗ್ಭೂಷಣ' ಪತ್ರಿಕೆಗಳ ಸಂಪಾದಕರಾಗಿದ್ದರು. ಶ್ರೀಯುತರು ಇಪ್ಪತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು 1925ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ಮೇ ತಿಂಗಳ 8, 1943ರಲ್ಲಿ ಬೆಂಗಳೂರಿನಲ್ಲಿ ವಿಧಿವಶರಾದರು.

ಪದಗಳ ಅರ್ಥ

ಅನ್ಯ–ಬೇರೆ, ಇತರ; ತಾಯಿ–ಅಮ್ಮ, ಜನನಿ; ಸವಿ–ಸಿಹಿ; ಸರಸ್ವತಿ–ವಿದ್ಯಾಧಿದೇವತೆ; ಮನ್ನಣೆ–ಗೌರವ; ನವ–ಹೊಸ; ಸಿರಿ–ಐಶ್ವರ್ಯ, ಸಂಪತ್ತು; ನವನಿಧಿ–ಒಂಬತ್ತು ವಿಧವಾದ ಐಶ್ವರ್ಯಗಳು(ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಚಪ, ಮುಕುಂದ, ಕುಂದ, ನೀಲ ಮತ್ತು ಕರ್ವವೆಂಬ ಕುಬೇರನ ಒಂಬತ್ತು ನಿಧಿಗಳು); ಸುಧೆ–ಅಮೃತ; ಪಲ್ವಲ–ಅಮೃತಸರೋವರ; ಚೆಲುವು–ಸೌಂದರ್ಯ; ಮುಕ್ತಿ–ಮೋಕ್ಷ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿಗೆ ಯಾವುದು ಉಸಿರು ? ಯಾವುದು ತಾಯಿ ?
2. ಕನ್ನಡದ ಪೆಂಪುಗಂಪುಗಳನ್ನು ವಿವರಿಸಿ .
3. ಎನಗೆ ಕಿರೀಟವೆಂದು ಕವಿಯು ಯಾವುದನ್ನು ಹೇಳುತ್ತಾರೆ ?
4. ಕವಿಯು ಯಾವುದನ್ನು ನವನಿಧಿ ಹೊನ್ನೆಂದು ತಿಳಿಸಿದ್ದಾರೆ ?
5. ಕನ್ನಡಾಂಬೆಯ ಮುಕ್ತಿ ಶಕ್ತಿಗಳಾವುವು ?
6. ಕನ್ನಡ ನಾಡಿನ ಪ್ರಕೃತಿ ಸೌಂದರ್ಯವು ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ?

8th_Kannada_Reader Term I_U4-9.indd 7 18-06-2019 10.46.52 AM

ಘಟಕ ಒಂದು

ರೆ॥ ಜಾರ್ಜ್ ಫರ್ಡಿನಾಂಡ್ ಕಿಟೆಲ್

– ಡಾ. ಆರ್.ಸಿ. ಹಿರೇಮಠ



ವಿದೇಶದಿಂದ ಮತ ಪ್ರಚಾರಕ್ಕೆ ಬಂದು ಕನ್ನಡ ಸೇವೆ ಮಾಡಿದವರಲ್ಲಿ ರೆವರೆಂಡ್ ಎಫ್ ಕಿಟೆಲ್ ಅಗ್ರಗಣ್ಯರು. ಅವರ ಕನ್ನಡ ಸೇವೆ ಪ್ರಶಂಸನೀಯ ಮಾತ್ರವಲ್ಲ; ಅನುಕರಣೀಯವೂ ಅಹುದು. ಅವರು ಕನ್ನಡಿಗರಿಗೆ ಪ್ರಾತಃಸ್ಮರಣೀಯರು. ಅವರು ಪಾದ್ರಿಯಾಗಿ ಕ್ರೈಸ್ತ ಧರ್ಮ ಪ್ರಚಾರಕ್ಕೆಂದು ಜರ್ಮನ್ ದೇಶದಿಂದ ಬಂದರು. ಕನ್ನಡ ನಾಡು ನುಡಿಯ ಹಿರಿಮೆ ಗರಿಮೆಗಳಿಗೆ ಮನಸೋತರು. ಕನ್ನಡವನ್ನು ಕಲಿತು ಕನ್ನಡ ಭಾಷೆಗೆ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದರು. ಸಂಶೋಧಕರಾಗಿ ಕವಿಗಳಾಗಿ ಬೆಳಗಿದರು. ಕನ್ನಡ–ಇಂಗ್ಲಿಷ್ ನಿಘಂಟು ರಚಿಸಿ ಮಹದುಪಕಾರ ಮಾಡಿದ್ದಾರೆ. ಕಿಟೆಲ್ ಅವರ ಕನ್ನಡ ಸೇವೆಯ ಬಗ್ಗೆ ಈ ಗದ್ಯ ಪಾಠವು ಬೆಳಕು ಚೆಲ್ಲುವುದು.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಿಟ್ಟೆಲ್ಲರ ಹೆಸರು ಕಲ್ಪಾಂತರ ಸ್ಥಾಯಿಯಾಗಿದೆ. ಅವರು ಮಾಡಿದ ಕನ್ನಡ ಅಧ್ಯಯನ, ಕನ್ನಡಕ್ಕೆ ಅವರು ನೀಡಿದ ಕಾಣಿಕೆ ಕಲ್ಪನಾತೀತವಾಗಿದೆ. ಹದಿನೆಂಟನೆಯ ಶತಮಾನದಲ್ಲಿ ಐರೋಪ್ಯರ ಕಡಲ ಸಾಹಸ, ವ್ಯಾಪಾರದ ಧ್ಯೇಯ, ಮತ ಪ್ರಚಾರದ ಪ್ರೇರಣೆ ಇವುಗಳ ಮೂಲಕ ಪೂರ್ವ ಪಶ್ಚಿಮಗಳಲ್ಲಿ ಹೆಚ್ಚಿನ ಸಂಪರ್ಕ, ಸಂಬಂಧ ಬೆಳೆದವು. 'ಈಸ್ಟ್ ಈಸ್ ಈಸ್ಟ್, ವೆಸ್ಟ್ ಈಸ್ ವೆಸ್ಟ್; ನೆವರ್ ದಿ ಟ್ವಿನ್ ಷಲ್ ಮೀಟ್'(ಪೂರ್ವ–ಪೂರ್ವ; ಪಶ್ಚಿಮ–ಪಶ್ಚಿಮ– ಇವೆರಡೂ ಒಂದುಗೂಡಲು ಸಾಧ್ಯವಿಲ್ಲ) ಎಂಬ ಮಾತು ಇವರ ಸೇವೆಯಿಂದ ಹುಸಿಯಾಗತೊಡಗಿತು. ಅನೇಕ ಜನ ಕವಿಗಳು, ವಿದ್ವಾಂಸರು, ಮೇಧಾವಿಗಳು ಆಗ ಭರತ ಖಂಡಕ್ಕೆ ಬಂದು ಇಲ್ಲಿಯ ಭಾಷೆ, ಸಾಹಿತ್ಯ, ತತ್ವಜ್ಞಾನ, ಧರ್ಮ, ಸಂಸ್ಕೃತಿಗಳ ಅಧ್ಯಯನ ಕೈಗೊಂಡು ಅಮೂಲ್ಯ ಕೃತಿಗಳನ್ನು ರಚಿಸಿದರು. ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾದ ಪಾಶ್ಚಾತ್ಯ ವಿದ್ವಾಂಸರು ಈ ದೇಶದ ಭಾಷೆ – ಸಾಹಿತ್ಯಗಳನ್ನು ಅಭ್ಯಸಿಸಿ, ಶಾಶ್ವತ ಕೃತಿಗಳನ್ನು ರಚಿಸಿ, ಭಾರತೀಯ ಭಾಷೆ ಸಾಹಿತ್ಯಗಳ



ಅಭ್ಯಾಸಕ್ಕೆ ಹೊಸ ಕಳೆ, ಹೊಸ ಸ್ವರೂಪವನ್ನು ಇತ್ತಿರುವರು. ಮಾಕ್ಸ್ ಮುಲ್ಲರ್, ಬ್ರೂಕ್‌ಮನ್, ಬ್ಲೂಂಫೀಲ್ಡ್ ಇವರು ವೇದಾಧ್ಯಯನ ಕ್ಷೇತ್ರಕ್ಕೆ; ಶೋಪನ್ ಹಾವರ್ ಉಪನಿಷತ್ ವಾಙ್ಮಯಕ್ಕೆ; ಕೀಟ್, ವಿಂಟರ್‌ನಿಝ್ ಮೊದಲಾದವರು ಸಂಸ್ಕೃತ ನಾಟಕ

8th_Kannada_Reader Term I_U4-9.indd 8 18-06-2019 10.46.52 AM

ಸಾಹಿತ್ಯಗಳಿಗೆ; ಫಾದರ್ ಬೆಸ್ಚಿ, ಬಿಷಪ್ ಕಾಲ್ಡ್‌ವೆಲ್ ಮೊದಲಾದವರು ತಮಿಳು ಭಾಷೆಗೆ; ಬ್ರೌನ್ ಅವರು ತೆಲುಗಿಗೆ; ರ್ಹೀವ್, ಸ್ಯಾಂಡರ್ ಸನ್, ಮೊಗ್ಲಿಂಗ್, ಫ್ಲೀಟ್, ರೈಸ್ ಮೊದಲಾದವರು ಕನ್ನಡಕ್ಕೆ ನೀಡಿದ ಕಾಣಿಕೆ ಅಮೋಘವಾದುದು. ಇವರೆಲ್ಲರ ಮಧ್ಯದಲ್ಲಿ ಮಹಾಮೇರುವಿನಂತೆ ಕಂಗೊಳಿಸುತ್ತಾರೆ ಕಿಟ್ಟೆಲ್. ಕೇಶಿರಾಜ, ನಾಗವರ್ಮರಂತಹವರ ಸಾಲಿನಲ್ಲಿಯೂ ಕಿಟೆಲ್ ಮಿನುಗುವ ಜ್ಯೋತಿಯಾಗಿರುವರು.

ಬುದ್ಧಿಮತ್ತೆ, ಕ್ರತುಶಕ್ತಿಗೆ ಹೆಸರಾಗಿದೆ ಜರ್ಮನ್ ದೇಶ. ವೇದಾಗಮ, ಉಪನಿಷತ್, ಶಾಸ್ತ್ರಗಳ ಅಧ್ಯಯನ, ಆಧುನಿಕ ವಿಜ್ಞಾನ ಯುಗದ ಸಿದ್ಧಿ – ಎರಡನ್ನೂ ಸಾಧಿಸಿದ ವೈಶಿಷ್ಟ್ಯಪೂರ್ಣ ದೇಶ ಜರ್ಮನಿ. ಇತಿಹಾಸವು ಅದರ ಮಹಿಮೆಯನ್ನೂ, ವೈಭವವನ್ನೂ ಕೊನೆಗೆ ದುರ್ದೈವ ಸ್ಥಿತಿಯನ್ನೂ ಒಕ್ಕೊರಲಿನಿಂದ ಕೂಗುತ್ತದೆ. ಜರ್ಮನ್ ದೇಶದ ಪ್ರೀಸ್‌ಲೆಂಡ್–ವ್ಯಾನೋವರ್ ಪ್ರಾಂತ್ಯದ ಪೂರ್ವ ಭಾಗದಲ್ಲಿ, ಹಾಲೆಂಡ್ ದೇಶದ ಪೂರ್ವಕ್ಕೆ, ನೆದರ್‌ಲ್ಯಾಂಡಿನ ಸನಿಹದಲ್ಲಿ ಉತ್ತರ ಸಾಗರದ ಅಂಚಿನಲ್ಲಿ 'ರೆಸ್ಟರ್‌ಹಾಫ್–ವೆಸ್ಟರ್ ಹೋಲ್ಡ್' ಎಂಬುದೊಂದು ಊರು. ಅಲ್ಲಿ ಗಾಟ್‌ಫ್ರೀಟ್ ಕ್ರಿಸ್ಟಿಯಾನ್ ಕಿಟೆಲ್ ಎಂಬ ಕ್ಲರ್ಜಿಯು 'ಈಸ್ಟರ್ನ್ ಫ್ರೀಸ್‌ಲ್ಯಾಂಡ್ ಮಿಷನ್ ಸಮಿತಿ'ಯ ಸದಸ್ಯನಾಗಿದ್ದನು. 'ಟ್ಯೂಡೋವ್ ಹೆಲ್ಲೆನ್ ಹ್ಯಾಬರ್ಟ್' ಆತನ ಪತ್ನಿ. ಈ ದಂಪತಿಗಳಿಗೆ ಆರು ಜನ ಮಕ್ಕಳಿದ್ದರು. ಅವರಲ್ಲಿ ಹಿರಿಯವ ಫರ್ಡಿನಾಂಡ್ ಕಿಟೆಲ್. ಇನ್ನೊಬ್ಬ ಜೆ.ಕಿಟೆಲ್ ಎಂಬುವನು ತಲ್ಲಿಚೇರಿಯಲ್ಲಿ ಕೆಲ ಕಾಲ ಮಿಷನರಿಯಾಗಿ ಕೆಲಸ ಮಾಡಿದ್ದನು. ಹೀಗೆ ಫರ್ಡಿನಾಂಡನ ಸುತ್ತಮುತ್ತ ಮಿಷನರಿಯ ವಾತಾವರಣವಿದ್ದುದು ಗಮನಾರ್ಹ.

ರೆವರೆಂಡ್ ಜಾರ್ಜ್ ಫರ್ಡಿನಾಂಡ್ ಕಿಟೆಲ್ ಕ್ರಿ.ಶ. 1832ನೆಯ ಏಪ್ರಿಲ್ 7ರಂದು ಜನಿಸಿದರು. ರೆಸ್ಟರ್‌ಹಾಫ್ ಅವರ ಜನ್ಮಭೂಮಿ. ಅಲ್ಲಿಯೇ ಫರ್ಡಿನಾಂಡ್ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಅವರ ಅಜ್ಜ ಈಸ್ಟ್ ಫ್ರೀಜಿಯಾ ಜಿಲ್ಲೆಯ ಔರಿಕ್ ಎಂಬ ಸ್ಥಳದಲ್ಲಿ ವಾಸವಾಗಿದ್ದರು. ಫರ್ಡಿನಾಂಡ್ ಕ್ರಿ.ಶ. 1841ನೆಯ ಇಸವಿ ಸೆಪ್ಟೆಂಬರ್ ತಿಂಗಳು, ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಔರಿಕ್ ಸ್ಥಳಕ್ಕೆ ಬಂದು ಅಜ್ಜನ ಮನೆಯಲ್ಲಿ ಉಳಿದು ಹೈಸ್ಕೂಲು ಸೇರಿದರು. ಕ್ರಿ.ಶ. 1849ರವರೆಗೆ ಆತನ ಶಿಕ್ಷಣ ಅಲ್ಲಿ ಮುಂದುವರೆಯಿತು. ಅಲ್ಲಿ ಆತನು, 'ಕ್ಲಾಸಿಕಲ್ ಶಿಕ್ಷಣ' ಪಡೆಯಬೇಕಾಗಿತ್ತು. ಹೀಬ್ರೂ, ಗ್ರೀಕ್, ಲ್ಯಾಟಿನ್, ಫ್ರೆಂಚ್, ಇಂಗ್ಲಿಷ್ ಭಾಷೆಗಳ ಸಾಹಿತ್ಯಗಳಲ್ಲೂ, ಇತರ ವಿಷಯಗಳಲ್ಲೂ ಆತನ ಪ್ರಗತಿ ಯಾವಾಗಲೂ ಚೆನ್ನಾಗಿಯೇ ಇದ್ದಿತು. 1849ನೆಯ ಇಸವಿ, ಹೈಸ್ಕೂಲಿನ ಐದನೆಯ ತರಗತಿಯಲ್ಲಿ ಉತ್ತೀರ್ಣನಾಗಿ ಆರನೆಯ ವರ್ಗವನ್ನು ಸೇರುವಷ್ಟರಲ್ಲಿ ವಿಲಕ್ಷಣವಾದ ಬದಲಾವಣೆ ಅವನಲ್ಲಿ ಕಂಡು ಬಂದಿತು.

ಫರ್ಡಿನಾಂಡ್ ಸ್ವಭಾವತಃ ಅಂತರ್ಮುಖಿಯಾಗಿದ್ದನು. ಜನ್ಮತಃ ಧಾರ್ಮಿಕ ಭಾವನೆಯುಳ್ಳ ಆತನಿಗೆ ಅಂದಿನ ಐರೋಪ್ಯದ ಕ್ಲಾಸಿಕಲ್ ಲೇಖಕರ ಬರಹಗಳು ರುಚಿಸದಾದವು. ಆ ಶಾಲೆಯನ್ನು ಬಿಡಬೇಕೆಂದು ನಿರ್ಧರಿಸಿ ತನ್ನ ನಿರ್ಧಾರವನ್ನು ಅಲ್ಲಿಯ ಶಿಕ್ಷಕರಿಗೂ, ತನ್ನ ತಂದೆತಾಯಿಗಳಿಗೂ ತಿಳಿಸಿದನು. ತನ್ನ 17ನೆಯ ವಯಸ್ಸಿನಲ್ಲಿ ಫರ್ಡಿನಾಂಡ್ ಆ ಶಾಲೆಯನ್ನು ಬಿಟ್ಟನು. ಮುಂದೆ ಏನು?

ಈತನು ದೈಹಿಕವಾಗಿಯೂ, ಮಾನಸಿಕವಾಗಿಯೂ ಮಿಶನರಿ ಶಿಕ್ಷಣಕ್ಕೆ, ಕಾರ್ಯಕ್ಕೆ ಸಮರ್ಥನಾಗಿರುವನು ಎಂದು ಅತನ ಕಾಲೇಜ್ ಪ್ರಿನ್ಸಿಪಾಲ್ ರೋಟ್‌ಹಾರ್ಟ್ ಮಿಶನ್ ಸಂಸ್ಥೆಗೆ ಆತನ ಬಗೆಗೆ ಶಿಫಾರಸು ಮಾಡಿದ್ದನು. 1849ನೆಯ ಆಗಸ್ಟ್ ತಿಂಗಳು ಕಿಟೆಲ್, ಬಾಸೆಲ್ ಮಿಶನ್ ಸಂಸ್ಥೆಗೆ ಅರ್ಜಿ ಸಲ್ಲಿಸಿದನು. ಈ ಅರ್ಜಿ ಫರ್ಡಿನಾಂಡನ ಅಂದಿನ ಮಾನಸಿಕ ಸ್ಥಿತಿಯನ್ನೂ ಮುಂದಿನ ಜೀವನದ ಗೊತ್ತು ಗುರಿಗಳನ್ನೂ ಸ್ಪಷ್ಟ ಪಡಿಸುತ್ತದೆ. ಕಿಟೆಲ್‌ರ ವ್ಯಕ್ತಿತ್ವದ ಅಭಿವೃದ್ಧಿಯ ದೃಷ್ಟಿಯಿಂದ ಅದು ಅತಿ ಮಹತ್ವವುಳ್ಳದ್ದು. ಮಿಶನರಿಯ ಸೇವೆಗೆ ತಾನು ಸಮರ್ಥನಾಗಿದ್ದೇನೆಂಬ ಭಾವನೆಯ ಅವನಿಗಿರಲಿಲ್ಲ. ಆದರೆ ದೇವರ ಸಹಾಯವನ್ನು ಯಾಚಿಸಿ, ಪರಮಾತ್ಮನ ಅನುಸಂಧಾನಕ್ಕಾಗಿ, ಲೋಕ ಸಂಗ್ರಹದ ಭಾವನೆಯಿಂದ ಆತನು ಮಿಶನರಿ ಶಾಲೆಯನ್ನು ಪ್ರವೇಶಿಸಬೇಕೆಂದು ಹಾರೈಸಿದನು.

1849ನೆಯ ಆಗಸ್ಟ್ 30ರಂದು ಕಿಟೆಲ್‌ರ ತಂದೆ ಬಾಸೆಲ್ ಮಿಶನ್ ಸಮಿತಿಗೆ ತನ್ನ ಮಗನನ್ನು

8th_Kannada_Reader Term I_U4-9.indd 9 18-06-2019 10.46.52 AM

ಮಿಶನ್ ಶಿಕ್ಷಣಕ್ಕಾಗಿ ತೆಗೆದುಕೊಳ್ಳಬೇಕೆಂದು ಅರ್ಜಿ ಸಲ್ಲಿಸಿದರು. ಮೂವರು ಗಣ್ಯ ವ್ಯಕ್ತಿಗಳು ಅದನ್ನು ಶಿಫಾರಸು ಮಾಡಿದರು. ಫರ್ಡಿನಾಂಡ್‌ನ ಆಧ್ಯಾತ್ಮಿಕ ಒಲವನ್ನು ಎತ್ತಿ ತೋರಿಸುವ ಆತನ ಪ್ರಾರ್ಥನಾ ಪದ್ಯಗಳ ಭಾಷಾಂತರವನ್ನು ತಂದೆ ಅರ್ಜಿಯ ಜೊತೆಗೆ ಕಳುಹಿಸಿ ಕೊಟ್ಟಿದ್ದರು. ಈಸ್ಟ್ ಫ್ರೀಜಿಯನ್ ಸೊಸೈಟಿಯ ಸಂಪೂರ್ಣ ಸಹಾಯ, ಸಹಾನುಭೂತಿಗಳು ಅವನಿಗಿದ್ದವು. ಆತನ ತಂದೆತಾಯಿಗಳು ತಮ್ಮ ಮಗನಿಗೆ ಅಲ್ಲಿ ಬೇಗನೆ ಪ್ರವೇಶ ದೊರೆಯಲೆಂದು ಆಶಿಸಿದರು. ಸದಸ್ಯರೊಬ್ಬರು ಕೆಲ ನಿಯಮಗಳನ್ನು ಶಿಥಿಲಗೊಳಿಸಿ ಅವನಿಗೆ ಪ್ರವೇಶ ನೀಡಬೇಕೆಂದು ಸಮಿತಿಗೆ ಸಲಹೆಯಿತ್ತರು. 1850ನೆಯ ಇಸವಿ ಜನವರಿ 16ರಂದು, ಈ ವಿಷಯ ಸಮಿತಿಯ ಎದುರು ಚರ್ಚೆಗೆ ಬಂದು ಫರ್ಡಿನಾಂಡನಿಗೆ 'ಪ್ರಿಪರೇಟರಿ ವರ್ಗ'ಕ್ಕೆ ಪ್ರವೇಶ ದೊರೆಯಿತು. ಕಿಟೆಲ್ ಅವರು ಕ್ರಿ.ಶ. 1850ರಲ್ಲಿ ತಮ್ಮ ವಯಸ್ಸಿನ 18ನೇ ವರ್ಷ, ಸ್ವಿಡ್ಜರ್‌ಲ್ಯಾಂಡಿನ ಬಾಸೆಲ್ ನಗರದ ಮಿಶನ್ ಕಾಲೇಜು ಸೇರಿದರು.

ಮಿಶನರಿ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತು ಪಡೆಯುವವರ ಒಲವು–ನಿಲುವುಗಳನ್ನು ಮೇಲಿಂದ ಮೇಲೆ ಪರೀಕ್ಷಿಸಲಾಗುತ್ತದೆ. ಪ್ರಥಮ ಪರೀಕ್ಷೆ ಕಿಟೆಲ್ ಅವರಲ್ಲಿ ಆಗ ತಾನೇ ಸಾವಕಾಶವಾಗಿ ಅಂಕುರಿಸುತ್ತಿದ್ದ ಆಧ್ಯಾತ್ಮಿಕ ಚಿತ್ತವೃತ್ತಿಯನ್ನು ಸೂಚಿಸಿತು. ಆಗ ಇನ್ನೂ ಮಿಶನರಿಯ ಧ್ಯೇಯ, ಕರ್ತವ್ಯಗಳ ಬಗೆಗೆ ಕಿಟೆಲ್ ಅವರಿಗೆ ಏನೂ ತಿಳಿದಿರಲಿಲ್ಲ. ಕ್ರಮೇಣ ಅವನ್ನೆಲ್ಲ ಅರಿತು, ಆಧ್ಯಾತ್ಮಿಕ ಶಕ್ತಿಯನ್ನು ಅರಳಿಸಿಕೊಳ್ಳುತ್ತಾ ಅವರು ವಿದ್ಯಾಭ್ಯಾಸ ಮುಂದುವರೆಸಿದರು. ಅವನ ಒಳ್ಳೆಯ ಸ್ವಭಾವ, ತೆರೆದ ಮನಸ್ಸು, ಭಾಷಾ ಪಾಂಡಿತ್ಯಗಳನ್ನು ಆತನ ಶಿಕ್ಷಕರು ಮೆಚ್ಚಿಕೊಂಡರು. 1853ನೆಯ ಏಪ್ರಿಲ್ ತಿಂಗಳು ಕಿಟೆಲ್ ಅವರ ಅಭ್ಯಾಸ ಮುಗಿಯಿತು. ಭಾರತಕ್ಕೆ ಅವರನ್ನು ಕಳಿಸಬೇಕೆಂದು ನಿರ್ಧಾರವಾಯಿತು.

ಧಾರವಾಡದಲ್ಲಿ ರೆವರೆಂಡ್ ವೀಗಲ್ ಅವರು ಮಿಶನರಿ ಅಧಿಕಾರಿಗಳಾಗಿದ್ದರು. ಮಹಾಮೇಧಾವಿಗಳಾದ ಅವರು ಭಾರತೀಯ ತತ್ವಜ್ಞಾನದಲ್ಲಿ ನಿಷ್ಣಾತರಾಗಿದ್ದರು. 'ಕನ್ನಡ ಬೈಬಲ್ ನಿರ್ಮಾಣ ಸಮಿತಿ'ಯ ಅಧ್ಯಕ್ಷರಾಗಿದ್ದುದಲ್ಲದೆ, ಕನ್ನಡ ಸಾಹಿತ್ಯದ ಇತಿಹಾಸವನ್ನು ಮೊಟ್ಟ ಮೊದಲು ವಿವರಿಸಿದರು. ಕನ್ನಡ ಭಾಷೆಯ ಬಗೆಗೂ ವಿವರಣೆ ನೀಡಿದ್ದರು. ಇಷ್ಟು ಪ್ರಭುತ್ವವನ್ನು ವೀಗಲ್ ಕನ್ನಡದಲ್ಲಿ ಪಡೆದಿದ್ದರು. ಕಿಟೆಲ್ ಧಾರವಾಡಕ್ಕೆ ಬಂದು ವೀಗಲ್ ಅವರಲ್ಲಿ ಕನ್ನಡ ಅಭ್ಯಸಿಸಬೇಕಿತ್ತು. 1853ನೆಯ ಅಕ್ಟೋಬರ್ ತಿಂಗಳು ಕಿಟೆಲ್ ಮತ್ತು ಕಾಫ್‌ಮನ್ ಇಬ್ಬರೂ ಬಾಸೆಲ್ ನಗರವನ್ನು ಬಿಟ್ಟು ಟ್ರೆಯಸ್ಟ್ ಮತ್ತು ಅಲೆಕ್ಸಾಂಡ್ರಿಯಾ ಮಾರ್ಗವಾಗಿ ಭಾರತಕ್ಕೆ ಬಂದರು. ಅವರು ಧಾರವಾಡವನ್ನು ತಲುಪುವಷ್ಟರಲ್ಲಿ ರೆವರೆಂಡ್ ವೀಗಲ್ ಅವರ ಸ್ಥಳದಲ್ಲಿ ರೆವರೆಂಡ್ ಮೊರಿಕ್ ಎಂಬುವವರು ಕೆಲಸ ಮಾಡುತ್ತಿದ್ದರು. ಕಿಟೆಲ್ ಕನ್ನಡವನ್ನು ಧಾರವಾಡ, ಮಂಗಳೂರು, ಮಡಿಕೇರಿ ಮುಂತಾದ ಸ್ಥಳಗಳಲ್ಲಿ ಉತ್ಸಾಹದಿಂದ ಕಲಿತರು.

ಹನ್ನೊಂದು ಮಿಲಿಯನ್ ಜನಸಂಖ್ಯೆಯ ಕನ್ನಡ ನಾಡಿನಲ್ಲಿ ಅನೇಕ ಮಿಶನರಿ ಶಾಲೆಗಳಿದ್ದವು. ಅವಕ್ಕೆ ಪಠ್ಯಪುಸ್ತಕದ ಅವಶ್ಯಕತೆಯಿದ್ದಿತು. ಬೈಬಲ್‌ನ ಕನ್ನಡ ಆವೃತ್ತಿಯ ಕೊರತೆಯೂ ಇದ್ದಿತು.

ಕಿಟೆಲ್ ಅವರಿಗೆ ಒಂದು ದೃಷ್ಟಿಯಲ್ಲಿ ಗುರುವಿನಂತಿದ್ದ ಮೊಗ್ಲಿಂಗ್ ಕನ್ನಡದಲ್ಲಿ ವಿಶೇಷ ಕಾರ್ಯವನ್ನೆಸಗಿದರು. ಸರ್ ವಾಲ್ಟರ್ ಎಲಿಯೆಟ್‌ನನ್ನು ಇಲ್ಲಿ ನೆನೆಯಬೇಕು. ಈತನನ್ನು ಕಿತ್ತೂರು ಚೆನ್ನಮ್ಮ ರಾಣಿ ಸೆರೆ ಹಿಡಿದಿದ್ದಳು. ಆಮೇಲೆ ಧಾರವಾಡದಲ್ಲಿ ಅಸಿಸ್ಟೆಂಟ್ ಕಲೆಕ್ಟರನಾಗಿ ಕನ್ನಡ ಶಾಸನ ಸಂಗ್ರಹಿಸಿದ್ದಲ್ಲದೆ, ಶೈಕ್ಷಣಿಕ ಪುಸ್ತಕ ರಚಿಸಿದ್ದನು. ಈ ಹಿನ್ನೆಲೆಯಲ್ಲಿ ಕಿಟೆಲ್ ಅವರ ಕನ್ನಡ ಶಿಕ್ಷಣ ಮುಂದುವರೆಯಿತು. ಇಪ್ಪತ್ತು ವರ್ಷ ವಯಸ್ಸಾದ ಮೇಲೆ ಪ್ರಾರಂಭಿಸಿದ ಕನ್ನಡ ಅಧ್ಯಯನವನ್ನು ಕಿಟೆಲ್ ಅಲ್ಪಾವಧಿಯಲ್ಲಿಯೇ ಆ ಭಾಷೆಯಲ್ಲಿ ಪದ್ಯ ರಚಿಸುವ, ಶಾಸ್ತ್ರ ಗ್ರಂಥವನ್ನು ಸಂಪಾದಿಸುವ ಪ್ರಾಚೀನ ಗ್ರಂಥಗಳನ್ನು, ಪ್ರಾಚೀನ ಕಾವ್ಯಗಳನ್ನು ಅರಿಯುವ ಮಟ್ಟಿಗೆ ಕರಗತ ಮಾಡಿಕೊಂಡದ್ದು ಸೋಜಿಗವಾದರೂ ಸತ್ಯ. ಪಶ್ಚಿಮದಲ್ಲಿ ಜನಿಸಿದ ಓರ್ವ ವ್ಯಕ್ತಿ ಭಾರತೀಯ ಭಾಷೆಯನ್ನು ಇಷ್ಟೊಂದು ಅಭ್ಯಸಿಸಿರುವುದು, ಅದರಲ್ಲಿ ಸಿದ್ಧಿಯನ್ನು ಪಡೆದಿರುವುದು ಒಂದು ಪವಾಡದಂತಿದೆ.

ಕಿಟೆಲ್ 1860ರಲ್ಲಿ ಮಂಗಳೂರಿನಲ್ಲಿ ಪಾಲಿನ್

8th_Kannada_Reader Term I_U4-9.indd 10 18-06-2019 10.46.52 AM

ಐತ್ ಎನ್ನುವ ಜರ್ಮನ್ ಯುವತಿಯನ್ನು ಮದುವೆಯಾದರು. ಅವರಿಗೆ ಇಬ್ಬರು ಗಂಡು ಮಕ್ಕಳು ಜನಿಸಿದರು. ನಾಲ್ಕು ವರ್ಷಗಳಲ್ಲಿ ಆಕೆ ಪತಿ ಹಾಗೂ ತನ್ನ ಇಬ್ಬರು ಮಕ್ಕಳನ್ನು ಬಿಟ್ಟು ತೀರಿ ಹೋದಳು. ತಮ್ಮ ಹೆಂಡತಿಯ ಸಾವಿನಿಂದ ಕಿಟೆಲ್ ಕುಗ್ಗಿ ಹೋದರು. ಧಾರವಾಡ, ಮಂಗಳೂರುಗಳ ಉಷ್ಣ ಹವೆಯು ಅವರಿಗೆ ಒಗ್ಗುತ್ತಿರಲಿಲ್ಲ. ಕಾರಣ ಅವರು ತಮ್ಮ ಆರೋಗ್ಯ ಸುಧಾರಣೆಯ ನಿಮಿತ್ತ, 1866ರಲ್ಲಿ ಸ್ವದೇಶಕ್ಕೆ ತೆರಳಿದರು. ಅಲ್ಲಿ, ಪ್ರಕೃತಿ ಸುಧಾರಿಸುತ್ತಲೇ ತಮ್ಮ ಪತ್ನಿಯ ತಂಗಿ ಜ್ಯೂಲಿ ಎಂಬಾಕೆಯನ್ನು ವಿವಾಹವಾಗಿ, ಮರು ವರ್ಷವೇ ಎಂದರೆ 1867ರಲ್ಲಿ ಭಾರತಕ್ಕೆ, ಕನ್ನಡ ನಾಡಿಗೆ ಬಂದರು. ಎಂತಹ ವಿಷಮ ಪರಿಸ್ಥಿತಿಯಲ್ಲೂ ಕಿಟೆಲ್ ಕನ್ನಡ ಅಭ್ಯಾಸವನ್ನು ಬಿಟ್ಟಿರಲಿಲ್ಲ. 1871ರ ಹೊತ್ತಿಗೆ ಅವರು ಕನ್ನಡದಲ್ಲಿ ಪೂರ್ಣ ಪಾಂಡಿತ್ಯ ಪಡೆದಂತೆ ತಿಳಿದು ಬರುತ್ತದೆ. ಅವರು ಪರಿಷ್ಕರಿಸಿ ಪ್ರಕಟಿಸಿದ ಶಬ್ದಮಣಿದರ್ಪಣದ ಪೀಠಿಕೆ 1871ರಲ್ಲಿ ರಚಿತವಾಗಿದೆ. ಅವರ ಕನ್ನಡ ಭಾಷೆಯ ಪ್ರಭುತ್ವವನ್ನು ಅರಿತ ಬ್ರಿಟೀಷ್ ಸರಕಾರ ತಾನು ರಚಿಸಬೇಕೆಂದಿದ್ದ ಕೋಶದ ಹೊಣೆಯನ್ನು ಕಿಟೆಲ್ಲರಿಗೆ ಒಪ್ಪಿಸಬೇಕೆಂದು ನಿರ್ಧರಿಸಿತು. ಡಾಕ್ಟರ್ ಮೊಗ್ಲಿಂಗ್, ಸರ್ ವಾಲ್ಟರ್ ಎಲಿಯೆಟ್‌ರಂತಹ ಪ್ರೋತ್ಸಾಹದಿಂದ ಕಿಟೆಲ್ ಅವರು ತಮ್ಮ ಇತರೇ ಕೆಲಸಗಳ ಜೊತೆ ಕೋಶದ ಕಾರ್ಯವನ್ನು ನೋಡಿಕೊಳ್ಳುವುದಾಗಿ ಒಪ್ಪಿಗೆ ಇತ್ತರು. ಕಿಟೆಲ್ ಕೋಶದ ರೂಪುರೇಷೆ 1872ರಲ್ಲಿ ಪ್ರಾರಂಭವಾಯಿತು. ಕನ್ನಡ–ಇಂಗ್ಲಿಷ್ ಕೋಶ ನಿರ್ಮಿತಿಗಾಗಿ ವಿಶೇಷ ಪರಿಶ್ರಮ ವಹಿಸಿದರು. ಬ್ರಿಟೀಷ್ ಸರಕಾರದವು ಕೋಶಕ್ಕಾಗಿಯೇ ಕಿಟೆಲ್ ಅವರ ಸಂಪೂರ್ಣ ಸೇವೆಯನ್ನು ಕೋರಿದರೂ ಕಿಟೆಲ್ ಅದಕ್ಕೆ ಒಪ್ಪಲಿಲ್ಲ. ದೇಹದ ಅನಾರೋಗ್ಯದ ನಿಮಿತ್ತ ಕೋಶದ ಕೆಲಸ ನಿಂತು ಹೋಗುವ ಭಯವೂ ತೋರಿ ಬಂದಿತು. ಈ ಕಾರ್ಯಕ್ಕಾಗಿ ಸ್ವದೇಶದ ತಂಪು ಹವೆ ಲೇಸೆಂದು 1877ರಲ್ಲಿ ಪುನಃ ಜರ್ಮನಿಗೆ ಹೋಗಿ ಎಸ್ಲಿಂಗನ್ ಎಂಬಲ್ಲಿ 1883ರವರೆಗೆ ನೆಲೆಸಿದರು. ಅಲ್ಲಿ ತಮ್ಮ ಕೋಶದ ಪ್ರಥಮ ಕರಡನ್ನು ಸಿದ್ಧಪಡಿಸಿದರು. ಕನ್ನಡ ಪಂಡಿತರೊಡನೆ ಚರ್ಚಿಸಿ ಕೊನೆಯ ಪ್ರತಿ ಸಿದ್ಧಪಡಿಸಬೇಕೆಂದು 1883ರಲ್ಲಿ ಧಾರವಾಡಕ್ಕೆ ಬಂದರು. ಅಲ್ಲಿ, ಪಂಡಿತರ ಮಂಡಲಿಯನ್ನು ಕಲೆ ಹಾಕಿ ಕೋಶದ ಪರಿಷ್ಕರಣ ಕಾರ್ಯವನ್ನು ಕೈಗೊಂಡರು. ಪ್ರಾಚೀನ ಗ್ರಂಥಗಳ ಶಬ್ದ ಸಂಪತ್ತಿಯನ್ನು ಶೇಖರಿಸಿ ಪರಿಷ್ಕರಿಸಿದರು; ದ್ರಾವಿಡ ಜ್ಞಾತಿ ಶಬ್ದಗಳನ್ನು ಸಂಗ್ರಹಿಸಿ, ನಿಷ್ಪತ್ತಿಯನ್ನೂ ಸೂಚಿಸಿದರು. ಗ್ರಂಥಸ್ಥ ಉದಾಹರಣೆಗಳನ್ನು ಕೊಡುವುದಲ್ಲದೆ, ಜನಸಾಮಾನ್ಯರ ಆಡುನುಡಿಗಳತ್ತ ದೃಷ್ಟಿ ಹರಿಸಿದರು. ಗಾದೆಗಳನ್ನು ಸಂಗ್ರಹಿಸಿದರು. ಹಲವಾರು ಪದಾರ್ಥಗಳನ್ನು ಕಿಸೆಯಲ್ಲಿಟ್ಟುಕೊಂಡು ಧಾರವಾಡ–ಹುಬ್ಬಳ್ಳಿಗಳ ಬೀದಿಯಲ್ಲಿ ಸಂಚರಿಸಿ, ಹಳ್ಳಿಗಳಲ್ಲಿ ಕೇಳಿ ಅರ್ಥ ಸಂಗ್ರಹ ಮಾಡುತ್ತಿದ್ದರು. ಹುಬ್ಬಳ್ಳಿಯ ವಸ್ತ್ರದ ಶಿವಲಿಂಗಪ್ಪ ಎಂಬುವರಿಂದ ಅನೇಕ ಶಬ್ದ ಸಂಗ್ರಹಿಸಿದರು. ಕಿಟೆಲ್ ಇನ್ನೂ ಯಾವ ಯಾವ ಪಂಡಿತರ ಸಹಾಯ ಪಡೆದರು, ಕನ್ನಡ ಯಾರಲ್ಲಿ ಹೇಗೆ ಕಲಿತರು ಎಂಬುದು ತಿಳಿದು ಬಂದಿಲ್ಲ. 70,000 ಶಬ್ದಗಳನ್ನೊಳಗೊಂಡ ಹಸ್ತಪ್ರತಿ 1892ರಲ್ಲಿ ಸಿದ್ಧವಾಯಿತು. ಮಿತಿಮೀರಿದ ತಲೆನೋವು ಹಾಗೂ ನರಗಳ ದೌರ್ಬಲ್ಯದ ಮೂಲಕ ಕ್ರಿ.ಶ.1892ರಲ್ಲಿ ಕಿಟೆಲ್ ಜರ್ಮನಿಗೆ ಹೋಗಿ ಟ್ಯುಬಿಂಗರ್ ವಿಶ್ವವಿದ್ಯಾಲಯದ ಹತ್ತಿರ ತಮ್ಮ ಕುಟುಂಬದೊಂದಿಗೆ ವಾಸ ಮಾಡಿದರು. ಅಲ್ಲಿಯೇ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಕೋಶದ ಪರಿವೀಕ್ಷಣಾ ಕಾರ್ಯವನ್ನು ಕಿಟೆಲ್ ಅವರು ಟ್ಯುಬಿಂಗನ್‌ನಿಂದಲೇ ನೋಡಿಕೊಳ್ಳುತ್ತಿದ್ದರು. 1893ರಲ್ಲಿ ಕೋಶಕ್ಕೆ 'ಮೊದಲ ಮಾತು'ಗಳನ್ನು ಬರೆದರು. 1894ರಲ್ಲಿ ಜೀವನದ ಪರಮೋಚ್ಚ ಕೃತಿ 'ಕನ್ನಡ–ಇಂಗ್ಲಿಷ್ ನಿಘಂಟು' ಪ್ರಕಟವಾಯಿತು.

ಕಿಟೆಲ್ ಅವರ ಕಾರ್ಯ ಬಹುಮುಖ್ಯವಾದುದು. ಇವರು ಶಬ್ದಮಣಿದರ್ಪಣದ ಅಧಿಕೃತ ಮುದ್ರಣವನ್ನು 1872ರಲ್ಲಿ ಬೆಳಕಿಗೆ ತಂದರು. 9 ಹಸ್ತಪ್ರತಿಗಳ ಆಧಾರದಿಂದ ಪಾಠ ನಿರ್ಧರಿಸಿ ಸೂತ್ರಗಳ ಸಾರವನ್ನು ಇಂಗ್ಲಿಷಿನಲ್ಲಿ ಬರೆದು ಪ್ರಕಟಿಸಿದರು. ಇದರಿಂದ ಕನ್ನಡ ವ್ಯಾಕರಣದಲ್ಲಿ ಅವರ ಹೆಸರು ಅಚ್ಚಳಿಯದೆ ಉಳಿಯಿತು. ನಾಗವರ್ಮನ ಛಂದೋಂಬುಧಿಯನ್ನೂ ಇದೇ ರೀತಿ ಶಾಸ್ತ್ರೀಯವಾಗಿ ಪರಿಷ್ಕರಿಸಿ 1875ರಲ್ಲಿ ಪ್ರಕಟಿಸಿದರು. ಇದಕ್ಕೆ ಒಂದು ಹಿನ್ನೆಲೆಯಿದೆ.

ಈ ದೇಶಕ್ಕೆ ಕ್ರೈಸ್ತ ಪಾದ್ರಿಗಳು ಮತ ಪ್ರಚಾರಕ್ಕೆ

8th_Kannada_Reader Term I_U4-9.indd 11 18-06-2019 10.46.52 AM

ಬಂದು, ಪಾಶ್ಚಾತ್ಯ ರೀತಿ ನೀತಿಗಳನ್ನು ಮುಂದುವರೆಸುತ್ತಿದ್ದುದನ್ನು ಕಿಟೆಲ್ ಕಟುವಾಗಿ ಟೀಕಿಸಿದರು. ಇಲ್ಲಿಯ ಜನತೆಯ ಲಯ, ರಾಗ, ಸಂಪ್ರದಾಯಗಳನ್ನು ಕಲಿತು, ಆ ಮೂಲಕ ಉಪದೇಶ ಮಾಡಬೇಕೆಂದರು. ಭಾರತೀಯ ಸಂಗೀತವನ್ನು ಕುರಿತು ನಿಜಗುಣರ ಅಭಿಪ್ರಾಯಗಳ ಬಗೆಗೆ ಲೇಖನ ಬರೆದರು. ಛಂದೋಂಬುಧಿಯನ್ನು ಪ್ರಕಟಿಸಿದರು. ಅವರು ಬರೆದ ಲೇಖನಗಳ ಪಟ್ಟಿಯನ್ನು ನೋಡಿದರೆ, ಅವರ ಬಹುಶ್ರುತ ವ್ಯಕ್ತಿತ್ವದ ಅರಿವಾಗುತ್ತದೆ.

ಕಿಟೆಲ್ ಅವರ ಪದ್ಯರಚನಾ ಶಕ್ತಿ, ಕಾವ್ಯ ಶಕ್ತಿಗಳೂ ಗಮನಾರ್ಹವಾಗಿವೆ. ಅವರು ಅನೇಕ ಪ್ರಾರ್ಥನೆಗಳನ್ನು ಕನ್ನಡದಲ್ಲಿ ಬರೆದುದಲ್ಲದೆ ಕ್ರಿಸ್ತಚರಿತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದರು.

ಕಿಟೆಲ್ ಅವರ ಬೃಹತ್‌ಕೋಶ ಇಡೀ ಜಗತ್ತಿನ ಕಣ್ಣನ್ನು ಸೆಳೆಯಿತು, ಸೆಳೆದಿದೆ. 1894ರಲ್ಲಿ ಆ ಕೋಶ ಪ್ರಕಟವಾದ ಎರಡು ವರ್ಷಗಳಲ್ಲಿ ಅಂದರೆ, 1896, ಮೇ 13ರಂದು ಮಿ.ಗೋರ್ಬಾ ಎಂಬುವರು ಜರ್ಮನಿಯ ಟ್ಯುಬಿಂಗನ್ ವಿಶ್ವವಿದ್ಯಾಲಯಕ್ಕೆ ಕಿಟೆಲ್ ಅವರಿಗೆ ಡಾಕ್ಟರೇಟ್ ಗೌರವವನ್ನು ನೀಡಬೇಕೆಂದು ಸೂಚಿಸಿದರು. 1896ನೆಯ ಜೂನ್ 6ರಂದು ಆ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಕೃತಾರ್ಥವಾಯಿತು.

ಕಿಟೆಲ್ ಎಂದೂ ವಿರಮಿಸುವವರಲ್ಲ. ತಮ್ಮ ಕೊನೆಯ ಕೃತಿ ಕನ್ನಡ ವ್ಯಾಕರಣದ ಸಿದ್ಧತೆಯಲ್ಲಿ ನಿರತರಾಗಿದ್ದರು. 1903ನೆಯ ಇಸವಿ ಡಿಸೆಂಬರ್ 18ರಂದು ಅದು ಪ್ರಕಟವಾದದ್ದನ್ನು ಕಣ್ಣಾರೆ ಕಂಡು ಅದನ್ನು ಮುಟ್ಟಿ ಪರಮಾನಂದ ಪಟ್ಟರು. ಜೀವನದ ಕೊನೆಯುಸಿರೆಳೆಯುವ ಪೂರ್ವದಲ್ಲಿ ಕನ್ನಡವನ್ನು ಇನ್ನೊಮ್ಮೆ ಕೇಳಬೇಕೆಂದು ಅಪೇಕ್ಷಿಸಿದರು. ಯಾರೋ ಕರ್ನಾಟಕದವರು ಆ ಸಮಯದಲ್ಲಿ ಕಿಟೆಲ್ ಅವರನ್ನು ಕಂಡು, ಇಂಗ್ಲಿಷಿನಲ್ಲಿ ಮಾತನಾಡಲು ಹವಣಿಸಿದಾಗ, 'ಕನ್ನಡದಲ್ಲಿ ಮಾತನಾಡಿ ತಮ್ಮನ್ನು ಪುನೀತರನ್ನಾಗಿ ಮಾಡಬೇಕೆ'ಂದು ಕಿಟೆಲ್ ಅವರನ್ನು ಪ್ರಾರ್ಥಿಸಿದರಂತೆ! ಅಷ್ಟು ಅವರ ಆತ್ಮವನ್ನು ಒಳಹೊಕ್ಕಿತ್ತು ಕನ್ನಡ!

ಅಂದು 1903ನೆಯ ಇಸವಿ, ಡಿಸೆಂಬರ್ 19ನೆಯ ದಿನಾಂಕ. ತಿರುಗಾಡಲು ಹೋಗಿ ಬಂದ ಸ್ವಲ್ಪ ಕಾಲದಲ್ಲಿಯೇ ಕಿಟೆಲ್ ತೀರಿ ಹೋದರು. ಟ್ಯುಬಿಂಗನ್ ನಗರದ ಸ್ಮಶಾನದಲ್ಲಿ ಕವಿಗಳ, ತತ್ವವೇತ್ತರ ಸಮಾಧಿಗಳ ಮಧ್ಯದಲ್ಲಿ ಕಿಟೆಲ್ ಅವರ ದೇಹವನ್ನು ಸಮಾಧಿ ಮಾಡಲಾಗಿದೆ.

ಕೃತಿ ಕರ್ತೃ ಪರಿಚಯ



ಡಾ. ಆರ್.ಸಿ. ಹಿರೇಮಠ

ಡಾಕ್ಟರ್ ಆರ್.ಸಿ. ಹಿರೇಮಠ ಅವರ ಪೂರ್ಣ ಹೆಸರು ರುದ್ರಯ್ಯ ಚಂದ್ರಯ್ಯ ಹಿರೇಮಠ. ಇವರು 1920ರಲ್ಲಿ ಧಾರವಾಡ ಜಿಲ್ಲೆಯ ಕುರಡಗಿ ಗ್ರಾಮದಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಸಂಶೋಧಕರಾಗಿ, ವಿಮರ್ಶಕರಾಗಿ, ಲೇಖಕರಾಗಿ, ಭಾಷಾ ತಜ್ಞರಾಗಿ ಇವರು ಹಲವಾರು ಕೃತಿಗಳನ್ನು ಬರೆದಿದ್ದಾರೆ. ಹುಬ್ಬಳ್ಳಿಯಲ್ಲಿ ಜರುಗಿದ 59ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯು 1970ರಲ್ಲಿ ಗೌರವ ಪ್ರಶಸ್ತಿ ನೀಡಿ ಇವರನ್ನು ಪುರಸ್ಕರಿಸಿದೆ. ಜ್ಯೋತಿ ಬೆಳಗುತಿದೆ, ಅಸ್ಸಾಮೀ ಸಾಹಿತ್ಯ ಕುರಿತ

8th_Kannada_Reader Term I_U4-9.indd 12 18-06-2019 10.46.52 AM

'ಸಮರ ದುಂದುಭಿ', ಸಾಹಿತ್ಯ ಸಂಸೃಷ್ಟಿ, ಚನ್ನಬಸವಣ್ಣನವರ ವಚನಗಳು, ಷಟ್‌ಸ್ಥಲ ಪಥ ಮುಂತಾದ ಅರವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಇವರು ರಚಿಸಿದ್ದಾರೆ. ಇವರು 1998, ನವೆಂಬರ್ 3ರಂದು ನಿಧನರಾದರು. ಆರ್.ಸಿ.ಹಿರೇಮಠರು ಸಂಪಾದಿಸಿದ ಕನ್ನಡಕ್ಕೆ ಕಿಟೆಲ್ಲರ ಕೊಡುಗೆ ಎನ್ನುವ ಗ್ರಂಥದಿಂದ ಪ್ರಸ್ತುತ ಪಾಠವನ್ನು ಆಯ್ದುಕೊಳ್ಳಲಾಗಿದೆ.

ಪದಗಳ ಅರ್ಥ

ಕಲ್ಪಾಂತರ ಸ್ಥಾಯಿ–ಶಾಶ್ವತ; ಕಲ್ಪನಾತೀತ–ಊಹೆಗೆ ಮೀರಿದ, ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ; ಮೇಧಾವಿ–ಪಂಡಿತ, ಬುದ್ಧಿವಂತ; ವಾಙ್ಮಯ–ಸಾಹಿತ್ಯ; ಮೇರು–ಎತ್ತರವಾದ, ಉನ್ನತವಾದ; ಕ್ರತುಶಕ್ತಿ–ಕಾರ್ಯಶಕ್ತಿ, ಸೃಜನಶೀಲ ಸಾಮರ್ಥ್ಯ; ಒಕ್ಕೊರಲು–ಒಂದೇ ಧ್ವನಿ; ಅನುಸಂಧಾನ–ಧ್ಯಾನ; ಅಂಕುರ–ಮೊಳಕೆ; ನಿಷ್ಣಾತ–ನಿಪುಣ; ಪವಾಡ–ಆಶ್ಚರ್ಯಕರವಾದ ಘಟನೆ; ಕೋಶ–ನಿಘಂಟು, ಪದಗಳಿಗೆ ಅರ್ಥ ತಿಳಿಸುವ ಕೃತಿ; ಕರಡು–ಅಚ್ಚಿಗೆ ಸಿದ್ಧವಾದ ಪ್ರತಿ; ಪರಿಷ್ಕರಣ–ತಿದ್ದಿ ಸರಿಪಡಿಸುವಿಕೆ; ಜ್ಞಾಪ್ತಿ–ದಾಯಾದಿ; ನಿಷ್ಪತ್ತಿ–ಹುಟ್ಟು, ರೂಪಸಿದ್ಧಿ; ಪಾದ್ರಿ–ಕ್ರೈಸ್ತ ಮತ ಪ್ರಚಾರಕ, ಫಾದರ್(ದ್ಚ); ಬಹುಶ್ರುತ–ಪಂಡಿತ, ಕ್ಲಾಸಿಕಲ್–ಸಾಂಪ್ರದಾಯಿಕ.

ಟಿಪ್ಪಣಿಗಳು

1. ವೇದ : ಹಿಂದೂಗಳ ಪವಿತ್ರ ಗ್ರಂಥ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ ಎಂಬ ನಾಲ್ಕು ವೇದಗಳುಂಟು. ಇವು ಭಾರತದ ಪ್ರಾಚೀನ ಗ್ರಂಥಗಳೆನಿಸಿವೆ. ವೇದಗಳು ಸಂಸ್ಕೃತ ಬಾಷೆಯಲ್ಲಿ ರೂಪುಗೊಂಡಿವೆ.

2. ಉಪನಿಷತ್ : ಇವು ವೇದಗಳ ರಹಸ್ಯವನ್ನು ವಿವರಿಸುವ ಗ್ರಂಥಗಳು. ಇವನ್ನು ವೇದಾಂತ ಎಂದೂ ಕರೆಯುವರು. ಅನೇಕ ಉಪನಿಷತ್ತುಗಳು ಜನಪ್ರಿಯವಾಗಿವೆ.

3. ಗೌರವ ಡಾಕ್ಟರೇಟ್ : ಯಾವುದಾದರೊಂದು ಕ್ಷೇತ್ರದಲ್ಲಿ ಉತ್ತಮೋತ್ತಮವಾದ ಸೇವೆಯನ್ನು ಸಲ್ಲಿಸಿದ ಮಹಾನ್ ಸಾಧಕರಿಗೆ ನೀಡುವ ಗೌರವ ಪದವಿ ಇದಾಗಿದೆ. ಈ ಗೌರವ ಡಾಕ್ಟರೇಟ್ ಪದವಿಯನ್ನು ವಿಶ್ವವಿದ್ಯಾಲಯಗಳು ನೀಡಿ ಪುರಸ್ಕರಿಸುತ್ತವೆ. ಉದಾಹರಣೆಗೆ ನಾಟಕ ಕ್ಷೇತ್ರದಲ್ಲಿ ಮಾಡಿದ ಅಪೂರ್ವ ಸೇವೆಗೆ ಗುಬ್ಬಿ ವೀರಣ್ಣನವರಿಗೆ; ಚಲನಚಿತ್ರದಲ್ಲಿ ಮಾಡಿದ ಸೇವೆಗೆ ರಾಜ್‌ಕುಮಾರ್ ಅವರಿಗೆ ಈ ಗೌರವ ಡಾಕ್ಟರೇಟ್ ಸಂದಾಯವಾಗಿದೆ.

4. ಬೈಬಲ್ : ಇದು ಕ್ರೈಸ್ತ ಧರ್ಮೀಯರ ಪವಿತ್ರವಾದ ಗ್ರಂಥ. ಶಬ್ದಮಣಿದರ್ಪಣ. ಇದೊಂದು ಹಳಗನ್ನಡದಲ್ಲಿ ರೂಪುಗೊಂಡ ವ್ಯಾಕರಣ ಶಾಸ್ತ್ರ ಗ್ರಂಥವಾಗಿದೆ. ಕೇಶಿರಾಜ ಎಂಬ ವೈಯಾಕರಣಿಯು ಇದನ್ನು ರಚಿಸಿದ್ದಾನೆ.

5. ಛಂದೋಂಬುಧಿ : ಇದು ಪದ್ಯದ ಲಕ್ಷಣಗಳನ್ನು ತಿಳಿಸುವ ಶಾಸ್ತ್ರ ಗ್ರಂಥವಾಗಿದೆ. ಛಂದಸ್ಸಿನ ಬಗ್ಗೆ ವಿವರಣೆ ನೀಡುವ ಈ ಕೃತಿಯನ್ನು ನಾಗವರ್ಮ ಎಂಬ ಕನ್ನಡದ ಶಾಸ್ತ್ರಕಾರ ಕವಿಯು ರಚಿಸಿದ್ದಾನೆ.

6. ನಿಜಗುಣ : ಇವರು ನಿಜಗುಣ ಶಿವಯೋಗಿಗಳೆಂದು ಕನ್ನಡ ನಾಡಿನಲ್ಲಿ ವಿಖ್ಯಾತರಾಗಿದ್ದಾರೆ. ಇವರು ಮೈಸೂರು ಸಮೀಪದ ಕೊಳ್ಳೇಗಾಲದವರು. ಅನೇಕ ಹಾಡುಗಳನ್ನು ಬರೆದು ಅನುಭಾವಿಗಳಾಗಿದ್ದಾರೆ. ಸಂಗೀತ ಶಾಸ್ತ್ರದ ಬಗ್ಗೆ ಬೆಳಕು ಚೆಲ್ಲಿದ್ದಾರೆ.

7. ಜೆ.ಕಿಟೆಲ್ : ಈತ ರೆವರೆಂಡ್ ಜಾರ್ಜ್ ಫರ್ಡಿನಾಂಡ್ ಕಿಟೆಲ್ ಅವರ ತಮ್ಮ. ಈತನೂ ಸಹ ಜರ್ಮನಿಯಿಂದ ಮತ ಪ್ರಚಾರ ಮಾಡಲೋಸುಗ ಭಾರತಕ್ಕೆ ಬಂದಿದ್ದನು. ತಲಚೇರಿಯಲ್ಲಿ ಕೆಲ ಕಾಲ ಈಗ ಮಿಶನರಿಯಾಗಿ ಕೆಲಸ ಮಾಡಿದನು. ಕಿಟೆಲ್ ಎಂಬುದು ಇವರ ಮನೆತನದ ಹೆಸರಾದ ಕಾರಣ ಈತನ ಹೆಸರಿನಲ್ಲೂ ಅದು ಸೇರಿದೆ.

8th_Kannada_Reader Term I_U4-9.indd 13 18-06-2019 10.46.53 AM

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕಿಟೆಲ್ಲರ ಪೂರ್ಣ ಹೆಸರೇನು ?
2. ಜರ್ಮನ್ ದೇಶ ಯಾವುದಕ್ಕೆ ಹೆಸರಾಗಿದೆ ?
3. ಕಿಟೆಲ್ಲರ ಹುಟ್ಟೂರು ಯಾವುದು ?
4. ಕಿಟೆಲ್ಲರ ತಂದೆ–ತಾಯಿಯರ ಹೆಸರೇನು ?
5. ಕಿಟೆಲ್ ಯಾವ ವರ್ಷ ಜನಿಸಿದರು ?
6. ಕಿಟೆಲ್ ಭಾರತಕ್ಕೆ ಯಾವಾಗ ಬಂದರು ?
7. ಕಿಟೆಲ್ ಎಷ್ಟನೇ ವಯಸ್ಸಿನಲ್ಲಿ ಮಿಷನ್ ಕಾಲೇಜು ಸೇರಿದರು ?
8. ಕಿಟೆಲ್ ಕನ್ನಡವನ್ನು ಯಾವ ಯಾವ ಸ್ಥಳಗಳಲ್ಲಿ ಕಲಿತರು ?
9. ಕಿಟೆಲ್ ಅವರ ಮೊದಲ ಹೆಂಡತಿಯ ಹೆಸರೇನು ?
10. ನಿಘಂಟು ಹಸ್ತಪ್ರತಿಯಲ್ಲಿ ಎಷ್ಟು ಶಬ್ದಗಳು ಸಂಗ್ರಹವಾಗಿದ್ದವು ?
11. ಕಿಟೆಲ್ಲರಿಗೆ ಗೌರವ ಡಾಕ್ಟರೇಟ್ ನೀಡಿದ ವಿಶ್ವವಿದ್ಯಾಲಯ ಯಾವುದು ?
12. ಕಿಟೆಲ್ ಕ್ರಿಸ್ತ ಚರಿತೆಯನ್ನು ಯಾವ ಷಟ್ಪದಿಯಲ್ಲಿ ರಚಿಸಿದರು ?
13. ಕಿಟೆಲ್ ಯಾವಾಗ ತೀರಿಕೊಂಡರು ?
14. ಕಿಟೆಲ್ ಅವರ ಸಮಾಧಿ ಎಲ್ಲಿದೆ ?
15. ಕಿಟೆಲ್ ಗದ್ಯ ಪಾಠದ ಆಕರ ಗ್ರಂಥ ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತೀಯ ಭಾಷೆಗಳಿಗೆ ಸೇವೆ ಸಲ್ಲಿಸಿದ ಪಾಶ್ಚಾತ್ಯ ವಿದ್ವಾಂಸರು ಯಾರು? ಅವರು ಸಲ್ಲಿಸಿದ ಸೇವೆ ಏನು?
2. ವಿದ್ಯಾರ್ಥಿಯಾಗಿದ್ದ ಕಿಟೆಲ್ಲರ ಗುಣವಿಶೇಷಗಳೇನು ?
3. ಪ್ರಿನ್ಸಿಪಾಲರು ಕಿಟೆಲ್ ಬಗ್ಗೆ ಮಿಶನ್ ಸಂಸ್ಥೆಗೆ ಏನೆಂದು ಶಿಫಾರಸು ಮಾಡಿದರು?
4. ರೆವರೆಂಡ್ ವೀಗಲ್ ಯಾರು? ಅವರ ಗುಣ ವಿಶೇಷಗಳೇನು ?
5. ಕನ್ನಡ ಕೋಶದ ಬಗ್ಗೆ ಕಿಟೆಲ್ ಯಾವ ರೀತಿ ಶ್ರಮಿಸಿದರು ?
6. ಕಿಟೆಲ್ ಮಾಡಿದ ಕನ್ನಡದ ಕಾರ್ಯಗಳೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕಿಟೆಲ್‌ರ ಕನ್ನಡ ಸೇವೆಯನ್ನು ಕುರಿತು ಬರೆಯಿರಿ.
2. ಕಿಟೆಲ್‌ರು ಕನ್ನಡ ನಿಘಂಟು ರಚಿಸುವಲ್ಲಿ ಪಟ್ಟ ಶ್ರಮ ಎಂಥಹುದು? ವಿವರಿಸಿ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಕಡಲು, ಶಿಕ್ಷಣ, ಲೋಕ, ಶಿಕ್ಷಕ, ವಸ್ತ್ರ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ಕಲ್ಪಾಂತರ, ಕಲ್ಪನಾತೀತ, ವೇದಾಧ್ಯಯನ, ಕೃತಾರ್ಥ, ವಾಙ್ಮಯ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಕಾರ್ಯ, ಭಯ, ಪ್ರಾಚೀನ, ಪ್ರಕಟ, ಅನೇಕ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

   ಕ್ರತುಶಕ್ತಿ, ಗೊತ್ತುಗುರಿ, ಪ್ರಭುತ್ವ, ಪವಾಡ, ಕಳಕಳಿ, ಹಿನ್ನೆಲೆ.

5. **ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

   ಕಾರ್ಯ, ಕೀರ್ತಿ, ಅಜ್ಜ, ಕಾವ್ಯ, ಪುಸ್ತಕ.

6. **ಕೆಳಗಿನ ಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.**

   ಭರತಖಂಡಕ್ಕೆ, ಉದರದಲ್ಲಿ, ಶಾಲೆಯನ್ನು, ಶಿಕ್ಷಣದ, ಹುಬ್ಬಳ್ಳಿಯ, ಜರ್ಮನಿಗೆ.

8th_Kannada_Reader Term I_U4-9.indd 14 18-06-2019 10.46.53 AM

7. ಹೊಂದಿಸಿ ಬರೆಯಿರಿ

ಅ	ಬ
1. ಮ್ಯಾಕ್ಸ್‌ಮುಲ್ಲರ್	ಎ. ಸಂಸ್ಕೃತ ನಾಟಕ
2. ಶೋಪನ್ ಹಾವರ್	ಬಿ. ಕನ್ನಡ
3. ವಿಂಟರ್ ನಿಜ್	ಸಿ. ತಮಿಳು
4. ಫ್ಲೀಟ್	ಡಿ. ಮಲಯಾಳಂ
5. ಬಿಷಪ್ ಕಾಲ್ಡ್‌ವೆಲ್	ಇ. ವೇದಾಧ್ಯಯನ
	ಈ. ಉಪನಿಷತ್

8. ಹೊಂದಿಸಿ ಬರೆಯಿರಿ

ಅ	ಬ
1. ಕಿಟೆಲ್ ಜನನ	ಎ. 1853
2. ಕಿಟೆಲ್ ಭಾರತಕ್ಕೆ	ಬಿ. 1860
3. ಕಿಟೆಲ್ ವಿವಾಹ	ಸಿ. 1883
4. ಕಿಟೆಲ್ ಕೋಶ ಪ್ರಾರಂಭ	ಡಿ. 1832
5. ಕಿಟೆಲ್ ಧಾರವಾಡದಲ್ಲಿ	ಇ. 1827
	ಈ. 1872

9. ಬಿಟ್ಟ ಸ್ಥಳ ತುಂಬಿ

1. ಬುದ್ಧಿ ಶಕ್ತಿ ಕ್ರತು ಶಕ್ತಿಗೆ ಹೆಸರಾದ ದೇಶ _____.
2. ಕಿಟೆಲ್ ಅವರ ತಂದೆಯ ಹೆಸರು _____.
3. ಧಾರವಾಡ ಜಿಲ್ಲೆಯ ಮೊದಲ ಮಿಶನರಿ ಅಧಿಕಾರಿಗಳಾಗಿದ್ದವರು _____.
4. ಕಿಟೆಲ್ ಅವರ ಮೊದಲ ಹೆಂಡತಿಯ ಹೆಸರು _____.
5. ಕಿತ್ತೂರು ಚೆನ್ನಮ್ಮ ರಾಣಿಯು ಸೆರೆಯಲ್ಲಿಟ್ಟ ಅಧಿಕಾರಿಯ ಹೆಸರು _____.
6. ಕಿಟೆಲ್ ಶಬ್ದಗಳನ್ನು ಸಂಗ್ರಹಿಸಲು ನೆರವಾದ ಹುಬ್ಬಳ್ಳಿಯ ವ್ಯಕ್ತಿ _____.
7. ಕಿಟೆಲ್ ಭಾಮಿನಿ ಷಟ್ಪದಿಯಲ್ಲಿ ಬರೆದ ಕೃತಿ _____
8. ಛಂದೋಂಬುಧಿಯನ್ನು ಬರೆದವರು _____.
9. ಶಬ್ದಮಣಿ ದರ್ಪಣ ಎಂಬ ವ್ಯಾಕರಣ ಶಾಸ್ತ್ರ ಬರೆದವರು _____.

10. ಟಿಪ್ಪಣಿ ಬರೆಯಿರಿ.

1. ರೆವರೆಂಡ್ ವೀಗಲ್
2. ಸರ್ ವಾಲ್ಟರ್ ಎಲಿಯೆಟ್.

ಚಟುವಟಿಕೆ

1. ಕಿಟೆಲ್ ಅವರನ್ನು ಕುರಿತು ಒಂದು ಲೇಖನ ಬರೆಯಿರಿ.
2. ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ ವಿದೇಶೀ ಮಹನೀಯರ ಹೆಸರುಗಳನ್ನು ಸಂಗ್ರಹಿಸಿ ಬರೆಯಿರಿ.
3. ಆರ್.ಸಿ. ಹಿರೇಮಠರು ಸಂಪಾದಿಸಿದ ಕನ್ನಡಕ್ಕೆ ಕಿಟೆಲ್ಲರ ಕೊಡುಗೆ ಎಂಬ ಗ್ರಂಥವನ್ನು ಓದಿರಿ.

8th_Kannada_Reader Term I_U4-9.indd 15 18-06-2019 10.46.53 AM

ಉಪಪಠ್ಯ

ಘಟಕ ಒಂದು

ಮಹಾಕವಿ ಪಂಪ

– ಟಿ.ಆರ್.ಕಣ್ಣನ್



ಭಾರತೀಯ ಸಾಹಿತ್ಯದಲ್ಲಿ ಕನ್ನಡಕ್ಕೆ ತನ್ನದೇ ಆದ ಸ್ಥಾನ ಇದೆ. ಪ್ರಾಚೀನ ಭಾಷೆಯಾದ ಕನ್ನಡಕ್ಕೆ ಸುಮಾರು 2000 ವರ್ಷಗಳ ಇತಿಹಾಸವಿದೆಯೆಂದು ವಿದ್ವಾಂಸರು ತಿಳಿಸುತ್ತಾರೆ. ಇಂತಹ ಶ್ರೀಮಂತ ಭಾಷೆಯ ಆದಿ ಕವಿ ಎಂಬ ಹಿರಿಮೆಗೆ ಪಾತ್ರನಾದ ಮಹಕವಿ ಪಂಪನ ಬದುಕು ಮತ್ತು ಸಾಹಿತ್ಯದ ಬಗ್ಗೆ ಈ ಪಾಠ ಬೆಳಕು ಚೆಲ್ಲುತ್ತದೆ.

ಕನ್ನಡದ ಆದಿ ಕವಿ, ಅಗ್ರ ಕವಿ, ಅಗ್ರಮಾನ್ಯ ಕವಿ ಎಂಬ ಗೌರವಕ್ಕೆ ಪಾತ್ರನಾದವನು ಕವಿ ಪಂಪ. ಈತನ ಕಾಲ ಕ್ರಿ.ಶ. 10ನೇ ಶತಮಾನ. ಈಗಿನ ತೆಲಂಗಾಣ ರಾಜ್ಯದ ಕರೀಂ ನಗರದ ವೆಂಗಿಪಳು ಎಂಬ ಅಗ್ರಹಾರದಲ್ಲಿ ವೈದಿಕ ಸಂಪ್ರದಾಯಕ್ಕೆ ಸೇರಿದ ಕುಟುಂಬದಲ್ಲಿ ಪಂಪನು ಜನಿಸಿದನು. ಈತನ ತಂದೆ ಅಭಿರಾಮ ದೇವ; ತಾಯಿ ಅಬ್ಬಣಬ್ಬೆ. ದೇವೇಂದ್ರಮುನಿ ಈತನ ಗುರು ಎಂದು ತಿಳಿಯುತ್ತದೆ. ಪಂಪನ ತಂದೆ ವೈದಿಕ ಬ್ರಾಹ್ಮಣನಾಗಿದ್ದು, ಜೈನ ಧರ್ಮವನ್ನು ಸ್ವೀಕರಿಸಿದನು. ಪಂಪನಿಗೂ ಜೈನ ಧರ್ಮದಲ್ಲಿ ದೃಢವಾದ ನಂಬಿಕೆ ಬೆಳೆದು, ವೈದಿಕ ಸಂಸ್ಕೃತಿಯಲ್ಲಿನ ಗೌರವವೂ ಅಳಿಯದೆ, ಇವನು ಎರಡೂ ಧರ್ಮಗಳಲ್ಲಿನ ಸಾರಭೂತವಾದ ಅಂಶಗಳನ್ನು ಬೆಳೆಸಿಕೊಂಡನು. ಜೊತೆಗೆ ವಿಶ್ವಧರ್ಮದ ಕಡೆಗೆ ಅವನ ದೃಷ್ಟಿ ಹರಿಯಿತು. ಚಾಲುಕ್ಯ ಸಾಮಂತ ಚೂಡಾಮಣಿಯಾದ ಅರಿಕೇಸರಿಯೇ ಅವನ ಮೆಚ್ಚುಗೆಯ ಅರಸ, ಆಶ್ರಯದಾತ. ಪಂಪನು ಅವನ ಸೇನಾಧಿಪತಿಯಾಗಿದ್ದನು. ಪಂಪನು ಹುಟ್ಟಿದ್ದು ವೆಂಗಿ ಮಂಡಲದಲ್ಲಾದರೂ ಪುಲಿಗೆರೆಯ ಬಯಲುಸೀಮೆ, ಅಲ್ಲಿನ ಪ್ರಕೃತಿ ಸೌಂದರ್ಯದ ತವರೂರಾದ ಬನವಾಸಿ ಎಂದರೆ ಎಲ್ಲಿಲ್ಲದ ಗೌರವ ಪ್ರೇಮ. ಅವನ ಮಹಾಕೃತಿ 'ವಿಕ್ರಮಾರ್ಜುನ ವಿಜಯಂ'(ಪಂಪ ಭಾರತ) ಕಾವ್ಯದಲ್ಲಿ ತನ್ನ ಕಾವ್ಯ ನಾಯಕನಾದ ಅರ್ಜುನನ ಬಾಯಿಂದ 'ಆರಂಕುಶದಿಂದ ತಿವಿದರೂ ನನ್ನ ಮನಸ್ಸು ಬನವಾಸಿಯನ್ನೇ ನೆನೆಯುತ್ತದೆ' ಎಂದು ಹೇಳಿಸುತ್ತಾನೆ. ಪಂಪನದು ಸಮೃದ್ಧವಾದ, ಸಮನ್ವಯವಾದ ಜೀವನ. ಸುದೈವವು ಅವನ ಮೇಲೆ ದೃಷ್ಟಿ ಬೀರಿತ್ತು. ಪಂಪನು ಬರೆದಿರುವ ಕೃತಿಗಳು ಎರಡು. ಒಂದು : ಆದಿ ಪುರಾಣ; ಮತ್ತೊಂದು : ವಿಕ್ರಮಾರ್ಜುನ ವಿಜಯಂ. ಪಂಪ ಭಾರತದಲ್ಲಿ ಲೌಕಿಕ ಧರ್ಮವನ್ನೂ, ಆದಿ ಪುರಾಣದಲ್ಲಿ ಆಗಮಿಕ ಎಂದರೆ ಧಾರ್ಮಿಕವನ್ನೂ ಬೆಳಗುವೆನೆಂದು ಅವನು ಹೇಳುತ್ತಾನೆ. ಕ್ರಿ.ಶ. 941ರಲ್ಲಿ ಆದಿಪುರಾಣವನ್ನು ಬರೆದುದಾಗಿ ಹೇಳಿಕೊಂಡಿರುವ ಪಂಪನು ತನ್ನ ಆಶ್ರಯದಾತನಾದ ಅರಿಕೇಸರಿಯ ಕೋರಿಕೆಯ ಮೇರೆಗೆ ಮಹಾಭಾರತದ ಪಾಂಡವ ಪಕ್ಷದ ಕೃಷ್ಣಸಖನಾದ ಅರ್ಜುನನನ್ನು ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡು, ಅರಿಕೇಸರಿಯೊಂದಿಗೆ ಅವನನ್ನು ಹೋಲಿಸಿ ವಿಕ್ರಮಾರ್ಜುನ ವಿಜಯಂ ಕಾವ್ಯವನ್ನು ರಚಿಸಿದ್ದಾನೆ. ಇದು ಚಂಪೂ ಶೈಲಿಯಲ್ಲಿದೆ.

ಆದಿಪುರಾಣವು ಜೈನ ಧರ್ಮದ ಆದಿನಾಥ ತೀರ್ಥಂಕರನ ಕಥೆಯಾಗಿದ್ದು, ಅದರಲ್ಲಿ ಅನೇಕ ಭವ ಇಲ್ಲವೇ ಜನ್ಮಗಳನ್ನು ತಾಳಿ, ನಾನಾ ಅನುಭವಗಳನ್ನು ಪಡೆದು ಭೋಗದಿಂದ ತ್ಯಾಗಕ್ಕೆ ತೆರಳಿ ಕೊನೆಯ ಜನ್ಮದಲ್ಲಿ ವೈರಾಗ್ಯದಿಂದ ತಪಸ್ಸನ್ನು ಕೈಗೊಂಡು ಮುಕ್ತಿಯನ್ನು ಪಡೆದ ಆದಿದೇವ ಮತ್ತು ಇತರ ವ್ಯಕ್ತಿಗಳ ಕಥೆಯು ಬರುತ್ತದೆ. ವಿಕ್ರಮಾರ್ಜುನ ವಿಜಯಂನಲ್ಲಿ ಅರ್ಜುನನಿಗೆ ಪ್ರಾಮುಖ್ಯ ದೊರೆತು, ನಾಯಕನ ಪಟ್ಟವನ್ನು ಕಟ್ಟಿದ್ದಾನೆ ಪಂಪ. ಅರ್ಜುನನ ವರ್ಣನೆ

8th_Kannada_Reader Term I_U4-9.indd 16 18-06-2019 10.46.53 AM

ಬಂದಾಗಲೆಲ್ಲ ಅರಿಕೇಸರಿಯ ವರ್ಣನೆಯನ್ನು ತಿಳಿಸಬೇಕೆಂಬ ಮಟ್ಟಿಗೆ ಈ ಕಥೆಯು ಸಾಗುತ್ತದೆ. ಇಲ್ಲಿ ಅರಿಕೇಸರಿಯ ಬಿರುದುಗಳನ್ನೆಲ್ಲಾ ಅರ್ಜುನನಿಗೆ ತೊಡಿಸಲಾಗಿದೆ. ತನ್ನ ಆಶ್ರಯದಾತನ ಚರಿತ್ರೆಯನ್ನು ಅರ್ಜುನನ ಕಥೆಯ ರೂಪದಲ್ಲಿ ಹೇಳಲು ಪಂಪನಿಗೆ ಲವಲವಿಕೆಯಿದೆ ಎಂದು ತಿಳಿಯಬೇಕು.

ಮಹರ್ಷಿ ವ್ಯಾಸರು ಬರೆದಿರುವ ಸಂಸ್ಕೃತ ಭಾರತವೇ ಪಂಪಭಾರತದ ಮುಖ್ಯ ಆಕರ. ಆದರೆ ಪಂಪ ಭಾರತವು ಆಕರಕ್ಕೆ ಹಿಡಿದ ಕೇವಲ ಮುಕುರವಲ್ಲ. ಗಣಿಯಿಂದೆತ್ತಿ ಸಿದ್ಧಪಡಿಸಿದ ಮಣಿಪ್ರಕರ. ಕಥೆ ದೊಡ್ಡದಾದರೂ ಕಥೆಯ ಮೈಗೆಡದಂತೆ ಸಮಸ್ತ ಭಾರತವನ್ನು ಅಪೂರ್ವವಾಗಿ ಪಂಪನು ವರ್ಣಿಸಿದ್ದಾನೆ. ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿರುವ ಮಹಾಕವಿಯೀತ. ಈ ಎರಡೂ ಕಾವ್ಯಗಳನ್ನೂ ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಧೀಮಂತ ಕವಿ, ದಿವ್ಯ ಕವಿ ಪಂಪನೆಂದರೆ ಅತಿಶಯೋಕ್ತಿಯೇನಲ್ಲ.

ಕೃತಿ ಕರ್ತೃ ಪರಿಚಯ

ಈ ಲೇಖನವನ್ನು ಟಿ.ಆರ್. ಕಣ್ಣನ್ ಅವರು ರಚಿಸಿದ್ದಾರೆ. ಇವರ ಜನ್ಮಸ್ಥಳ ಹೊಸೂರು, ಕೃಷ್ಣಗಿರಿ ಜಿಲ್ಲೆ, ತಮಿಳುನಾಡು. ತಾಯಿ ಯಶೋಧ, ತಂದೆ ರಂಗಸ್ವಾಮಿ ಅಯ್ಯಂಗಾರ್. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹೊಸೂರಿನ ಸರ್ಕಾರಿ ಶಾಲೆಯಲ್ಲಿ ಮುಗಿಸಿ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸ್ನಾತಕೋತ್ತರ ಪದವಿ ಪಡೆದು ಪ್ರಸ್ತುತ ಸರ್ಕಾರಿ ಉನ್ನತ ಪ್ರೌಢಶಾಲೆ, ಮದಗೊಂಡಹಳ್ಳಿಯಲ್ಲಿ ಕನ್ನಡ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳನ್ನು ಚೆನ್ನಾಗಿ ಬಲ್ಲವರಾದ ಇವರು ಅವರು ಅಪಾರ ಕನ್ನಡ ಪ್ರೇಮಿ. ಕನ್ನಡ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು ಹಲವು ಕವನ, ಕಥೆಗಳನ್ನು ಪಠ್ಯಪುಸ್ತಕಗಳಿಗಾಗಿ ರಚಿಸಿದ್ದಾರೆ. ಇವರ ಸೇವೆಗೆ ಹಲವು ಸಂಘ ಸಂಸ್ಥೆಗಳು ಸನ್ಮಾನ ಸಲ್ಲಿಸಿವೆ. ಮಹಾಕವಿ ಪಂಪ ಎನ್ನುವ ಈ ಲೇಖನವನ್ನು ಪಂಪನ ಸಾಹಿತ್ಯವನ್ನು ಇಂದಿನ ವಿದ್ಯಾರ್ಥಿಗಳು ತಿಳಿಯಲೆಂಬ ಉದ್ದೇಶದಿಂದ ರಚಿಸಿದ್ದಾರೆ.

ಪದಗಳ ಅರ್ಥ

ಪ್ರಕೃತಿ–ನಿಸರ್ಗ, ವಿಶ್ವ–ಜಗತ್ತು, ಲೋಕ; ಜಿನ–ಜೈನ; ಅರಿಕೇಸರಿ–ಚಾಲುಕ್ಯರ ಒಬ್ಬ ಅರಸ(ಅರಿ=ಶತ್ರು, ಕೇಸರಿ–ಸಿಂಹ; ಶತ್ರುಗಳಿಗೆ ಸಿಂಹದಂತಿರುವವನು); ಪ್ರೇಮ–ಪ್ರೀತಿ; ವೈದಿಕ–ವೇದಕ್ಕೆ ಸಂಬಂಧಿಸಿದ, ಬ್ರಾಹ್ಮಣ; ಅರ್ಜುನ–ಪಂಚಪಾಂಡವರಲ್ಲಿ ನಡುವಿನವನು, ಮಧ್ಯಮ ಪಾಂಡವ; ಅಪೂರ್ವ–ಹಿಂದೆ ಎಂದೂ ಇಲ್ಲದಂತಹ; ಆಶ್ರಯ–ಆಸರೆ; ಚರಿತ್ರೆ–ಇತಿಹಾಸ; ಸಾರಸ್ವತಲೋಕ–ಸಾಹಿತ್ಯಲೋಕ; ಮಹರ್ಷಿ–ಮಹಾಋಷಿ; ಸಖ–ಗೆಳೆಯ, ಸ್ನೇಹಿತ, ಆತ್ಮೀಯ; ಲೌಕಿಕ–ಇಹಜೀವನ, ಬದುಕು; ಆಗಮಿಕ–ಪಾರಮಾರ್ಥಿಕ, ಮೇಲ್ನೋಕಕ್ಕೆ ಸಂಬಂಧಿಸಿದ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕನ್ನಡದ ಆದಿಕವಿ ಯಾರು ?
2. ಪಂಪ ಮಹಾಕವಿಯು ಎಲ್ಲಿ, ಯಾವಾಗ ಜನಿಸಿದನು ?
3. ಪಂಪ ಕವಿಯ ತಂದೆ ತಾಯಿಗಳು ಯಾರು ?
4. ಪಂಪನ ಜನ್ಮಸ್ಥಳ ಯಾವುದು ?
5. ಕವಿ ಪಂಪನು ಯಾರ ಆಶ್ರಯದಲ್ಲಿದ್ದನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಪಂಪ ಮಹಾಕವಿಯ ಬಾಲ್ಯ ಜೀವನವನ್ನು ಕುರಿತು ಬರೆಯಿರಿ ?
2. ಪಂಪನು ಯಾವ ಧರ್ಮದಲ್ಲಿ ದೃಢವಾದ ನಂಬಿಕೆ ಇಟ್ಟಿದ್ದನು ?
3. ಅರಿಕೇಸರಿ ಯಾರು ? ಆತನ ಆಶ್ರಯದಲ್ಲಿ ಪಂಪನು ಯಾವ ಕೃತಿಗಳನ್ನು ರಚಿಸಿದನು ?
4. ಪಂಪನು ಬನವಾಸಿಯನ್ನು ಹೇಗೆ ಬಣ್ಣಿಸಿದ್ದಾನೆ ?
5. ವಿಕ್ರಮಾರ್ಜುನ ವಿಜಯಂ ಕೃತಿಯ ಕಾವ್ಯ ನಾಯಕನಾರು? ಪಂಪ ಆತನನ್ನು ಯಾರಿಗೆ ಹೋಲಿಸಿದ್ದಾನೆ ? ಹೇಗೆ ?

8th_Kannada_Reader Term I_U4-9.indd 17 18-06-2019 10.46.53 AM

ವ್ಯಾಕರಣ

ಘಟಕ ಒಂದು

ಕನ್ನಡ ವರ್ಣಮಾಲೆ

ಮಾನವ ತನ್ನ ಮನಸ್ಸಿನ ಭಾವನೆಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾನೆ. ಆಡಿದ, ಆಡಬೇಕಾದ ಮಾತುಗಳನ್ನು ಲಿಪಿಯ (ಲಿಖಿತ) ರೂಪಕ್ಕಿಳಿಸುವುದೇ ಬರವಣಿಗೆ. ಪದ ಮತ್ತು ಪದಗಳ ಸಂಬಂಧವನ್ನು ಖಚಿತವಾಗಿ ತಿಳಿಸುವುದೇ ವ್ಯಾಕರಣಶಾಸ್ತ್ರ. ಆದ್ದರಿಂದ ಭಾಷೆಯನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಕಲಿಯುವುದು ಉತ್ತಮ. ಕ್ರಿಯಾತ್ಮಕ ವ್ಯಾಕರಣದ ಕಲಿಕೆಯಿಂದ ಭಾಷೆಯನ್ನು ಸ್ಪಷ್ಟ ಹಾಗೂ ನಿಖರವಾಗಿ ಬಳಸಲು ಸಾಧ್ಯ.

ಕನ್ನಡ ವರ್ಣಮಾಲೆಯನ್ನು ಪ್ರಧಾನವಾಗಿ ಸ್ವರ, ವ್ಯಂಜನ ಮತ್ತು ಯೋಗವಾಹ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

ರೂಢಿಯಲ್ಲಿರುವ ಒಟ್ಟು ಕನ್ನಡ ಅಕ್ಷರಗಳು – 49
ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು

ವರ್ಣಮಾಲೆ

ಸ್ವರಗಳು–13		ವ್ಯಂಜನಗಳು–34			ಯೋಗವಾಹಗಳು–2	
ಹ್ರಸ್ವ–6	ದೀರ್ಘ–7	ವರ್ಗೀಯ–25			ಅವರ್ಗೀಯ–9	ಅನುಸ್ವಾರ–1 ವಿಸರ್ಗ–1
		ಅಲ್ಪಪ್ರಾಣ	ಮಹಾಪ್ರಾಣ	ಅನುನಾಸಿಕ		
ಅ	ಆ	ಕ ಗ	ಖ ಘ	ಙ	ಯ	ಂ ಃ
ಇ	ಈ	ಚ ಜ	ಛ ಝ	ಞ	ರ	
ಉ	ಊ	ಟ ಡ	ಠ ಢ	ಣ	ಲ	
ಋ	ಏ	ತ ದ	ಥ ಧ	ನ	ವ	
ಎ	ಐ	ಪ ಬ	ಫ ಭ	ಮ	ಶ	
ಒ	ಓ				ಷ	
	ಔ				ಸ	
					ಹ	
					ಳ	

I. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ ?
2. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.
3. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.
4. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ತಿಳಿಸಿ.
5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳನ್ನು ಪಟ್ಟಿ ಮಾಡಿ.

8th_Kannada_Reader Term I_U4-9.indd 18 18-06-2019 10.46.53 AM

ಘಟಕ
ಎರಡು

2. ಪ್ರಕೃತಿ



ಕಾವ್ಯ ಕಣಜ : ನಿಸರ್ಗ – ಜಿ.ವರದರಾಜರಾವ್
ಪೂರಕ ಪದ್ಯ : ಮಳೆ – ದೇಶಾಂಶ ಹುಡಗಿ
ಗದ್ಯ ವಿಹಾರ : ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು – ಶ್ರೀನಿವಾಸ
ಉಪಪಠ್ಯ : ಸೌಂದರ್ಯಕ್ಕೆ ರೆಕ್ಕೆ ಬಂದ ಲೋಕದವರು – ಹಾ.ಮಾ.ನಾಯಕ
ವ್ಯಾಕರಣ : ನಾಮಪದಗಳು

8th_Kannada_Reader Term I_U4-9.indd 19 18-06-2019 10.46.53 AM

ಘಟಕ ಎರಡು

ನಿಸರ್ಗ

–ಜಿ.ವರದರಾಜರಾವ್

ಪ್ರವೇಶ

'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತು ಸಾರ್ವಕಾಲಿಕ ಸತ್ಯ. ಇದ್ದುದನ್ನು ಇದ್ದಂತೆ ಕಾಣುವುದು, ನೋಡುವುದು ರವಿಯ ಸ್ವಭಾವವಾದರೆ ತಾನು ಅನುಭವಿಸಿದ್ದನ್ನು ಭಾವಿಸಿದ್ದನ್ನು ಉತ್ಪ್ರೇಕ್ಷಿಸಿ, ವರ್ಣಿಸಿ ಮತ್ತೊಂದಕ್ಕೆ ಹೋಲಿಸಿ ಹೇಳುವುದು ಕವಿಯ ಗುಣ. ಇದೆ ಕವಿ ಸಮಯ. ಪ್ರಸ್ತುತ ನಿಸರ್ಗ ಕವನದಲ್ಲಿ ಕವಿ ಜಿ.ವರದರಾಜ ರಾವ್ ಈ ಮಾತನ್ನು ಪುಷ್ಟಿಗೊಳಿಸಿದ್ದಾರೆ. ಕಲ್ಲು, ಮಣ್ಣು, ನದಿ, ಗುಹೆ, ನಭ, ಪರ್ವತಗಳನ್ನೊಳಗೊಂಡ ಈ ಪರಿಸರ ಜಡವಲ್ಲ. ಅದೊಂದು ಚೇತನ. ಋತುವಿಲಾಸದಲ್ಲಿ ಮೈತೆರೆದು ಹೂಕಾಯಿ ಹಣ್ಣುಗಳೊಂದಿಗೆ ಮನ ತಣಿಸುತ್ತದೆ. ನಕ್ಷತ್ರ, ಸೂರ್ಯ, ಚಂದ್ರ, ಬಾನು ಈ ಬೆಳ್ಳಿಯ ಹಂದರದಲ್ಲಿ ಪ್ರಾಣಿ ಪಕ್ಷಿ ಸಂಕುಲದ ಗಾನ ನದಿಯ ನರ್ತನ, ಚೇತೋಹಾರಿಯಾಗುತ್ತದೆ. ಈ ಸೌಂದರ್ಯ ಮನದ ಮಲಿನ ತೊಳೆಯುವ ಸಾಧನವಾಗಿದೆ. ಇದೇ ಕವಿಯ ಆಶಯ.



8th_Kannada_Reader Term I_U4-9.indd 20 18-06-2019 10.46.53 AM

ಸಹಜ ಸುಂದರ ಸೃಷ್ಟಿ ಮಂದಿರ
ಋತು ವಿಲಾಸವೋ ಬಂಧುರ !
ಹೊಳೆಯೆ ಉಡುಗಣ, ಸೂರ್ಯ ಚಂದಿರ,
ಬಾನು ಬೆಳ್ಳಿಯ ಹಂದರ !

ಹೆಸರ ಹೇಳಲು ತೋರದಂತಿದೆ
ನೂರು ರೀತಿಯ ತರುಗಳು
ಹಣ್ಣುಕಾಯಿಯೋ ಹೂವು ಬೆಳೆದಿದಿ
ನೋಡಿ ತಣಿಯವು ಕಂಗಳು !

ಯಾವ ಗಾನದ ವಿವಿಧ ತಾನವೊ
ಹಕ್ಕಿಯಿಂಚರ ಹೊಮ್ಮಿದೆ !
ಯಾವ ಶಕ್ತಿಯ ವಿಶ್ವರೂಪವೋ
ಪ್ರಾಣಿ ಸಂಕುಲ ಮೆರೆದಿದೆ !

ಸಲಿಲ ದರ್ಪಣ, ನದಿಯ ನರ್ತನ
ಪಂಕ್ತಿ ಪಂಕ್ತಿಯ ಪರ್ವತ !
ಮನದ ಮಲಿನವ ತೊಡೆವ ಸಾಧನ
ಬೀಸಿ ಸುಳಿಯುವ ಮಾರುತ !

ಬುದ್ಧಿ ಬಲದಲಿ ಮನುಜ ಶಕ್ತಿಯ
ಬೆಲೆಯು ಹೆಚ್ಚಿದೆ ದಿನದಿನ
ಬನ್ನಿ ಪೂಜಿಸಿ, ಸೃಷ್ಟಿ ದೇವಿಯ
ಇಂದೆ ಅರ್ಪಿಸಿ ತನುಮನ

8th_Kannada_Reader Term I_U4-9.indd 21 18-06-2019 10.46.53 AM

ಕವಿ–ಕಾವ್ಯ ಪರಿಚಯ

ಜಿ.ವರದರಾಜರಾವ್ (03.01.1918–13.11.1987) ಅವರು ಮೂಲತಃ ಬೆಂಗಳೂರಿನವರು. ಸಂಶೋಧಕರಾಗಿ ಪ್ರಸಿದ್ಧರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾಗಿ ಮೈಸೂರು, ಹಾಗು ಮಂಗಳೂರಿನಲ್ಲಿ ಸೇವೆ ಸಲ್ಲಿಸಿದ್ದಾರೆ. ಭಾಷಾ ವಿಜ್ಞಾನ, ಛಂದಸ್ಸು, ವ್ಯಾಕರಣ ಕ್ಷೇತ್ರಗಳಲ್ಲಿ ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ. ಹರಿದಾಸ ಸಾಹಿತ್ಯ ಪ್ರಕಾರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

ಕುಮಾರ ರಾಮನ ಸಾಂಗತ್ಯಗಳು, ಪುರಂದರ ದಾಸರು ಮತ್ತು ಅವರ ಕೀರ್ತನೆಗಳು ಕಲಿ ಕರ್ಣ, ಕರ್ಮಠ ಕೇಸರಿ, ಪಡಿನುಡಿ ಇವು ಇವರ ಪ್ರಮುಖ ಕೃತಿಗಳು. ಇವರಿಗೆ 'ಖೇಣಿ ಸಿದ್ಧಪ್ಪ' ಚಿನ್ನದ ಪದಕ, ಹರಿದಾಸ ಸಾಹಿತ್ಯ ಸೇವಾ ಪ್ರಶಸ್ತಿ, ದೇವರಾಜ ಬಹದ್ದೂರ್ ಬಹುಮಾನ ಲಭಿಸಿವೆ.

ಪ್ರಸ್ತುತ ನಿಸರ್ಗ ಕವಿತೆಯನ್ನು ಅವರ ಪರಂಪರೆ ಕವನ ಸಂಕಲನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಕೃತಿಯ ಸಹಜ ಸುಂದರತೆ, ಮನಸ್ಸಿನ ಮಲಿನತೆ ತೊಡೆಯುವುದೆಂಬ ಧೋರಣೆ ಕವಿಯದು. ಸೃಷ್ಟಿ ಸೌಂದರ್ಯಕ್ಕೆ ತನುಮನ ಅರ್ಪಿಸುವ ಮನೋಭಾವ ಇವರಲ್ಲಿರುವುದು ಇಲ್ಲಿ ವ್ಯಕ್ತಗೊಂಡಿದೆ.

ಪದಗಳ ಅರ್ಥ

ವಿಲಾಸ–ಆಟ, ವಿನೋದ, ವೈಭವ, ಚೆಲುವು; ಬಂಧುರ–ಸುಂದರ, ಚೆಲುವಾದ; ಉಡು–ನಕ್ಷತ್ರ; ಗಣ–ಗುಂಪು; ತರು–ಮರ, ವೃಕ್ಷ, ಪಾದಪ; ಕಂಗಳು–ಕಣ್ಣುಗಳು; ತಾನ–ಆಲಾಪ; ಇಂಚರ–ಮಧುರ ಸ್ವರ, ಧ್ವನಿ, ಶಬ್ದ; ಸಂಕುಲ–ಗುಂಪು; ಸಲಿಲ–ನೀರು; ದರ್ಪಣ–ಕನ್ನಡಿ; ಪಂಕ್ತಿ–ಸಾಲು, ಸರದಿ; ಮಲಿನತೆ–ಕೊಳಕು; ಮಾರುತ–ಗಾಳಿ, ವಾಯು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ನಿಸರ್ಗ ಕವನದಲ್ಲಿ ಕವಿ ಪ್ರಕೃತಿಯನ್ನು ಏನೆಂದು ಕರೆದಿದ್ದಾನೆ?
2. ಬಾನಿನ ಬೆಳ್ಳಿಯ ಹಂದರದಲ್ಲಿ ಕಾಣುವುದೇನು?
3. ಯಾವುದನ್ನು ಕಂಡು ಕಂಗಳು ತಣಿಯವು?
4. ಹಕ್ಕಿಯ ಇಂಚರ ಏನಾಗಿ ಹೊಮ್ಮಿದೆ?
5. ಮನದ ಮಲಿನತೆಯನ್ನು ತೊಡೆಯುವ ಸಾಧನ ಯಾವುದು?
6. ಸೃಷ್ಟಿದೇವಿಗೆ ಇಂದು ಏನನ್ನು ಅರ್ಪಿಸಬೇಕು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸೃಷ್ಟಿ ಮಂದಿರದಲ್ಲಿ ಬೆಳಕನ್ನು ಹೆಚ್ಚಿಸಿರುವುವು ಯಾವುವು?
2. ಋತುವಿಲಾಸದ ಬಂಧುರದಲ್ಲಿ ಕವಿ ಕಂಡದ್ದನ್ನು ವರ್ಣಿಸಿ.
3. ಸೃಷ್ಟಿ ದೇವಿಯನ್ನು ಏಕೆ ಪೂಜಿಸಬೇಕು ? ವಿವರಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಿಸರ್ಗ ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಸೃಷ್ಟಿ, ಚಂದಿರ, ಶಕ್ತಿ, ಪಂಕ್ತಿ, ಮನುಜ.

2. ಗುಂಪಿಗೆ ಸೇರದ ಪದಗಳನ್ನು ಗುರುತಿಸಿ.

ಅ. ತರುಗಳು ಮರಗಳು ಎಲೆಗಳು ವೃಕ್ಷಗಳು

8th_Kannada_Reader Term I_U4-9.indd 22 18-06-2019 10.46.53 AM

ಆ. ಹೂವು ಕಾಯಿ ಹಣ್ಣು ಬೇರು

ಇ. ಮನುಜ, ಮನುಷ್ಯ, ದಾನವ, ಮಾನವ,

ಈ. ಸೋರಿದೆ, ನೆರೆದಿದೆ, ಸೇರಿದೆ, ಕೂಡಿದೆ.

3. ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಸೂರ್ಯ, ಹೊಳೆ, ಬಾನು, ತರು, ಕಣ್ಣು, ಹಕ್ಕಿ, ಸಲಿಲ, ಮಾರುತ.

4. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಸಹಜ, ಸುಂದರ, ಬಲ, ಸೂರ್ಯ, ಬುದ್ಧಿವಂತ, ಶಕ್ತಿ.

ಚಟುವಟಿಕೆ

1. ಪರಿಸರ ಮಾಲಿನ್ಯದಿಂದ ಪ್ರಕೃತಿ ನಾಶ – ಈ ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.



8th_Kannada_Reader Term I_U4-9.indd 23 18-06-2019 10.46.53 AM

ಪೂರಕ ಪದ್ಯ

ಘಟಕ ಎರಡು

ಮಳೆ

– ದೇಶಾಂಶ ಹುಡಗಿ

ಸನನ ಸನನ ಸವಿಯ ರಾಗದಿ
ಮಳೆಯ ಧಾರೆಯ ಕರೆಯಲಿ ।
ಹನಿಗಳೊಂದರೆ ಬಿಡದೆ ಮಾತೆಯ
ಉದರದಾಳದಿ ಇಳಿಯಲಿ ॥

ಬಿಸಿಲ ಬೇಗೆಗೆ ಬೆಂದು ಹೋಗಿಹ
ಲೋಕ ಮಾತೆಯು ತಣಿಯಲಿ ।
ಉಸಿರ ಗಾಳಿಯ ಬಿಸಿಯ ನುಂಗಿದ
ಬಸಿರು ತಂಪನು ತಣಿಯಲಿ ॥

ಕುಡಿದು ಮಿಕ್ಕಿದ ನೀರ ಧಾರೆಯು
ಎದೆಯ ಮೇಗಡೆ ಹರಿಯಲಿ ।
ಕೆರೆಯು ಸರುವರ ನದಿ ನದಂಗಳು
ತುಂಬಿ ಕಲಕಲಗೊಳ್ಳಲಿ ॥

ಬಳ್ಳಿ ಗಿಡಮರ ನೀರನುಣ್ಣುತ
ಹಿಗ್ಗಿ ಗಾಳಿಗೆ ಬಿಚ್ಚಲಿ ।
ಎಣಿಕೆ ಮೀರಿದ ಖಗ ಮೃಗಂಗಳ
ಎದೆಯ ತಂತಿಯು ಮಿಡಿಯಲಿ ॥

ಅಂದ ಚಂದದಿ ಸುಂದರಾಂಗಿಯು
ಸೊಬಗ ಬೀರುವ ತೆರದಲಿ ।
ಮಂದಹಾಸವ ಬೀರುತೆಮ್ಮಯ
ಭಾರತಾಂಬೆಯು ಬೆಳಗಲಿ ॥

8th_Kannada_Reader Term I_U4-9.indd 24 18-06-2019 10.46.54 AM

ಕವಿ–ಕಾವ್ಯ ಪರಿಚಯ

ಕವಿ ಶರಣಪ್ಪ ಶಾಂತಪ್ಪ ದೇವರಾಯ ಅವರು ಹೈದರಾಬಾದ್ ಕರ್ನಾಟಕದ ಬೀದರಿನವರು. ಅವರ ಕಾವ್ಯನಾಮ ದೇಶಾಂಶ ಹುಡಗಿ. ಅವರ ಹುಟ್ಟೂರು ಬೀದರ್ ಜಿಲ್ಲೆಯ ಹುಡಗಿ ಗ್ರಾಮ. ಹುಟ್ಟಿದ್ದು 1936ರಲ್ಲಿ. ಶಿಕ್ಷಕರಾಗಿ, ಶಿಕ್ಷಣಾಧಿಕಾರಿಗಳಾಗಿ 40 ವರ್ಷಗಳ ಕಾಲ ಇವರು ಸೇವೆ ಸಲ್ಲಿಸಿದ್ದಾರೆ. ಇವರು ಚರಿತ್ರೆ, ಕಾವ್ಯ ಮತ್ತು ಸಾಕ್ಷರತೆಗೆ ಸಂಬಂಧಿಸಿದ ಸಾಹಿತ್ಯವನ್ನು ರಚಿಸಿದ್ದಾರೆ.

ಮಳೆ ಕವಿತೆಯನ್ನು ಅವರ 'ಬದುಕಿನ ಸುತ್ತ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ. ಮಳೆ ಬಂದರೆ ಬೆಳೆ, ಬದುಕು. ಮಳೆ ಸುರಿದಾಗ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ಕವಿಯು ಇಲ್ಲಿ ಸುಂದರವಾಗಿ ವರ್ಣಿಸಿದ್ದಾರೆ. ಭಾರತಾಂಬೆಯ ಮಕ್ಕಳು ಸುಖ ಸಂಪತ್ತಿನಿಂದ ಬಾಳಲಿ ಎಂಬುದು ಈ ಕವಿತೆಯ ಆಶಯವಾಗಿದೆ.

ಪದಗಳ ಅರ್ಥ

ಧಾರೆ–ಸುರಿವ ನೀರು, ನದ–ಗಂಡು ನದಿ; ಸೊಬಗು–ಸುಂದರ; ಕರೆ–ಸುರಿಸು; ತಣಿ–ತಂಪಾಗು; ಬೇಗೆ–ತಾಪ; ಬಸಿರು–ಹೊಸ ಜೀವ; ಸರುವರ–ಸರೋವರ; ಖಗ–ಪಕ್ಷಿ; ಹಾಸ–ನಗು; ತಳಿ–ಬಿತ್ತು; ಮಿಡಿ–ಕಂಪಿಸು, ಸಂಗೀತ ಹೊಮ್ಮಿಸು; ಬೀರು–ಪಸರಿಸು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಳೆಯ ಧಾರೆಯು ಹೇಗೆ ಕರೆಯುತ್ತದೆ?
2. ಮಳೆಯ ಪ್ರತಿಹನಿಯೂ ಎಲ್ಲಿ ಇಳಿಯುತ್ತದೆ?
3. ಯಾವ ನೀರು ಭೂಮಾತೆಯ ಎದೆಯ ಮೇಲ್ಗಡೆ ಹರಿಯುತ್ತದೆ?
4. ಗಿಡಮರಗಳು ಗಾಳಿಗೆ ಬಿಚ್ಚಿದಾಗ ಪಶುಪಕ್ಷಿಗಳು ಹೇಗೆ ವರ್ತಿಸುತ್ತವೆ?
5. ಭಾರತಾಂಬೆಯು ಹೇಗೆ ಬೆಳಗುತ್ತಾಳೆ?



8th_Kannada_Reader Term I_U4-9.indd 25 18-06-2019 10.46.55 AM

ಗದ್ಯ ವಿಹಾರ

ಘಟಕ ಎರಡು

ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು

– ಶ್ರೀನಿವಾಸ



ಈ ಕಥೆಯು ರಷ್ಯಾ ದೇಶದ ಖ್ಯಾತ ಸಾಹಿತಿ ಕೌಂಟ್ ಲಿಯೋ ಟಾಲ್‌ಸ್ಟಾಯ್ ಅವರ ಜೀವನದ ಒಂದು ಘಟನೆಯನ್ನು ಆದರಿಸಿದೆ. ಟಾಲ್‌ಸ್ಟಾಯ್ ಮಹಾದಾರ್ಶನಿಕ, ಶ್ರೀಮಂತ, ತತ್ವಜ್ಞಾನಿ. 'ಆಸ್ತಿಯು ಮನುಜ ಕುಲದ ಕ್ಷೇಮಕ್ಕೆ ಒದಗಿ ಬಂದ ಮೊಮ್ಮದಲ ಕುತ್ತು' ಎಂಬ ತೀರ್ಮಾನಕ್ಕೆ ಇವನು ಬಂದನು. ತನ್ನ ಸ್ವಂತ ಹಾಗೂ ಪಿತ್ರಾರ್ಜಿತವಾದ ಎಲ್ಲ ಆಸ್ತಿಯೂ ತನ್ನದಲ್ಲ ಎಂದು ಇವನು ಘೋಷಿಸಿದನು. ಜನ ಮೆಚ್ಚಿದರು, ಕೊಂಡಾಡಿದರು. ಅವನನ್ನು ಸಂತ, ಪ್ರವಾದಿ ಎಂದೆಲ್ಲ ಹೊಗಳಿದರು.

ಟಾಲ್‌ಸ್ಟಾಯ್ ಪ್ರಭು ಪ್ರೀತಿಯಿಂದ ನೆಟ್ಟು ಬೆಳೆಸಿದ ಭೂರ್ಜವನ ಒಂದಿತ್ತು. ಅದರ ಬಗ್ಗೆ ಪ್ರಭುವಿಗೆ ಮಮತೆ. ಆಸ್ತಿಯ ಬಗ್ಗೆ ತನ್ನ ನಂಬಿಕೆಯ ಅನುಷ್ಠಾನ ಭೂರ್ಜವನದ ನಾಶದಲ್ಲಿ ಪರ್ಯವಸಾನ ಆದಾಗ ಅವನು ಎದುರಿಸಿದ ದ್ವಂದ್ವ, ಮನೋಯಾತನೆ ಇವುಗಳ ದುರಂತವನ್ನು ಈ ಕಥೆಯಲ್ಲಿ ಚಿತ್ರಿಸಲಾಗಿದೆ.

ಶ್ರೀಮಂತರ ಮಗನಾಗಿ ಹುಟ್ಟಿ, ಶ್ರೀಮಂತ ತರುಣನ ದುರ್ನೀತಿ ಜೀವನವನ್ನು ನಡೆಸಿ, ಯೋಧನಾಗಿ ಕೀರ್ತಿ ಪಡೆದು, ಅತ್ಯುತ್ತಮ ಗ್ರಂಥಗಳನ್ನು ರಚಿಸಿ, ಸಾಹಿತ್ಯ ಕೇಸರಿ ಎಂಬ ಖ್ಯಾತಿಯನ್ನು ಗಳಿಸಿ, ಪಿತ್ರಾರ್ಜಿತವಾದ ಆಸ್ತಿಯ ಒಡೆಯನಾಗಿ, ಅದನ್ನು ಅಭಿವೃದ್ಧಿಪಡಿಸಿ, ಸಂಸಾರಿಯಾಗಿ ಬಾಳ ಸುಖವನ್ನು ಸವಿದು ತಣಿದು, ಪ್ರಭು ಲಿಯೋ ಟಾಲ್‌ಸ್ಟಾಯ್ ಮಧ್ಯವಯಸ್ಸಿನಲ್ಲಿ ತನ್ನ ಜೀವನವನ್ನು ಕುರಿತು ತುಂಬಾ ಬೇಸರಗೊಂಡನು. ಪ್ರಾಣವನ್ನು ಕಳೆದುಕೊಳ್ಳುವುದು ಒಂದೇ ಸಮಾಧಾನಕ್ಕೆ ಮಾರ್ಗ ಎಂಬ ಮಟ್ಟಿಗೆ ತೀವ್ರವಾದ ವೈರಾಗ್ಯಕ್ಕೆ ತುತ್ತಾದನು.



ಸಂಪ್ರದಾಯದ ಆಸ್ತಿಕ ಮನೋಧರ್ಮದ ಸಂಸಾರದಲ್ಲಿ ಬೆಳೆದ ತರುಣ ವಿದ್ಯೆಯ ದಿನಗಳಲ್ಲಿ ವಿಚಾರದಲ್ಲಿ ತೊಡಗಿ, ಚಿಕಿತ್ಸೆಗೆ ಎಡೆಗೊಟ್ಟು, ದೇವರಿಲ್ಲ ಎಂಬ ನೆಲೆಗೆ ಬಂದನು. ಈ ನೆಲೆಯಲ್ಲಿ ಜೀವಿಸುವುದು ಅಸಾಧ್ಯವೆಂದು ಮನದಟ್ಟಾಗಿ, ಜೀವನದ ವಿಷಯವಾಗಿ ಜನಸಾಮಾನ್ಯರ ಮನೋಧರ್ಮ ಒಂದೇ ಸರಿಯಾದ ಮನೋಧರ್ಮ ಎಂದು ನಿಶ್ಚಯ ಮಾಡಿಕೊಂಡನು.

ಸಿರಿವಂತ ಸುಖಜೀವಿ ಆರೋಗ್ಯವಂತರಾದ ಜನರು ಅತೃಪ್ತರಾಗಿ ಕಷ್ಟದಲ್ಲಿ ತೊಳಲುತ್ತಿರುವಲ್ಲಿ, ದರಿದ್ರ ಕಷ್ಟಜೀವಿ ಅನಾರೋಗ್ಯವಂತರಾದ ಸಾಮಾನ್ಯ ಜನ ಇದೇ ಜೀವನ ಎಂದು ತಮ್ಮ ಬಾಳುವೆಯನ್ನು ಹರ್ಷದಿಂದ ಒಪ್ಪಿರುತ್ತಾರೆ. ಇದೇ ಸರಿಯಾದ

8th_Kannada_Reader Term I_U4-9.indd 26 18-06-2019 10.46.55 AM

ಮನೋಧರ್ಮ; ಜೀವನವೇ ದೈವ; ಒಪ್ಪಿಗೆಯೇ ಜಾಣು. ಇದು ಪ್ರಭುವಿಗೆ ನಿತ್ಯ ನಿಶ್ಚಲ ಸತ್ಯ ಎಂದು ಕಂಡಿತು.

ಇಂತಹ ಸರಳ ಚೇತನರನ್ನು ದಾಸ್ಯದಲ್ಲಿರಿಸಿ ತನ್ನಂತಹ ಸಿರಿವಂತ ಜನ, ಅವರು ಬಹುಸಂಖ್ಯೆಯ ದುಡಿಮೆಯನ್ನು ತಮ್ಮಂತಹ ಕೆಲವೇ ಜನರ ಉಪಯೋಗಕ್ಕೆ ವಿನಿಯೋಗಿಸುತ್ತಾ ಈ ಅನ್ಯಾಯ ಸ್ಥಿರವಾಗಲೆಂದು ಆಸ್ತಿ ಮಾಡುವುದು; ಅದನ್ನು ಭದ್ರ ಪಡಿಸುವುದಕ್ಕೆ ಕಾಯ್ದೆಗಳನ್ನು ನಿರ್ಮಿಸುವುದು; ಅದನ್ನು ನಡೆಸಲು ಜಾಣರೂ, ಅಲ್ಪಸಂಖ್ಯಾತರೂ ಆದ ತಮ್ಮದೇ ಸರ್ಕಾರವನ್ನು ರಚಿಸುವುದು; ಅದು ಆಳಲು ಸಾಧ್ಯವಾಗಲೆಂದು ಸೈನ್ಯವನ್ನು ಬಳಸುವುದು; ಈ ರೀತಿ ರಾಷ್ಟ್ರಗಳಾಗಿ, ರಾಷ್ಟ್ರಗಳು ಹಲವದರ ಮಧ್ಯೆ ವಿವಾದ ಬಂದಾಗ ಸಂಗ್ರಾಮಗಳನ್ನು ಆರಂಭಿಸುವುದು; ಈ ಕ್ರಮ ನಾಗರಿಕತೆಯ ವ್ಯಾಧಿಯಾಗಿ ಬಿಟ್ಟಿದೆ. ಇದು ಕೊನೆಗಾಣದೆ ಮನುಜ ವರ್ಗಕ್ಕೆ ಕ್ಷೇಮ ಇಲ್ಲ. ಇದು ಪ್ರಭುವಿನ ಕಡೆಯ ನಿರ್ಧಾರವಾಯಿತು.

ಎಂದರೆ, ಆಸ್ತಿ ಮನುಜ ಕುಲದ ಕ್ಷೇಮಕ್ಕೆ ಎಡರಾದ ಮೊಮ್ಮೊದಲ ಕುತ್ತ ಎಂದ ಮೇಲೆ ತಾನು ಇನ್ನು ಮುಂದೆ ತನ್ನ ಪಿತ್ರಾರ್ಜಿತವಾದ ಆಸ್ತಿಯನ್ನು ಬಳಸಬಾರದು. ತಾನು ಗಳಿಸಿದ್ದ ಆಸ್ತಿಯನ್ನಾದರೂ ತನ್ನದೆಂದು ಇರಿಸಿಕೊಳ್ಳಲಾಗದು. ತಾನು ಬರೆದ ಪುಸ್ತಕಗಳನ್ನು ತನ್ನವೆಂದು ಇರಿಸಿಕೊಂಡು, ಬೇರೆಯವರು ಅದನ್ನು ಅಚ್ಚು ಮಾಡಲು ಅಡ್ಡಿಯಾಗಬಾರದು. ಮುಖ್ಯ ಇನ್ನು ಮುಂದೆ ಇದು ನನ್ನದು ಎಂದು ಏನನ್ನೇ ಆಗಲಿ ಎಣಿಸಕೂಡದು.

ಈ ನಿಶ್ಚಯಕ್ಕೆ ಬಂದವನೇ ಟಾಲ್‌ಸ್ಟಾಯ್ ಪ್ರಭು, ಈ ಎಲ್ಲ ರೂಪದ ಆಸ್ತಿಯನ್ನೂ ನಾನು ತೊರೆದಿದ್ದೇನೆ ಎಂದನು. ಇದನ್ನು ಲೋಕ ತಿಳಿಯಲಿ ಎಂದು ಪ್ರಕಟ ಮಾಡಿದನು. ತಾನು ಪಾಶ್ಚಾತ್ಯ ಲೋಕದ ಆಧುನಿಕ ಯುಗದ ಸಂತನಾದನು; ಪ್ರವಾದಿಯೆನ್ನಿಸಿಕೊಂಡನು. ತನ್ನಂತೆ ಇತರ ಆಸ್ತಿವಂತರೂ ನಡೆಯಬೇಕು, ಲೋಕದ ಸ್ಥಿತಿಯನ್ನು ಚೆನ್ನ ಮಾಡಬೇಕು ಎಂದು ಬಯಸಿದನು. ಬಹುಜನ ಹೀಗೆಯೇ ಮಾಡಿಯಾರು ಎಂದು ನಿರೀಕ್ಷಿಸಿ, ಸಮಾಧಾನ ಉಂಡನು.

ಲೋಕದ ವಿಚಾರವಂತ ಜನ ಪ್ರಭುವಿನ ಮನಸ್ಸು ಅಕುಟಿಲ ಎನ್ನುವುದನ್ನು ಕಂಡರು; ಇವನ ಭಾವನೆ ಉದಾತ್ತ ಎಂದು ಒಪ್ಪಿದರು. ಇವನ ತ್ಯಾಗವನ್ನು ಮೆಚ್ಚಿದರು, ಹೊಗಳಿದರು. ಆದರೆ ಬಹುಜನ ಇವನು ಹಿಡಿದ ದಾರಿಯನ್ನು ಹಿಡಿಯಲಿಲ್ಲ. ಜೀವನದಲ್ಲಿ ಈ ನಿಲುವು ವ್ಯಕ್ತಿಗೆ ಸಾಧ್ಯವಾದ ನಿಲುವು ಹೊರತಾಗಿ, ಒಂದು ಜನಸಮುದಾಯ ವರಿಸಬಹುದಾದ ನಿಲುವಲ್ಲ. ನನ್ನ ಕೈಯಿಂದ ಹಿಡಿದ ನನ್ನದು ಎನ್ನುವುದು ತಪ್ಪಾದರೆ; ಯಾವನೇ ಆಗಲಿ ಊಟ ಮಾಡಬಹುದು ಹೇಗೆ? ಉಳಿದವರು ಹಾಗಿರಲಿ, ಮಹರ್ಷಿಯ ಮನೆಯಲ್ಲೇ ಈ ತತ್ವ ನೂರಕ್ಕೆ ನೂರು ಪಾಲು ನಡೆಯುವಂತಿರಲಿಲ್ಲ. ಪಿತ್ರಾರ್ಜಿತ ಆಸ್ತಿ ಕೂಡದು, ತಾನು ಗಳಿಸಿದ ಆಸ್ತಿ ಕೂಡದು, ತನ್ನ ಪುಸ್ತಕಗಳ ಮೇಲೆ ಸ್ವಾಮ್ಯದ ಕಾಣಿಕೆ ಕೂಡದು, ತನ್ನದು ಎಂದು ವರಮಾನ ಕೂಡದು, ಮನೆಯೊಳಗಿನ ದಿನದಿನದ ಜೀವನ ನಡೆಯುವುದು ಹೇಗೆ?

ಒಬ್ಬನಿದ್ದರೆ ನಾನು ಹಸಿದುಕೊಂಡಿರುತ್ತೇನೆ ಎನ್ನಬಹುದು. ಟಾಲ್‌ಸ್ಟಾಯ್ ಮನೆಯಲ್ಲಿ ಅದುವರೆಗೆ ಸುಖವಾಗಿ ಬಾಳಿಕೊಂಡು ಬಂದಿದ್ದ ಅವನ ಪತ್ನಿ ಸೋಫಿಯಾತಾಯಿ ಇದ್ದಳು. ಇವರ ಮಕ್ಕಳು ಮೂವರು ತರುಣರು, ಮೂವರು ತರುಣಿಯರು ಇದ್ದರು. ಪುಣ್ಯವಂತ ಮನೆತನಗಳ ವಾಡಿಕೆಯಂತೆ ಆಶ್ರಿತರಾದ ಬಂಧುಗಳೂ ಇದ್ದರು. ಪ್ರಸಿದ್ಧ ಲೇಖಕನ ಪರಿಚಯದ ಲೇಖಕರು ಬಂದು ಹೋಗುತ್ತಿದ್ದರು. ಇವರಲ್ಲಿ ಹಲವರು ಬಡತನದಿಂದ ಕಂಗೆಟ್ಟ ಜನ; ಈ ನೆರಳ ಸುಖವನ್ನು ಬಿಟ್ಟರೆ ಬೇರೆ ಕಡೆ ಅನ್ನ ಕಾಣಲಾರದವರು. ಇವರೆಲ್ಲಾ ದಿನವೂ ವಾಡಿಕೆಯ ಊಟ ಮಾಡಬೇಕು; ವಾಡಿಕೆಯ ಸುಖದಲ್ಲಿ ಬಾಳಬೇಕು. ಇದನ್ನು ನಡೆಸಲು ದಾರಿಯೇನು?

ಪ್ರಭುಪತ್ನಿ ಸೋಫಿಯಾದೇವಿ ಗಂಡ ಹೇಳಿದ್ದು ಹೇಳಲಿ, ಈ ಆಸ್ತಿ, ಈ ವರಮಾನ ಇಲ್ಲದಿದ್ದರೆ ಇವರು ಯಾರೂ ಉಳಿಯುವಂತಿಲ್ಲ, ಗಂಡನೇ ಬಾಳುವಂತಿಲ್ಲ ಎಂದು ನಿಶ್ಚಯಿಸಿಕೊಂಡಳು. ಇವರು ಆಸ್ತಿ ಬೇಡವೆನ್ನಬಹುದು, ನಾನೂ ಹಾಗೆಂದರಾದೀತೇ? ಮಕ್ಕಳೂ ಹಾಗೇ ಎನ್ನಬೇಕೇ? ಹೀಗೆಂದು ಆಕೆ ಗಂಡ ತನ್ನ ಕೈಯಿಂದ ಬಿಟ್ಟೆಸೆದ ವ್ಯವಹಾರ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡಳು. ಮಹರ್ಷಿ ತನ್ನ ದರ್ಶನವನ್ನು ಪ್ರತಿಪಾದಿಸಿ ಅದರಂತೆ ನಡೆಯತೊಡಗಿದ ಒಡನೆಯೇ

8th_Kannada_Reader Term I_U4-9.indd 27 18-06-2019 10.46.55 AM

ಅವನ ಪ್ರತಿಯಾಗಿ ತಾನು ಆಸ್ತಿಯನ್ನು ರೂಢಿಸಿ ಗಂಡನನ್ನೂ, ಮಕ್ಕಳನ್ನೂ, ಬಂಧುಗಳನ್ನೂ, ಅತಿಥಿ–ಮಿತ್ರರನ್ನೂ ನೋಡಿಕೊಳ್ಳಲು ಮೊದಲು ಮಾಡಿದಳು.

ಈ ಮಿತ್ರರಲ್ಲಿ ಮೂವರು ವ್ಲಾಡಿಮಿರ್ ಚೆರ್ಟ್ಕಾಫ್, ಗಾರ್ಕಿ, ಸೂಲರ್ ಜೆಟ್ಸ್ಕೇ. ಚೆರ್ಟ್ಕಾಫ್ ಅತ್ಯುಗ್ರ ಸಮತಾವಾದಿ. ಆಸ್ತಿ ಸಮಾಜವನ್ನು ಹಾಳು ಮಾಡಿರುವ ವ್ಯವಸ್ಥೆ ಎನ್ನುವುದರಲ್ಲಿ ಇವನದೂ ದೃಢವಾದ ನಂಬಿಕೆ. ಟಾಲ್ಸ್ಟಾಯ್ ಪ್ರತಿಪಾದಿಸಿದ್ದ ಸ್ವಾಮ್ಯವಿರುದ್ಧ ವಾದವನ್ನು ಎತ್ತಿ ಹಿಡಿಯುವವರಲ್ಲಿ ಇವನು ಪ್ರಮುಖ. ಗಾರ್ಕಿ ಸಹ ಆಸ್ತಿಗೆ ವಿರೋಧಿಯೇ. ಆದರೆ ಆಸ್ತಿ ಇರಲಿ ಎನ್ನುವವರು ಆಸ್ತಿಯ ವ್ಯವಸ್ಥೆಯನ್ನು ದುರುಪಯೋಗ ಮಾಡುವಂತೆ, ಆಸ್ತಿ ಬೇಡ ಎನ್ನುವ ಈ ಹೊಸಬರೂ ತಮ್ಮ ನೀತಿಯನ್ನು ದುರುಪಯೋಗ ಮಾಡುತ್ತಾರೆ ಎನ್ನುವುದು ಇವನ ನಿಲುವು. ಸೂಲರ್ ಜೆಟ್ಸ್ಕೇ ಸ್ವಲ್ಪ ಇತ್ತ, ಸ್ವಲ್ಪ ಅತ್ತ ಒಲೆಯುತ್ತಾ ಈ ಎರಡೂ ನಿಲುವಿನ ಮಧ್ಯೆ ನಿಂತವನು.

ಪ್ರಭುವಿನ ನಿವಾಸದ ಬಳಿ ಒಂದು ಭೂರ್ಜ ವನ ಇದ್ದಿತು. ಆ ಸ್ಥಳ ಈ ಮರಗಳಿಗೆ ತುಂಬ ಅನುಕೂಲವಾಗಿದ್ದಿರಬೇಕು. ಟಾಲ್ಸ್ಟಾಯ್ ತರುಣನಾಗಿದ್ದ ದಿನಗಳಲ್ಲಿ ಇಲ್ಲಿ ಈ ಮರ ಕೆಲವು ಇದ್ದವು. ಆ ಸ್ಥಳವನ್ನೂ, ಮರಗಳನ್ನೂ ಅದು ಏಕೋ ಮೆಚ್ಚಿ ಅದೇ ಹೊಲಬಿನಲ್ಲಿ ಆ ದಿನಗಳಲ್ಲೇ ಒಂದು ನೂರು ಮರಗಳನ್ನು ಹಾಕಿಸಿದನು. ಆಮೇಲೆ ಅವು ಬೆಳೆಯುವುದನ್ನು ನೋಡಿ ಸಂತೋಷ ಪಡೆದಿದ್ದನು. ಆಸ್ತಿಗೆ ಒಡೆಯನಾದ ಮೇಲೆ ಅಲ್ಲೇ ಇನ್ನೂ ನೂರು ಮರವನ್ನು ನೆಡಿಸಿ, ಬೆಳೆಸಿ ಅದನ್ನು ದಿಟವಾಗಿ ಒಂದು ವನವನ್ನಾಗಿ ಮಾಡಿದ್ದನು. ಈ ವಿಷಯ ಅವನಿಗೆ ಬಹಳ ಹೆಮ್ಮೆ. ಈ ಹಿಂದೆ ಅವನು ಯಾವ ಅತಿಥಿಗಳು ಬಂದರೂ ಅವರನ್ನು ಈ ವನಕ್ಕೆ ಕರೆದುಕೊಂಡು ಹೋಗಿ ತೋರಿಸುವನು. ಅದೆಲ್ಲಾ ತಾನು ಬೆಳೆಸಿದ ಮರ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವನು. ವಯಸ್ಸಾಗಿ ಕಾಯಿಲೆ ಬಿದ್ದ ಈ ದಿನಗಳಲ್ಲಿ ಕೂಡ ಆಗಾಗ ಸಹಾಯಕರೊಡನೆ ಅಲ್ಲಿಗೆ ಹೋಗಿ ಬರುವನು. ಹೋಗಲಾಗದ ದಿನ ಮನೆಯ ಕೈಸಾಲೆಯಲ್ಲಿ ಕುಳಿತು ವನದತ್ತ ನೋಡುವುದರಲ್ಲಿ ಸಂತೋಷ ಕಾಣುವನು. ಎಲ್ಲ ಪ್ರೇಮವನ್ನೂ ಬಿಟ್ಟ ಒಂದು ಋಷಿಗೆ ಒಂದು ಜಿಂಕೆಯನ್ನು ಕುರಿತು, ಕನಿಕರ ಹುಟ್ಟಿ ಅದು ಪ್ರೇಮವಾಗಿ ಬೆಳೆಯಿತೆಂದು ಭಾರತೀಯ ಪುರಾಣ ಹೇಳುವಂತೆ ಸ್ವಾಮ್ಯ, ಅಭಿಮಾನ ದುಷ್ಟ ಎಂದು ಪ್ರತಿಪಾದಿಸಿದ್ದ ಋಷಿಕಲ್ಪ ಲೇಖಕಾಗ್ರಣಿಗೆ ಈ ಭೂರ್ಜವನದ ವಿಷಯದಲ್ಲಿ ತನ್ನನ್ನೇ ಕಾಣದೆ, ಸ್ವಾಮ್ಯಭಾವ ಅಭಿಮಾನ ರೂಪುಗೊಂಡವು.

ಮನೆಯ ವೆಚ್ಚಕ್ಕೆ ಹಣ ಬೇಕಾಗಿ ಸೋಫಿಯಾದೇವಿ ಒಮ್ಮೆ, ಈ ಮರಗಳಲ್ಲಿ ಹಳೆಯ ಮರ ಹತ್ತನ್ನು ಮಾರುವುದೇ ಎಂದು ಯೋಚನೆ ಮಾಡಿದಳು. ಚೆನ್ನಾಗಿ ಬೆಳೆದು ಚೇಗಾಗಿದ್ದ ಮರಗಳು. ಒಳ್ಳೆಯ ಬೆಲೆ ಬರುತ್ತಿತ್ತು. ಯಾರೋ ಬಂದು ಕೇಳಿಯೂ ಕೇಳಿದರು. ಅಷ್ಟರಲ್ಲಿ ಈ ಸಂಗತಿ ಕಿವಿಗೆ ಬಿದ್ದು ಟಾಲ್ಸ್ಟಾಯ್, 'ಛೇ! ಎಲ್ಲಾದರೂ ಉಂಟೇ! ಎಂಥಾ ವನ. ಮರವನ್ನು ಮಾರಿ ಅದನ್ನು ಕೆಡಿಸುವುದೇ?' ಎಂದನು.

ಇದು ತಿಳಿದು ಸೋಫಿಯಾ ಆ ಯೋಚನೆಯನ್ನು ಬಿಟ್ಟಳು. ಯಜಮಾನ, ಮರವನ್ನು ಹಾಕಿ ಬೆಳೆಸಿದವನು. ಈಗ ಕಾಯಿಲೆಯಾಗಿದ್ದಾನೆ. ಮರವನ್ನು ನೋಡುವುದರಲ್ಲಿ ಸಂತೋಷ ಕಾಣುತ್ತಿದ್ದಾನೆ. ಇನ್ನು ಎಷ್ಟು ದಿನ ಈ ಸುಖವನ್ನು ಪಡೆಯಬಹುದೋ, ಎಷ್ಟು ಬೇಗ ಜೀವನ ಮುಗಿಯಬಹುದೋ ಹೇಳುವಂತಿಲ್ಲ. ಈಗ ಏಕೆ ಈ ಮರಗಳನ್ನು ಕಡಿಸಿ ಈ ಮನಸ್ಸಿಗೆ ನೋವು ಪಡಿಸುವುದು?

ಇದಾದ ಕೆಲವೇ ದಿನದಲ್ಲಿ ಇವರ ಉಂಬಳಿಯ ಗ್ರಾಮದ ಜೀತದ ಜನ ನೂರು ಮಂದಿ ಬಂದು, ಚೆರ್ಟ್ಕಾಫ್‌ನನ್ನು ಕಂಡು 'ನಮಗೆ ಯಾರಿಗೂ ಮನೆಯಿಲ್ಲ. ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳೋಣವೆಂದಿದ್ದೇವೆ. ಒಡೆಯರಿಗೆ ಹೇಳಿ ನಮಗೆ ಈ ಭೂರ್ಜವನದ ಮರಗಳನ್ನು ಕೊಡಿಸಿ. ಮನೆ ಕಟ್ಟಿಕೊಳ್ಳುತ್ತೇವೆ. ಅವರು ದೊಡ್ಡ ಮನಸ್ಸು ಮಾಡಿದ್ದಾರೆ. ಆಸ್ತಿ ಎನ್ನುವುದು ಬೇಡ ಎನ್ನುತ್ತಿದ್ದಾರೆ. ಯಾರಾದರೂ ಬಂದು ಈ ಮರಗಳನ್ನು ಕಡಿದು ಹೊತ್ತುಕೊಂಡು ಹೋದಾರು. ಇವನ್ನು ನಮಗೆ ಕೊಡಿಸಿ' ಎಂದು ಬೇಡಿದರು.

ಚೆರ್ಟ್ಕಾಫ್ ಇದನ್ನು ಟಾಲ್ಸ್ಟಾಯ್‌ಗೆ ಹೇಳಿದನು. 'ಹೇಗೂ ನೀವು ಆಸ್ತಿ ಕೂಡದು ಎನ್ನುವವರು. ಇದು ದಿಟವಾಗಿ ನಿಮ್ಮ ಅಭಿಪ್ರಾಯ.

8th_Kannada_Reader Term I_U4-9.indd 28 18-06-2019 10.46.55 AM

ಇದು ಎಲ್ಲರಿಗೂ ತಿಳಿಯುವಂತೆ ಮಾಡುವುದಕ್ಕೆ ಒಳ್ಳೆಯ ಅವಕಾಶ ಒದಗಿ ಬಂದಿದೆ. ಈ ಜೀತದ ಜನರ ಪ್ರಾರ್ಥನೆಯನ್ನು ಸಲ್ಲಿಸಿ' ಎಂದು ಸೂಚಿಸಿದನು.

ಟಾಲ್‌ಸ್ಟಾಯ್ ಒಡನೇ ಏನನ್ನೂ ಹೇಳಲಿಲ್ಲ. ಚೆರ್ಟ್‌ಕಾಫ್ ಮತ್ತೆ, 'ಈ ಮಾತನ್ನೆತ್ತಿದಾಗ 'ಸ್ವಾಮ್ಯ ಕೂಡದು ಎಂದು ಹೇಳಿದ ಮೇಲೆ ನಾನು ಅಪ್ಪಣೆ ಮಾಡುವುದೇನು? ಜೀತ ಉಂಟು, ಮರ ಉಂಟು' ಎಂದನು. ಇದು ಅವನು ಸಂತೋಷದಿಂದ ಹೇಳಿದ ಮಾತಲ್ಲ. ಚೆರ್ಟ್‌ಕಾಫ್ ಇದನ್ನು ಬಲ್ಲನು. ಆದ–'ರೆ ಅದನ್ನು ಬಳಸಿ ಅವನು ಜೀತದ ಮಂದಿ ಮರ ಕಡಿಯುವುದಕ್ಕೆ ಅಡ್ಡಿ ಇಲ್ಲ ಎಂದು ಮುಂದುವರಿದನು.

ಇದು ಒಡತಿ ಸೋಫಿಯಾದೇವಿಯ ಗಮನಕ್ಕೆ ಬಂದಿತು. ಆಕೆ, 'ಯಜಮಾನರು ಹಾಕಿ ಬೆಳೆಸಿದ ಮರ. ಅದನ್ನು ಕಡಿಸುವುದು ಬೇಡ ಎಂದು ನಾನೇ ಸುಮ್ಮನಾದೆ. ಇದನ್ನು ಯಾರೋ ಬಂದು ಕಡಿಯುವಂತೆ ಮಾಡುತ್ತೀಯಾ?' ಎಂದು ಅಡ್ಡಿ ಹೇಳಿದಳು.

ಚೆರ್ಟ್‌ಕಾಫ್, 'ಋಷಿ ಸಮಾನರಾದ ನಿಮ್ಮ ಯಜಮಾನರ ಔದಾರ್ಯ ನಿಮ್ಮಿಂದ ನಿಷ್ಫಲವಾಗುತ್ತಿದೆ. ನಿಮಗೆ ಇದು ತರವಲ್ಲ' ಎಂದನು.

ಆಕೆ 'ಯಜಮಾನರ ಔದಾರ್ಯ ಫಲಿಸಲಿ ಎನ್ನುವುದು ನನಗಿಂತ ನಿನಗೆ ದೊಡ್ಡ ವಿಷಯವಾಯಿತೇ? ಈ ಅಧಿಕಪ್ರಸಂಗ ಬೇಡ. ನೀವೆಲ್ಲ ಇಲ್ಲಿ ಬಂದು ಊಟ ಮಾಡುತ್ತ ಇದ್ದೀರಲ್ಲ, ಸ್ವಾಮ್ಯ ಇಲ್ಲದೆ ಇವನ್ನೆಲ್ಲ ನಡೆಸುವುದು ಹೇಗೆ? ನಮ್ಮ ಮನೆಯ ಮಾತನ್ನು ನಮಗೆ ಬಿಡಿ. ನೀವು ಇದರ ಗೋಜಿಗೆ ಬರಬೇಡಿ' ಎಂದಳು.

ಮಾತಿಗೆ ಮಾತು ಬೆಳೆಯಿತು. ಜಗಳವೇ ಆಯಿತು. ಚೆರ್ಟ್‌ಕಾಫ್, 'ಒಡತಿ ಸೋಫಿಯಾಗೆ ಬುದ್ಧಿ ಸರಿಯಾಗಿಲ್ಲ' ಎಂದು ತೀರ್ಮಾನಿಸಿ, 'ಇವರು ಬೇಕಾದದ್ದು ಹೇಳಲಿ. ನಾನು ಒಡೆಯರ ಅಭಿಪ್ರಾಯವನ್ನು ನಡೆಸುತ್ತೇನೆ' ಎಂದನು. 'ಜೀತದ ಮಂದಿಗೆ ನೀವು ಬಂದು ಮರಗಳನ್ನು ಕಡಿದುಕೊಂಡು ಹೋಗಿ' ಎಂದನು.

ಜೀತದ ಜನ ಬಂದರು. ಮರಗಳನ್ನು ಕಡಿಯತೊಡಗಿದರು. ಒಡತಿ ಸಂಬಳ ಕೊಟ್ಟು ಬೇರೆ ಜನರನ್ನು ಕರೆಸಿದಳು. ಅವರನ್ನು ತಡೆಯಲು ಏರ್ಪಾಡು ಮಾಡಿದಳು. ಜೀತಕ್ಕೆ ಪೆಟ್ಟಾಯಿತು. ಆ ಜನ ಇವಳು ತುಂಬ ಕ್ರೂರಿ ಎಂದು ಇವಳನ್ನು ನಿಂದಿಸಿದರು. ಸಧ್ಯ ಸುಮ್ಮನಾದರು. ಸಂಬಳದ ಕಾವಲು ಹಿಂದಿರುಗಿದೊಡನೆ ಇವರು ಮತ್ತೆ ಬಂದರು. ಮರಗಳನ್ನು ಕಡಿದರು. ತೊಲೆ ತೀರು ಕವರು ಎಂದು ಎಲ್ಲವನ್ನೂ ಸಾಗಿಸಿದರು. ಇವರು ಹತ್ತು ಸಲ ಹೀಗೆ ಮಾಡಿ, ಆಕೆ ಹತ್ತು ಸಲ ಇವರನ್ನು ತಡೆದು ಆರು ತಿಂಗಳಾಗುವ ವೇಳೆಗೆ ಭೂರ್ಜವನ ನೆಲಸಮವಾಯಿತು. ವನ ಇದ್ದದ್ದಕ್ಕೆ ಉಳಿದ ಗುರುತೆಂದರೆ ಗರಗಸದಿಂದ ಕೊಯ್ದು ಬಿಟ್ಟಿದ್ದ ಮರಗಳ ಬಡ್ಡೆ ಮಾತ್ರ.

ಇಷ್ಟೆಲ್ಲ ನಡೆಯುತ್ತಿರುವಲ್ಲಿ ಟಾಲ್‌ಸ್ಟಾಯ್ ಏನನ್ನೂ ಹೇಳಲಿಲ್ಲ. ಮರಗಳು ಉಳಿಯಲಿ ಎಂದು ಅವನ ಅಪೇಕ್ಷೆ ಎಂದು ಸೋಫಿಯಾ ದೇವಿ ತಿಳಿಸಿದಳು. ಆದರೆ ಅವಳ ಎಲ್ಲ ಪ್ರಯತ್ನ ವ್ಯರ್ಥವಾಯಿತು. ಅವಳು ತೀರಾ ಹುಚ್ಚಳಂತಾದಳು. ಟಾಲ್‌ಸ್ಟಾಯ್ ಬಾಯಲ್ಲಿ ಹೇಳಲಾರದ ಒಂದು ದುಃಖಕ್ಕೆ ತುತ್ತಾದನು. ನವೆದು ಹೋದನು.

ಆಮೇಲೆ ಕೆಲವು ತಿಂಗಳಲ್ಲಿ ಒಂದು ದಿನ ಅವನು ಯಾರಿಗೂ ಹೇಳದೆ ಮನೆ ಬಿಟ್ಟು, ಎತ್ತಲೋ ಹೊರಟು ಬಿಟ್ಟನು. ಅವನು ಹೊರಟು ಬಿಟ್ಟ ಮೇಲೆ ಮನೆ ಮಕ್ಕಳಿಗೆ ಅದು ತಿಳಿಯಿತು. ಅವರು ಅವನ ಹಿಂದೆ ಜನವನ್ನು ಕಳುಹಿಸಿದರು. ಆ ಜನ ಅವನನ್ನು ಒಂದು ರೈಲ್ವೇ ಸ್ಟೇಷನ್‌ನಲ್ಲಿ ಕಂಡರು. ಟಾಲ್‌ಸ್ಟಾಯ್ ಆ ವೇಳೆಗೆ ತೀರಾ ದಣಿದಿದ್ದನು. ಸ್ಟೇಷನ್‌ನಲ್ಲೇ ನಿಂತನು. ಅವನು ಅಲ್ಲಿರುವುದು ತಿಳಿದು, ಅವರೂ ಇವರೂ ಬಂದರು. ಅಲ್ಲಿಂದ ಅವನನ್ನು ಬೇರೆ ಕಡೆಗೆ ಒಯ್ಯುವ ಯೋಚನೆ ಮಾಡಿದರು. ಇದು ನಡೆಯುವ ಮುನ್ನ ರೈಲ್ವೇ ಸ್ಟೇಷನ್‌ನಲ್ಲಿಯೇ ಅವನು ತೀರಿಕೊಂಡನು.

ಮರ ಹೋದವೆಂಬ ದುಃಖವೇ? ಹೆಂಡತಿ ತನ್ನ ಔದಾರ್ಯಕ್ಕೆ ಅಡ್ಡಿಯಾದಳೆಂಬ ಬೇಸರವೇ? ಸ್ವಾಮ್ಯ ಕೂಡದೆಂದು ಬುದ್ಧಿ ಹೇಳುತ್ತಿರುವಲ್ಲಿ ಮರ ತನ್ನದೆಂಬ ಅಭಿಮಾನ ಕಾಡಿತೆಂಬ ಉದ್ವೇಗವೇ? ಅವನ ಜೀವ ಈ ಭಾವ ಯಾವುದರಲ್ಲಿ ತೊಳಲುತ್ತಾ

8th_Kannada_Reader Term I_U4-9.indd 29 18-06-2019 10.46.55 AM

ಮುಗಿಯಿತು? ಇಲ್ಲಾ ಮೂರೂ ಭಾವ ಆ ಮನಸ್ಸಿನಲ್ಲಿ ಸಾಯುವ ವೇಳೆ ತುಮುಲ ಮಾಡಿದವೋ?

ಇದನ್ನು ಈಗ ಯಾರೂ ಹೇಳುವಂತಿಲ್ಲ.

ಕೃತಿ ಕರ್ತೃ ಪರಿಚಯ



ಮಾಸ್ತಿ ವೆಂಕಟೇಶ ಅಯ್ಯಂಗಾರ್

ಶ್ರೀನಿವಾಸ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಾಸ್ತಿ. ಅವರ ಜನ್ಮ ದಿನಾಂಕ 06.08.1890. ಎಂ.ಸಿ.ಎಸ್.(ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆ)ಯಲ್ಲಿ ತೇರ್ಗಡೆಯಾಗಿ ಕಂದಾಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ವೃತ್ತಿಯನ್ನು ಪ್ರಾರಂಭಿಸಿದರು. ಉನ್ನತ ಸ್ಥಾನಗಳಲ್ಲಿ ಕೆಲಸ ಮಾಡಿ 1944ರಲ್ಲಿ ಸ್ವಇಚ್ಛೆಯಿಂದ ನಿವೃತ್ತಿ ಪಡೆದು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಬೆಳಗಾವಿಯಲ್ಲಿ 1929ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇನ್ನೂ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ.

ಮಾಸ್ತಿಯವರು ಕನ್ನಡ ಸಣ್ಣ ಕಥೆಗಳ ಜನಕ ಹಾಗೂ ಪ್ರವರ್ತಕ ಎಂದು ಹೆಸರಾಗಿದ್ದಾರೆ. ಹದಿಮೂರು ಸಣ್ಣ ಕಥೆಗಳ ಸಂಕಲನಗಳನ್ನು ಹೊರತಂದಿದ್ದಾರೆ. ಸುಬ್ಬಣ್ಣ ಇವರ ಪ್ರಮುಖ ನೀಳ್ಗತೆ. ನವರಾತ್ರಿ, ಶ್ರೀರಾಮ ಪಟ್ಟಾಭಿಷೇಕ, ಚೆನ್ನಬಸವನಾಯಕ, ಚಿಕ್ಕವೀರರಾಜೇಂದ್ರ, ಆದಿಕವಿ ವಾಲ್ಮೀಕಿ, ವಿಮರ್ಶೆ, ನಮ್ಮ ನುಡಿ ಇವು ಇವರ ಇತರ ಕೆಲವು ಕೃತಿಗಳು. ಯಶೋಧರಾ ಮತ್ತು ಕಾಕನಕೋಟೆ ಇವು ಇವರ ಪ್ರಸಿದ್ಧ ನಾಟಕಗಳು. ಮಾಸ್ತಿಯವರು ಹೊಸಗನ್ನಡದ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಸಣ್ಣ ಕಥೆಯನ್ನು ಕನ್ನಡದಲ್ಲಿ ಸಮೃದ್ಧವಾಗಿ ಬೆಳೆಸಿದವರು.

ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು ಕಥೆಯನ್ನು ಶ್ರೀನಿವಾಸರ ಸಣ್ಣಕಥೆಗಳು–13 ಎಂಬ ಕಥಾ ಸಂಕಲನದಿಂದ ಆರಿಸಲಾಗಿದೆ.

ಆಶಯ

ಆಸ್ತಿಯ ವ್ಯಾಮೋಹವೇ ಶೋಷಣೆಗೆ, ಸಂಘರ್ಷಕ್ಕೆ ಮತ್ತು ರಾಷ್ಟ್ರ–ರಾಷ್ಟ್ರಗಳ ನಡುವಣ ಸಂಗ್ರಾಮಕ್ಕೆ ಮೂಲ ಕಾರಣ. ಇದರಿಂದ ಎಲ್ಲರಿಗೂ ಅಶಾಂತಿ, ಕ್ಷೋಭೆ. ಆಸ್ತಿಯ ಮೇಲಿನ ವ್ಯಾಮೋಹವನ್ನು ಬಹಿರಂಗವಾಗಿ ತ್ಯಜಿಸಿದರೂ ಅದು ಒಳಗೊಳಗೇ ಅಭಿಮಾನವಾಗಿ ಕಾಡುತ್ತದೆ. ಜನಹಿತ ದೃಷ್ಟಿಯಿಂದ ವ್ಯಾಮೋಹವನ್ನು ಮೆಟ್ಟಿ ನಿಲ್ಲಬೇಕು.

ತತ್ವಬೋಧನೆಗಿಂತ ಅದರ ಅನುಷ್ಠಾನ ಕಷ್ಟ. ಆದರೂ ಪರಹಿತವಾದದ್ದನ್ನು ಆಚರಣೆಗೆ ತರಬೇಕಾದರೆ ಹಿಂಜರಿಯಬಾರದು. ಅವಶ್ಯವೆನಿಸಿದರೆ ತ್ಯಾಗಕ್ಕೂ ಮನುಷ್ಯ ಸಿದ್ಧನಾಗಬೇಕು. ಆದರ್ಶಕ್ಕೂ ಅನುಷ್ಠಾನಕ್ಕೂ ಮಧ್ಯೆ ಇರುವ ತೊಳಲಾಟವನ್ನು ನಾವು ಇಲ್ಲಿ ಗ್ರಹಿಸಿಬಹುದು.

8th_Kannada_Reader Term I_U4-9.indd 30 18-06-2019 10.46.55 AM

ಪದಗಳ ಅರ್ಥ

ತಣಿ–ತೃಪ್ತನಾಗು; ವೈರಾಗ್ಯ–ವ್ಯಾಮೋಹವಿಲ್ಲದ ಸ್ಥಿತಿ; ಆಸ್ತಿಕ–ದೇವರನ್ನು ನಂಬುವವನು; ವಿಚಿಕಿತ್ಸೆ–ವೈಚಾರಿಕ ದೃಷ್ಟಿ; ವ್ಯಾಧಿ–ರೋಗ; ಕುತ್ತ–ಗಂಡಾಂತರ; ಎಣಿಸು–ತಿಳಿ; ಸಂತ–ಸಾಧು; ಪ್ರವಾದಿ–ಭವಿಷ್ಯವನ್ನು ಕಂಡವನು, ದಾರ್ಶನಿಕ; ಅಕುಟಿಲ–ಪ್ರಾಮಾಣಿಕ; ವರಿಸು–ಒಪ್ಪು, ಸ್ವೀಕರಿಸು; ಸ್ವಾಮ್ಯದ ಕಾಣಿಕೆ; ಸಂಭಾವನೆ–ಗೌರವ ಧನ; ಕಂಗೆಟ್ಟ–ದಾರಿಕಾಣದ; ದರ್ಶನ–ತತ್ವ, ಸಿದ್ಧಾಂತ; ಸಮತಾವಾದಿ–ಎಲ್ಲ ಆಸ್ತಿ, ಸವಲತ್ತುಗಳು ಎಲ್ಲರಿಗೂ ಸಮವಾಗಿ ಹಂಚಿಕೆಯಾಗಬೇಕು ಎನ್ನುವವನು; ಸ್ವಾಮ್ಯವಿರುದ್ಧವಾದ–ಯಾವುದೇ ಒಡೆತನವೂ ಹಕ್ಕಲ್ಲ ಎಂಬ ಸಿದ್ಧಾಂತ; ಭೂರ್ಜ–ಒಂದು ಜಾತಿಯ ಮರ; ಹೊಲಬು–ಯೋಚನೆ; ಋಷಿಕಲ್ಪ–ಋಷಿಗೆ ಸಮಾನವಾದ; ಉಂಬಳಿ–ದತ್ತಿ, ದಾನ, ಕೊಡುಗೆ, ಉಡುಗೊರೆ; ಲೇಖಿಕಾಗ್ರಣಿ–ಶ್ರೇಷ್ಠ ಲೇಖಕ; ಚೇಗಾಗು–ಗಟ್ಟಿಯಾಗಿ, ದೃಢವಾಗು; ತೊಲೆ ತೀರು ಕವರು–ಮನೆಗಳನ್ನು ಕಟ್ಟಲು ಬಳಸುತ್ತಿದ್ದ ಮರದ ಪರಿಕರಗಳು; ಬಡ್ಡೆ–ಕತ್ತರಿಸಿದ ಮೇಲೆ ಉಳಿದ ಮರದ ಬುಡ.

ಟಿಪ್ಪಣಿಗಳು

1. ಕೌಂಟ್ ಲಿಯೋ ಟಾಲ್‌ಸ್ಟಾಯ್ : (1818–1910) ರಷ್ಯಾ ದೇಶದ ಮಹಾನ್ ಸಾಹಿತಿ. ಇವರಿಗೆ ಪೌರ್ವಾತ್ಯ ಭಾಷಾ ಸಾಹಿತ್ಯಗಳ ಪರಿಚಯವಿತ್ತು. ಮಹಾತ್ಮಾಗಾಂಧಿಯವರು ಇವರೊಡನೆ ಪತ್ರ ವ್ಯವಹಾರ ಹೊಂದಿದ್ದರು ಮತ್ತು ಇವರಿಂದ ಪ್ರಭಾವಿತರಾಗಿದ್ದರು. ಅಹಿಂಸಾ ತತ್ವದ ಬಗ್ಗೆ ಇಬ್ಬರಿಗೂ ಸಹಮತವಿತ್ತು. ವಾರ್ ಅಂಡ್ ಪೀಸ್, ಅನ್ನಾ ಕರೆನಿನಾ, ರಿಸರೆಕ್ಷನ್ – ಇವು ಇವರ ಲೋಕ ಪ್ರಸಿದ್ಧ ಕಾದಂಬರಿಗಳು. ಇವರು ಅನೇಕ ನೀತಿ ಬೋಧಕ ಹಾಗೂ ಸುಂದರವಾದ ಕಥೆಗಳನ್ನು ಬರೆದಿದ್ದಾರೆ.

2. ವ್ಲಾಡಿಮಿರ್ ಚೆರ್ಟ್‌ಕಾಫ್ : ಟಾಲ್‌ಸ್ಟಾಯ್ ಅವರ ನಿಡುಗಾಲದ ಆಪ್ತ ಮಿತ್ರ.

3. ಗಾರ್ಕಿ : ಮ್ಯಾಕ್ಸಿಂ ಗಾರ್ಕಿ. ಈತನೂ ಸಹ ರಷ್ಯಾ ದೇಶದ ಪ್ರಸಿದ್ಧ ಸಾಹಿತಿ, ಟಾಲ್‌ಸ್ಟಾಯ್ ಅವರ ಮಿತ್ರ.

4. ಸೂಲರ್ ಜೆಟ್ಸ್‌ಕೇ : ಟಾಲ್‌ಸ್ಟಾಯ್ ಅವರ ಆಪ್ತವರ್ಗಕ್ಕೆ ಸೇರಿದ ಮಿತ್ರ.

5. ಎಲ್ಲ ಪ್ರೇಮವನ್ನೂ ಬಿಟ್ಟ ಋಷಿಯೇ... ಒಬ್ಬ ಋಷಿಯು ಮೋಕ್ಷಾರ್ಥ ತಪಸ್ಸು ಮಾಡುತ್ತಿದ್ದನು. ಜಿಂಕೆಯೊಂದು ಒಂದು ಮರಿಗೆ ಜನ್ಮ ಕೊಟ್ಟು ಕಾಲವಾಯಿತು. ತಾಯಿ ಕಳೆದುಕೊಂಡ ಮರಿಯ ಅಸಹಾಯಕತೆ ಋಷಿಯ ಕರುಳನ್ನು ತಟ್ಟಿತು. ಅವನು ಅದರ ಆರೈಕೆ ಮಾಡಿದನು. ಮರಿಯು ಬೆಳೆದಂತೆಲ್ಲಾ ಅದರ ಬಾಲ್ಯ ಲೀಲಾ ವಿನೋದಗಳಿಂದ ಋಷಿಯು ವ್ಯಾಮೋಹಕ್ಕೆ ಒಳಗಾಗಿ, ತಪಸ್ಸನ್ನು ಮರೆತನು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಟಾಲ್‌ಸ್ಟಾಯ್ ಯಾವಾಗ ಬೇಸರಗೊಂಡರು?
2. ಟಾಲ್‌ಸ್ಟಾಯ್ ಬೆಳೆದ ವಾತಾವರಣ ಎಂತಹುದು ?
3. ಟಾಲ್‌ಸ್ಟಾಯ್ ದೇವರ ಮೇಲೆ ನಂಬಿಕೆಯನ್ನು ಏಕೆ ಕಳೆದುಕೊಂಡರು?
4. ಮನುಜ ಕುಲದ ಕ್ಷೇಮಕ್ಕೆ ಮೊದಲ ಕುತ್ತ ಯಾವುದು ?
5. ಆಸ್ತಿಯ ಹಕ್ಕನ್ನು ಬಿಟ್ಟುಕೊಟ್ಟ ಟಾಲ್‌ಸ್ಟಾಯ್ ಅವರನ್ನು ಜನ ಏನೆಂದು ಕರೆದರು ?
6. ಟಾಲ್‌ಸ್ಟಾಯ್ ಅವರ ಮಿತ್ರರನ್ನು ಹೆಸರಿಸಿ.
7. ಸೋಫಿಯಾತಾಯಿಗೂ ಚೆರ್ಟ್‌ಕಾಫ್‌ನಿಗೂ ಯಾವ ವಿಷಯದ ಬಗ್ಗೆ ಜಗಳವಾಯಿತು ?
8. ಯಾರನ್ನು ಜನ ಕ್ರೂರಿ ಎಂದರು ?
9. ವನ ಇದ್ದದ್ದಕ್ಕೆ ಉಳಿದ ಸಾಕ್ಷಿಗಳೇನು?

8th_Kannada_Reader Term I_U4-9.indd 31 18-06-2019 10.46.55 AM

10. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾವ್ಯನಾಮವೇನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಟಾಲ್‌ಸ್ಟಾಯ್ ಅವರ ಪ್ರಾರಂಭಿಕ ಜೀವನ ಹೇಗಿತ್ತು ?
2. ಆಸ್ತಿಯು ಮನುಜ ಕುಲದ ಕ್ಷೇಮಕ್ಕೆ ಹೇಗೆ ಕುತ್ತ ಆಗುತ್ತದೆ ?
3. ತನ್ನ ಆಸ್ತಿಯ ಬಗ್ಗೆ ಟಾಲ್‌ಸ್ಟಾಯ್ ಯಾವ ತೀರ್ಮಾನಕ್ಕೆ ಬಂದರು ?
4. ಟಾಲ್‌ಸ್ಟಾಯ್ ಭೂರ್ಜವನವನ್ನು ಬೆಳೆಸಿದ ಬಗೆ ಹೇಗೆ ?
5. ಸೋಫಿಯಾ ಮನೆಯ ವೆಚ್ಚವನ್ನು ಹೇಗೆ ನಿರ್ವಹಿಸಿದರು ?
6. ಜೀತದವರು ಭೂರ್ಜವೃಕ್ಷಗಳನ್ನು ಏಕೆ ಬಯಸಿದರು ?
7. ಟಾಲ್‌ಸ್ಟಾಯ್ ಮನೆ ಬಿಟ್ಟು ಹೋಗಲು ಕಾರಣಗಳೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭೂರ್ಜವನದ ನಾಶವು ಹೇಗಾಯಿತು? ಅದು ಟಾಲ್‌ಸ್ಟಾಯ್ ದಂಪತಿಗಳ ಮೇಲೆ ಮಾಡಿದ ಪರಿಣಾಮವೇನು ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಕ್ಷೇಮ, ಸೈನ್ಯ, ಮಿತ್ರ, ವನ, ಮರ.

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ತೊರೆದಿದ್ದೇನೆ, ಕೊನೆಗಾಣು, ಲೇಖಕಾಗ್ರಣಿ, ಅತ್ಯುತ್ತಮ, ಪಿತ್ರಾರ್ಜಿತ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಶ್ರೀಮಂತ, ನೀತಿ, ಆಸ್ತಿಕ, ತೃಪ್ತಿ, ವಿದ್ಯೆ, ಸುಖ, ಸತ್ಯ, ಸಮಾಧಾನ, ಅಕುಟಿಲ, ಆಶ್ರಿತ.

4. ಕೆಳಗಿನ ಪದಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ.

ದಾರಿಹಿಡಿ, ನೆಲಸಮವಾಗು, ಧ್ವಂಸ ಮಾಡು, ಹಳೆಯ ಮರ, ಅಭಿಮಾನ.

5. ಕೆಳಗಿನ ಪದಗಳ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ

ಋಷಿ, ಶ್ರೀಮಂತ, ಯೋಧ, ವಿರಾಗಿ, ನಿತ್ಯ, ಪುಸ್ತಕ, ತ್ಯಾಗ. ಸಂತೋಷ.

ಚಟುವಟಿಕೆ

1. ಈ ಕಥೆಯನ್ನು ನಾಟಕವಾಗಿ ರೂಪಾಂತರಿಸಿ.
2. ಶ್ರೀನಿವಾಸರ ಇತರ ಕಥೆಗಳನ್ನು ಸಂಗ್ರಹಿಸಿ ಓದಿರಿ.



8th_Kannada_Reader Term I_U4-9.indd 32 18-06-2019 10.46.55 AM

ಉಪಪಠ್ಯ

ಘಟಕ ಎರಡು

ಸೌಂದರ್ಯಕ್ಕೆ ರೆಕ್ಕೆ ಬಂದ ಲೋಕದವರು


– ಹಾ.ಮಾ.ನಾಯಕ



ಬಿಡುವಿನ ವೇಳೆಯಲ್ಲಿ ಯಾವುದಾದರೂ ಮನಸ್ಸಂತೋಷ ಕೊಡುವ ಕೆಲಸಗಳಲ್ಲಿ ನಮ್ಮನ್ನು ನಾವೇ ತೊಡಗಿಸಿಕೊಳ್ಳುವುದು ಹವ್ಯಾಸ. ಕೆಲವರು ತಮಗೆ ಪ್ರಿಯವಾದ ವಸ್ತುಗಳನ್ನು ಸಂಗ್ರಹಿಸುತ್ತಾರೆ. ಕೆಲವರು ಆಟೋಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಸಲೀಂ ಆಲಿಯವರು ಬಾಲ್ಯದಲ್ಲಿ ಹಾರಾಡುತ್ತಿದ್ದ ಹಕ್ಕಿಗಳನ್ನು ಎಣಿಸುತ್ತಾ, ಮುಂದೆ ಭಾರತ ಉಪಖಂಡವನ್ನೆಲ್ಲ ಸಂಚರಿಸಿ ಹಕ್ಕಿಗಳನ್ನು ವೀಕ್ಷಿಸುವ ಹವ್ಯಾಸವನ್ನು ಬೆಳೆಸಿಕೊಂಡು, ಅಧ್ಯಯನ ಮಾಡಿ ಗ್ರಂಥಗಳನ್ನು ರಚಿಸಿ, 'ಭಾರತದ ಹಕ್ಕಿ ಮನುಷ್ಯ'ನೆಂದೇ ಹೆಸರಾದ ಅವರ ಯಶೋಗಾಥೆ ಇಲ್ಲಿದೆ.

ಸಲೀಂ ಆಲಿ ಮುಂಬೈನ ಕೇತ್‌ವಾಡಿ ಪ್ರದೇಶದ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ತಮ್ಮ ಮೂರನೇ ವಯಸ್ಸಿನ ಹೊತ್ತಿಗೆ ಅವರು ತಂದೆ ತಾಯಿಗಳಿಬ್ಬರನ್ನೂ ಕಳೆದುಕೊಂಡಿದ್ದರು. ಹಾಗಾಗಿ ಅವರು ಸೋದರಮಾವನ ಮನೆಯಲ್ಲಿ ಬೆಳೆದರು. ಗಣಿತವನ್ನು ಇಷ್ಟಪಡದ ಅವರು ಗಣಿತದ ತರಗತಿಗೆ ಚಕ್ಕರ್ ಹಾಕಿ, ಹಾರಾಡುತ್ತಿದ್ದ ಹಕ್ಕಿಗಳನ್ನು ಎಣಿಸುತ್ತಿದ್ದರು. ಮುಂಬೈನ ನ್ಯಾಚುರಲ್ ಹಿಸ್ಟರಿ ಸೊಸೈಟಿಯೇ ಅವರ ಮನೆ, ಶಾಲೆ, ಮಸೀದಿ ಎಲ್ಲವೂ ಆಯಿತು. ಭಾರತದ ಉಪಖಂಡವನ್ನೆಲ್ಲ ಅವರು ಸುತ್ತಿದರು. ಅಲ್ಲಿನ ಹಕ್ಕಿಗಳನ್ನೆಲ್ಲ ವೀಕ್ಷಿಸಿದರು. ಅವರು 'ಭಾರತದ ಹಕ್ಕಿ ಮನುಷ್ಯ' ಎಂದು ಹೆಸರಾಗಿದ್ದರು. ತಮ್ಮ ಅಧ್ಯಯನದಿಂದ ಕ್ಷೇತ್ರಕಾರ್ಯದಿಂದ, ಬರವಣಿಗೆಗಳಿಂದ ಅವರು ರಾಷ್ಟ್ರದಲ್ಲಿ ಪಕ್ಷಿ ಮನಸ್ಸೊಂದನ್ನು ಸೃಷ್ಟಿಸಲು ಸತತವಾಗಿ ಶ್ರಮಿಸಿದರು.

'ಪಕ್ಷಿಗಳನ್ನು ಕುರಿತು ತಮ್ಮ ಆಸಕ್ತಿಯೆಲ್ಲಾ ಸಲೀಂ ಅವರಿಂದ ಬಂದದ್ದು' ಎಂದು ಇಂದಿರಾ ಗಾಂಧಿ ಹೇಳುತ್ತಿದ್ದರು. ರಾಜೇಶ್ವರ ಪ್ರಸಾದ್, ನಾರಾಯಣ ಸಿನ್ಹಾ ಎನ್ನುವವರು ಮಕ್ಕಳಿಗಾಗಿ



ಬರೆದ 'ನಮ್ಮ ಹಕ್ಕಿಗಳು' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಇಂದಿರಾಗಾಂಧಿ ಹೇಳುತ್ತಾರೆ: 'ಡೆಹರಾಡೂನಿನ ಜೈಲಿನಿಂದ ನನ್ನ ತಂದೆಯವರು ಸಲೀಂ ಅವರ ಆನಂದದಾಯಕ ಪುಸ್ತಕವನ್ನು ನನಗೆ ಕಳಿಸುವವರೆಗೂ, ಬಹುಪಾಲು ಭಾರತೀಯರಂತೆ ನಾನೂ ಹಕ್ಕಿಗಳ ಬಗೆಗೆ ಯೋಚಿಸಿಯೇ ಇರಲಿಲ್ಲ. ಈ

8th_Kannada_Reader Term I_U4-9.indd 33 18-06-2019 10.46.56 AM

ಪುಸ್ತಕ ಒಂದು ಹೊಸ ಪ್ರಪಂಚಕ್ಕೆ ನನ್ನ ಕಣ್ಣು ತೆರೆಸಿತು. ನಾನು ಎಷ್ಟೊಂದನ್ನು ಕಳೆದುಕೊಳ್ಳುತ್ತಿದ್ದೆನೆಂಬುದು ನನಗೆ ಆಗಲೇ ಗೊತ್ತಾದದ್ದು' ಸಲೀಂ ಅವರ ಪುಸ್ತಕಗಳ ನೆರವಿನಿಂದಲೇ ತಾವು ಹಕ್ಕಿಗಳನ್ನು ಗುರುತಿಸುವುದು ಸಾಧ್ಯವಾಯಿತೆಂದು ಅವರು ಇನ್ನೊಂದು ಸಂದರ್ಭದಲ್ಲೂ ಹೇಳಿದರು.

ಜವಹರಲಾಲ್ ನೆಹರೂ ಅವರು ಸಲೀಂ ಅಲಿ ಅವರ ಬರವಣಿಗೆಯ ಆರಾಧಕರಾಗಿದ್ದರು. ಅಹಮದ್ ನಗರದ ಜೈಲಿನಲ್ಲಿದ್ದಾಗ ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರು ತಮ್ಮ ಕೋಣೆಯಲ್ಲಿ ಸೇರಿಕೊಂಡಿದ್ದ ಒಂದು ಜೊತೆ ಗುಬ್ಬಿಗಳ ಬಗೆಗೆ ಹೆಚ್ಚಾಗಿ ತಿಳಿದುಕೊಳ್ಳಲು ಇನ್ನೊಂದು ಕೋಣೆಯಲ್ಲಿ ಬಂಧಿಯಾಗಿದ್ದ ನೆಹರೂ ಅವರಿಂದ ಸಲೀಂ ಅಲಿ ಅವರ ಪುಸ್ತಕವನ್ನು ಎರವಲು ಪಡೆದಿದ್ದರಂತೆ.

ಭಾರತೀಯ ಪಕ್ಷಿಗಳನ್ನು ಕುರಿತ ಸಲೀಂ ಅಲಿ ಅವರ ಪುಸ್ತಕ 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್' ತುಂಬ ಪ್ರಸಿದ್ಧವಾದದ್ದು. 1941ರಲ್ಲಿ ಅದು ಮೊದಲ ಸಲಕ್ಕೆ ಪ್ರಕಟವಾಯಿತು. ಆಗ ಅದರ ಬೆಲೆ ಹದಿನಾಲ್ಕು ರೂಪಾಯಿ. ಅದರಲ್ಲಿ 181 ಜಾತಿಯ ಭಾರತದ ಸಾಮಾನ್ಯ ಹಕ್ಕಿಗಳ ಪರಿಚಯವಿತ್ತು. ಮುಂದಿನ ಆವೃತ್ತಿಗಳಲ್ಲಿ ಈ ಸಂಖ್ಯೆ ಬೆಳೆಯುತ್ತಾ ಹೋಯಿತು. ಹಾಗೆಯೇ ಪುಸ್ತಕದ ಬೆಲೆಯೂ ಬೆಳೆಯಿತು ಎಂದು ಸಲೀಂ ಅಲಿ ತಮಾಷೆ ಮಾಡುತ್ತಾರೆ. 1980ರಲ್ಲಿ ಪುಸ್ತಕದ ಹನ್ನೊಂದನೇ ಮುದ್ರಣ ಹೊರಬಂತು. ಅದರಲ್ಲಿ, 280 ಜಾತಿಗಳ ಹಕ್ಕಿಗಳ ಪರಿಚಯವಿದೆ. ಬೆಲೆ 60 ಅರವತ್ತು ರೂಪಾಯಿ. ಈವರೆಗೆ ಈ ಪುಸ್ತಕದ ಸುಮಾರು ಅರ್ಧ ಲಕ್ಷ ಪ್ರತಿಗಳ ಮಾರಾಟವಾಗಿದೆ. ಸಿ.ಪಿ. ರಾಮಸ್ವಾಮಿ ಅಯ್ಯರ್, ತ್ರಿವೇಂದ್ರಂ ವಿಶ್ವವಿದ್ಯಾನಿಲಯದ ಇಂದಿನ(ಕೇರಳ ವಿ.ವಿ.) ಕುಲಾಧಿಪತಿಯಾಗಿದ್ದಾಗ ವಿಶ್ವವಿದ್ಯಾನಿಲಯದಲ್ಲಿ ಹಂಚಿಕೆಗಾಗಿ ಈ ಪುಸ್ತಕದ 500 ಪ್ರತಿಗಳನ್ನು ಖರೀದಿ ಮಾಡಿಸಿದ್ದರಂತೆ !

ಮೊದಲ ಪುಸ್ತಕದ ಈ ಯಶಸ್ಸು ಸಲೀಂ ಅಲಿ ಅವರು ಮುಂದೆ ಎಷ್ಟೋ ಪುಸ್ತಕಗಳನ್ನು ಬರೆಯಲು ಪ್ರಚೋದಿಸಿತು. ಬಗೆಬಗೆಯ ಧ್ಯೇಯೋದ್ದೇಶಗಳ ನಾನಾ ರೀತಿಯ ಅನೇಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಕೇರಳದ ಹಕ್ಕಿಗಳು, ಸಿಕ್ಕಿಂನ ಹಕ್ಕಿಗಳು, ಭಾರತದ ಬೆಟ್ಟ ಪ್ರದೇಶದ ಹಕ್ಕಿಗಳು, ಭಾರತ–ಪಾಕಿಸ್ತಾನ ಪಕ್ಷಿಗಳ ಕೈಪಿಡಿ... ಮೊದಲಾದ ಹಲವಾರು ಪುಸ್ತಕಗಳು ಪಟ್ಟಿಯಲ್ಲಿವೆ. ವಿಲ್ಲೋನ್ ರಿಪೆಲೈ ಎನ್ನುವವರೊಡನೆ ಕೂಡಿ ಸಲೀಂ ಅಲಿ ಈ ಕೆಲಸ ಮಾಡಿದ್ದಾರೆ. ಅವರ ಕೆಲವು ಪುಸ್ತಕಗಳು ಭಾರತದ ನಾನಾ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಮುಂಬೈನ ನ್ಯಾಚುರಲ್ ಹಿಸ್ಟರಿ ಸೊಸೈಟಿಯೊಡನೆ ಸಲೀಂ ಅವರ ಸಂಬಂಧ ತೀರಾ ನಿಕಟವಾದದ್ದು. ಕೆಲವು ಇಂಗ್ಲಿಷ್ ಜನರ ಆಸಕ್ತಿಯಿಂದ ಅಸ್ತಿತ್ವಕ್ಕೆ ಬಂದ (1883) ಈ ಸಂಸ್ಥೆ ಈಗ ಇಡೀ ಏಷ್ಯಾದಲ್ಲಿಯೇ ಪ್ರಸಿದ್ಧವಾಗಿದೆ. ಇದರ ಈ ಕೀರ್ತಿಗೆ ಸಲೀಂ ಅಲಿ ಅವರು ಬಹುಮಟ್ಟಿಗೆ ಕಾರಣರಾಗಿದ್ದಾರೆ ಎಂದರೆ ತಪ್ಪಾಗುವುದಿಲ್ಲ. 1927ರಷ್ಟು ಹಿಂದೆಯೇ ಅವರು ಸಂಸ್ಥೆಯ ಪತ್ರಿಕೆಗೆ ಸಂಪಾದಕರಾಗಿದ್ದರು. 1950ರಲ್ಲಿ ಕಾರ್ಯದರ್ಶಿಯಾದರು. ಕಳೆದ 10 ವರ್ಷಗಳಿಂದಲೂ ಸಲೀಂ ಅಲಿ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಅವರು ಸಂಪರ್ಕ ಪಡೆದಿದ್ದ ಸಂಘ ಸಂಸ್ಥೆಗಳು ಒಂದೆರಡಲ್ಲ. ಎಲ್ಲೆಲ್ಲಿ ಅವರು ಕೆಲಸ ಮಾಡಿದರೋ ಅಲ್ಲೆಲ್ಲ ಅವರು ತಮ್ಮ ಪ್ರಭಾವವನ್ನು ಉಳಿಸಿದರು.

ಅವರ ಸಂಶೋಧನೆ ಹಾಗೂ ಬರವಣಿಗೆಯ ಕೆಲಸದಲ್ಲಿ ಅವರ ಹೆಂಡತಿ ತೆಹಮಿನಾ ವಹಿಸಿದ ಪಾತ್ರ ದೊಡ್ಡದು. ಅದನ್ನು ಸಲೀಂ ಅಲಿ ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ. 1939ರಲ್ಲಿ ತೆಹಮಿನಾ ತೀರಿಕೊಂಡ ಮೇಲೆ ಸಲೀಂ ಅಲಿ ಡೆಹ್ರಾಡೂನಿನ ತಮ್ಮ ವಾಸಸ್ಥಳವನ್ನು ಮುಂಬಯಿಗೆ ಬದಲಾಯಿಸಿದರು. ಮುಂಬಯಿಯಂಥ ನಗರ ಜೀವನವನ್ನು ಅವರು ಅಷ್ಟಾಗಿ ಇಷ್ಟ ಪಟ್ಟವರಲ್ಲ. ಆದರೆ ತೆಹಮಿನಾ ಅವರಿಲ್ಲದ ಡೆಹರಾಡೂನಿನಲ್ಲಿ ಅವರು ಸಹಜವಾಗಿ ಶೂನ್ಯವನ್ನನುಭವಿಸಿದರು. ಮುಂಬಯಿಯಲ್ಲಿ ಹತ್ತಿರದ ಬಂಧುಗಳಿದ್ದರು. ವಿಶ್ವಾಸದ ಆಹ್ವಾನವಿತ್ತು. ಮೇಲಾಗಿ ನ್ಯಾಚುರಲ್ ಹಿಸ್ಟರಿ ಸೊಸೈಟಿ ಇತ್ತು. ಮನಸ್ಸಿಲ್ಲದ ಮನಸ್ಸಿನಿಂದಲೇ ಅವರು ಡೆಹರಾಡೂನನ್ನು ಬಿಟ್ಟರು.

ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದ ಸಲೀಂ ಅಲಿ ಜಗತ್ತಿನ ಪ್ರಖ್ಯಾತ ಪಕ್ಷಿ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದರು. ಅವರು ಮುಂದಿನ ಜನಾಂಗಕ್ಕಾಗಿ ಎಷ್ಟೋ ಪಕ್ಷಿ ಸಂತತಿಗಳ ನೆನಪನ್ನು ಉಳಿಸಿಕೊಟ್ಟಿದ್ದಾರೆ. ತಮ್ಮ ಕಾಲದ ಜನರಿಗೇ

8th_Kannada_Reader Term I_U4-9.indd 34 18-06-2019 10.46.56 AM

ಗೊತ್ತಿಲ್ಲದ ಎಷ್ಟೋ ಪಕ್ಷಿ ಸಂತತಿಗಳನ್ನು ಪರಿಚಯಿಸಿ ಕೊಟ್ಟಿದ್ದಾರೆ. ಅವರಿಗೆ ಸಂದ ಗೌರವಗಳಿಗೆ ಲೆಕ್ಕವಿಲ್ಲ. ಪದ್ಮಭೂಷಣ(1958), ಪದ್ಮವಿಭೂಷಣ(1976) ಪ್ರಶಸ್ತಿಗಳೆರಡೂ ಅವರಿಗೆ ದೊರಕಿದ್ದವು. ಅಲಿಘರ್(1958), ದಿಲ್ಲಿ(1973), ಆಂಧ್ರ(1978) ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿದ್ದವು. ಪದಕಗಳು, ಬಹುಮಾನಗಳು, ಫೆಲೋಶಿಪ್‌ಗಳು, ಸದಸ್ಯತ್ವಗಳು ಹಲವಾರು ಬಂದಿದ್ದವು.

ಇವುಗಳಲ್ಲೆಲ್ಲ ಮುಖ್ಯವಾದುದೆಂದರೆ ಪಾಲ್‌ಗೆಟ್ಟಿ ಅಂತರರಾಷ್ಟ್ರೀಯ ಪ್ರಶಸ್ತಿ(1976). ಇದನ್ನು ಪಡೆದವರಲ್ಲಿ ಸಲೀಂ ಅಲಿ ಎರಡನೆಯವರು. ಈ ಪ್ರಶಸ್ತಿಯ ಐವತ್ತು ಸಾವಿರ ಡಾಲರುಗಳ ಮೊತ್ತವನ್ನು ಅವರು ತಮ್ಮ ಮಾತೃಸಂಸ್ಥೆಯ ಬೆಳವಣಿಗೆಗೆಂದು ನೀಡಿದರು. ಸಲೀಂ ಅಲಿ ಅವರನ್ನು ಈ ದೊಡ್ಡ ಪ್ರಶಸ್ತಿಗೆ ಶಿಫಾರಸು ಮಾಡಿದ ಅಮೇರಿಕೆಯ ಸೆನೆಟರ್ ಮಥಿಯಾಸ್ 'ಸಲೀಂ ಅಲಿ ಪರಿಸರ ಬ್ರಹ್ಮ' ಎಂದು ವರ್ಣಿಸಿದ್ದಾರೆ. ಸೆನೆಟರ್ ಮಥಿಯಾಸ್ ಒಮ್ಮೆ ಭಾರತಕ್ಕೆ ಬಂದಿದ್ದಾಗ ಮಾತಿನ ನಡುವೆ ಇಂದಿರಾಗಾಂಧಿ ಕೇಳಿದರಂತೆ : 'ನೀವು ಸಲೀಂ ಅಲಿ ಅವರನ್ನು ಬಲ್ಲಿರಾ?' 'ಇಲ್ಲ' ಎಂದರು ಮಥಿಯಾಸ್. ಒಡನೆಯೇ ಇಂದಿರಾಗಾಂಧಿ ಅವರ ಭೇಟಿಗೆ ವ್ಯವಸ್ಥೆ ಮಾಡಿದರು. ಮಥಿಯಾಸ್ ಸಲೀಂ ಅಲಿ ಅವರೊಡನೆ ಮುಂಬೈ ಸಮೀಪದ ಒಂದು ಉದ್ಯಾನದಲ್ಲಿ ಒಂದು ದಿನವನ್ನು ಕಳೆದರು. ಆ ಸಂದರ್ಭವನ್ನು ನೆನೆಸಿಕೊಂಡು ಸೆನೆಟರ್ ಮಥಿಯಾಸ್ ಹೇಳುತ್ತಾರೆ : 'ಸಲೀಂ ಅಲಿ ಆ ದಿನ ಅರಣ್ಯಗಳ ಸೌಂದರ್ಯಕ್ಕೆ ನನ್ನ ಕಣ್ಣು ತೆರೆಸಿದರು.... ಭಾರತದ ಪಕ್ಷಿಗಳನ್ನು ಕುರಿತು ನಾನು ಎಷ್ಟೋ ಕಲಿತೆ. ಮೇಲಾಗಿ ಎಲ್ಲ ಕಡೆಯೂ ಇರುವ ಎಲ್ಲರೂ ಹಂಚಿಕೊಂಡ ಮಾನವ ಗುಣಗಳನ್ನೂ ತಿಳಿದುಕೊಂಡೆ'.

ಸಲೀಂ ಅಲಿ ರಾಜ್ಯ ಸಭೆಗೆ ನಾಮಕರಣಗೊಂಡಾಗ ಯಾರೋ ಕೇಳಿದರಂತೆ : 'ಇದುವರೆಗೂ ನೀವು ಹಕ್ಕಿಗಳನ್ನು ವೀಕ್ಷಿಸುತ್ತಿದ್ದಿರಿ. ಈಗೇನು ಮಾಡುತ್ತೀರಿ?' ಸಲೀಂ ಅಲಿ ಹೇಳಿದರಂತೆ : 'ಈಗ ಒಂದು ಥರಹ ಜನರನ್ನು ವೀಕ್ಷಿಸುತ್ತೇನೆ!'

ಹಕ್ಕಿಗಳದ್ದೇ ಒಂದು ಲೋಕ. ಅದರಲ್ಲಿ ಸೌಂದರ್ಯಕ್ಕೆ ರೆಕ್ಕೆ ಕಟ್ಟಿರುತ್ತದೆ. ಸೌಂದರ್ಯವೇ ರೂಪುಗೊಂಡ ಹಕ್ಕಿಗಳು ಹಾಡುತ್ತವೆ, ಹಾರುತ್ತವೆ, ಕುಣಿಯುತ್ತವೆ, ಕುಪ್ಪಳಿಸುತ್ತವೆ. ಆದರೆ ಅದನ್ನು ನೋಡಿ ಸಂತೋಷಿಸುವವರು ಸಂಭ್ರಮಿಸುವವರು ಬಹಳ ಕಡಿಮೆ. ನಾಗರಿಕತೆಯ ಗಡಿಬಿಡಿ ಗಲಿಬಿಲಿಗಳಿಂದ ದೂರವಾಗಿ ನೆಮ್ಮದಿಯನ್ನು ಪಡೆಯಲು ಪಕ್ಷಿ ಪ್ರಪಂಚ ನಮಗೆ ಸಹಾಯ ಮಾಡುತ್ತದೆ. ಪಕ್ಷಿ ಪರಿವೀಕ್ಷಣೆಯ ರೋಮಾಂಚನವನ್ನು ಯಾರಾದರೂ 'ಪರಾರಿ ವಾದ' ಎನ್ನಬಹುದು. ಇರಬಹುದು, ಆದರೆ ಸಲೀಂಅಲಿ ಹೇಳುತ್ತಾರೆ, 'ಅದಕ್ಕೆ ಸಮರ್ಥನೆಯ ಅಗತ್ಯವಿಲ್ಲ!'.

ಕೃತಿ ಕರ್ತೃ ಪರಿಚಯ



ಡಾ. ಹಾ. ಮಾ. ನಾಯಕ

ಡಾ. ಹಾರೋಗದ್ದೆ ಮಾನಪ್ಪ ನಾಯಕ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನವರು. ಇವರು ಹುಟ್ಟಿದ್ದು 1931ರ ಫೆಬ್ರವರಿ ಐದರಂದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಬಾಳ್ನೋಟ, ಸೂಲಂಗಿ, ಸಮೀಕ್ಷೆ, ಸಂಕೀರ್ಣ, ರವೀಂದ್ರನಾಥ, ಹಾವು ಮತ್ತು ಹೆಣ್ಣು ಎಂಬ ಗದ್ಯ ಗ್ರಂಥಗಳನ್ನೂ ರಚಿಸಿದ್ದಾರೆ. ಶಾಂತಿ ಸ್ವರೂಪ, ಭಟ್ನಾಗರ್, ಭಾರತದ ಹಳ್ಳಿಗಳು, ರೂಪಾರಾಧಕ ಮತ್ತು ನಿಸರ್ಗದಡಿಯಲ್ಲಿ ಎಂಬುವು ಇವರ ಸಂಪಾದಿತ ಕೃತಿಗಳು. ಪ್ರಜಾವಾಣಿ ಪತ್ರಿಕೆಯ

8th_Kannada_Reader Term I_U4-9.indd 35 18-06-2019 10.46.56 AM

ವಾರದ ವಿಭಾಗದ 'ಸಂಪ್ರತಿ' ಅಂಕಣಕಾರರು. ಈ ಲೇಖನವನ್ನು ಪ್ರಜಾವಾಣಿ 1989ರ ಪತ್ರಿಕೆಯಿಂದ ತೆಗೆದುಕೊಳ್ಳಲಾಗಿದೆ. ಇವರ ಅಂಕಣ ಸಾಹಿತ್ಯ ಸಂಪ್ರತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ.

ಜೀವನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಹವ್ಯಾಸ ಇರುವುದುಂಟು. ಕೆಲವರು ಅಂಚೆ ಚೀಟಿಗಳನ್ನೂ, ನಾಣ್ಯಗಳನ್ನೂ ಸಂಗ್ರಹಿಸುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರೆ; ವರ್ಷದ ಪ್ರಮುಖ ಘಟನೆಗಳನ್ನು ಸಂಗ್ರಹಿಸುವವರೂ, ಉತ್ತಮ ಪುಸ್ತಕಗಳನ್ನು ಸಂಗ್ರಹಿಸುವವವರೂ ಇರುವುದುಂಟು. ಆದರೆ, ಸಲೀಂ ಅಲಿ ಅವರು ಹಕ್ಕಿಗಳ ಬಗ್ಗೆ ಆಸಕ್ತಿ ವಹಿಸಿದರು. ಹೀಗೆ ಸಲೀಂ ಅಲಿ ಅವರು ಹಕ್ಕಿಗಳನ್ನು ಕುರಿತು ಅಧ್ಯಯನ ನಡೆಸಿ ಭಾರತದ ಹಕ್ಕಿ ಮನುಷ್ಯರಾದ ಬಗೆ ಹೇಗೆಂಬುದನ್ನು ಈ ಭಾಗದಲ್ಲಿ ಕಾಣುತ್ತೇವೆ.

ಪದಗಳ ಅರ್ಥ

ಕೇತ್‌ವಾಡಿ–ಮುಂಬಯಿಯ ಒಂದು ಸ್ಥಳ; ಎರವಲು–ಸಾಲ, ಕಡ; ಆವೃತ್ತಿ–ಸರದಿ, ಬಾರಿ, ಸುತ್ತುವರಿಯುವಿಕೆ; ಕುಲಾಧಿಪತಿ–ವಿಶ್ವವಿದ್ಯಾನಿಲಯದ ಮುಖ್ಯಸ್ಥರು; ಅಸ್ತಿತ್ವ–ಇರುವಿಕೆ; ಪ್ರಚೋದನೆ–ಪ್ರೇರಣೆ, ಉತ್ತೇಜನ; ಆತ್ಮಕಥೆ–ಸ್ವಜೀವನ ಕಥೆ; ಪರಿವೀಕ್ಷಣೆ–ವಿಚಾರ ಮಾಡಿ ನೋಡುವಿಕೆ, ಸೂಕ್ಷ್ಮಾವಲೋಕನ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಗಣಿತ ತರಗತಿಗೆ ಚಕ್ಕರ್ ಹಾಕಿ ಅಲಿಯವರು ಏನು ಮಾಡುತ್ತಿದ್ದರು ?
2. ಮುಂದಿನ ಜನಾಂಗಕ್ಕೆ ಅಲಿಯವರ ಕೊಡುಗೆ ಏನು ?
3. ಅಲಿಯವರನ್ನು 'ಪರಿಸರ ಬ್ರಹ್ಮ' ಎಂದು ವರ್ಣಿಸಿದವರು ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. 'ನಮ್ಮ ಹಕ್ಕಿಗಳು' ಪುಸ್ತಕದ ಮುನ್ನುಡಿಯಲ್ಲಿ ಇಂದಿರಾಗಾಂಧಿಯವರು ಏನೆಂದು ಹೇಳಿದ್ದಾರೆ.
2. ಅಲಿಯವರ 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಪುಸ್ತಕದ ಮಹತ್ವವೇನು ?
3. ಅಲಿಯವರು ಬರೆದ ಇತರ ಪುಸ್ತಕಗಳಾವುವು?
4. ಅಲಿಯವರಿಗೆ ದೊರೆತ ಇತರ ಪ್ರಶಸ್ತಿಗಳನ್ನು ತಿಳಿಸಿರಿ.
5. ಪಕ್ಷಿ ಪ್ರಪಂಚ ನಮಗೆ ಹೇಗೆ ಸಹಾಯ ಮಾಡಿದೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭಾರತದಲ್ಲಿ ಹಕ್ಕಿಗಳನ್ನು ಕುರಿತು ಆಸಕ್ತಿ ಮೂಡಿಸುವಲ್ಲಿ ಅಲಿಯವರು ವಹಿಸಿದ ಪಾತ್ರವನ್ನು ವಿವರಿಸಿರಿ ?

ಚಟುವಟಿಕೆ

1. ನಿಮಗೆ ಸಮೀಪದಲ್ಲಿರುವ ಪಕ್ಷಿಧಾಮಕ್ಕೆ ಭೇಟಿ ಕೊಟ್ಟು ಅಲ್ಲಿಯ ಪಕ್ಷಿಗಳ ಬಗೆಗೆ ವಿವರ ತಿಳಿಯಲು ಪ್ರಯತ್ನಿಸಿರಿ.
2. ನಿಮಗೆ ತಿಳಿದಿರುವ ಪಕ್ಷಿಗಳ ಹೆಸರನ್ನು ಪಟ್ಟಿ ಮಾಡಿರಿ.



8th_Kannada_Reader Term I_U4-9.indd 36 18-06-2019 10.46.56 AM

ವ್ಯಾಕರಣ

ಘಟಕ ಎರಡು

ನಾಮಪದಗಳು

ನಾಮ ಎಂದರೆ ಹೆಸರು. ನಾಮಪದ ಎಂದರೆ ವಸ್ತುಗಳ ಹೆಸರನ್ನು ಸೂಚಿಸುವ ಪದ. ಆದ್ದರಿಂದ ಇದನ್ನು ವಸ್ತುವಾಚಕವೆಂದೂ ಕರೆಯಬಹುದು. ಉದಾಹರಣೆಗೆ : ಅರ್ಜುನ, ಮನೆ, ಸೀತೆ, ನಾಯಿ, ತಾಳವಾಡಿ, ದಾರವಾಡ... ಇತ್ಯಾದಿ. 'ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕ 'ನಾಮಪದಗಳು'. ವ್ಯಕ್ತಿ, ವಸ್ತು, ಪ್ರಾಣಿ, ಸ್ಥಳ ಹಾಗೂ ಭಾವಗಳ ಹೆಸರುಗಳನ್ನು ಇವು ತಿಳಿಸುತ್ತವೆ. ವಸ್ತುವಾಚಕ ನಾಮಪದಗಳಲ್ಲಿ ಪ್ರಮುಖವಾದವು ಮೂರು. ಅವುಗಳು, ರೂಢನಾಮ, ಅಂಕಿತ ನಾಮ ಹಾಗೂ ಅನ್ವರ್ಥ ನಾಮ.

ರೂಢ ನಾಮ : ಬಹುಕಾಲದಿಂದ ರೂಢಿಯಿಂದ ಬಂದ ಒಂದು ವರ್ಗದ ಹೆಸರುಗಳನ್ನು ತಿಳಿಸುವ ಸಾಮಾನ್ಯವಾಚಕಗಳು ರೂಢನಾಮ ಎನ್ನಿಸುವುವು.

ಉದಾಹರಣೆ : ಅರಸ, ಬೆಟ್ಟ, ಮನುಷ್ಯ, ಗಿಡ, ಮರ, ಪ್ರಾಣಿ, ಹೆಂಗಸು, ದೇಶ, ನದಿ ಇತ್ಯಾದಿ.

ಅಂಕಿತ ನಾಮ : ವ್ಯವಹಾರದ ಅನುಕೂಲಕ್ಕಾಗಿ ಪ್ರತಿಯೊಂದು ವಸ್ತುವನ್ನೂ ಪ್ರತ್ಯೇಕವಾಗಿ ಗುರುತಿಸಲು ಇಟ್ಟ ಹೆಸರುಗಳು ಅಂಕಿತ ನಾಮಗಳು.

ಉದಾಹರಣೆ : ಪುಲಿಕೇಶಿ, ಚಾಮುಂಡಿ ಬೆಟ್ಟ, ಭೀಮ, ಮಲ್ಲಿಗೆ, ಮಾವು, ನಾಯಿ, ಜಾನಕಿ, ಭಾರತ ದೇಶ, ಗಂಗಾನದಿ ಇತ್ಯಾದಿ.

ಅನ್ವರ್ಥ ನಾಮ : ವಸ್ತುವಿನ, ವ್ಯಕ್ತಿಯ ಗುಣ ಲಕ್ಷಣ ಸ್ವಭಾಗಳಿಗನುಗುಣವಾಗಿ ಇಡಲಾದ ಹೆಸರುಗಳೇ ಅನ್ವರ್ಥನಾಮಗಳು.

ಉದಾಹರಣೆ : ಕುರುಡ, ಕುಂಟ, ಬಿಳಿಯ, ದಡಿಯ, ಸೊಣಕಲ, ಕಿರಿಯ, ವೈದ್ಯ, ಅಂಬಿಗ, ಯೋಗಿ, ವಿಜ್ಞಾನಿ, ಚಾಲಕ ಇತ್ಯಾದಿ.

ಸರ್ವನಾಮಗಳು

ನಾಮ ಪದಕ್ಕೆ ಬದಲಾಗಿ ಉಪಯೋಗಿಸುವ ಪದಗಳಿಗೆ ಸರ್ವನಾಮ ಎಂದು ಹೆಸರು.

ಉದಾಹರಣೆ : 'ಶಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬಾ ಬಳಲಿದಂತೆ ತೋರುತ್ತಿತ್ತು'.


ಇಲ್ಲಿ 'ಅವನು' ಎಂಬುದು ಶಾಮಣ್ಣ ಎಂಬುದಕ್ಕೆ ಬದಲಾಗಿ ಬಳಸಲಾಗಿರುವ ಪದ. ಹೀಗೆ ನಾಮ ಪದಗಳಿಗೆ ಬದಲಾಗಿ ಬಳಸಲಾಗುವ ಅವನು, ಅವಳು, ಇವನು, ಇವಳು, ನೀನು, ನೀವು, ಅದು, ಅವು, ಇದು, ನಾನು, ನಾವು ಮೊದಲಾದ ಪದಗಳನ್ನು ಸರ್ವನಾಮಗಳೆಂದು ಕರೆಯಲಾಗುವುದು.

8th_Kannada_Reader Term I_U4-9.indd 37 18-06-2019 10.46.56 AM

ಘಟಕ
ಮೂರು

3. ಆರೋಗ್ಯ





ಕಾವ್ಯ ಕಣಜ	:	ಗುರಿ – ಡಾ. ಎಂ.ಗೋಪಾಲಕೃಷ್ಣ ಅಡಿಗ
ಗದ್ಯ ವಿಹಾರ	:	ಆಹಾರ ಮತ್ತು ಆರೋಗ್ಯ
ಉಪಪಠ್ಯ	:	ಯೋಗಾಭ್ಯಾಸ
ವ್ಯಾಕರಣ	:	ಲಿಂಗ–ವಚನ

8th_Kannada_Reader Term I_U4-9.indd 38 18-06-2019 10.46.56 AM

ಕಾವ್ಯ ಕಣಜ

ಘಟಕ ಮೂರು

ಗುರಿ

– ಡಾ. ಎಂ.ಗೋಪಾಲಕೃಷ್ಣ ಅಡಿಗ



ಬದುಕಿಗೊಂದು ಗುರಿ ಇಲ್ಲದಿದ್ದರೆ ಚುಕ್ಕಾಣಿ ಇಲ್ಲದ ನೌಕೆಯಂತೆ. ಹೀಗಾಗಿ ಬದುಕಿಗೊಂದು ನಿಶ್ಚಿತ ಗುರಿ ಇರಬೇಕು. ಆ ಗುರಿ ಸಾಧನೆಗೆ ಹಗಲಿರುಳೂ ಪ್ರಯತ್ನಿಸಬೇಕು. ಆಗ ಬದುಕು ಸಾರ್ಥಕವಾಗುತ್ತದೆ. ಜೀವನದ ಗುರಿಗಳನ್ನು ಹಂತಹಂತವಾಗಿ ಸಾಧಿಸಲು ಪ್ರಯತ್ನಿಸಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಹಲವಾರು ಕಷ್ಟ ಸುಖಗಳು ಎದುರಾಗಬಹುದು. ಅವುಗಳಿಗೆ ಧೃತಿಗೆಡದೆ ಆತ್ಮವಿಶ್ವಾಸದಿಂದ ನಿವಾರಿಸಿಕೊಂಡು ಮುಂದೆ ಸಾಗಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಉದಾಹರಣೆಗೆ, ನಾನು ಜೀವನದಲ್ಲಿ ಡಾಕ್ಟರ್, ಇಂಜಿನಿಯರ್, ಲಾಯರ್, ಪೋಲೀಸ್ ಎಲ್ಲವೂ ಆಗುತ್ತೇನೆಂದು ಗುರಿ ಇಟ್ಟುಕೊಂಡರೆ ಸಾಧಿಸಲು ಸಾಧ್ಯವೇ? ಒಂದು ಬಾಣಕ್ಕೆ ಗುರಿ ಒಂದೇ; ದೇಹಕ್ಕೆ ಆತ್ಮ ಒಂದೇ! ಅಂತೆಯೇ ನಮ್ಮ ಜೀವನಕ್ಕೂ ಒಂದೇ ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ ದೇಶದ ಅಭಿವೃದ್ಧಿಗೆ ಸಮಾಜದ ಏಳಿಗೆಗೆ ಪರರ ಹಿತಕ್ಕೆ ಶ್ರಮಿಸುವ ಹಾಗೂ ನೊಂದವರ ಬದುಕಿಗೆ ಸಹಾಯ ಮಾಡುವ ದಿಸೆಯಲ್ಲಿ ನಮ್ಮ ಬದುಕು ರೂಪಿತಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದು, ಬೆಳೆದ ನಾವು ಅದೇ ಸಮಾಜದ ಹಿತಕ್ಕೆ ದುಡಿಯುವಂತಾಗಬೇಕು.



8th_Kannada_Reader Term I_U4-9.indd 39 18-06-2019 10.46.56 AM

ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ
ನೆಲೆಯಿರದೆ ತೊಳಲುವುದು ಮನುಜ ಜೀವನವೇ?
ನನೆಬೇಕು, ಕೊನೆಬೇಕು ನರನ ಬಾಳುವೆಗೆ
ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.

ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿ ಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

ಗಾಳಿ ಬಂದೆಡೆ ತಿರುಗುವಾ ಹೇಡಿತನವು
ದಾಳಿ ಬಂದೊಡನೆ ಶರಣೆಂಬ ಹೆಣ್ತನವು
ಬೇಡ, ಹಿಡಿದೊಳ್ದಾರಿಯೊಳು ಕೊನೆಯವರೆಗೆ
ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ

ಒಂದು ಬಾಣಕೆ ಗುರಿಯು ಹಲವಿರುವುದುಂಟೆ ?
ಒಂದು ದೇಹದೊಳಾತ್ಮವೆರಡಿರುವುದುಂಟೆ ?
ಒಂದು ಜೀವನಕೇಕೆ ಹಲವು ಸಾಧ್ಯಗಳು ?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

ನರನೊಳಗೆ ನಾರಾಯಣನ ರೂಪು ಕಂಡು
ತಿರೆಯೊಳಗೆ ಸುರಪುರದ ಮೈಸಿರಿಯನುಂಡು
ಪರ ಹಿತಕೆ ಬಳಲುತಿರಲದುವೆ ಜೀವನವು;
ಪೆರತೇನನೆಸಗಿದರು ನಮಗೆ ಲಾಂಛನವು.

8th_Kannada_Reader Term I_U4-9.indd 40 18-06-2019 10.46.56 AM

ಕವಿ–ಕಾವ್ಯ ಪರಿಚಯ



ಎಂ.ಗೋಪಾಲಕೃಷ್ಣ ಅಡಿಗ

ಎಂ.ಗೋಪಾಲಕೃಷ್ಣ ಅಡಿಗರು 1918ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು. ಕನ್ನಡ ಸಾಹಿತ್ಯವು ನವೋದಯದಿಂದ ನವ್ಯದ ಹಾದಿಯನ್ನು ಹಿಡಿಯುತ್ತಿದ್ದ ಕಾಲದಲ್ಲಿ ಅಡಿಗರು ನವ್ಯ ಪ್ರಕಾರದ ಪ್ರಸಿದ್ಧ ಕವಿಗಳಾಗುತ್ತಾ ಬೆಳೆದವರು. ಕುವೆಂಪು, ಪು.ತಿ.ನ. ಬೇಂದ್ರೆಯಂತಹ ಹಿರಿಯ ಕವಿಗಳ ಸಾಲಲ್ಲಿ ಗುರುತಿಸಿಕೊಂಡವರು. ಭಾವತರಂಗ, ಚಂಡೆಮದ್ದಳೆ, ಭೂಮಿಗೀತ, ನಡೆದು ಬಂದ ದಾರಿ, ಮೊದಲಾದ ಕವನ ಸಂಕಲನಗಳನ್ನೂ; ಅನಾಥೆ, ಆಕಾಶದೀಪ ಎಂಬ ಎರಡು ಕಾದಂಬರಿಗಳನ್ನೂ ಅಡಿಗರು ರಚಿಸಿದ್ದಾರೆ. ಇವರ ಸಮಗ್ರ ಗದ್ಯವು ಕನ್ನಡ ಗದ್ಯ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ. ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ. ಇವರು ಧರ್ಮಸ್ಥಳದಲ್ಲಿ ನಡೆದ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಡಿಗರು 1992ರಲ್ಲಿ ನಿಧನರಾದರು. ಪ್ರಸ್ತುತ ಕವನವನ್ನು ಅವರ ಸಮಗ್ರ ಕಾವ್ಯ ಎಂಬ ಕೃತಿಯಿಂದ ಆರಿಸಲಾಗಿದೆ.

ಪದಗಳ ಅರ್ಥ

ಅಂಬುಜ–ತಾವರೆ(ಅಂಬು–ನೀರು; ಜ–ಜನಿಸಿದ್ದು); ಆಳ್ವೆಸ–ಆಳಿನ ಕೆಲಸ; ಒಳ್ದಾರಿ–ಒಳ್ಳೆಯ ದಾರಿ; ತಿರೆ–ಭೂಮಿ, ಸ್ಥಿರ; ಪೆರತು–ಬೇರೆ; ಬಾಂದಳ–ಆಕಾಶ; ಮಿಸುಪ–ಹೊಳೆಯುವ; ಸುರಪುರ–ದೇವಲೋಕ; ಅಳಿಯಾಸೆ–ಕೀಳಾಸೆ, ಈಡೇರದ ಆಸೆ; ಬೆಸನ(ದ್ಭ)–ವ್ಯಸನ(ತ್ಸ), ಕೆಲಸ; ಗೈಯ್ಮೆ–ದುಡಿಮೆ, ಕೆಲಸ, ಕಾರ್ಯ; ನನೆಕೊನೆ–ಅರಳಲಿರುವ ಮೊಗ್ಗು; ಬಸ(ದ್ಭ)ವಶ(ತ್ಸ); ಮಸಗು–ವಿಜೃಂಭಿಸು; ಲಾಂಛನ–ಗುರುತು, ಚಿಹ್ನೆ; ಹೊನಲು–ಪ್ರವಾಹ, ಹರಿಯುವ ಹೊಳೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು. ಏಕೆ ?
2. ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ ?
3. ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು ?
4. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ನಮ್ಮ ಬದುಕು ಕೆಸರಿನ ಕಮಲದಂತಿರಬೇಕು. ಏಕೆ ?
2. ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ?
3. ಜೀವನದಲ್ಲಿ ಒಂದೇ ಹೆಗ್ಗುರಿಯಿರಬೇಕು. ಏಕೆ ?
4. ಜೀವನದಲ್ಲಿ ಒಂದೇ ಗುರಿಯಿರಬೇಕು ಎಂಬುದಕ್ಕೆ ಅಡಿಗರು ನೀಡುವ ನಿದರ್ಶನಗಳಾವುವು ?

8th_Kannada_Reader Term I_U4-9.indd 41 18-06-2019 10.46.56 AM

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ?
2. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ?
3. ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಅಳಿಯಾಸೆ, ದೇಹದೊಳಾತ್ಮ, ಜೀವನಕೇಕೆ, ಹಿಡಿದೊಳ್ದಾರಿ, ಹಗಲಿರುಳು, ಶರಣೆಂಬೆ.

2. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಆಸೆ, ಪರ ಹಿತ, ಇರುಳು, ಹೇಡಿ.

3. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ

ಧ್ಯೇಯ, ಪರಹಿತ, ಗೈಮೆ, ಮೈಸಿರಿ, ರವಿಕಿರಣ.

ಚಟುವಟಿಕೆ

1. 'ನನ್ನ ಜೀವನದ ಗುರಿ' ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.



8th_Kannada_Reader Term I_U4-9.indd 42 18-06-2019 10.46.57 AM

ಘಟಕ ಮೂರು

ಆಹಾರ ಮತ್ತು ಆರೋಗ್ಯ



'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ಉಸಿರಾಟಕ್ಕೆ ಪರಿಶುದ್ಧ ಹವೆ, ಕುಡಿಯಲು ನೀರು, ಉಣ್ಣಲು ಆಹಾರ, ಉಡಲು ಬಟ್ಟೆ ಇವು ಪ್ರತಿಯೊಬ್ಬ ವ್ಯಕ್ತಿಯ ಸಾಮಾನ್ಯ ಜೀವನಕ್ಕೆ ಅತ್ಯವಶ್ಯಕವಾಗಿವೆ. ಉತ್ತಮ ಆಹಾರ ಸೇವನೆಯಿಂದ ವ್ಯಕ್ತಿ ಸದೃಢನಾಗಿ ಬೆಳವಣಿಗೆ ಹೊಂದುತ್ತಾನೆ. ತನ್ಮೂಲಕ ಆರೋಗ್ಯ ಹೊಂದಿ ರೋಗ ರುಜಿನಗಳನ್ನು ಎದುರಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ. ವ್ಯಕ್ತಿಯು ಜಗತ್ತಿನ ಒಂದು ಘಟಕವಾಗಿರುವುದರಿಂದ ಅವರೆಲ್ಲರ ಗುಂಪು ಜನಾಂಗವಾಗಿ ಪರಿಣಮಿಸುತ್ತದೆ. ಅವರ ಆರೋಗ್ಯ ಸ್ಥಿತಿಗೆ ಒಳ್ಳೆಯ ಆಹಾರ ಅತ್ಯವಶ್ಯಕವಾಗಿದೆ.



8th_Kannada_Reader Term I_U4-9.indd 43 18-06-2019 10.46.57 AM

ಆಹಾರವು ದೇಹದ ಬೆಳವಣಿಗೆಗೆ, ಅದರ ಕಾರ್ಯಶಕ್ತಿ ಮತ್ತು ರಕ್ಷಣೆಗೆ ಪೋಷಕವಾಗಿದ್ದು ದೇಹದ ಆರೋಗ್ಯವನ್ನು ಕಾಪಾಡುತ್ತದೆ. ಆಹಾರವು ದೇಹದ ಎಲ್ಲ ಅಂಗಭಾಗಗಳಿಗೆ, ಅವು ತಮ್ಮ ದೈನಂದಿನ ಕಾರ್ಯವನ್ನು ನಿರ್ವಹಿಸಬೇಕಾದ ಶಕ್ತಿಯನ್ನು ಒದಗಿಸುತ್ತದೆ. ಸ್ನಾಯುಗಳನ್ನು ಕಾರ್ಯಚಟುವಟಿಕೆಗೆ ಅಣಿಗೊಳಿಸುತ್ತದೆ. ದೈಹಿಕ ಉಷ್ಣತೆಯನ್ನು ಕಾಯ್ದಿರಿಸುತ್ತದೆ. ಆಹಾರ ನಮ್ಮ ಹಸಿವೆಯನ್ನು ಹಿಂಗಿಸಿ ತೃಪ್ತಿಯನ್ನು ಕೊಡುತ್ತದೆ. ಅದು ದೇಹ ರಚನೆಯನ್ನಲ್ಲದೆ ಅದರ ಕಾರ್ಯ ಚಟುವಟಿಕೆಯಿಂದ ಉಂಟಾದ ಸವಕಳಿಯನ್ನು ಭರ್ತಿ ಮಾಡಲು ಸಹಾಯಕವಾಗುತ್ತದೆ. ದೇಹಧಾರ್ಢ್ಯವನ್ನು ಹೆಚ್ಚಿಸಿ ರೋಗರುಜಿನಗಳ ಪ್ರಭಾವದಿಂದ ದೇಹವನ್ನು ರಕ್ಷಿಸುತ್ತದೆ.

ಮೂಲಭೂತ ವಸ್ತುಗಳು

ಪ್ರತಿದಿನ ನಾವು ಸೇವಿಸುವ ಆಹಾರವು ಅದು ಮೂಲಭೂತ ವಸ್ತುಗಳಾದ ಸಸಾರಜನಕ, ಶರ್ಕರಪಿಷ್ಟಗಳು, ಕೊಬ್ಬು, ಜೀವಸತ್ವಗಳು, ಖನಿಜ ವಸ್ತುಗಳು ಮತ್ತು ನೀರನ್ನು ಯೋಗ್ಯ ಪ್ರಮಾಣದಲ್ಲಿ ಹೊಂದಿರಬೇಕು. ಆಹಾರ ವಸ್ತುಗಳಿಂದ ಸಿದ್ಧಪಡಿಸಿದ ಊಣಿಸು ರುಚಿಕರವಾಗಿರಬೇಕು. ಅದರ ಸೇವನೆ ಆಹ್ಲಾದಕರ ವಾತಾವರಣದಲ್ಲಿ ನಡೆಯಬೇಕು. ಪ್ರತಿದಿನ ಸೇವಿಸುವ ಆಹಾರದ ವೈವಿಧ್ಯತೆ ಮತ್ತು ಅದರ ಪ್ರಮಾಣ ವ್ಯಕ್ತಿಯ ದೈಹಿಕ ಬೆಳವಣಿಗೆ ಮತ್ತು ಆರೋಗ್ಯವನ್ನು ನಿರ್ಧರಿಸುತ್ತದೆ. ಸಮತೋಲನವಿಲ್ಲದ ಆಹಾರದಿಂದ ಉದ್ಭವಿಸುವ ನ್ಯೂನ ಪೋಷಣೆಯಿಂದ ದೇಹ ಕ್ಷೀಣಿಸುತ್ತದೆ. ಅದರ ಕಾರ್ಯಶಕ್ತಿ ಕುಂದುತ್ತದೆ ಹಾಗೂ ರೋಗರುಜಿನಗಳಿಗೆ ದೇಹ ಸುಲಭವಾಗಿ ಈಡಾಗುತ್ತದೆ.

ಆಹಾರದ ಪೌಷ್ಟಿಕ ಅಂಶಗಳನ್ನು ಅವುಗಳ ಕಾರ್ಯವನ್ನಾಧರಿಸಿ ಕೆಳಕಂಡಂತೆ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ.

1. ದೇಹವನ್ನು ಕಟ್ಟುವ ಸಸಾರಜನಕ, ಕ್ಯಾಲ್ಸಿಯಂ ಮತ್ತು ರಂಜಕ
2. ಶಕ್ತಿಯನ್ನು ನೀಡುವ ಶರ್ಕರಪಿಷ್ಟ ಮತ್ತು ಕೊಬ್ಬು
3. ಶಕ್ತಿ ಮತ್ತು ಬೆಳವಣಿಗೆಯನ್ನು ಪ್ರಚೋದಿಸುವ ರಕ್ಷಕ ಪೌಷ್ಟಿಕಾಂಶಗಳು (ಜೀವಸತ್ವಗಳು ಮತ್ತು ಖನಿಜ ಲವಣಗಳು)

ಪರಿಸರದಿಂದ ಆಹಾರ ವಸ್ತುಗಳನ್ನು ನೇರವಾಗಿ ಇಲ್ಲವೇ ಅಡುಗೆಯಿಂದ ಬೇರೆ ಬೇರೆ ಖಾದ್ಯಗಳನ್ನಾಗಿ ಸಿದ್ಧಪಡಿಸಿ ಮನುಷ್ಯ ಸೇವಿಸುತ್ತಾನೆ. ಅದು ಜೀರ್ಣಾಂಗವ್ಯೂಹದಲ್ಲಿ ಜೀರ್ಣಗೊಂಡು ಕರುಳಿನಿಂದ ಹೀರಿ ದೇಹದ ಅಂತರ್ಗತ ಭಾಗವಾಗಿ ಅಲ್ಲಿನ ಜೀವಾಳ ಕಾರ್ಯಗಳಿಗೆ ಉತ್ತೇಜನ ನೀಡುತ್ತದೆ.

ದೇಹದ ನಿರ್ಮಾಣ ಮತ್ತು ರಿಪೇರಿ(ದುರಸ್ತಿ)

ಸಸಾರಜನಕವು ಜೀವಕೋಶಗಳ ಮತ್ತು ಊತಕಗಳ ಬೆಳವಣಿಗೆ ಮತ್ತು ವಿಕಸನಕ್ಕೆ ಅತ್ಯವಶ್ಯಕ. ಅಲ್ಲಿ ಅದು ನಿರ್ಮಾಣದ ವಸ್ತುವಾಗಿ ಕಾರ್ಯ ನಿರ್ವಹಿಸುತ್ತದೆ. ಅಲ್ಲದೆ ಜೀವ ಕೋಶಗಳ ಅಂಶಗಳು ಸವಕಳಿ ಹೊಂದಿ ದೇಹದಿಂದ ವಿಸರ್ಜನೆಯಾದಾಗ ಆ ನಷ್ಟವನ್ನು ಹೋಗಲಾಡಿಸಲು ಸಸಾರಜನಕ ಅಗತ್ಯ. ದೇಹದಲ್ಲಿ ಜರುಗುವ ಅನೇಕ ತೆರನಾದ ಜೀವಸ್ಫುಕರಣ ಕ್ರಿಯೆಯಲ್ಲಿ ಭಾಗವಹಿಸುವ ಕಿಣ್ವಗಳು ಮತ್ತು ಚೋದಕ(ರಸದೂತ) ಗಳ ತಯಾರಿಕೆಗೆ ಬೇಕಾದ ವಸ್ತುವನ್ನು ಸಸಾರಜನಕ ಒದಗಿಸಿಕೊಡುತ್ತದೆ. ಎಲ್ಲ ಜೀವಕೋಶಗಳ ಜೀವರಸ ಸಸಾರಜನಕದಿಂದ ರೂಪುಗೊಂಡಿರುತ್ತದೆ. ಸಸಾರಜನಕವು ಪ್ರತಿವಸ್ತುಗಳನ್ನು ಸಿದ್ಧಪಡಿಸಿ ದೇಹವನ್ನು ಸೋಂಕು ರೋಗಗಳ ಪ್ರಭಾವದಿಂದ ರಕ್ಷಿಸುತ್ತದೆ. ಸಸಾರಜನಕವು ರಕ್ತವರ್ಣ (ಹಿಮೋಗ್ಲೋಬಿನ್) ತಯಾರಿಕೆಗೂ ಅತ್ಯಗತ್ಯ. ಶಕ್ತಿಯನ್ನು ನೀಡುವ ವಸ್ತುಗಳು ಅಲಭ್ಯವಾದಾಗ(ಉಪವಾಸ, ದೇಹವನ್ನು ಕ್ಷೀಣಿಸುವ ರೋಗಗಳು...) ಸಸಾರಜನಕ ಇಂಧನವಾಗಿ ದೇಹಕ್ಕೆ ಬೇಕಾದ ಶಕ್ತಿಯನ್ನು ನೀಡಬಲ್ಲದು. ರೋಗದಿಂದ ಚೇತರಿಸಿಕೊಳ್ಳುವಾಗ ಸಸಾರಜನಕದ ಅಗತ್ಯತೆ ಹೆಚ್ಚುತ್ತದೆ. ಅದನ್ನು ಪ್ರಾಣಿಜನ್ಯ ವಸ್ತುಗಳಾದ ಮೀನು, ಮಾಂಸ, ಮೊಟ್ಟೆ, ಹಾಲು ಮತ್ತು ಅದರ ತಯಾರಿಕೆಗಳಿಂದ ಹಾಗೂ ಬೇಳೆಕಾಳುಗಳ ಸೇವನೆಯಿಂದ ದೊರಕಿಸಿಕೊಳ್ಳಬಹುದು.

ಶಕ್ತಿಯ ಇಂಧನ

ಶರ್ಕರಪಿಷ್ಟಗಳು ಶಕ್ತಿಯ ಒಂದು ಬಹುಮುಖ್ಯ ಮೂಲ. ನಮ್ಮ ಆಹಾರದ ಅರ್ಧಭಾಗ ಈ ವಸ್ತುಗಳನ್ನೊಳಗೊಂಡಿದೆ (ಸಕ್ಕರೆ, ಪಿಷ್ಟಪದಾರ್ಥಗಳು).

8th_Kannada_Reader Term I_U4-9.indd 44 18-06-2019 10.46.57 AM

ದೇಹದ ಕಾರ್ಯ ಚಟುವಟಿಕೆಗಳಿಗೆ ಬೇಕಾದ ಇಂಧನದ ಅರ್ಧದಷ್ಟು ಕೆಲೋರಿಗಳಾದರೂ ಶರ್ಕರ ಪಿಷ್ಟಗಳಿಂದ ದೊರೆಯಬೇಕು. ಶರ್ಕರಪಿಷ್ಟಗಳ ಸರಳ ರೂಪವಾದ ಗ್ಲೂಕೋಸ್ ದೇಹದಲ್ಲಿ ದಹನಗೊಂಡು ಜೀವಕೋಶಗಳಿಗೆ ಬೇಕಾದ ಶಕ್ತಿಯನ್ನು ನೀಡುತ್ತದೆ. ದವಸಧಾನ್ಯಗಳು(ಅಕ್ಕಿ, ಜೋಳ, ಗೋಧಿ, ರಾಗಿ, ಸಜ್ಜೆ, ನವಣೆ), ಬೇಳೆಕಾಳುಗಳು, ಗೆಡ್ಡೆಗೆಣಸು, ಸಕ್ಕರೆ, ಬೆಲ್ಲ, ಹಣ್ಣುಗಳು ಶರ್ಕರಪಿಷ್ಟವನ್ನು ದೊರಕಿಸುತ್ತವೆ.

ಕೊಬ್ಬು, ಶಕ್ತಿಯನ್ನು ನೀಡುವ ಮತ್ತೊಂದು ಮುಖ್ಯ ಆಹಾರ ವಸ್ತು. ಗ್ಲಿಸರಾಲ್ ಮತ್ತು ಮೇಧೋಆಮ್ಲಗಳ ಒಗ್ಗೂಡುವಿಕೆಯಿಂದ ಕೊಬ್ಬು ರೂಪುಗೊಂಡಿದೆ. ದೇಹಕ್ಕೆ ಕೊಬ್ಬು ಅಗತ್ಯ. ಅದು ಅತಿ ಹೆಚ್ಚು ಶಕ್ತಿ ಮೌಲ್ಯವನ್ನು ಪಡೆದಿದೆ. ಒಟ್ಟು ಆಹಾರದ ಶೇಕಡಾ 25ರಿಂದ 30ರಷ್ಟು ಪ್ರಮಾಣದಲ್ಲಿ ಜಿಡ್ಡುಪದಾರ್ಥಗಳಿರಬೇಕು. ಅದರ ಅರ್ಧದಷ್ಟು ಸಸ್ಯಮೂಲದ್ದಾಗಿರಬೇಕು. ಕೊಬ್ಬು ಪಚನಾಂಗದಲ್ಲಿ ಹೆಚ್ಚು ಕಾಲ ಉಳಿಯುವುದರಿಂದ ಅದರ ಪಚನ ಮತ್ತು ಹೀರಿಕೆ ನಿಧಾನ. ಕೊಬ್ಬು ತನ್ನ ಜೊತೆಯಲ್ಲಿ ಕೊಬ್ಬಿನಲ್ಲಿ ಕರಗುವ ಜೀವ ಸತ್ವಗಳನ್ನು ದೇಹಕ್ಕೆ ತಂದು ಕೊಡುತ್ತದೆ.

ಆರೋಗ್ಯಕ್ಕೆ ಅವಶ್ಯಕ

ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಳ್ಳಲು ಜೀವಸತ್ವಗಳು ಅತ್ಯಾವಶ್ಯಕ. ಅವುಗಳನ್ನು ನೀರಿನಲ್ಲಿ ಮತ್ತು ಕೊಬ್ಬಿನಲ್ಲಿ ಕರಗುವ ಜೀವ ಸತ್ವಗಳೆಂದು ವಿಂಗಡಿಸಿ ಅವುಗಳನ್ನು ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳನ್ನಾಧರಿಸಿ ಕರೆಯಲಾಗುತ್ತದೆ. ಅವುಗಳು ದೇಹಕ್ಕೆ ಕನಿಷ್ಠ ಪ್ರಮಾಣದಲ್ಲಿ ಬೇಕಾದರೂ ಅವುಗಳ ಕೊರತೆ ದೇಹದ ಮೇಲೆ ದುಷ್ಪರಿಣಾಮ ಬೀರುವುದರಿಂದ ಅವು ಜೀವಸತ್ವಗಳಾಗಿವೆ.

ನಮ್ಮ ದೇಹಕ್ಕೆ ಬಗಬಗೆಯಾದ ಖನಿಜ ವಸ್ತುಗಳು ಬೇಕಿದ್ದು, ಅನೇಕ ರೀತಿಯ ದೈಹಿಕ ಕಾರ್ಯ ಚಟುವಟಿಕೆಗಳಲ್ಲಿ ಅವು ಅವಶ್ಯಕ. ಅವುಗಳಲ್ಲಿ ಕೆಲವು ವಿಪುಲ ಪ್ರಮಾಣದ ಬೃಹತ್ ಪೋಷಕ ವಸ್ತುಗಳಾಗಿದ್ದರೆ(ಕ್ಯಾಲ್ಸಿಯಂ, ರಂಜಕ, ಕ್ಲೋರೈಡ್, ಸೋಡಿಯಂ, ಪೊಟ್ಯಾಷಿಯಂ... ಇತರೆ), ಮತ್ತೆ ಕೆಲವು ಸೂಕ್ಷ್ಮ ಮೂಲ ಖನಿಜ ವಸ್ತುಗಳು(ಕಬ್ಬಿಣ, ಅಯೋಡಿನ್, ಕೋಬಾಲ್ಟ್). ಜೀವಸತ್ವಗಳು ಮತ್ತು ಖನಿಜಲವಣಗಳು ತಾಜಾತರಕಾರಿ, ತಾಮ್ರ, ಕಾಯಿಪಲ್ಯೆ, ಹಣ್ಣುಗಳು, ಹಾಲು, ಮೊಟ್ಟೆ ಮತ್ತು ಮೀನುಗಳಲ್ಲಿರುತ್ತವೆ.

ಎಲ್ಲ ನೈಸರ್ಗಿಕ ಆಹಾರ ವಸ್ತುಗಳೂ ಸಾಮಾನ್ಯವಾಗಿ ಒಂದು ಅಥವಾ ಹೆಚ್ಚು ಈ ಬಗೆಯ ಆಹಾರಾಂಶಗಳನ್ನು ಒಳಗೊಂಡಿರುತ್ತವೆ. ಯಾವುದೇ ಒಂದು ಆಹಾರವು ದೇಹದ ಬೇಡಿಕೆಯನ್ನು ಪೂರೈಸುವಷ್ಟು ಪ್ರಮಾಣದಲ್ಲಿರುವುದಿಲ್ಲ. ಆದುದರಿಂದ ಬೇರೆ ಬೇರೆ ತೆರನಾದ ಆಹಾರ ವಸ್ತುಗಳು ನಮ್ಮ ಊಟಿಸಿನ ಭಾಗವಾಗಿರುವುದು ಅತ್ಯಗತ್ಯ.

ದ್ರವ ವಾತಾವರಣ

ನೀರು ದೇಹದಲ್ಲಿ ದ್ರವವಾತಾವರಣವನ್ನು ಕಲ್ಪಿಸಿ, ಆಹಾರದ ಜೀವಸ್ತುಕರಣ ಕ್ರಿಯೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅದು ಜೀರ್ಣಗೊಂಡು ಆಹಾರಾಂಶಗಳನ್ನು ಹೀರಿಕೊಳ್ಳುವಲ್ಲಿ, ಎಲ್ಲ ಜೀವಾಳ ಕಾರ್ಯಗಳಿಗೆ ಬೇಕಾದ ದ್ರವ ವಾತಾವರಣವನ್ನು ನಿರ್ಮಿಸುವಲ್ಲಿ, ತ್ಯಾಜ್ಯ ವಸ್ತುಗಳನ್ನು ವಿಸರ್ಜಿಸುವಲ್ಲಿ ಮತ್ತು ದೈಹಿಕ ಉಷ್ಣತೆಯನ್ನು ಕಾಯ್ದುಕೊಳ್ಳುವಲ್ಲಿ ಅತ್ಯಾವಶ್ಯಕ.

ಆಹಾರ ಮಿಶ್ರಣ

ತಾಯಿಯ ಗರ್ಭದಲ್ಲಿ ಬೆಳವಣಿಗೆ ಹೊಂದುತ್ತಿರುವ ಭ್ರೂಣಕ್ಕೆ ಅದರ ಭ್ರೂಣಾವಸ್ಥೆಯಿಂದ ಹಿಡಿದು ಜೀವದ ಆರೋಗ್ಯಕರ ಬೆಳವಣಿಗೆ ವಿಕಸನ ಮತ್ತು ಬಲಸಂವರ್ಧನೆಗಳಿಗೆ ಯೋಗ್ಯ ಆಹಾರ ಬೇಕು. ದೇಹದ ವಿವಿಧ ಅಂಗಾಂಗ ಭಾಗಗಳು ರೂಪಗೊಳ್ಳುವ ಕಾಲದಲ್ಲಿ ಮತ್ತು ಶೈಶವಾವಸ್ಥೆಯಲ್ಲಿ ಎಲ್ಲ ರೀತಿಯ ರಕ್ಷಕ ಪೌಷ್ಟಿಕಾಂಶಗಳನ್ನು ತಾಯಿಯು ಗರ್ಭದಲ್ಲಿದ್ದಾಗ ಕರುಳು ಬಳ್ಳಿಯ ಮೂಲಕ ಹಾಗೂ ಅನಂತರ ಎದೆ ಹಾಲಿನಿಂದ ನೀಡುತ್ತಾಳೆ. ಆದುದರಿಂದ ಗರ್ಭಿಣಿಯ ಮತ್ತು ಹಾಲೂಡಿಸುವ ತಾಯಿಯ ಆಹಾರದಲ್ಲಿ ಪೌಷ್ಟಿಕಾಂಶಗಳನ್ನು ಸಂರಕ್ಷಣೆ ಮಾಡಬೇಕು. ಆಕೆಯ ಆಹಾರ ಉತ್ತಮವಾಗಿಲ್ಲದಿದ್ದರೆ ಆಕೆಯ ಗರ್ಭದಲ್ಲಿ ಬೆಳೆಯುತ್ತಿರುವ ಪಿಂಡಗೂಸಿಗೆ ಹಾಗೂ ಹೆರಿಗೆಯ ನಂತರ ಕೂಸಿಗೆ ಬೇಕಾದ ಒಳ್ಳೆಯ ಆಹಾರ ವಸ್ತುಗಳನ್ನು ಪೂರೈಸಲು ಆಕೆ ಅಸಮರ್ಥಳಾಗುತ್ತಾಳೆ.

8th_Kannada_Reader Term I_U4-9.indd 45 18-06-2019 10.46.57 AM

ಆಹಾರದಲ್ಲಿರುವ ಕೊರತೆಯ ಅಂಶಗಳು ಮತ್ತು ಅವುಗಳ ಪ್ರಮಾಣವನ್ನವಲಂಬಿಸಿ ಅನೇಕ ತೆರನಾದ ನ್ಯೂನತೆಗಳು ಬೆಳವಣಿಗೆಯಲ್ಲಿ ಕಂಡು ಬರುತ್ತವೆ.

ದೈಹಿಕ ಜೀವಕೋಶಗಳ ರಚನೆಯ ಕಾರ್ಯ ಮತ್ತು ಅದರ ಬೆಳವಣಿಗೆ ಬಾಲ್ಯಾವಸ್ಥೆಯಿಂದ ಪ್ರಾರಂಭವಾಗಿ ಹರೆಯದವರೆಗೂ ಜರುಗುತ್ತಿರುತ್ತದೆ. ಜೀವರಸದ ಮುಖ್ಯ ವಸ್ತು ಸಸಾರಜನಕ. ಅದು ಜೀವಕೋಶಗಳಲ್ಲಿ ಜೀವಾಳಕಾರ್ಯಗಳನ್ನು ನಿರ್ವಹಿಸುತ್ತದೆ. ದೇಹದ ಬೆಳವಣಿಗೆಯ ಕಾಲದಲ್ಲಿ ದೇಹಕ್ಕೆ ಹೆಚ್ಚು ಪ್ರಮಾಣದಲ್ಲಿ ಕೋಶ ರಚನಾ ವಸ್ತುಗಳಾದ ಸಸಾರಜನಕಗಳು ಮತ್ತು ಇತರ ಖನಿಜಗಳು ಮತ್ತಿತರ ಪೋಷಕ ದ್ರವ್ಯಗಳು ಲಭಿಸಬೇಕು. ಜೀವ ಕೋಶಗಳಲ್ಲಿ ಉಂಟಾದ ಸವಕಳಿಯನ್ನು ಭರ್ತಿ ಮಾಡಲು ಸಸಾರಜನಕ ಅಗತ್ಯ.

ಆಹಾರವು ದೇಹರಚನೆಯಲ್ಲಿ ಭಾಗವಹಿಸಿ ಅದರ ಜೀವಕೋಶಗಳ ಕಾರ್ಯಚಟುವಟಿಕೆ ಸರಾಗವಾಗಿ ಜರುಗುವಂತೆ ಮಾಡಿ ಅದಕ್ಕೆ ಬೇಕಾದ ಶಕ್ತಿಯನ್ನು ನೀಡುತ್ತದೆ. ಅದರಲ್ಲಿನ ಪ್ರತಿಯೊಂದು ಅಂಶವೂ ದೇಹದ ಮೇಲೆ ತನ್ನದೇ ಆದ ವಿಶಿಷ್ಟ ಪ್ರಭಾವವನ್ನು ಬೀರುತ್ತದೆ. ಪ್ರತಿಯೊಂದು ಅಂಶವೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸದೆ ಒಟ್ಟಾಗಿ ದೇಹದ ಮೇಲೆ ಪರಿಣಾಮ ಬೀರುತ್ತದೆ.

ಜೀವಸತ್ವ ಮತ್ತು ಖನಿಜ ಲವಣಗಳು ದೇಹಕ್ಕೆ ತೀರ ಅತ್ಯಲ್ಪ ಪ್ರಮಾಣದಲ್ಲಿ ಬೇಕಾಗುತ್ತವೆ. ಅವು ಆಹಾರ ಸೇವನೆಯ ಫಲಪ್ರದ ಪರಿಣಾಮಕ್ಕೆ ಸಹಾಯ ಮಾಡುತ್ತವೆ ಹಾಗೂ ಅತ್ಯಲ್ಪ ಪ್ರಮಾಣದಲ್ಲಿ ನಾವು ಸೇವಿಸುವ ಎಲ್ಲ ಆಹಾರ ವಸ್ತುಗಳಲ್ಲಿ ಅಡಕವಾಗಿರುತ್ತವೆ.

ಪದಗಳ ಅರ್ಥ

ಸ್ನಾಯು–ನರಗಳು; ಅಣಿಗೊಳಿಸು–ಸಿದ್ಧಗೊಳಿಸು; ಉದ್ಭವ–ಹುಟ್ಟು; ವಿಕಸನ–ಬೆಳವಣಿಗೆ, ಅಭಿವೃದ್ಧಿ; ಕುಂದುವುದು–ಕಡಿಮೆಯಾಗುವುದು; ಉತ್ತೇಜನ–ಪ್ರೋತ್ಸಾಹ; ದಹನ–ಬೇಯುವುದು; ಪಚನ–ಜೀರ್ಣ; ತ್ಯಾಜ್ಯ–ಬೇಡದ, ವ್ಯರ್ಥ; ವಿಸರ್ಜನೆ–ತ್ಯಜಿಸು, ಬಿಡುವುದು, ಹೊರಹಾಕು, ನ್ಯೂನತೆ–ದೋಷಗಳು.

ಕೃತಿ ಕರ್ತೃ ಪರಿಚಯ

ಈ ಪಾಠವನ್ನು ಶ್ರೀಯುತ ಎನ್ ಬಸವರಾಜುರವರು ಸಂಗ್ರಹಿಸಿದ್ದಾರೆ. ಇವರು ಈರೋಡು ಜಿಲ್ಲೆಯ ತಾಳವಾಡಿ ತಾಲೂಕಿನ ಚಿಕ್ಕಹಳ್ಳಿ ಗ್ರಾಮದವರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ಕನ್ನಡ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ಪ್ರಸ್ತುತ ಇವರು ತಾಳವಾಡಿಯಲ್ಲಿರುವ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೊರ ನಾಡಿನ ಕನ್ನಡ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಸಾಹಿತ್ಯಾಸಕ್ತರೂ ಆಗಿದ್ದಾರೆ. ಕಥೆ, ಕವನ ಮತ್ತು ಲೇಖನಗಳನ್ನು ಬರೆಯುವ ಹವ್ಯಾಸವುಳ್ಳ ಇವರು ' ಆಹಾರ ಮತ್ತು ಆರೋಗ್ಯ' ಎಂಬ ಲೇಖನವನ್ನು ವಿದ್ಯಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮತ್ತು ಆಸಕ್ತಿ ಮೂಡಿಸುವ ಸದುದ್ದೇಶದಿಂದ ಸಂಪಾದಿಸಿ ನೀಡಿದ್ದಾರೆ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ದೇಹದ ಆರೋಗ್ಯವನ್ನು ಯಾವುದು ಕಾಪಾಡುತ್ತದೆ ?
2. ಆಹಾರದಲ್ಲಿರಬೇಕಾದ ಮೂಲಭೂತ ವಸ್ತುಗಳು ಯಾವುವು ?
3. ಆಹಾರವು ಹೇಗೆ ಜೀರ್ಣವಾಗುತ್ತದೆ ?
4. ದೇಹವನ್ನು ಸೋಂಕು ರೋಗಗಳಿಂದ ಯಾವುದು ಕಾಪಾಡುತ್ತದೆ ?
5. ದೇಹವು ಸಸಾರಜನಕವನ್ನು ಹೇಗೆ ಪಡೆದುಕೊಳ್ಳುತ್ತದೆ ?
6. ಜೀವಸತ್ವಗಳು ಯಾವ ಯಾವ ವಸ್ತುಗಳಲ್ಲಿರುತ್ತವೆ ?

8th_Kannada_Reader Term I_U4-9.indd 46 18-06-2019 10.46.57 AM

7. ಕೋಶ ರಚನಾ ವಸ್ತುಗಳು ಯಾವುವು ?

8 ತಾಯಿಯ ಗರ್ಭದಲ್ಲಿರುವ ಭ್ರೂಣಕ್ಕೆ ಆಹಾರ ಹೇಗೆ ದೊರೆಯುತ್ತದೆ ?

II. ಈ ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಆಹಾರವು ದೇಹದಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡುತ್ತದೆ ?
2. ಸಮತೋಲನವಿಲ್ಲದ ಆಹಾರದಿಂದ ಏನಾಗುತ್ತದೆ ?
3. ಆಹಾರದ ಪೌಷ್ಟಿಕ ಅಂಶಗಳಲ್ಲಿ ಎಷ್ಟು ಭಾಗಗಳಿವೆ ? ಅವು ಯಾವುವು ?
4. ಜೀವಸತ್ವಗಳ ಅವಶ್ಯಕತೆಯ ಬಗ್ಗೆ ಬರೆಯಿರಿ
5. ದೇಹಕ್ಕೆ ನೀರಿನ ಅವಶ್ಯಕತೆ ಏನು ?

III. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಆಹಾರವು ದೇಹವನ್ನು ಹೇಗೆ ರಕ್ಷಿಸುತ್ತದೆ ?
2. ದೇಹದ ನಿರ್ಮಾಣದಲ್ಲಿ ಸಸಾರಜನಕದ ಪಾತ್ರವನ್ನು ವಿವರಿಸಿ.
3. ದೇಹದಲ್ಲಿ ಶರ್ಕರಪಿಷ್ಟದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
4. 'ಆಹಾರವು ದೇಹದ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ'. ಸಮರ್ಥಿಸಿ.

ಭಾಷಾಭ್ಯಾಸ

1. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಉಣಿಸು, ಲವಣ, ಕಾರ್ಯ, ಸೇವನೆ, ದಹನ, ದ್ರವ.

2. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಅಂಗಾಂಗ, ಅತ್ಯಾವಶ್ಯಕ, ಆಹಾರಾಂಶ, ಪೌಷ್ಟಿಕಾಂಶ, ಒಟ್ಟಾಗಿ, ಅತ್ಯಲ್ಪ, ಪಚನಾಂಗ, ಶೈಶವಾವಸ್ಥೆ, ಪ್ರಾರಂಭವಾಗಿ, ಜೀವಾಳ.

3. ಈ ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಯೋಗ್ಯ, ಸಮತೋಲನ, ಕ್ಷೀಣಿಸು, ಭರ್ತಿ, ಶಕ್ತಿ, ಅಗತ್ಯ, ನೈಸರ್ಗಿಕ, ಬೃಹತ್, ಆರೋಗ್ಯ.

4. ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ರೋಗರುಜಿನ, ರುಚಿಕರ, ಗೆಡ್ಡೆಗೆಣಸು, ಬಗೆಬಗೆಯಾದ, ನ್ಯೂನತೆಗಳು, ದವಸಧಾನ್ಯ, ಕರುಳಬಳ್ಳಿ.

ಚಟುವಟಿಕೆ

1. ಸಮತೋಲನ ಆಹಾರದ ಬಗ್ಗೆ ತರಗತಿಯಲ್ಲಿ ಚರ್ಚಿಸಿ
2. ವಿವಿಧ ಜೀವಸತ್ವಗಳು ದೊರೆಯುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿ.
3. ಆಹಾರದ ಬಗ್ಗೆ ಇರುವ ಪುಸ್ತಕಗಳನ್ನು ನಿಮ್ಮ ಗ್ರಂಥಾಲಯದಲ್ಲಿ ಕೊಂಡು ಓದಿ.
4 ದಿನನಿತ್ಯವೂ ಸರಿಯಾದ ಪ್ರಮಾಣದಲ್ಲಿ, ಸರಿಯಾದ ಕ್ರಮದಲ್ಲಿ, ಸರಿಯಾದ ಸಮಯದಲ್ಲಿ ಆಹಾರ ಸೇವಿಸುವುದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ.



8th_Kannada_Reader Term I_U4-9.indd 47 18-06-2019 10.46.57 AM

ಉಪಪಠ್ಯ

ಘಟಕ ಮೂರು

ಯೋಗಾಭ್ಯಾಸ



ವಿಶ್ವ–ಮನುಕುಲಕ್ಕೆ ಪ್ರಾಚೀನ ಭಾರತವು ನೀಡಿರುವ ಅಪೂರ್ವ ಕೊಡುಗೆಗಳಲ್ಲಿ ಯೋಗವೂ ಒಂದು. ಇದು ಒಂದು ಅತ್ಯುತ್ತಮ ಜೀವನ ಪದ್ಧತಿ. ಯೋಗಾಭ್ಯಾಸದಿಂದ ದೈಹಿಕ ಕಾರ್ಯಕ್ಷಮತೆ, ಮಾನಸಿಕ ಸ್ಥಿರತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳಬಹುದಾಗಿದೆ. ಯೋಗದ ಮೂಲಕ ಮಾನಸಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಹಂತಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವುದು ಸ್ವಸ್ಥ ಜೀವನದ ಉದ್ದೇಶವೂ ಆಗಿದೆ. ಯೋಗದ ಗುರಿ ದೇಹ ಮತ್ತು ಮನಸ್ಸಿನ ಸಮತೋಲನವನ್ನು ಸಾಧಿಸುವುದರೊಂದಿಗೆ ವ್ಯಕ್ತಿ ಮತ್ತು ಅವನ ಸುತ್ತಲ ಪ್ರಪಂಚದೊಂದಿಗೆ ಸಂಪೂರ್ಣ ಏಕತೆಯನ್ನು ಸಾಧಿಸುವುದೇ ಆಗಿದೆ. ಯೋಗವು ವ್ಯಕ್ತಿಯ ಮಾನಸಿಕ ದಾರ್ಢ್ಯವೂ ಸೇರಿದಂತೆ ಸಮಗ್ರ ವ್ಯಕ್ತಿತ್ವದ ವಿಕಾಸಕ್ಕೆ ಶೈಕ್ಷಣಿಕ ಪ್ರಕ್ರಿಯೆಯಾಗಿರುತ್ತದೆ.



8th_Kannada_Reader Term I_U4-9.indd 48 18-06-2019 10.46.58 AM

ಅರ್ಥ

ಯೋಗ ಎಂಬ ಪದ 'ಯುಜ್' ಎನ್ನುವ ಧಾತುವಿನಿಂದ ಹುಟ್ಟಿದೆ. ಯುಜ್ ಎಂದರೆ ಕೂಡಿಸುವುದು ಎಂದು ಅರ್ಥ. ಇಲ್ಲಿ ಜೀವಾತ್ಮನನ್ನು ಪರಮಾತ್ಮನೊಂದಿಗೆ ಕೂಡಿಸುವುದು ಎಂಬ ಅರ್ಥದಲ್ಲಿ 'ಯೋಗ' ಪದವನ್ನು ಬಳಸಲಾಗುತ್ತದೆ. ಈ ಪರಮಗುರಿಯನ್ನು ಎಲ್ಲರೂ ಸಾಧಿಸಲು ಸಾಧ್ಯವಾಗದಿದ್ದರೂ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಯೋಗಾಭ್ಯಾಸದಿಂದ ಸರ್ವರೂ ಪಡೆಯಬಹುದು. ಇದರಿಂದ ಮಾನಸಿಕ ಏಕಾಗ್ರತೆಯುಂಟಾಗುವುದು, ಮನೋನಿಗ್ರಹ ಶಕ್ತಿ ಸಿದ್ಧಿಸುವುದು. 'ಯೋಗಶ್ಚಿತ್ತವೃತ್ತಿ ನಿರೋಧಃ' ಎಂಬುದು ಪತಂಜಲಿಯ ಯೋಗ ಸೂತ್ರ. ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸಿನ ಚಂಚಲತೆಯನ್ನು ತಡೆಗಟ್ಟಲು ಇದು ಸಹಾಯವಾಗುವುದು. ಯಾವುದೇ ಕೆಲಸವನ್ನೂ ದಕ್ಷತೆಯಿಂದ ನಿರ್ವಹಿಸಲು ಇದು ನೆರವಾಗುವುದು. 'ಯೋಗಃ ಕರ್ಮಸು ಕೌಶಲಂ' ಎಂಬುದು ಗೀತೋಕ್ತಿ.

ಯೋಗ ಒಂದು ಜೀವನ ವಿಧಾನವಾಗಿದೆ. ದೇಹ, ಬುದ್ಧಿ ಮನಸ್ಸಿಗೆ 'ಅತೀತವಾದಿ ಅಸ್ತಿತ್ವ' ಯೋಗದ ಪರಮಗುರಿಯಾಗಿದೆ. 'ಸಮತ್ವಂ ಯೋಗ ಉಚ್ಚತೆ' ಎಂದರೆ, ಸಾಮರಸ್ಯ ಅಥವಾ ಸಮತೋಲನವೇ ಯೋಗ ಎಂದು ಹೇಳಬಹುದು.

ಯೋಗಾಸನಗಳ ಮಹತ್ವ

ಯೋಗಾಸನಗಳೆಂದರೆ ದೊಂಬರಾಡುವ ಕಸರತ್ತುಗಳಲ್ಲ ಎಂಬ ಸಂಗತಿಯನ್ನು ಗಮನದಲ್ಲಿಡಬೇಕು. ಆಸನಗಳನ್ನು ಅನುಸರಿಸುವ ಉದ್ದೇಶ ಮನಸ್ಸನ್ನು ಏಕಾಗ್ರತೆಯಲ್ಲಿ ಇಟ್ಟುಕೊಂಡು ಶರೀರದ ಅಂಗಗಳಿಗೆ ಅಗತ್ಯವಾದ ವ್ಯಾಯಾಮ ನೀಡುವುದಾಗಿದೆ. ಶರೀರ ಸುಸ್ಥಿತಿಯಲ್ಲಿ ಇರಬೇಕಾದರೆ ಶರೀರದ ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸುವ ಪಾಚಕಾಂಗವು ಒಳ್ಳೆಯ ಸುಸ್ಥಿತಿಯಲ್ಲಿರಬೇಕು. ಸೇವಿಸಿದ ಆಹಾರ ಯಾವ ತೊಂದರೆಯಿಲ್ಲದೆ ಪಚನವಾಗಬೇಕು. ತನ್ಮೂಲಕ ಶರೀರದ ಚಟುವಟಿಕೆಗೆ ಅಗತ್ಯವಾದ ರಕ್ತದ ಉತ್ಪತ್ತಿಯಾಗಬೇಕು. ಹಾಗೆಯೇ ಜೀರ್ಣವಾದ, ತ್ಯಾಜ್ಯವಾದ ಆಹಾರ ಮಲದ ರೂಪದಲ್ಲಿ ಯಾವುದೇ ಅಡೆತಡೆಯಿಲ್ಲದೆ ವಿಸರ್ಜನೆಯಾಗಬೇಕು. ಮಲವಿಸರ್ಜನೆಯಲ್ಲಿ ಅಡ್ಡಿ ಆತಂಕಗಳು ಉಂಟಾದರೆ ಮಲಬದ್ಧತೆ ಮತ್ತು ಮೂಲವ್ಯಾದಿಗಳಿಗೆ ಆಹ್ವಾನವಿದ್ದಂತೆ. ನಂತರ ಬರುವುದು ನಿದ್ರೆಯ ಸ್ಥಾನ. ಇಡೀ ದಿನ ಕಾರ್ಯನಿರತವಾಗಿ ದಣಿದ ದೇಹ ವಿಶ್ರಾಂತಿ ಹೊಂದಿ ಮರುದಿನದ ಕೆಲಸ ಕಾರ್ಯಗಳಿಗೆ ಉತ್ಸಾಹ ಮತ್ತು ಸಿದ್ಧಗೊಳ್ಳುವುದು ನಿಶ್ಚಿಂತತೆಯ ಗಾಢ ನಿದ್ರೆಯಿಂದಲೇ ಎಂಬುದು ಪ್ರತಿಯೊಬ್ಬರಿಗೂ ಅನುಭವಕ್ಕೆ ಬಂದಿರುತ್ತದೆ. ವ್ಯಕ್ತಿಯ ವಯೋಮಾನದ ಹಾಗೂ ಅವರು ನಿರ್ವಹಿಸುವ ಶ್ರಮದ ಕೆಲಸಕ್ಕೆ ತಕ್ಕಂತೆ ರಾತ್ರಿ ವೇಳೆಯಲ್ಲಿ 6–8 ಗಂಟೆಯವರೆಗೆ ನಿದ್ರೆ ಅವಶ್ಯಕ. ಇಲ್ಲಿ ಪ್ರಸ್ತಾಪ ಯೋಗ್ಯವಾದುದು, 'ಅಷ್ಟಾಂಗ ಯೋಗ'ದಲ್ಲಿ ನಿದ್ರೆ ಎಂದರೆ ನಿಶ್ಚಿಂತತೆಯ ಯಮನಿಯಮ ಆಸನ ಪ್ರಾಣಾಯಾಮ ಧ್ಯಾನ ಧಾರಣ ಮತ್ತು ಸಮಾಧಿಗಳೆಂಬ ಎಂಟು ಮೆಟ್ಟಿಲುಗಳೆಂದು ಹೇಳಿರುವುದು ಗಮನಾರ್ಹ.

ಯೋಗದ ಪ್ರವರ್ತಕ 'ಪತಂಜಲಿ ಮಹರ್ಷಿ' ಎಂಬುದರಲ್ಲಿ ಎರಡು ಮಾತಿಲ್ಲ. ಆತನು ಜೀವಿಸಿದ್ದ ಕಾಲವನ್ನು ಕ್ರಿ.ಶ.ಪೂರ್ವದಲ್ಲಿ 250ರಿಂದ 300 ವರ್ಷಗಳೆಂದು ತಜ್ಞರು ಲೆಕ್ಕ ಹಾಕಿದ್ದಾರೆ. ಆತನು ಬರೆದ 'ಪತಂಜಲಿ ಯೋಗ ಸೂತ್ರ' ಎಂಬ ಗ್ರಂಥ ಇಂದಿಗೂ ಪ್ರಸ್ತುತವೆನಿಸಿದೆ. ಇಂದಿಗೂ ಯೋಗಸಾಧಕರು ಆತನ ಸ್ಮರಣೆಯಿಂದಲೇ ತಮ್ಮ ಸಾಧನೆಯನ್ನು ಪ್ರಾರಂಭಿಸುತ್ತಾರೆ ಎಂಬ ಸಂಗತಿ ಆ ಗ್ರಂಥದ ಮಹತ್ವವನ್ನು ಬಿಂಬಿಸುತ್ತದೆ. ಯೋಗಾಸನಗಳ ಆಚರಣೆಯಿಂದ ಅನೈಚ್ಛಿಕ ಸ್ನಾಯುಮಂಡಲದ ಮೇಲೂ ಹತೋಟಿ ಸಾಧಿಸಬಹುದು. ಇದು ಕೇವಲ ದೇಹಕ್ಕೆ ಮಾತ್ರವಲ್ಲದೆ ಮಾನಸಿಕ ಸಮತೆಗೂ ನೆರವಾಗುತ್ತದೆ. ವ್ಯಾಯಾಮದ ಮೂಲಕ ದೇಹಾಂಗಗಳನ್ನು ಬಲಿಷ್ಠಗೊಳಿಸಬಹುದು ಎಂಬ ಪಾಶ್ಚಾತ್ಯರ ನಿಲುವಿಗೂ; ಯೋಗಾಸನಗಳ ಮೂಲಕ ಶರೀರಕ್ಕೆ ಬಲ ನೀಡುವ ವ್ಯಾಯಾಮಗಳ ಜೊತೆಗೆ ಮನಸ್ಸಿನ ಮೇಲೂ ಹತೋಟಿ ಸಾಧಿಸಿ ಉತ್ತಮ ಆರೋಗ್ಯ ಸಂಪಾದಿಸುತ್ತಾ ನಿರುದ್ವಿಗ್ನ ಜೀವನ ನಡೆಸಬಹುದು ಎಂಬುದೇ ನಮಗೂ ಅವರಿಗೂ ಇರುವ ಸ್ಪಷ್ಟ ಅಂತರ. ಇತ್ತೀಚೆಗೆ ಪಾಶ್ಚಾತ್ಯರೂ ಈ ಅಂಶವನ್ನು ಮನಗಂಡಿದ್ದಾರೆ

8th_Kannada_Reader Term I_U4-9.indd 49 18-06-2019 10.46.58 AM

ಮತ್ತು ಯೋಗ ಸಾಧನೆಯ ಕಡೆಗೆ ಹೆಚ್ಚು ಹೆಚ್ಚು ಒಲವು ತೋರಿಸುತ್ತಿರುವ ಸಂಗತಿ ನಮ್ಮಲ್ಲಿ ಅಭಿಮಾನ ಮೂಡಿಸುವಂತಹುದಾಗಿದೆ.

ಯೋಗಾಭ್ಯಾಸದಿಂದಾಗುವ ಪ್ರಯೋಜನಗಳು

ಯೋಗಾಭ್ಯಾಸದಿಂದಾಗುವ ಪ್ರಯೋಜನ ಅನೇಕ ರೀತಿಯಲ್ಲಿರುತ್ತದೆ. ಇದು ದೇಹದ ತೂಕವನ್ನು ಕ್ರಮೇಣ ಇಳಿಸಿ, ಮನಸ್ಸಿಗೂ ಪೂರ್ಣ ವಿಶ್ರಾಂತಿ ಹಾಗೂ ಸಮಾಧಾನ ತಂದುಕೊಡುತ್ತದೆ.

1. ಹಲವಾರು ಆಸನಗಳ ಪರಿಣಾಮವಾಗಿ ದೇಹದ ಮುಖ್ಯ ಅಂಗಾಂಗಳಿಗೆ ನವಚೇತನ ದೊರೆಯುತ್ತದೆ.
2. ದೇಹವನ್ನು ದೃಢವಾಗಿರಿಸುತ್ತದೆ. ವ್ಯಾಧಿಗಳನ್ನು ತಡೆಗಟ್ಟಿ ಆಯಸ್ಸನ್ನು ವೃದ್ಧಿಸುತ್ತದೆ.
3. ದೇಹದಲ್ಲಿ ಲಘುತ್ವ ಪ್ರಾಪ್ತಿಯಾಗುತ್ತದೆ. ದೈಹಿಕ ಮತ್ತು ಮಾನಸಿಕ ಒತ್ತಡಗಳನ್ನು ತಡೆದುಕೊಳ್ಳಲು ಸಹಕಾರಿ.
4. ರೋಗನಿರೋಧಕ ಶಕ್ತಿ ಹೆಚ್ಚುತ್ತದೆ.
5. ಬೆನ್ನುಹುರಿಯ ಪಟ್ಟುತ್ವ ವೃದ್ಧಿಗೊಂಡು ರಕ್ತಪರಿಚಲನೆ ಉತ್ತಮಗೊಳ್ಳುತ್ತದೆ.
6. ರಕ್ತನಾಳಗಳ ಪೆಡಸಾಗುವಿಕೆಯನ್ನು ಹಾಗೂ ಮೂಲವ್ಯಾಧಿಯನ್ನು ತಡೆಗಟ್ಟುತ್ತದೆ.
7. ಹೊಟ್ಟೆಯ ಅಂಗಾಂಶಗಳು ಹಾಗೂ ಮಾಂಸಖಂಡಗಳಿಗೆ ಪುನಃಶ್ಚೇತನ ನೀಡುತ್ತದೆ.
8. ದೈಹಿಕ ಆಯಾಸವನ್ನು ಕಡಿಮೆಗೊಳಿಸುತ್ತದೆ. ಋತುಸ್ರಾವದ ಅವಧಿಯನ್ನು ಆರಾಮಗೊಳಿಸುತ್ತದೆ.
9. ಹೊಟ್ಟೆಯ ಜೈವಿಕ ರಸ ಹಾಗೂ ಕೊಬ್ಬಿನ ಅಂಶ ಕಡಿಮೆ ಮಾಡುತ್ತದೆ.
10. ದೇಹದಲ್ಲಿ ಸಂಗ್ರಹವಾಗಿರುವ ವಿಷ ಪದಾರ್ಥಗಳನ್ನು – ಹೊರಗಿನ ಸಹಾಯ, ಒತ್ತಡ ಅಥವಾ ಔಷಧದ ನೆರವಿಲ್ಲದೆ – ಹೊರ ಹಾಕಲು ಸಹಾಯ ಮಾಡುತ್ತದೆ.
11. ಚಂಚಲ ಹಾಗೂ ಅಸ್ಥಿರ ಮನಸ್ಸನ್ನು ನಿಯಂತ್ರಿಸಲು ನೆರವಾಗುತ್ತದೆ.
12. ಏಕಾಗ್ರತಾ ಶಕ್ತಿ ವೃದ್ಧಿಗೊಳ್ಳುತ್ತದೆ.
13. ಯೋಗ್ಯವಾದ ಮಾನಸಿಕ ಧೋರಣೆಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ.
14. ಮನಃಶಾಂತಿಯನ್ನು, ಜಾಗೃತಿಯನ್ನು ಹೆಚ್ಚಿಸುತ್ತದೆ. ಮನೋಧಾರ್ಢ್ಯ, ಇಚ್ಛಾಶಕ್ತಿ ವೃದ್ಧಿಸುತ್ತದೆ.
15. ದೈಹಿಕ ಮತ್ತು ಮಾನಸಿಕ ಸಮತೋಲನ ಏರ್ಪಡುತ್ತದೆ.

ಪದಗಳ ಅರ್ಥ

ಸ್ವಸ್ಥ–ಆರೋಗ್ಯಕರ; ಚಂಚಲತೆ–ಗೊಂದಲ; ಪಚನ–ಜೀರ್ಣ; ತಜ್ಞ–ಪರಿಣತ, ನಿಪುಣ; ಸ್ನಾಯುಮಂಡಲ–ನರಮಂಡಲ; ಹತೋಟಿ–ನಿಯಂತ್ರಣ, ಹಿಡಿತ; ಬಲಿಷ್ಠ–ಗಟ್ಟಿಯಾದ, ಭದ್ರವಾದ; ಚೇತನ–ಶಕ್ತಿ, ಬಲ; ವ್ಯಾಧಿ–ರೋಗ; ಜಾಗೃತಿ–ಪ್ರಜ್ಞೆ ಎಚ್ಚರಿಕೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅಷ್ಟಾಂಗ ಯೋಗಗಳು ಯಾವುವು ?
2. ಯೋಗದಿಂದಾಗುವ ಪ್ರಯೋಜನಗಳೇನು?
3. ಯೋಗದ ಪ್ರವರ್ತಕ ಯಾರು ?
4. ಪತಂಜಲಿ ಮಹರ್ಷಿಯ ಕಾಲ ಯಾವುದು?
5. ಪತಂಜಲಿ ಮಹರ್ಷಿಯ ಗ್ರಂಥ ಯಾವುದು?
6. ಯೋಗದ ಬಗ್ಗೆ ಪಾಶ್ಚಾತ್ಯರ ನಿಲುವೇನು ?
7. ರಕ್ತದ ಉತ್ಪತ್ತಿ ಯಾವಾಗ ಆಗುತ್ತದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಯೋಗದ ಪರಮಗುರಿಯ ಬಗ್ಗೆ ತಿಳಿಸಿ.
2. ಯೋಗದ ಮೂಲಕ ಸಾಧಿಸಬಹುದಾದ ಗುರಿಗಳಾವುವು?
3. ಆಸನಗಳನ್ನು ಪಾಲಿಸುವ ಉದ್ದೇಶವೇನು?
4. ನಿದ್ರೆಯ ಮಹತ್ವವನ್ನು ಬರೆಯಿರಿ.
5. ಯೋಗಪ್ರವರ್ತಕರ ಇತಿಹಾಸವನ್ನು ತಿಳಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಯೋಗದ ಮಹತ್ವವನ್ನು ವಿವರಿಸಿ.
2. ಯೋಗದಿಂದಾಗುವ ಪ್ರಯೋಜನಗಳೇನು?
3. ಯೋಗದ ಅರ್ಥ ಮತ್ತು ಗುರಿಯನ್ನು ನಿರೂಪಿಸಿ.

8th_Kannada_Reader Term I_U4-9.indd 50 18-06-2019 10.46.58 AM

ವ್ಯಾಕರಣ

ಘಟಕ ಮೂರು

ಲಿಂಗ–ವಚನ

ಲಿಂಗ

ಲಿಂಗ ಎಂದರೆ ಗುರುತು ಎಂದು ಅರ್ಥ. ಗಂಡಸು ಅಥವಾ ಹೆಂಗಸು ಅಥವಾ ಇವೆರಡೂ ಅಲ್ಲದ್ದು ಎಂಬ ಗುರುತನ್ನು ಸೂಚಿಸುವ ನಾಮಪ್ರಕೃತಿಯನ್ನು ಲಿಂಗವೆಂದು ಕರೆಯುತ್ತಾರೆ.

ಉದಾಹರಣೆ : * ರಮೇಶನು ಗಿರೀಶನಿಗೆ ಬುದ್ಧಿ ಹೇಳಿದನು
* ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.
* ಆಡು ಸೊಪ್ಪನ್ನು ತಿನ್ನುತ್ತದೆ.

– ಈ ವಾಕ್ಯಗಳಲ್ಲಿರುವ ರಮೇಶ, ಗಿರೀಶ ಎನ್ನುವ ಪದಗಳು ಗಂಡಸರಿಗೂ; ಗೌರಿ, ತಂಗಿ ಪದಗಳು ಹೆಂಗಸರಿಗೂ; ಆಡು, ಸೊಪ್ಪು ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ ಪದಗಳೆಂದೂ ತಿಳಿಯುತ್ತವೆ. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳೆಂದು ಮೂರು ವಿಧಗಳಿವೆ.

1. **ಪುಲ್ಲಿಂಗ :** ಪುರುಷರನ್ನು ಕುರಿತು ಹೇಳುವ ಪದಗಳನ್ನು ಪುಲ್ಲಿಂಗ ಎಂದು ಕರೆಯುತ್ತಾರೆ.
ಉದಾಹರಣೆ : ಗೋವಿಂದ, ಶಂಕರ, ಅಣ್ಣ, ಅಪ್ಪ, ಮಗ ಇತ್ಯಾದಿ.

2. **ಸ್ತ್ರೀಲಿಂಗ :** ಸ್ತ್ರೀಯರನ್ನು ಕುರಿತು ಹೇಳುವ ಪದಗಳನ್ನು ಸ್ತ್ರೀಲಿಂಗ ಎಂದು ಕರೆಯುತ್ತಾರೆ.
ಉದಾಹರಣೆ : ಗೀತಾ, ರಾಣಿ, ಅತ್ತಿಗೆ, ಚಿಕ್ಕಮ್ಮ, ಸೊಸೆ, ಅವಳು ಇತ್ಯಾದಿ.

3. **ನಪುಂಸಕ ಲಿಂಗ :** ಪುಲ್ಲಿಂಗವೂ ಅಲ್ಲದ ಸ್ತ್ರೀಲಿಂಗವೂ ಅಲ್ಲದ ಪದಗಳೇ ನಪುಂಸಕಲಿಂಗಗಳು. ಪ್ರಾಣಿಗಳನ್ನೂ, ವಸ್ತುಗಳನ್ನೂ ಹೇಳುವ ಪದಗಳನ್ನು ನಪುಂಸಕ ಲಿಂಗವೆಂದು ಕರೆಯುತ್ತೇವೆ.
ಉದಾಹರಣೆ : ಗಿರಿ, ಆಕಾಶ, ನದಿ, ಮಗು, ಕುರ್ಚಿ, ಮರ ಇತ್ಯಾದಿ.

ವಚನ

ವ್ಯಾಕರಣದಲ್ಲಿ ವಚನ ಎಂದರೆ ಎಣಿಕೆ ಅಥವಾ ಸಂಖ್ಯೆ ಎಂದು ಅರ್ಥ. ವಸ್ತುಗಳು, ಮನುಷ್ಯರು, ಪ್ರಾಣಿಗಳು ಮುಂತಾದವುಗಳ ಸಂಖ್ಯೆಯನ್ನು ತಿಳಿಸುವುದಕ್ಕೆ ವಚನ ಎಂದು ಕರೆಯುತ್ತೇವೆ.

ವಚನಗಳಲ್ಲಿ ಎರಡು ವಿಧಗಳಿವೆ. ಅವು, 1. ಏಕವಚನ 2. ಬಹುವಚನ.


1. **ಏಕವಚನ :** ಯಾವುದೇ ನಾಮಪದವು ಒಂದೇ ಒಂದು ಸಂಖ್ಯೆಯನ್ನು ಮಾತ್ರ ಸೂಚಿಸುವಂತಿದ್ದರೆ ಅದನ್ನು ಏಕವಚನ ಎಂದು ಕರೆಯುತ್ತೇವೆ. ಉದಾಹರಣೆಗೆ: ರಾಧಾ, ಮಗು, ತಾಯಿ, ಕಲ್ಲು, ಮರ, ಹುಡುಗ ಇತ್ಯಾದಿ.

2. **ಬಹುವಚನ :** ಯಾವುದೇ ನಾಮ ಪದವು ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಂಖ್ಯೆಗಳನ್ನು ಸೂಚಿಸುವಂತಿದ್ದರೆ ಅದನ್ನು ಬಹುವಚನ ಎಂದು ಕರೆಯುತ್ತೇವೆ. ಉದಾಹರಣೆಗೆ : ರಾಜರು, ಮಕ್ಕಳು, ತಾಯಂದಿರು, ಕಲ್ಲುಗಳು, ಮರಗಳು, ಹುಡುಗರು ಇತ್ಯಾದಿ.

8th_Kannada_Reader Term I_U4-9.indd 51 18-06-2019 10.46.58 AM

ಘಟಕ
ನಾಲ್ಕು

4. ಶಿಕ್ಷಣ



ಕಾವ್ಯ ಕಣಜ	:	ನಮ್ಮ ಕನಸು	– ಶಂ.ಗು. ಬಿರಾದಾರ
ಪೂರಕ ಪದ್ಯ	:	ಮಹಾತ್ಮ	– ಗಂಗಾಧರ ಚಿತ್ತಾಲ
ಗದ್ಯ ವಿಹಾರ	:	ಪುಸ್ತಕಗಳು	– ಹಿರೇಮಲ್ಲೂರು ಈಶ್ವರನ್
ಉಪಪಠ್ಯ	:	ಸಪ್ತಾಕ್ಷರೀ ಮಂತ್ರ	– ಮುದ್ದಣ
ವ್ಯಾಕರಣ	:	ವಿಭಕ್ತಿ ಪ್ರತ್ಯಯಗಳು ಮತ್ತು ವಾಕ್ಯಗಳು	

8th_Kannada_Reader Term I_U4-9.indd 52 18-06-2019 10.46.58 AM

ಕಾವ್ಯ ಕಣಜ

ಘಟಕ ನಾಲ್ಕು

ನಮ್ಮ ಕನಸು

– ಶಂ.ಗು.ಬಿರಾದಾರ



ವಿದ್ಯಾರ್ಥಿಗಳು ತಮ್ಮ ಜ್ಞಾನಾರ್ಜನೆಯ ಸಮಯದಲ್ಲಿ ಮುಖ್ಯ ಗುರಿಯನ್ನಾಗಿ ಇಟ್ಟುಕೊಳ್ಳಬೇಕಾದ ವಿಷಯವೇನೆಂದರೆ ತಮ್ಮ ಬಗ್ಗೆ ಹಾಗೂ ದೇಶದ ಬಗ್ಗೆ ಒಳ್ಳೆಯ ಕನಸುಗಳನ್ನು ಕಟ್ಟುವುದು. ಅವು ನನಸಾಗಲು ಯತ್ನಿಸುವುದು. ಆ ಮೂಲಕ ಇಂದಿನ ಮಕ್ಕಳೇ ಮುಂದಿನ ಜನಾಂಗವೆನ್ನುವ ಮಾತಿಗೆ ಇಂಬು ನೀಡುವುದು. ಈ ಬಗೆಯ ಮೌಲ್ಯಯುತವಾದ ವಿಚಾರಗಳನ್ನು ಈ ಕವನವು ದಾರಿದೀಪದಂತೆ ತೋರುತ್ತಿದೆ.



8th_Kannada_Reader Term I_U4-9.indd 53 18-06-2019 10.46.59 AM

ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೊ ಸುಂದರ |1|

ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿ
ಗೊಂದೆ ಭಾರತ ಮಂದಿರ
ಶಾಂತಿ ದಾತನು ಗಾಂಧಿ ತಾತನು
ಎದೆಯ ಬಾನಿನ ಚಂದಿರ |2|

ಜಾತಿ ರೋಗದ ಭೀತಿ ಕಳೆಯುತ
ನೀತಿ ಮಾರ್ಗದಿ ನಡೆವೆವು
ಒಂದೆ ಮಾನವ ಕುಲವು ಎನ್ನುತ
ವಿಶ್ವಧರ್ಮವ ಪಡೆವೆವು |3|

ವೈರ ಮತ್ಸರ ಸ್ವಾರ್ಥ ವಂಚನೆ
ಕ್ರಿಮಿಗಳೆಲ್ಲವ ತೊಡೆವೆವು
ದೇಶ ಸೇವೆಗೆ ದೇಹ ಸವೆಸುವ
ದೀಕ್ಷೆ ಇಂದೇ ತೊಡುವೆವು |4|

ನಮ್ಮ ಸುತ್ತಲು ಹೆಣೆದುಕೊಳ್ಳಲಿ
ಸ್ನೇಹ ಪಾಶದ ಬಂಧನ
ಬೆಳಕು ಬೀರಲಿ ಗಂಧ ಹರಡಲಿ
ಉರಿದು ಪ್ರೇಮದ ಚಂದನ |5|

ನಮ್ಮ ಶಕ್ತಿಗೆ ದಿವ್ಯ ಭಕ್ತಿಗೆ
ದೇಶವಾಗಲಿ ನಂದನ
ಅಂದು ಪ್ರೇಮದಿ ಎತ್ತಿಕೊಳ್ಳಲಿ
ಭೂಮಿ ತನ್ನಯ ಕಂದನ |6|

8th_Kannada_Reader Term I_U4-9.indd 54 18-06-2019 10.46.59 AM

ಕವಿ–ಕಾವ್ಯ ಪರಿಚಯ



ಶಂ.ಗು. ಬಿರಾದಾರ

ಶಂಕರಗೌಡ ಗುರುಗೌಡ ಬಿರಾದಾರ ಅವರು 1926ರಲ್ಲಿ ಹುಟ್ಟಿದರು. ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. 'ರುದ್ರವೀಣೆ', 'ಕಥಾ ಸಂಕಲನ', 'ನನ್ನ ಹಾಡು', 'ಕಾರಂಜಿ', 'ಮಂಗ್ಯಾ ಮಂಗ್ಯಾ', 'ಕಿಸ್‌ಕಿಸ್', 'ಭಾವ ಸಂಗಮ', 'ಬಸವ ಶತಕ', 'ನೌಕರಿಯ ಹುಟ್ಟು', 'ಬೆಳಕಿನೆಡೆಗೆ' ಮುಂತಾದ ಕೃತಿಗಳನ್ನು ಇವರು ರಚಿಸಿದ್ದಾರೆ. ಇವರ ಕೃತಿಗಳಿಗೆ ರಾಜ್ಯ ಸರಕಾರದ ಬಹುಮಾನ ದೊರೆತಿದೆ. ಇವರ ಶೈಕ್ಷಣಿಕ ಸೇವೆಗಾಗಿ 'ಆದರ್ಶ ಶಿಕ್ಷಕ' ರಾಜ್ಯ ಪ್ರಶಸ್ತಿಯೂ ಲಭಿಸಿದೆ. ನಮ್ಮ ಕನಸು ಎಂಬ ಈ ಪದ್ಯವನ್ನು ಇವರ 'ನನ್ನ ಹಾಡು' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ

ಪದಗಳ ಅರ್ಥ

ಹಂದರ–ಚಪ್ಪರ; ಭಾನು–ಆಕಾಶ, ಆಗಸ, ಗಗನ; ಭೀತಿ–ಹೆದರಿಕೆ; ಕಳೆ–ಬಿಡು; ವೈರ–ಹಗೆತನ, ಶತ್ರುತ್ವ; ಮತ್ಸರ–ಹೊಟ್ಟೆಕಿಚ್ಚು, ಅಸೂಯೆ; ಸ್ವಾರ್ಥ–ಸ್ವಹಿತ, ತನ್ನ ಬಗೆಗೆ ಮಾತ್ರವೇ ಚಿಂತಿಸುವುದು; ವಂಚನೆ–ಮೋಸ; ಪಾಶ–ಹಗ್ಗ; ಚಂದನ–ಶ್ರೀಗಂಧ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ನಾಳೆಯ ನಾಡ ಹಿರಿಯರು ಯಾರು ?
2. ಎಲ್ಲರಿಗೂ ಇರುವ ಮಂದಿರ ಯಾವುದು ?
3. ಶಾಂತಿ ದಾತ ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಭೀತಿಯನ್ನು ಕಳೆಯುವ ವಿಶ್ವಧರ್ಮವನ್ನು ಹೇಗೆ ಪಡೆಯುವರು ?
2. ನಾವು ಯಾವ ದೀಕ್ಷೆಯನ್ನು ತೊಡಬೇಕು ?
3. ದೇಶವು ಹೇಗೆ ನಂದನವಾಗಲಿ ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಹೂ, ಮಂದಿರ, ಚಂದಿರ, ಭೂಮಿ, ಬಂಧನ, ಸ್ನೇಹ.

2. ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ.

ಭಾನು, ಅಂಬರ, ಆಕಾಶ, ಭೂಮಿ, ಗಗನ.

ಧರಣಿ, ಪೊಡವಿ, ಧರೆ, ದೇಶ, ನೆಲ.

ಅಮ್ಮ, ಅಜ್ಜ, ಅಣ್ಣ, ಅಪ್ಪ.

ಕುಸುಮ, ಹೂ, ಎಲೆ, ಪುಷ್ಪ.

3. ಹೊಂದಿಸಿ ಬರೆಯಿರಿ

	ಅ	ಬ
1.	ನೀತಿ ಮಾರ್ಗದಿ	ಅ) ಪಡೆವೆವು
2.	ವಿಶ್ವ ಧರ್ಮವ	ಆ) ಬಂಧನ
3.	ದೀಕ್ಷೆ ಇಂದೇ	ಇ) ನಂದನ
4.	ಸ್ನೇಹ ಪಾಶವ	ಉ) ನಡೆವೆವು
5.	ದೇಶವಾಗಲಿ	ಊ) ತೊಡುವೆವು

ಚಟುವಟಿಕೆ

1. ತರಗತಿಯಲ್ಲಿ ಅಧ್ಯಾಪಕರ ಸಹಕಾರದೊಂದಿಗೆ ಆಶುಭಾಷಣ ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.
2. ಮುಂದೆ ನೀವು ಏನಾಗಬೇಕೆಂಬುದರ ಬಗ್ಗೆ ಕಾಣುವ ಕನಸನ್ನು ಚೊಕ್ಕ ಚಿಕ್ಕ ಪ್ರಬಂಧವನ್ನಾಗಿ ಬರೆಯಿರಿ.


8th_Kannada_Reader Term I_U4-9.indd 55 18-06-2019 10.46.59 AM

ಪೂರಕ ಪದ್ಯ


ಘಟಕ ನಾಲ್ಕು

ಮಹಾತ್ಮ

– ಗಂಗಾಧರ ಚಿತ್ತಾಲ



ಜೀವಿಗಳು ವಿಕಾಸದ ಒಂದೇ ಮೂಲದಿಂದ ಬಂದವುಗಳೆಂಬುದೂ, ಅವುಗಳಲ್ಲಿ ಪರಸ್ಪರ ಬಾಂಧವ್ಯದ ಅರಿವು ಇರಬೇಕೆಂಬುದೂ ಪ್ರತಿಯೊಬ್ಬರೂ ಅರಿತಿರಬೇಕಾದ ಬಹುಮುಖ್ಯ ವಿಷಯ. ಯಾವುದೇ ತಾರತಮ್ಯವಿಲ್ಲದ ಒಗ್ಗಟ್ಟಿನ ಬದುಕೇ ಜೀವನದ ಮೇಲ್ಮೈ. ಆದರೆ ಭಾರತ ದೇಶದ ಸ್ವಾತಂತ್ರ್ಯ ಹಾಗೂ ಕೋಮು ಸಾಮರಸ್ಯಕ್ಕಾಗಿ ತಮ್ಮ ಬದುಕನ್ನು ಮುಡಿಪಿಟ್ಟ ಗಾಂಧೀಜಿ ಹಂತಕನ ಗುಂಡೇಟಿಗೆ ಬಲಿಯಾಗಿ ಹುತಾತ್ಮರಾದರು. ಗಾಂಧಿಯವರ ಹತ್ಯೆಯನ್ನು ಈ ಪದ್ಯ ವರ್ಣಿಸುವಂತೆ ಕಂಡರೂ ಮಾನವನ ಕ್ರೌರ್ಯಕ್ಕೆ ಕನ್ನಡಿ ಹಿಡಿಯುವ ಸಾರ್ವಕಾಲಿಕ ಮಹತ್ವವನ್ನು ಇದು ಪಡೆದಿದೆ.







8th_Kannada_Reader Term I_U4-9.indd 56 18-06-2019 10.47.00 AM

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ–ಹೂ ಬಾಡಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ಥಂಭ
ಉತ್ತಮರ ಬಲಿ ಇಲ್ಲಿ – ಬಾನಾಡಿತು |1|

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು –
ನೆಲವು ನಂದನವಾಗಲೇನು ಬೇಕು ?
ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು
ಛಲವನರಿಯದ ಬದುಕು, ಇಷ್ಟೇ ಸಾಕು |2|

ಅಂತೆ ತವಕದಿ ಬಂದೆ ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ
ಇತ್ತ ಹಾಲಾಹಲವು ಅತ್ತ ಕೋಲಾಹಲವು
ಅಮೃತ ಹಾಸವ ಬೀರಿ ನಡೆದೆ ಮುಂದೆ |3|

ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು
ಶಾಂತಿ ಸಮರಸಕೆ ಇದು ಮೊದಲೆನಿಸಿತು
ಕಲ್ಲೆದೆಯ ಸೀಮೆಯಲು ಹೂ – ಕುಸುರು. ಆಹಾ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು |4|

ನರನ ಕಾಡಿನ ನಡತೆ ಇನ್ನೂ ಮುಗಿದಿರಲಿಲ್ಲ
ನಿನ್ನ ಬೇಟೆಗೆ ತಾಯಿ ಮಣ್ ನಡುಗಿತು,
ನರನು ಕೆರಳುವ ಹುಂಬ, ಬಾಳು ಯೂಪಸ್ಥಂಭ
ಇಂಥ ಬಲಿ ಇನ್ನೇಸೋ! ಬಾನ್ ಗುಡುಗಿತು |5|

8th_Kannada_Reader Term I_U4-9.indd 57 18-06-2019 10.47.00 AM

ಕವಿ–ಕಾವ್ಯ ಪರಿಚಯ



ಗಂಗಾಧರ ಚಿತ್ತಾಲರು 1924ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಹನೆಹಳ್ಳಿಯಲ್ಲಿ ಜನಿಸಿದರು. ಇವರು ತಮ್ಮ ಅನುಭವನಿಷ್ಠ ಕವನಗಳಿಂದ ಹೆಸರು ಮಾಡಿದವರು. ಕಾಲದ ಕರೆ, ಮನುಕುಲದ ಹಾಡು, ಹರಿವ ನೀರಿದು, ಸಂಪರ್ಕ, ಸಮಗ್ರ ಕಾವ್ಯ ಇವು ಚಿತ್ತಾಲರ ಕವನ ಸಂಕಲನಗಳು. ಅವರ ಮಹಾತ್ಮ ಎನ್ನುವ ಈ ಕವನವನ್ನು ಮನುಕುಲದ ಹಾಡು ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ದೇಶದ ಸ್ವಾತಂತ್ರ್ಯ ಹಾಗೂ ಕೋಮು ಸಾಮರಸ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಿಟ್ಟ ಗಾಂಧಿಯವರು ಹಂತಕನ ಗುಂಡೇಟಿಗೆ ಬಲಿಯಾಗಿ ಹುತಾತ್ಮರಾದರು. ಮಹಾತ್ಮರ ಮರಣದ ಮನಕಲಕುವ ಘಟನೆಯನ್ನು ಚಿತ್ತಾಲರು ಈ ಕವನದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮೇಲ್ನೋಟಕ್ಕೆ ಈ ಕವನ ಗಾಂಧಿಯವರ ಹತ್ಯೆಯನ್ನು ವರ್ಣಿಸುವಂತೆ ಕಂಡರೂ ಮಾನವನ ಕ್ರೌರ್ಯಕ್ಕೆ ಕನ್ನಡಿ ಹಿಡಿಯುತ್ತಾ ಸಾರ್ವಕಾಲಿಕ ಮಹತ್ವವನ್ನು ಇದು ಪಡೆಯುತ್ತದೆ.

ಪದಗಳ ಅರ್ಥ

ಹಗಲ ಹೂ–ಸೂರ್ಯ; ತವಕ–ಕಾತರ; ಯೂಪಸ್ಥಂಭ–ಯಜ್ಞಯಾಗಾದಿಗಳಲ್ಲಿ ಬಲಿ ಪಶುವನ್ನು ಕಟ್ಟುವ ಕಂಬ; ನಂದನ–ಸ್ವರ್ಗದ ಉದ್ಯಾನ; ಕಾಳೋರಗ–ಕಾಳ ಸರ್ಪ, ಕೃಷ್ಣಸರ್ಪ, ಘೋರ ವಿಷವುಳ್ಳ ಕಪ್ಪು ಹಾವು; ತವಿಪು–ನಾಶಗೊಳಿಸು; ಹಾಲಾಹಲ–ವಿಷ; ಏಸೋ–ಎಷ್ಟೋ; ತೇವು–ತೇವ.

ಟಿಪ್ಪಣಿಗಳು

1. **ನಿನ್ನ ನೆತ್ತರು ನೆಲಕೆ ಚೆಲ್ಲಿದಂದು :** ಗಾಂಧೀಜಿ ಹಂತಕನ ಗುಂಡೇಟಿಗೆ ಬಲಿಯಾದ ದಿನದಂದು (1948, ಜನವರಿ 30).
2. **ಹಳೆಯ ಕಾಳೋರಗವ ತವಿಪೆನೆಂದ ² :** ಸತ್ಯ, ಅಹಿಂಸೆಯ ಮಾರ್ಗ ಅನುಸರಿಸಿ ಬ್ರಿಟೀಷರನ್ನು ಮಣಿಸುವೆ ಎಂದು ಗಾಂಧೀಜಿ ನುಡಿಯುತ್ತಿದ್ದರು.
3. **ಇತ್ತ ಹಾಲಾಹಲ ಅತ್ತ ಕೋಲಾಹಲ :** ಒಂದೆಡೆ ಬ್ರಿಟೀಷರ ದಬ್ಬಾಳಿಕೆ, ಮತ್ತೊಂದೆಡೆ ಮತೀಯ ಗಲಭೆಗಳು. ದೇಶ ವಿಭಜನೆಯ ಅನಾಹುತ.
4. **ಬರುವ ಭಾಗ್ಯವ ಯುಗದ ತೊದಲೆನಿಸಿತು :** ಸ್ವರಾಜ್ಯವು ನಾಡಿಗೆ ಶಾಂತಿ ಸಮೃದ್ಧಿ ತರುವುದೆಂದು ಗಾಂಧೀಜಿ ಭಾವಿಸಿದ್ದರು. ಸ್ವಾತಂತ್ರ್ಯವು ಅದರ ಮುನ್ಸೂಚನೆ ಎಂಬ ಧ್ವನಿ ಇಲ್ಲಿದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಆಕಾಶದ ಪ್ರತಿಕ್ರಿಯೆ ಹೇಗಿತ್ತು ?
2. ಮಹಾತ್ಮ ಗಾಂಧಿ ಹುತಾತ್ಮರಾದ ದಿನದಂದು ಭೂಮಿಯ ಪ್ರತಿಕ್ರಿಯೆ ಹೇಗಿತ್ತು ?
3. ಸೂರ್ಯನ ಪ್ರತಿಕ್ರಿಯೆ ಏನು ?
4. ಈ ಪದ್ಯದಲ್ಲಿ ಹಗೆಯನ್ನು ಯಾವುದಕ್ಕೆ ಹೋಲಿಸಲಾಗಿದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ನಮ್ಮ ಬದುಕು ಹಸನಾಗಲು ಏನೇನು ಬೇಕು?
2. ಗಾಂಧಿಯವರ ಆಗಮನದಿಂದ ಪರಿಸ್ಥಿತಿ ಹೇಗೆ ಬದಲಾಯಿತು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಚಿತ್ತಾಲರು ಬಣ್ಣಿಸಿದ ಮಹಾತ್ಮರ ವ್ಯಕ್ತಿತ್ವ, ನಿಧನ ಹಾಗೂ ಅದಕ್ಕೆ ನಿಸರ್ಗ ತೋರಿದ ಪ್ರತಿಕ್ರಿಯೆಯನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

8th_Kannada_Reader Term I_U4-9.indd 58 18-06-2019 10.47.00 AM

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ನೆತ್ತರು, ನಂದನ, ಕಣ್ಣು, ಭಾನು, ಸರ್ಪ.


2. **ಈ ಪದ್ಯದಲ್ಲಿ ಬಂದಿರುವ ಅಂತ್ಯಪ್ರಾಸಗಳನ್ನು ಗುರುತಿಸಿ.**

3. **ಕೆಳಗಿನ ಪದಪುಂಜಗಳ ಅರ್ಥ ಸ್ವಾರಸ್ಯವನ್ನು ತಿಳಿಸಿ.**

   ಹಗಲಹೂ, ಬಾಳು ಯೂಪಸ್ಥಂಭ, ಮನುಕುಲದ ರಕ್ತಮಯ ಇತಿಹಾಸ, ಅಮೃತ ಹಾಸ, ಕಲ್ಲೆದೆಯ ಸೀಮೆಯಲು ಹೂ ಕುಸುರು.

ಚಟುವಟಿಕೆ

1. ಮಾನವೀಯ ಮೌಲ್ಯಗಳನ್ನು ತಿಳಿಸುವ ಇನ್ನಿತರ ಕವಿಗಳ ಕವಿತೆಗಳನ್ನು ಸಂಗ್ರಹಿಸಿ.
2. ಈ ಬಗೆಯ ಕವಿತೆಗಳನ್ನು ರಚಿಸುವ ಕೌಶಲ್ಯವನ್ನು ಅಧ್ಯಾಪಕರ ಸಹಾಯದೊಂದಿಗೆ ಬೆಳೆಸಿಕೊಳ್ಳಿ.
3. ಮಹಾತ್ಮಾ ಗಾಂಧೀಜಿಯವರ ಬಗ್ಗೆ ತಿಳಿದುಕೊಳ್ಳಿ.





8th_Kannada_Reader Term I_U4-9.indd 59 18-06-2019 10.47.01 AM

ಘಟಕ ನಾಲ್ಕು

ಪುಸ್ತಕಗಳು

– ಹಿರೇಮಲ್ಲೂರು ಈಶ್ವರನ್



ಆಧುನಿಕ ಕನ್ನಡ ಸಾಹಿತ್ಯದಲ್ಲಿ ಲಲಿತವೆಂಬ ಪ್ರಕಾರವೊಂದಿದೆ. ಕಲ್ಪನೆ ಕಾವ್ಯ ವಿಚಾರಗಳನ್ನೊಳಗೊಂಡ ಈ ಗದ್ಯ ಪ್ರಕಾರ ಬಹಳ ಆಕರ್ಷಣೀಯ. ಪ್ರಸ್ತುತ ಪ್ರಬಂಧದಲ್ಲಿ ವ್ಯಾಸಂಗದ ಹವ್ಯಾಸವನ್ನು ಬೆಳೆಸಿಕೊಳ್ಳಿ ಎಂಬ ಧ್ವನಿಯಿದೆ. ಬರೆಯುವವರೆಲ್ಲರೂ ಸಾಹಿತಿಗಳಲ್ಲ. ಸಾಹಿತಿ ಎನ್ನಿಸಿಕೊಳ್ಳಬೇಕಾದರೆ ಅವನಲ್ಲಿರಬೇಕಾದ ಗುಣ ಲಕ್ಷಣದ ವಿಶ್ಲೇಷಣೆ ಈ ಪಾಠದಲ್ಲಿದೆ. ನಮ್ಮ ನಿತ್ಯ ಜೀವನದ ಸುಖ–ದುಃಖಗಳ ಕನ್ನಡಿಯೇ ಪುಸ್ತಕಗಳು ಎನ್ನುವ ವಿಶ್ಲೇಷಣೆಯನ್ನು ಕರ್ತೃ ಇಲ್ಲಿ ತಿಳಿಸಿದ್ದಾರೆ.



8th_Kannada_Reader Term I_U4-9.indd 60 18-06-2019 10.47.02 AM

ಹೊತ್ತಗೆಗಳಲ್ಲಿ ಜೀವನದ ವಿಮರ್ಶೆ ಅಡಕವಾಗಿರುತ್ತದೆ. ಬಾಳಿನಲ್ಲಿ ಕಂಡು ಬರುವ ಸುಖದುಃಖ, ಮದ–ಮತ್ಸರ, ಆಸೆ ಆಮಿಷಗಳ ಹೊಂಚು ಸಂಚನ್ನು ಪುಸ್ತಕಗಳು ಕನ್ನಡಿ ಹಿಡಿದು ತೋರಿಸುತ್ತವೆ. ಮಾನವನ ಯಥಾವತ್ತಾದ ಇರುವಿಕೆಯನ್ನು ಗ್ರಂಥಕರ್ತನು ತನ್ನ ಬಿಂಬ ಗ್ರಹಣದ ಶಕ್ತಿಯಿಂದ ಚಿತ್ರಿಸುವುದು ಮಾತ್ರವಲ್ಲದೆ ಅವನ ಲೋಪದೋಷಗಳನ್ನು ಎತ್ತಿ ಹಿಡಿದು ಇದು ಈ ಹಂತಕ್ಕೆ ಏರಿಸುತ್ತದೆ, ಇದು ಈ ದಾರಿಗೆ ಒಯ್ಯುತ್ತದೆ ಎಂಬ ಹಿತಮಿತ ಮೃದು ವಚನವನ್ನರುಹುತ್ತಾನೆ. ಸಾಹಿತಿಗೆ ಬಾಳಿನ ಮೇಲೆ ಅವ್ಯಾಜವಾದ ಪ್ರೇಮ. ತನ್ನ ಸುತ್ತಣ ಬದುಕು ಬೃಂದಾವನವಾಗಿದ್ದರೆ ಮೈಮಣಿದು ಕೊಳಲನೂದುತ್ತಾನೆ. ಅದು ಇಂದ್ರನ ವಜ್ರಾಹತಿಗೆ ಸಿಲುಕಿ ಗೋಗರೆವ ಗೋವರ್ಧನಗಿರಿಯಾಗಿದ್ದರೆ, ಕೈಬೆರಳಲ್ಲಿ ನವಿಲುಗರಿ ಹಿಡಿದು ಅಭಯ ಲಿಖಿತ ಬರೆಯುತ್ತಾನೆ. ಆಕಾಶದಿಂದ ತೂರಿ ಬರುವ ಮೋಡ ಮಿಂಚು ಗುಡುಗು ಮಳೆ ಆಲಿಕಲ್ಲು ಸೆಳೆತ ಇವುಗಳನ್ನು ಸಾಹಿತಿಯು ತನ್ನ ಲೇಖನಿಯ ಗೆರೆಯ ದಾರಿಯಲ್ಲಿ ಬಂಧಿಸುವನು. ಕವಿ ಅಜನ ಅಪರಾವತಾರ. ಅವನ 'ಕೃತಿಗಳು ಮೂರ್ತಿ ಮತೀಚ ಮತ್ಕೃಯಾ'

ಋಷಿಯಾದವನು ಮಾತ್ರವೇ ಹೊತ್ತಗೆ ಬರೆಯಬಲ್ಲನು. ಆದರೆ ಹೊತ್ತಗೆ ಬರೆದವರೆಲ್ಲರೂ ಋಷಿಗಳಾಗಿರಲಾರರು. ಗ್ರಂಥಗಳಲ್ಲಿ ಲೋಪದೋಷಗಳಿದ್ದರೆ ಬರೆದವನಲ್ಲಿಯೂ ಅಂಥವೇ ಕೊರತೆಗಳು ಖಂಡಿತವಾಗಿ ಇರಲೇಬೇಕು. ಆದುದರಿಂದ ಸತ್ಕೃತಿಯ ಸಂಗ ಬಯಸುವವನು ಋಷಿಯನ್ನು ಹುಡುಕುತ್ತ ಹೋಗಬೇಕು. ಆತನು ಬಣಜಿಗರ ಕಳ್ಳಪೇಟೆಯಲ್ಲಿ ಸಿಗುವುದಿಲ್ಲ. ಸ್ತುತಿ ಪಾಠಕರ ಮಹಡಿಯ ಮನೆಯ ಮೇಲೆ ವಾಸಿಸಿರುವುದಿಲ್ಲ. ಅಂತಹವನನ್ನು ಬಹು ಪ್ರಯಾಸದಿಂದ ಅರಸುತ್ತ ಹೋಗಬೇಕಾಗುವುದು. ಹಳ್ಳಿ ಪಟ್ಟಣಗಳಿಂದಾಚೆಗೆ, ಗುಡ್ಡ ಬೆಟ್ಟಗಳಿಂದಾಚೆಗೆ... ಅಗೋ ಅಲ್ಲಿ ಕಾಣುವ ಗಿಡಮರಗಳ ಗುಂಪಿನಲ್ಲಿ ಗುಡಿಸಲೊಂದಿದೆ. ಅಲ್ಲಿ ಜೇನಿನ ಜೇಂಗೊಡ, ಕೋಗಿಲದ ಪಂಚಮದಿಂಚರ, ಖಗ ಕುಲದ ಮರ್ಮರ, ನವಿಲು ನರ್ತನವುಂಟು. ಅಲ್ಲಿಯ ಎಳ ಗರಿಕೆಗೆ ಅರಿಕೆಯಿಲ್ಲ, ಬೆಳಕಿಗೆ ಕತ್ತಲೆಯಿಲ್ಲ. ಅದೇ ತಾಣದಲ್ಲಿ ಸಾವುಕೇಡಿಲ್ಲದ ಹೊತ್ತಗೆಯ ಸೃಷ್ಟಿ ಆದದ್ದು. ಅಂತ ಸೃಷ್ಟಿಯ ಪಾಲಿಗಾಗಿ ನೀನು ಬೇಡಿಕೋ.

ನಿನ್ನ ಬಾಳಿನ ಅಂತಿಮ ಗುರಿಯೇನು? ನೀನು ಏತಕ್ಕೆ ಇಲ್ಲಿಗೆ ಬಂದೆ? ಮಾಡಬೇಕಾದ ಕರ್ತವ್ಯವೇನು? ಇವೇ ಮೊದಲಾದ ಪ್ರಶ್ನೆಗಳಿಗೆ ಪ್ರತಿಯೊಬ್ಬನೂ ಉತ್ತರ ಹೇಳಬೇಕಾಗುತ್ತದೆ. ಉತ್ತರಿಸದವನಿಗೆ ಉತ್ತರೋತ್ತರವಿಲ್ಲ. ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗ ಬಯಸುವವನು ಹೊತ್ತಗೆಗಳನ್ನು ಓದಿ ಉತ್ತರವನ್ನು ಕಂಡುಕೊಳ್ಳಲಿ. ಆದರೆ ಅಂತಹವನು ಬೇಕನ್‌ನೆಂಬ ಹೆಸರಿನ ಶ್ರೇಷ್ಠ ಆಂಗ್ಲ ಪ್ರಬಂಧಕಾರನು ಹೇಳಿದ ಮಾತುಗಳನ್ನು ನೆನಪಿನಲ್ಲಿಡಬೇಕು. ಕೆಲವು ಹೊತ್ತಗೆಗಳನ್ನು ಬರಿ ರುಚಿ ನೋಡಬೇಕು. ಕೆಲವನ್ನು ಮನದಟ್ಟು ಮಾಡಿಕೊಳ್ಳಬೇಕು. ಇನ್ನೂ ಕ್ವಚಿತ್ತಾಗಿರುವ ತುಸು ಪುಸ್ತಕಗಳನ್ನು ಮೆಲುಕು ಹಾಕುತ್ತ ಜೀರ್ಣಿಸಿಕೊಳ್ಳಬೇಕು. ಈ ಸಲಹೆಯನ್ನು ಮನ್ನಿಸಿದವರಿಗೆ ಸಮಸ್ಯೆಯ ಪರಿಹಾರ ದೊರೆಯುತ್ತದೆ.

ಸೃಷ್ಟಿಯ ಸಂದೇಶವನ್ನು ಪುಸ್ತಕಗಳು ಮೌನದಿಂದ ಸಾರುತ್ತವೆ. ಹಕ್ಕಿ ಹಾಡುತ್ತಿವೆ. ನಿರ್ಝರಿಣಿ ಮೊರೆಯುತ್ತಿವೆ. ಸೂರ್ಯ ಚಂದ್ರಮರು ಮೂಡಿ ಮುಳುಗುತ್ತಿದ್ದಾರೆ. ನೆಲ ಬಾನ್ಗಳಲ್ಲಿ ಕತ್ತಲು ಬೆಳುಕಿನ ಸಂಚಾರ ಒಂದೇ ಸವನೆ ನಡೆದೇ ಇದೆ. ಆದರೆ ಎಲ್ಲರ ಕಿವಿಗೆ ಕೇಳಬಾರದ ಧ್ವನಿ ಕಿವಿಗೆ ಕೇಳಬರುತ್ತದೆ. ರವಿ ಕಾಣದ ನೋಟ ಕವಿಯ ಕಣ್ಣಿಗೆ ಗೋಚರವಾಗುತ್ತದೆ. ಇಂತು ಪುಸ್ತಕಗಳು ಪ್ರಕೃತಿಯ ಅನುಕರಣವಾದರೂ ಅವು ನವನವೋನ್ಮೇಷಶಾಲಿ ನಿಯಾದುವು. ಮುಳುಗಿ ಮೂಡುವ ಸೂರ್ಯನ ಸಹವಾಸ ದಿನ ದಿನವೂ ಹೊಸತಾದುವೇ.

ಹೊಸ ಹೊತ್ತಗೆಯೊಂದನ್ನು ನೀನು ಓದಿದ ದಿನ ಹೊಸ ಹಿತ ಚಿಂತಕನೊಬ್ಬನು ನಿನ್ನ ಮನೆಗೆ ಬಂದನೆಂದು ತಿಳಿದುಕೊ. ಈ ಹಿತಚಿಂತಕನು ನಿನ್ನ ಆಸ್ತಿಯ ಪಾಲು ಬೇಡ ಬಂದವನಲ್ಲ. ಇವನು ನಿನ್ನ ಸುಖದ ಒಂದಂಶವನ್ನಾದರೂ ನಚ್ಚಿ ಬಂದವನಲ್ಲ. ಇಂದಲ್ಲ ನಾಳೆಯಾದರೂ ನಿನಗೆ ಬಂದೊದಗುವ ದುಃಖದಲ್ಲಿ ಸಮಭಾಗಿಯಾಗ ಬಯಸಿ ಬಂದಾತನಿವನು. ಕಾರಣ ನೀ ನನ್ನ ತಾಯಿಗೆ ಚಿಂತೆ ಮಾಡದಿರಲು ತಿಳಿಸು.

8th_Kannada_Reader Term I_U4-9.indd 61 18-06-2019 10.47.02 AM

ಹೊತ್ತಗೆಗಳಿಂದ ಸಾಂತ್ವನ ಕಂಡುಕೊಳ್ಳುವುದು ಸುಲಭ ಸಾಧ್ಯವಿಲ್ಲ. ಶಾಸ್ತ್ರ ಪ್ರಚಯ ಪರಿಚಯ, ವಿದ್ವತ್ ಸೇವಾನುರಾಗ, ಪ್ರಕೃತ್ಯುಪಾಸನೆಯ ಪುಣ್ಯದ ಫಲವಾಗಿ ಸತ್ಕೃತಿಯ ಆರಾಧನೆಯಿಂದ ಬಾಳಿನಲ್ಲಿ ಅನಿರ್ವಚನೀಯವಾದ ಆಹ್ಲಾದ ದೊರೆಯುವುದು. ಅದಕ್ಕಾಗಿ ನೀನು ಶ್ರಮಿಸಬೇಕು. ಹಿತಚಿಂತನೆಯ ಸೋಗು ಹಾಕಿಕೊಂಡು ಬಂದ ಗ್ರಂಥಕರ್ತರ ಮಾತಿಗೆ ಮರುಳಾಗದೆ ಜನಮನದ ಉದ್ಧಾರವನ್ನೇ ನಂಬಿ ಬರೆದ ಧರ್ಮ ನಿರತನಾದ ಕವಿಯನ್ನು ಕಂಡುಕೊಳ್ಳುವುದು ನಿನ್ನನ್ನೇ ಕೂಡಿಕೊಂಡಿದೆ.

ಪುಸ್ತಕ ಪ್ರಪಂಚದಲ್ಲೂ ದಲ್ಲಾಳಿಗಳ ಕೈವಾಡವಿರುತ್ತದೆ. ಸೂಳೆಗೇರಿಯೊಂದರಲ್ಲೇ ಅವರು ಇರುವುದಿಲ್ಲ. ಇಲ್ಲಿಯೂ ಕೂಡ ಅವರ ವ್ಯವಹಾರ ಸಾಗುತ್ತದೆ. ದಲ್ಲಾಳಿಯ ಹಣ ಹೆಚ್ಚಿಗೆ ಬಂದರೆ ತೀರಿತು. ಗಿರಾಕಿಯನ್ನು ತಮ್ಮ ಕಿಸೆಗೆ ಹಾಕಿಕೊಳ್ಳುವುದಕ್ಕೆ ಸಿದ್ಧರಾಗಿರುತ್ತಾರೆ. ಅಂತ ಮೋಸದಿಂದ ಪಾರಾಗುವುದನ್ನು ಬುದ್ಧಿಶಕ್ತಿಯಿಂದ ಕಲಿಯಬೇಕು. ಹೊತ್ತಗೆಯನ್ನು ಬೆಲೆಯಿಂದ ನಿರ್ಧರಿಸಬಾರದು. ಹಸುವನ್ನು ಕರೆದು ನೋಡಬೇಕು. ಹೊತ್ತಗೆಯನ್ನು ಓದಿ ನೋಡಬೇಕು. ಒಂದು ಹಾಲನ್ನು ಕರೆದರೆ, ಇನ್ನೊಂದು ರಕ್ತವನ್ನೇ ಸೂಸುವುದು. ಆ ರಕ್ತ ಸಂದೇಶದಲ್ಲಿ ನೀನು ಜೀವನದಿಂದಾಚೆಗಿರುವ ಜೀವನದ ಅಂತಿಮ ಗುರಿಯನ್ನೇ ಕಂಡುಕೊಳ್ಳುವಿ.

ಪುಸ್ತಕಗಳನ್ನು ಮನೆಯಲ್ಲಿ ಸಿಂಗಾರಕ್ಕೆಂದು ಇರಿಸುವವರು ಕೆಲವರು. ಜ್ಞಾನಾಡಂಬರವನ್ನು ಕೊಚ್ಚಿಕೊಳ್ಳುವುದಕ್ಕೋಸುಗ ಕೆಲರು ಇರಿಸುವರು. ಉಭಯ ಪಕ್ಷದವರಿಗೆ ಹೊತ್ತಗೆಗಳ ಉಪಯೋಗ ಗೊಡ್ಡು ಎಮ್ಮೆಯ ಕೊರಳೊಳಗಿನ ಗಂಟೆಯ ಹಾಗೆ ಇರುವುದು. ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಲೆಂದು ಹೊತ್ತಗೆಗಳನ್ನು ಮನೆಯಲ್ಲಿ ಇರಿಸುವವರದಿನ್ನೊಂದು ಪಕ್ಷ. ಇಂತಹವರಿಗೆ ಪುಸ್ತಕವೇ ಬಂಡವಾಳ. ತಾವು ಸಾಯುವಾಗ ಮಕ್ಕಳಿಗೆ ಬಿಟ್ಟು ಹೋಗುವ ಆಸ್ತಿಯೆಂದರೆ ಹೊತ್ತಗೆಗಳ ಭಂಡಾರವೇ ಸರಿ. ಕಲೋಪಾಸಕರ ಜೀವನದ ರಹಸ್ಯವನ್ನು ಅವರ ಸಾವಿನಲ್ಲಿ ನೋಡಬೇಕು ಎನ್ನುವ ಮಾತಿಗೆ ಇವರೇ ದೃಷ್ಟಾಂತ.

ಓದುಗನು ದೇಶದ ನಾಗರಿಕತೆಯ ದೇಗುಲವನ್ನು ಕಟ್ಟುವ ಉಪ್ಪಾರ. ಲೇಖಕನು ದೇಗುಲದೊಳಗಿನ ವಿಗ್ರಹವನ್ನು ಕಡೆಯುವ ಶಿಲ್ಪಿ. ಶಿಲ್ಪಿಯಲ್ಲಿ ಸಿದ್ಧಹಸ್ತವಿದ್ದರೆ ಶಿವನ ಸಾಕ್ಷಾತ್ಕಾರವಾಗುತ್ತದೆ. ಓದುಗನಲ್ಲಿ ಭಕ್ತಿಯಿದ್ದರೆ ನೆಲವೇ ನಾಕವಾಗುತ್ತದೆ. ರಾಷ್ಟ್ರದ ಸಂಸ್ಕೃತಿಯ ಇತಿಹಾಸವನ್ನು ಅಭ್ಯಸಿಸಬೇಕೆನ್ನುವವರು ಅದರ ಓದುಗರನು ಲೇಖಕರನ್ನು, ಹೊತ್ತಗೆಯ ಸೃಷ್ಟಿಯನ್ನು ಪರೀಕ್ಷಿಸಿ ನೋಡಲಿ.

ಕೃತಿ ಕರ್ತೃ ಪರಿಚಯ

ಈ ಗದ್ಯ ಭಾಗವನ್ನು ಹಿರೇಮಲ್ಲೂರ ಈಶ್ವರನ್ ಅವರ 'ಶಿವನ ಬುಟ್ಟಿ' ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಇವರು ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಇವರ ಕೆಲವು ಪ್ರಮುಖ ಕೃತಿಗಳು ವಿಷನಿಮಿಷಗಳು, ಹಾಲಾಹಲ, ರಾಜರಾಣಿ ದೇಲೋ, ಕನ್ನಡ ತಾಯ ನೋಟ, ಕವಿ ಕಂಡ ನಾಡು, ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕಥೆ ಮೊದಲಾದವು. ಸರಸವೂ, ಗಂಭೀರವೂ ನಿರರ್ಗಳವೂ ಆದ ಶೈಲಿ ಇವರದು.

ಪದಗಳ ಅರ್ಥ

ಹೊತ್ತಗೆ–ಪುಸ್ತಕ; ಸಂಚು–ಉಪಾಯ; ಅವ್ಯಾಜ–ಸಹಜ; ಅಭಯ–ಭಯವಿಲ್ಲದ; ಅಜ–ಬ್ರಹ್ಮ, ಜೀವ; ಬಣಜಿಗ–ವ್ಯಾಪಾರಿ; ಅರಸು–ಹುಡುಕು; ಖಗ–ಪಕ್ಷಿ; ಗೋಚರ–ಕಾಣು; ಅನುಕರಣ–ಹೋಲುವಿಕೆ; ನಚ್ಚು–ನಂಬು; ಸಾಂತ್ವನ–ಸಮಾಧಾನ; ಆಹ್ಲಾದ–ಸಂತೋಷ; ಸೋಗು–ವೇಷ; ಬಂಡವಾಲು–ಬಂಡವಾಳ, ಮೊದಲ ಹೂಡಿಕೆ, ಮೂಲಧನ; ಉಪ್ಪಾರ–ಉಪ್ಪು ತಯಾರಿಸುವವನು, ಒಂದು ಜಾತಿ; ನಾಕ–ಸ್ವರ್ಗ, ಆಹತ–ಹೊಡೆತ.

8th_Kannada_Reader Term I_U4-9.indd 62 18-06-2019 10.47.02 AM

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಪುಸ್ತಕಗಳು ಯಾವುದನ್ನು ಹಿಡಿದು ತೋರಿಸುತ್ತವೆ ?
2. ಕವಿಗೆ ಯಾವುದರ ಮೇಲೆ ಅಧಿಕ ಪ್ರೇಮ? ಕವಿ ಯಾರ ಅಪರಾವತಾರ ?
3. ರವಿ ಕಾಣದ್ದನ್ನು ಯಾರು ಕಾಣುತ್ತಾರೆ ?
4. ಬಾಳಿನಲ್ಲಿ ಅನಿರ್ವಚನೀಯವಾದ ಆಹ್ಲಾದ ಹೇಗೆ ದೊರೆಯುವುದು ?
5. ಉಭಯ ಪಕ್ಷದವರೆಂದು ಕವಿಯು ಯಾರನ್ನು ಸಂಬೋಧಿಸುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕವಿಯ ಮಹತ್ವವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?
2. ಸತ್ಕೃತಿಯ ಸಂಗ ಬಯಸುವವನು ಋಷಿಯನ್ನು ಹೇಗೆ ಹುಡುಕಬೇಕು ?
3. ಆಂಗ್ಲ ಪ್ರಬಂಧಕಾರನ ಹೆಸರೇನು ? ಅವನ ಮಾತುಗಳಾವುವು ?
4. ರಕ್ತ ಸಂದೇಶದ ತಾತ್ಪರ್ಯವನ್ನು ಬರೆಯಿರಿ.
5. ಕಲೋಪಾಸಕರ ಜೀವನದ ರಹಸ್ಯವನ್ನು ಅವರ ಸಾವಿನಲ್ಲಿ ನೋಡಬೇಕು – ಎಂಬ ಮಾತಿನ ಅರ್ಥವನ್ನು ವಿವರಿಸಿ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಅಜ, ರವಿ, ಹಸು, ಮನೆ, ನಾಕ, ಶವ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

   ವಜ್ರಾಹುತಿ, ಅಪರಾವತಾರ, ಭದ್ರಾಸನ, ಉತ್ತರೋತ್ತರ, ಜ್ಞಾನಾಡಂಬರ, ಕಲೋಪಾಸಕ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಆಸೆ, ಮೃದು, ನಾಕ, ಪುಣ್ಯ, ಸಾವು, ಉತ್ತರ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**

   ಬಂಧನ, ಕರ್ತವ್ಯ, ಪರಿಹಾರ, ಅನುಕರಣ, ಲೋಪದೋಷ, ಸಾಕ್ಷಾತ್ಕಾರ.

5. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಹೊತ್ತಗೆ, ಆಸೆ, ಋಷಿ, ರಾಜ, ಧ್ವನಿ, ಕವಿ.

ಚಟುವಟಿಕೆ

1. ನೀವು ನಿಮ್ಮ ನಿತ್ಯ ಜೀವನದಲ್ಲಿ ಕೇಳುವ ಕಾಣುವ ಹಾಸ್ಯಮಯ, ವೈಚಾರಿಕ ವಿಚಾರಗಳನ್ನು ಕುರಿತು ಪ್ರಬಂಧ ರಚಿಸುವ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಿರಿ.
2. ಹಿರೇಮಲ್ಲೂರು ಈಶ್ವರನ್ ಅವರ ಕೃತಿಗಳನ್ನು ಪುಸ್ತಕಾಲಯದಿಂದ ಪಡೆದು ಓದಿರಿ.



8th_Kannada_Reader Term I_U4-9.indd 63 18-06-2019 10.47.02 AM

ಉಪಪಠ್ಯ


ಘಟಕ ನಾಲ್ಕು

ಸಪ್ತಾಕ್ಷರೀ ಮಂತ್ರ

– ಮುದ್ದಣ



ಸಾಹಿತ್ಯಕ್ಕೆ ಸಾವಿಲ್ಲ. ಉತ್ತಮ ಸಾಹಿತ್ಯ ನಿರಂತರವಾಗಿ ವಿಶ್ವದೆಲ್ಲೆಡೆ ಹರಿದಾಡುತ್ತಿರುತ್ತದೆ. 19ನೇ ಶತಮಾನದ ಆದಿಯಲ್ಲಿ ವ್ಯಾಯಾಮ ಶಿಕ್ಷಕನೊಬ್ಬ ಮುದ್ದಣನೆಂಬ ನಾಮದಲ್ಲಿ ಗದ್ಯಪದ್ಯಗಳ ಮಿಶ್ರಣದೊಂದಿಗೆ ಹಳೆಗನ್ನಡ ಲೇಪವನ್ನು ಹಚ್ಚಿ ನಾಟಕೀಯವಾಗಿ ಅತ್ಯುತ್ತಮ ಕಾವ್ಯಗಳನ್ನು ರಚಿಸಿದ ರೋಚಕ ವಿಚಾರ ಎಲ್ಲರೂ ತಿಳಿದಿರುವುದು ತಾನೇ? ಎಂತಹ ಕಷ್ಟಗಳಿದ್ದರೂ ಮನಸ್ಸನ್ನೇ ಸುಡುವ ಚಿಂತೆಯಿದ್ದರೂ, ನವಿರಾದ ಹಾಸ್ಯವು ಅದನ್ನು ಸ್ವಲ್ಪ ಕಾಲವಾದರೂ ಮರೆಯಿಸುವ ಶಕ್ತಿಯನ್ನು ಪಡೆದಿದೆ. ಸರಸ ಸಂಭಾಷಣೆಗಳಲ್ಲಿ ನಕ್ಕು ನಗಿಸುವ ಧರ್ಮ ಹಾಸು ಹೊಕ್ಕಾಗಿರುತ್ತದೆ ಎಂಬುದರ ರುಚಿಯನ್ನು ಉಣಿಸಲೋಸುಗವೇ ಈ ಪಠ್ಯಭಾಗವನ್ನು ನೀಡಲಾಗಿದೆ. 'ನಗೆ' ಎಂಬುದು ಮಾನವನನ್ನು ಗೆಲುವಿನ ಹಾದಿಗೆ ತರುವ ದಿವ್ಯೌಷಧ ತಾನೆ!



8th_Kannada_Reader Term I_U4-9.indd 64 18-06-2019 10.47.02 AM

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಯಜ್ಞ ತುರಂಗಂ ಅರಣ್ಯಕನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದಂ ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆಱಗಿದರ್, ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದಗೋಷ್ಠಿಯೊಳ್.....

ಮನೋರಮೆ : ಎನ್ನ ಚೆನ್ನಿಗ! ಆತಿಥ್ಯಮೆಂದೊಡೇಂ? ಬಜೆದೆ ಬಾಯುಪಚಾರಮೆ?

ಮುದ್ದಣ : ಅಲ್ತಲ್ತು, ಬಾಯುಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಟಿನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು.

ಮನೋರಮೆ : ಅಂತಿರ್ಪುದುಂ, ಶತ್ರುಘ್ನನ ಸಾಯಿರ ಸಾಯಿರ ಲೆಕ್ಕದಿನಿವಿರಿದು ಪಡೆಗರಣ್ಯಕಂ ಕೂಟ್ಟೀರಿತ್ತು ಸಮ್ಮನಿಸಿದನೆ ?

ಮುದ್ದಣ : ಅಪ್ಪುದಪ್ಪುದು. ಅನಿಬರುಮಂ ಯಥೇಚ್ಛಂ ಮೃಷ್ಟಾನ್ನ ಭೋಜನದಿಂ ತಣಿಪಿದಂ.

ಮನೋರಮೆ : ಎನಗಿದಚ್ಚರಿ. ಎಂತುಟಾರ್ತರ್ಂ?

ಮುದ್ದಣ : ಏಂ, ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ? ಬೇಡಿದ ಪುರುಳನುೞಿದಿಂ ತಂದೀಗುಂ.

ಮನೋರಮೆ : ಅಂತುಂಟೇಂ ಗಡಾ! ಆವುದೋ ಮಂತ್ರಂ?

ಮುದ್ದಣ : ಆವುದೇಂ? ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಾಕ್ಷರಿ, ಪಂಚಾಕ್ಷರಿ, ಷಡಕ್ಷರಿ ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ!

ಮನೋರಮೆ : ಇವರಂ ಜಪಿಸಿದೊಡೇನಕ್ಕುಂ?

ಮುದ್ದಣ : ಈ ಮಂತ್ರಂಗಳಂ ಬಿಡದೆ ಜಪಿಸಿ ಸಿದ್ಧಿವಡೆದೊಡೆ ತತ್ತದಭಿಮಾನಿ ದೇವತೆಗಳ್ ಮೆಯ್ದೋಜೆಯುಮೆಳಸಿದರ್ಥಮನಿತ್ತು ಪೋಕುಂ!

ಮನೋರಮೆ : ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಂ ಪೆೞತೊಂದೞ ಗೊಡವೆಯಿಲ್ಲದಿರ್ಕುಂ ತಾಪಸರ್.

ಮುದ್ದಣ : ಅಪ್ಪುದಪ್ಪುದು, ತಪ್ಪೇಂ?

ಮನೋರಮೆ : ಅಂತದಿರ್ಕೆ ನಿನ್ನನ್ನರಪ್ಪ ಕಬ್ಬಿಗರ್ ಮನೆವಾಟ್ಗೆಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾಟ್ಗತೆಯ ಕಬ್ಬದೊಳೇವೋಟ್ಟುಂ ಬೆಮೆಗೊಂಡಿರ್ಪರಲ್ತೇ? ಅವರ್ಗೇಂ ಬಟ್ಟೆಯೊ? ಉಣಲೇಂ, ತಿನಲೇಂ? ಅಂತಿರೊಂದು ಜಪಮಂ ಪಿರಿಯದವಸಿಗಳತ್ತಣಿನುಪ ದೇಶಂಗೊಂಡೊಡಾಗದೆ?

ಮುದ್ದಣ : (ಮುಗುಳ್ನಗೆಯಿಂ) ಏಂ, ಎಮ್ಮವರೊಂದಿರವಿಗೆ ನಗುವಾ? ಆಂ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊೞತೆಯೊ! ತಾನೆ ಬಯಸಿದೊಡಮೆಯನಾಗಳೆ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳಿರದೊಡಲ್ತೆ ಕಾಡ ಜೋಗಿಗಳತ್ತಣಿನುಪದೇಶಂ! ನಾಡಂ ಕಾಡಂ, ಕಾಡಂ ಬೀಡಂ ಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಕಕ್ಕುಲಿತೆಯ ಮುದು ದವಸಿಗಳತ್ತಣಿಂ ಪಿರಿಯರಾಗರೆ? ನುಡಿವರೇನದುವೆ ಪುರುಳ್, ಪಿಡಿವರೇನದುವೆ ತಿರುಳ್! ಪಲವೇಂ, ಕೆಲವೇಂ? ತಮ್ಮೊಂದೆ ನುಡಿಯ ಬಲ್ಮಿಂ ಮೂಜಗಮುಮಟೆಯಿಸುವ ಪೊಗೞ್ವ ಕೊಳ್ವಾೞ್ವ ತಾೞ್ವ ತೂೞ್ವ ಪೂಟ್ವಿ ಪೇಟ್ವಿ ಬಾಟ್ವಿ ಸಿಂಗರದ ಬಣ್ಣಗಬ್ಬಿಗರೆಮ್ಮ ತೆಱನನಿನ್ನುಂ ನೀನಱಿಯಯ್.

ಮನೋರಮೆ : (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ?

ಮುದ್ದಣ : ತಡೆಯೇನಳ್ಕೇಂ?

ಮನೋರಮೆ : ನಿನ್ನೊಳಮೊಳವೆ?

ಮುದ್ದಣ : ಇನ್ನೊಳಿಂತಿದು ಪಾಸುವೊಕ್ಕು...

ಮನೋರಮೆ : ಆಃ! ನೀನುಂ ಬಲ್ ಮೈಮೆಗಾೞಂ. ನಿನಗಾರತ್ತಣಿನೆಂದುಪದೇಶಮಾಯ್ತು?

ಮುದ್ದಣ : ಗುರುವತ್ತಣಿನಿಂದೆಳವೆಯೊಳೆ

ಮನೋರಮೆ : ಎನ್ನೆೞಿಯ, ಅದಾವುದೊ ಮಂತ್ರಮೆನ್ನೊಳುಸಿರ !

ಮುದ್ದಣ : ಆಃ! ಆಃ! ಒಳ್ಳಿತೊಳ್ಳಿತು! ಮಂತ್ರಂ ಗಡ ! ತನಗೊರೆದುದು ಗಡ! ಚಿಃ! ಚಿಃ! ಪೆಣ್ಗಳ್ಗೀ ಮಂತ್ರೋಪದೇಶಂ ಸಲ್ವುದೇ?

8th_Kannada_Reader Term I_U4-9.indd 65 18-06-2019 10.47.02 AM

ಮನೋರಮೆ : ಆನಜೆಯೆನೆ ! ನಿನ್ನತ್ತಣಿನುಪದೇಶಂ ಬೇಡುವೆನೆ? ನೀನಾಗಳೆಂದಮಂತ್ರಂಗಳೊಳಾವುದದಱ ಪೆಸರೇನೆಂದೆ ಕೇಳ್ದೆಂ.

ಮುದ್ದಣ : ಆಗಳೆಂದ ಮುನಿಗಳ ಮಂತ್ರಂಗಳೊಳಲ್ತು, ಎಮ್ಮ ಮಂತ್ರಂಗಳ ಬಗೆ ಬೇಱೆ. ಮೂಱೆರಡಕ್ಕರದ ಮಂತ್ರಂಗಳೆಮಗಕ್ಕುಮೆ? ಎಮ್ಮತಂತು ಕಿಱಿದಲ್ತು, ಬಲ್ಪಿರಿದು. ಒಂದಕ್ಕರಮಲ್ತೆರಡಲ್ತು, ಮೂಱಲ್ತು ನಾಲ್ಕೈದಲ್ತು, ಆಱುಮಲ್ತು... ಏಱಿಕ್ಕರದ ಬೀಜ ಮಂತ್ರಂ. ಅಂತದಱಿಂ ಸರ್ವಮಂತ್ರಂಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀ ಮಂತ್ರಮೆಂದು ಪೆಸರ್.

ಮನೋರಮೆ : ಹಾಹಾ! ಆ ಮಂತ್ರಕ್ಕಭಿಮಾನಿದೇವತೆ ಯಾವುದು? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್?

ಮುದ್ದಣ : ಪೋ ಪೋ! ಇಂತಿವಱಂ ಕೊಂಡೇಂ ಕಜ್ಜಂ?

ಮನೋರಮೆ : ಇರ್ಕೆ, ಕೇಳ್ದೆಂ.

ಮುದ್ದಣ : ಅಂತಾದೊಡೆ ಕೇಳ್, ಪೇೞ್ದೆಂ. ಇಂತೇರ್ಪಟ್ಟ ಮಂತ್ರದಧಿದೇವತೆ ಜ್ಯೇಷ್ಠೆ. ಮುನ್ನಮಿಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನಂತದಱಿನಾತನೆ ಋಷಿ.

ಮನೋರಮೆ : ಓ! ಓ...! ಇಂತುಟೆ ಮಂತ್ರದೊಂದು ಮೈಮೆ! ಎಲೆ ರಮಣ! ನಿನ್ನಡಿಗಳ್ಗೆಱಗುವೆಂ. ಎನ್ನತಿನಿತೊಂದು ಬಿನ್ನಪಂ. ಅಂತು ಸಂದ ಸಿದ್ಧಿಯ ಮಂತ್ರವಾವುದೊ ಕೂರ್ಮೆಯ ತಿಳಿಯೆ ಪೇೞ್.

ಮುದ್ದಣ : ಆಗಳೆ ಪೇೞ್ದಿನಲ್ತೆ ಸಪ್ತಾಕ್ಷರೀ ಮಂತ್ರಂಮೆಂದು...

ಮನೋರಮೆ : ಅಂತು ಪೆಸರನಲ್ತು. ಮೂಲಮನೆ ಕುಱಿತೆನ್ನೊಳಾಡಿ ತೋಱಿ.

ಮುದ್ದಣ : ಅಬ್ಬಾ! ಪೆಣ್ಣೇಂ ಗಡುಸುಗಾರ್ತಿಯೊ! ಆಗಳ್ ಪೆಸರೇನೆಂದಳ್; ಈಗಳ್ ಮೂಲಮಂ ಕೇೞ್ವಳ್. ಇನ್ನೇವಳೋ? ಮೂಱಱಿಯ ಜನ್ನದಾರದಾಣೆ! ಉತ್ತರಿಗೆಯಾಣೆ! ಆಗದಾಗದು. ಕೇೞ್ವುದರ್ಕೆ ಪೇೞ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು.

ಮನೋರಮೆ : ಕಿವಿಯಿಂ ಕೇೞ್ವುದಱೊಳೇಂ ದೋಸಂ? ಅಂತೇರ್ಪಟ್ಟ ವೇದಮನಾದೊಡಮೊ ೀದುವೆಡೆಯೊಳ್ ಕೇಳದೆ ಪೆಣ್? ನಿನ್ನೊಳಮೇಂ ಜಂಬಮೋ!

ಮುದ್ದಣ : ವೇದಮಂತ್ರದ ಬಗೆ ಬೇಱೆ. ಇದಱ ಪರಿ ಬೇಱೆ. ಅಜಗಜಾಂತರಂ. ಅದಱೊಳಂ 'ಗೂಢಾದ್ಗೂಢ ತರಂ ಮಂತ್ರಂ' ಎಂದು ಪೇೞ್ದುದುಂಟು. ಅದು ಕಾರಣ ನಾಂ ಪೇೞಲಾಗದು, ನೀಂ ಕೇಳಲುಮಾಗದು. ಮುಂತಣ ಕತೆಯಂ ಕೇಳ್. ಮತ್ತಮರಣ್ಯಕಂ ಶತ್ರುಘ್ನಾದ್ಯರೊಳ್...

ಮನೋರಮೆ : ತೆಗೆ ತೆಗೆ! ನಿನ್ನ ಮುಂಗತೆಯಂ ವಿತೆಯಂ. ಅದೇಂ ಮಂತ್ರಮೊ ಕೇಳ್ವೆಂ. ಕೊರಲಾಣೆ, ಉಂಗುರದಾಣೆ, ಪೇೞ್ದಿಲ್ಲದೆ ಬಿಡೆಂ – ಎಂದು ಮೆಯ್ಯಿಕ್ಕುವಳ್.

ಮುದ್ದಣ : ಏಂ ಚಲಮೋ ಚಪಳೆಗೆ! ಪೇೞೆನೆಂದೊಡೆ ಕೇಳಳ್! ಆಃ! ಪೆಱರೊಳೊರೆದೆಮ್ಮೀ ಬೀಜಮಂತ್ರಮನೆಂದು ಪೊಲೆಗಿಡಿಪೆನೊ! ಚಿಃ! ಎಳವೆಂಡಿರ ಕೈಯೊಳಿರ್ಪ ಕಬ್ಬಿಗರ ಬಾಟಿಕೆಯೆ ದೂಷ್ಯಂ(ಎಂದು ನೀಡುಂ ಭಾವಿಸಿ) ಎಲೆ ಪೆಣ್ಣೇ! ನೀನಾರೊಳಮೆಂದೆಂದಿಂಗುಮುಸಿರಲ್ಬಾರದು, ಜೋಕೆ!

ಮನೋರಮೆ : ಎಂದುಮೆಂತುಮುಸಿರೆನಾಡೆಂ.

ಮುದ್ದಣ : ಅಂತಾದೊಡಿಂತಿದು, ಕೇಳ್... ಭ...ವ... ಪೆಱರೊಳಾಡೆನೆಂಬ ನಂಬುಗೆಯ್ಯಂ ಪೊಯ್

ಮನೋರಮೆ : ಇದೊ... ಪಿಡಿ ನಂಬುಗೆಯ್ಯಂ. ನಿನ್ನಾಣೆ, ಕುಲದೈವದಾಣೆ! ಎಂದುಂ ಪೆಱವರೊಳೊರೆಯೆಂ.

ಮುದ್ದಣ : ಉಂ! ಭವತಿ..... ಭಿ..... 'ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಟ್ ಪಾಟಿಕ್ಕುಂ

ಮನೋರಮೆ : ಆನೇಂ ಮೋಡೆಯೆ? ಪೋ! ತನ್ನಾಣೆ, ಕಣ್ಣಾಣೆ ಕೇಳ್ವೆಂ.

ಮುದ್ದಣ : (ಎಕ್ಕಟಿಯೊಳ್) 'ಭವತಿ ಭಿಕ್ಷಾಂದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ. ಆರೊಳಾನುಮುಸಿರದಿರ್.

8th_Kannada_Reader Term I_U4-9.indd 66 18-06-2019 10.47.02 AM

ಮನೋರಮೆ : (ಅರೆ ಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಮಿಕ್ಕುಮೆಂದೇ ಬಗೆದೆಂ. ಈ ತೆಱನ ಮಾಟದ ಕವಡು ನುಡಿಯ ಕೊಂಕೆಂಬುದನಱಿಯದಾದೆಂ. ನೀಂ ಕಬ್ಬಿಗನೊ, ಸಬ್ಬವಕಾಱನೋ? ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ ಜಾಣಿಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?

ಮುದ್ದಣ : ಸಾಲ್ಗುಮೀ ಪರಿಹಾಸಂ. ಮುಂಗತೆಯಂ ಕೇಳ್...

ಕೃತಿ ಕರ್ತೃ ಪರಿಚಯ



ಸಪ್ತಾಕ್ಷರೀ ಮಂತ್ರ ಎಂಬ ಈ ಗದ್ಯಭಾಗವನ್ನು ಮುದ್ದಣನೆಂದು ಪ್ರಸಿದ್ಧನಾಗಿರುವ ನಂದಳಿಕೆ ಲಕ್ಷ್ಮೀನಾರಣಪ್ಪನೆಂಬುವನು ಬರೆದ 'ರಾಮಾಶ್ವಮೇಧ' ಎಂಬ ಗದ್ಯ ಕಾವ್ಯದಿಂದ ಆರಿಸಿಕೊಳ್ಳಲಾಗಿದೆ. ಕವಿಯ ಸ್ಥಳ, ಉಡುಪಿ ತಾಲೂಕಿನ ನಂದಳಿಕೆ. ಕ್ರಿ.ಶ. 1870ರಲ್ಲಿ ಇವನು ಜನಿಸಿದನು. ಇವನು ಉಡುಪಿಯ ಪ್ರೌಢಶಾಲೆಯಲ್ಲಿ ವ್ಯಾಯಾಮ ಶಿಕ್ಷಕನಾಗಿದ್ದನು. ರತ್ನಾವತೀ ಕಲ್ಯಾಣ, ಕುಮಾರ ವಿಜಯ ಎಂಬ ಎರಡು ಯಕ್ಷಗಾನಗಳನ್ನೂ, ಅದ್ಭುತ ರಾಮಾಯಣ, ರಾಮ ಪಟ್ಟಾಭಿಷೇಕ, ರಾಮಾಶ್ವಮೇಧ ಎಂಬ ಮೂರು ಹಳಗನ್ನಡ ಕಾವ್ಯಗಳನ್ನೂ ಇವನು ಬರೆದಿದ್ದಾನೆ. ಇವುಗಳಲ್ಲಿ ರಾಮಪಟ್ಟಾಭಿಷೇಕವು ವಾರ್ಧಕ ಷಟ್ಪದಿಯಲ್ಲಿ ಬರೆದ ಪದ್ಯಕಾವ್ಯ. ಉಳಿದೆರಡೂ ಹಳಗನ್ನಡದ ಗದ್ಯಕಾವ್ಯಗಳು. ಈ ಕಾವ್ಯಗಳಲ್ಲಿ ರಾಮಾಶ್ವಮೇಧ ತುಂಬ ಪ್ರಸಿದ್ಧವಾಗಿದೆ.

ಶ್ರೀರಾಮನು ಬ್ರಹ್ಮವಂಶಜನಾದ ರಾವಣ ಹಾಗೂ ಅವನ ಬಂಧುಗಳನ್ನು ಕೊಂದ ಪಾಪ ಪರಿಹಾರಕ್ಕಾಗಿ ಅಶ್ವಮೇಧ ಯಾಗವನ್ನು ಮಾಡಲು ನಿರ್ಧರಿಸುತ್ತಾನೆ. ಯಾಗ ಕುದುರೆಯ ಬೆಂಗಾವಲಿಗಾಗಿ ಶತ್ರುಘ್ನನು ಸೇನಾ ಸಮೇತ ಬರುತ್ತಾನೆ. ಆ ಯಜ್ಞ ತುರಗವು ದೇಶ ದೇಶಗಳಲ್ಲಿ ಸಂಚರಿಸುತ್ತಾ ಅರಣ್ಯಕ ಮುನಿಯ ಆಶ್ರಮಕ್ಕೆ ಬರುವುದು. ಆ ಮುನಿಯು ರಾಮನ ಸೈನ್ಯವನ್ನು ಸತ್ಕರಿಸಿ ಅವರೆಲ್ಲರಿಗೂ ಊಟೋಪಚಾರಗಳನ್ನು ಮಾಡಿಸುವನು. ಕಾಡಿನ ಬಡ ಜೋಗಿಯಾದವನು ಅಪಾರ ಸೈನ್ಯ ಸಮೂಹಕ್ಕೆ ಆಹಾರವನ್ನಿತ್ತು, ಸತ್ಕರಿಸಲು ಸಾಧ್ಯವೇ? ಎಂಬ ಮನೋರಮೆಯ ಮಾತೇ ಮುಂದಿನ ಸಂಭಾಷಣೆಗೆ ನಾಂದಿಯಾಗಿದೆ.

ಪ್ರಕೃತ ಗದ್ಯ ಭಾಗದಲ್ಲಿರುವ ಮುದ್ದಣ ಮನೋರಮೆಯರ ಸಂವಾದದಲ್ಲಿ ಸಪ್ತಾಕ್ಷರೀ ಮಂತ್ರದ ಶ್ರೇಷ್ಠತೆಯ ಮಂತ್ರದಿಂದ ಗ್ರಂಥಕರ್ತನು ಕವಿಗಳ ಹಾಗೂ ತನ್ನ ದಾರಿದ್ರ್ಯವನ್ನು ತಿಳಿಸಿದ್ದಾನೆ. ಕುತೂಹಲಕಾರಿಯಾಗಿಯೂ, ಹೊರಗೆ ಹಾಸ್ಯಮಯವಾಗಿಯೂ ಇದು ತೋರಿದರೂ, ಒಳಗೆ ದಾರುಣ ವ್ಯಥೆಯೂ ಅಡಗಿ ಕರುಣ ರಸ ಅಂತರ್ಗತವಾಗಿ ಹರಿಯುವುದನ್ನು ಇಲ್ಲಿ ಕಾಣಬಹುದು.

ಪದಗಳ ಅರ್ಥ

ಕಿತ್ತಡಿ–ಋಷಿ; ಅಭ್ಯಾಗತ–ತಾನಾಗಿ ಬಂದನು, ಅತಿಥಿ; ವಿನೋದ–ತಮಾಷೆ, ಬಿನದ(ದ್ಭ); ಗೋಷ್ಠಿ–ಗೊಟ್ಟಿ(ದ್ಭ); ಸವಿಗೂಟ್–ಸವಿಯಾದ ಊಟ; ಬಾವನ್ನ–ಶ್ರೀಗಂಧ, ಚಂದನ; ಸಾಯಿರ–ಸಾಸಿರ, ಸಾವಿರ, ಸಹಸ್ರ(ದ್ಭ); ಆರ್ಥ–ಸಮರ್ಥ; ಬಲ್ಮೆ–ಶಕ್ತಿ; ಪುರುಳ್–ಹುರುಳು; ವೈೞ್ಯಂ+ತೋರು(ಕ್ರಿ.ಸ)–ವೈದೋರು, ಕಾಣಿಸಿಕೊಳ್ಳು; ಎಳಸಿದ–ಬಯಸಿದ, ಅಪೇಕ್ಷಿಸಿದ; ಕಬ್ಬ–ಕಾವ್ಯ(ದ್ಭ); ಏವೊೞ್ತುಂ–ಯಾವಾಗಲೂ, ಸದಾ; ಕೆಮ್ಮನೆ–ಸುಮ್ಮನೆ; ಬೆಮೆ–ಭ್ರಮೆ, ಭ್ರಾಂತಿ; ತವಸಿ–ತಪಸ್ವಿ; ಕಕ್ಕುಲಿತೆ–ಪ್ರೀತಿ, ಆಸೆ; ಎಱೆಯ–ಒಡೆಯ; ತಾಳ್–ಧರಿಸು; ತೂಳ್–ಹಾರಿಸು;

8th_Kannada_Reader Term I_U4-9.indd 67 18-06-2019 10.47.02 AM

ಬೀಜಮಂತ್ರ–ಮೂಲಮಂತ್ರ; ಜೇಷ್ಯೆ–ದರಿದ್ರ ದೇವತೆ, ಲಕ್ಷ್ಮಿಯ ಅಕ್ಕ; ಕೂರ್ಮೆ–ಪ್ರೀತಿ; ಏವಳೋ–ಏನು ಮಾಡುವಳೋ; ಅಜ–ಆಡು, ಬ್ರಹ್ಮ; ಗೂಢ–ರಹಸ್ಯ; ಮೋಡೆ–ಬುದ್ಧಿಯಿಲ್ಲದವಳು; ಎಕ್ಕಟಿ–ಏಕಾಂತ; ಭವತಿ–ನನಗೆ; ದೇಹಿ–ಕೊಡು, ನೀಡು; ನಿಕ್ಕುವ–ನಿಶ್ಚಯ; ಸಬ್ಬವಕಾಜಿ–ಹಾಸ್ಯಗಾರ; ಜಾಣ್–ಜಾಣತನ; ಸಾಲ್ಗುಂ–ಸಾಕು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಅರಣ್ಯಕ ಮುನಿಯು ಶ್ರೀರಾಮನ ಸೈನಿಕರಿಗೆ ಮಾಡಿದ ಉಪಚಾರ ಏನು ?
2. ಮಂತ್ರ ಸಿದ್ಧಿ ನನ್ನಲ್ಲಿಯೂ ಇದೆ ಎಂಬುದಕ್ಕೆ ಮುದ್ದಣನು ಹೇಳಿದ ಮಾತುಗಳೇನು ?
3. ಮುದ್ದಣನು ಕವಿಗಳನ್ನು ಹೊಗಳಿರುವ ಬಗೆಯನ್ನು ವಿವರಿಸಿರಿ ?
4. ಕವಿಗಳಿಗೆ ಸಿದ್ಧಿಸಿರುವ ಮಂತ್ರವನ್ನು ಮುದ್ದಣನು ಹೇಗೆ ವರ್ಣಿಸಿದ್ದಾನೆ ?
5. ಮುದ್ದಣ – ಮನೋರಮೆಯರ ಸಂಭಾಷಣೆಯ ಸಾರಾಂಶವನ್ನು ಬರೆಯಿರಿ?

ಚಿಂತನೆಗಳು

ದ್ವೇಷ ಸಾಧಿಸುವವನು ಮನುಷ್ಯನೇ ಅಲ್ಲ – **ಪ್ಲೇಟೋ**

ಹುಟ್ಟು ನಿನ್ನ ಕೈಯಲ್ಲಿಲ್ಲ, ಆದರೆ ಬದುಕು ನಿನ್ನ ಕೈಯಲ್ಲೇ ಇದೆ – **ಸಾಕ್ರೆಟೀಸ್**

ಎಲ್ಲರ ಸಾರ್ಥಕ ಜೀವನ ಮಟ್ಟವು ಅವರ ಸಾಧನೆಯ ಮಟ್ಟವನ್ನು ಅವಲಂಬಿಸಿದೆ – **ವಿಲಿಯಂ ಷೇಕ್ಸ್‌ಪಿಯರ್**

ನುಡಿದರೆ ಮುತ್ತಿನ ಹಾರದಂತಿರಬೇಕು – **ಬಸವಣ್ಣ**

ಕೋಪವು ದಡ್ಡತನದಲ್ಲಿ ಹುಟ್ಟಿ, ಪಶ್ಚಾತ್ತಾಪದಲ್ಲಿ ಕೊನೆಗೊಳ್ಳುತ್ತದೆ – **ಪೈಥಾಗೊರಸ್**

ವ್ಯಕ್ತಿಯ ಸ್ವಭಾವವನ್ನು ಅವರ ಮಾತು ಹೇಳುತ್ತದೆ – **ಅರಿಸ್ಟಾಟಲ್**

ಒಂದು ಹೃದಯವನ್ನು ಅರ್ಥ ಮಾಡಿಕೊಳ್ಳಲು ಇನ್ನೊಂದು ಹೃದಯದಿಂದ ಮಾತ್ರ ಸಾಧ್ಯ – **ಗೌತಮ ಬುದ್ಧ**

ನಮ್ಮ ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನಾವೇ ಎಂಬುದು ಖಂಡಿತ – **ಗಯಟೆ**

ದೇಶದಲ್ಲಿರುವವರೆಲ್ಲರೂ ದೇಶಪ್ರೇಮಿಗಳಾದರೆ, ಪರಕೀಯರ ದಾಳಿ ಅಸಾಧ್ಯ – **ಸುಭಾಷ್‌ಚಂದ್ರ ಬೋಸ್**

ಸತ್ಯದಿಂದ ಜ್ಞಾನಾನಂದಗಳು ಲಭಿಸುತ್ತವೆ – **ಗಾಂಧೀಜಿ**

ಶ್ರೀಮಂತಿಕೆಗಿಂತ ಹೃದಯವಂತಿಕ ಮೇಲು – **ಸಾಕ್ರೆಟೀಸ್**

ಮುಂದಿನ ಜಗತ್ತಿನ ಒಳಿತಿಗೆ ಹಿಂದಿನ ಇತಿಹಾಸ ದಾರಿದೀಪ – **ಅಂಬ್ರೋಸ್ ಭೈರಸ್**

ಮಾನವನ ಅಮಾನವೀಯತೆಯೇ ಅನೇಕ ಅನಾಹುತಗಳಿಗೆ ಕಾರಣ – **ವಿಲಿಯಂ ಬ್ಲೇಕ್**

ಶ್ರೇಷ್ಠ ಮಾನವನ ಬದುಕಿನ ಗುರಿಯೇ ಸತ್ಯದ ಆಚರಣೆ – **ಕನ್‌ಫ್ಯೂಷಿಯಸ್**

ಸಂತೋಷ ಎಲ್ಲರಿಗೂ ಬೇಕು. ಆದರೆ ಅದಕ್ಕಾಗಿ ಯಾರೂ ಕಷ್ಟ ಪಡಲು ಸಿದ್ಧರಿಲ್ಲ – **ಮಹಾವೀರ**

ಸತ್ಯವಂತರು ಸದಾ ಸರ್ವ ಸ್ವತಂತ್ರರು – **ಬೈಬಲ್**

ಜೀವನದ ಬೆಂಗಾಡಿನಲ್ಲಿ ಬೀಸುವ ತಂಗಾಳಿಯೆಂದರೆ ಸ್ನೇಹ ಒಂದೇ.

8th_Kannada_Reader Term I_U4-9.indd 68 18-06-2019 10.47.03 AM

ಘಟಕ ನಾಲ್ಕು

ವಿಭಕ್ತಿ ಪ್ರತ್ಯಯಗಳು ಮತ್ತು ವಾಕ್ಯಗಳು

ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮೇಲೆ ಕರ್ತೃ, ಕರ್ಮ, ಹರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ ಎಂಬ ಏಳು ಕಾರಕಾರ್ಥಗಳಲ್ಲಿ ಸೇರುವ ಏಳು ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಹೆಸರು.

ಉದಾಹರಣೆ: ಮರದಲ್ಲಿ ಎಂಬ ಪದದಲ್ಲಿ ಮರ+ದ+ಅಲ್ಲಿ – ಎಂಬ ಮೂರು ಅರ್ಥವತ್ತಾದ ಕನಿಷ್ಠತಮ ಘಟಕಗಳಿವೆ. ಮರ=ನಾಮಪ್ರಕೃತಿ; ದ=ಪ್ರಾತಿಪದಿಕ ರಚಕ(ನಾಮಪ್ರಕೃತಿಗೆ ಪ್ರತ್ಯಯಗಳನ್ನು ನೇರವಾಗಿ ಹಚ್ಚಲು ಸಾಧ್ಯವಿಲ್ಲದ ಕಡೆ ಮಾತ್ರ ಇಂತಹ ಪ್ರಾತಿಪದಿಕ ರಚಕಗಳ ಬಳಕೆಯಾಗುತ್ತದೆ); ಅಲ್ಲಿ=ವಿಭಕ್ತಿ ಪ್ರತ್ಯಯ.

ಈ ಕೆಳಗಿನ ಪಟ್ಟಿಯಲ್ಲಿ ಪೂರ್ಣ ವಿವರವನ್ನು ನೀಡಲಾಗಿದೆ.

ವಿಭಕ್ತಿಗಳು	ವಿಭಕ್ತಿ ಪ್ರತ್ಯಯಗಳು	ಕಾರಕಾರ್ಥ	ಉದಾ : 'ರಾಮ' ಪ್ರಕೃತಿ	
			ಏಕವಚನ	ಬಹುವಚನ
ಪ್ರಥಮಾ	ಉ	ಕರ್ತೃ	ರಾಮ (ರಾಮನು)	ರಾಮರು
ದ್ವಿತೀಯಾ	ಅನ್ನು	ಕರ್ಮ	ರಾಮನನ್ನು	ರಾಮರನ್ನು
ತೃತೀಯಾ	ಇಂದ	ಕರಣ	ರಾಮನಿಂದ	ರಾಮರಿಂದ
ಚತುರ್ಥಿ	ಗೆ, ಕ್ಕೆ, ಇಕ್ಕೆ	ಸಂಪ್ರದಾನ	ರಾಮನಿಗೆ	ರಾಮರಿಗೆ
ಪಂಚಮೀ	ದೆಸೆಯಿಂದ	ಅಪಾದಾನ	ರಾಮನ ದೆಸೆಯಿಮದ	ರಾಮರ ದೆಸೆಯಿಂದ
ಷಷ್ಟೀ	ಅ	ಸಂಬಂಧ	ರಾಮನ	ರಾಮರ
ಸಪ್ತಮೀ	ಅಲ್ಲಿ	ಅಧಿಕರಣ	ರಾಮನಲ್ಲಿ	ರಾಮರಲ್ಲಿ

ವಾಕ್ಯಗಳು

ಮಾತು ಪದಗಳಿಂದ ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ. ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ ವಾಕ್ಯ. ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗ ಮಾತ್ರ ವಾಕ್ಯ ಎನ್ನಿಸಿಕೊಳ್ಳುತ್ತದೆ.

ಈ ವಾಕ್ಯಗಳನ್ನು ಗಮನಿಸಿ : 1. ಜಿಂಕೆ ಹುಲ್ಲನ್ನು ತಿಂದಿತು, 2. ಕೃಷ್ಣ ಧೇನುಕಾಸುರನನ್ನು ಕೊಂದ.

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಆದರೆ ಪ್ರತಿಯೊಂದು ವಾಕ್ಯದಲ್ಲಿರುವ ಯಾವುದಾದರೂ ಒಂದು ಪದ ಇಲ್ಲವಾದಲ್ಲಿ ಆ ವಾಕ್ಯ ಪೂರ್ಣ ಅರ್ಥ ಕೊಡದೆ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಉದಾಹರಣೆ : ಮೊದಲ ವಾಕ್ಯದಲ್ಲಿರುವ 'ಜಿಂಕೆ' ಪದ ಇಲ್ಲವಾದರೆ ಹುಲ್ಲನ್ನು ತಿಂದುದು ಯಾವುದು ? ಎಂಬ ಪ್ರಶ್ನೆ ಮೂಡುತ್ತದೆ. 'ಹುಲ್ಲನ್ನು' ಪದ ಇಲ್ಲವಾದರೆ ಜಿಂಕೆ ಏನನ್ನು ತಿಂದಿತು ಎಂಬ ಪ್ರಶ್ನೆ ಮೂಡುತ್ತದೆ. 'ತಿಂದಿತು' ಪದ ಇಲ್ಲವಾದರೆ ಜಿಂಕೆ ಹುಲ್ಲನ್ನು ಏನು ಮಾಡಿತು ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಇಲ್ಲಿ ಜಿಂಕೆ ಎಂಬುದು 'ಕರ್ತೃಪದ'. 'ಹುಲ್ಲು' ಎಂಬುದು 'ಕರ್ಮಪದ'. 'ತಿಂದಿತು' ಎಂಬುದು ಕ್ರಿಯಾಪದ. ಅರ್ಥಪೂರ್ಣ ವಾಕ್ಯ ಎಂದರೆ ಕರ್ತೃ, ಕರ್ಮ, ಕ್ರಿಯಾ ಪದಗಳಿಂದ ಕೂಡಿರುವ ಪದಸಮೂಹ.

8th_Kannada_Reader Term I_U4-9.indd 69 18-06-2019 10.47.03 AM

ಘಟಕ
ಐದು

5. ಕಲೆ, ಸೌಂದರ್ಯ ಮತ್ತು ಸಂಸ್ಕೃತಿ







ಕಾವ್ಯ ಕಣಜ	:	ಹಳ್ಳಿಯ ಹೂಗಳಿಗೆ	– ಡಾ. ಡಿ.ಎಸ್. ಕರ್ಕಿ
ಪೂರಕ ಪದ್ಯ	:	ನಿನ್ನಯ ಕರೆಯ ಕೇಳಿ	– ರವೀಂದ್ರನಾಥ್ ಟ್ಯಾಗೂರ್
ಗದ್ಯ ವಿಹಾರ	:	ಚೋಳರ ಪ್ರಮುಖ ದೇವಾಲಯಗಳು	– ಪ್ರೊ. ತಮಿಳ್ ಸೆಲ್ವಿ
ಉಪಪಠ್ಯ	:	ನಾವು, ನಮ್ಮ ಮಕ್ಕಳು	– (ಸಂಗ್ರಹ)
ವ್ಯಾಕರಣ	:	ಕಾಲಸೂಚಕಗಳು	

8th_Kannada_Reader Term I_U4-9.indd 70 18-06-2019 10.47.03 AM

ಕಾವ್ಯ ಕಣಜ

ಘಟಕ ಐದು

ಹಳ್ಳಿಯ ಹೂಗಳಿಗೆ

– ಡಿ.ಎಸ್. ಕರ್ಕಿ



ಈ ಸೃಷ್ಟಿಯೇ ಅದ್ಭುತವಾದುದು. ಅಪಾರವಾದ ಸೃಷ್ಟಿಯ ಸೌಂದರ್ಯದ ಹಿಂದೆ ದೇವರ ಅದ್ಭುತವಾದ ಶಕ್ತಿ ಇದೆ. ಅಪಾರವಾದ ನಿಸರ್ಗದ ಸೌಂದರ್ಯದ ಮುಂದೆ ಮಾನವನು ಏನೂ ಅಲ್ಲ. ಅದರಲ್ಲಿಯೂ ಒಂದು ಹೂವಿಗಿರುವ ಚೆಲುವು ಮಾನವನಿಗಿಲ್ಲ. ಹೂವಿನ ಸೌಂದರ್ಯದ ಮುಂದೆ ಮಾನವ ಏನೂ ಅಲ್ಲ. ಈ ಸುಂದರ ಸೃಷ್ಟಿಯಾದ ಹೂವನ್ನು ಹೊಗಳಿ ವರ್ಣಿಸುತ್ತಾ... ಅದರಲ್ಲಿಯೂ ಹಳ್ಳಿಯಲ್ಲಿ ಅರಳುವ ಹೂಗಳ ಸೊಬಗನ್ನು ಹೊಗಳಿ ವರ್ಣಿಸುತ್ತಾ, ಅದನ್ನು 'ನಗರಕ್ಕೆಂದು ಬರುವೆ'? ಎಂದು ಕವಿಯು ಇಲ್ಲಿ ಆತ್ಮೀಯವಾಗಿ ಕರೆಯುವ ಧ್ವನಿ ಈ ಕವನದಲ್ಲಿ ಅಡಕವಾಗಿದೆ.









8th_Kannada_Reader Term I_U4-9.indd 71 18-06-2019 10.47.05 AM

ಚೊಕ್ಕ ನಗೆ ತುಂಬಿರುವ
ಚಿಕ್ಕ ತುಂಬೆಯ ಹೂವೆ
ಚಿಕ್ಕೆ ನಗಬಹುದೇನು
ನಿನ್ನ ಹಾಗೆ ? |1|

ಹಳ್ಳದಂಚಿನಲಿ ಗೊಂ–
ಚಲು ಕುಣಿವ ಕಣಿಗಿಲೆಯೆ
ಯಾರು ಕುಂಚವನೆಳೆಯೆ
ಬಣ್ಣ ತಳೆದೆ ? |2|

ಓ! ಚದುರ ಚದುರಂಗಿ
ಕುಸುರೆಸಳ ಎಸಳೆತ್ತಿ
ಹೊಸ ಕಂಗಳಿಗೆ ರಂಗು
ರಂಗನಿಡುವೆ ? |3|

ಸಂಜೆ – ಮೋಡದೊಳಾಡಿ
ಪಡೆದೆಯಾ ಈ ಬೆಡಗ ?
ಬಾಲಕರ ಬಗೆಯ ನೀ
ಸೂರೆಗೊಳುವೆ |4|

ಹತ್ತಿರದ ಎರೆ ಹೊಲದಿ
ಬಿರಿದ ಹತ್ತಿಯ ಹೂವೆ
ಮದುಮಗಳ ಪತ್ತಲವ–
ನುಟ್ಟ ಗರತಿ ! |5|

ಸೆರಗನ್ನು ಸರಿಪಡಿಸಿ
ಬರುವ ಸುಗ್ಗಿಯ ಸಿರಿಯ
ನಿರುಕಿಸುತಲಿರುವೆಯಾ
ವಿನಯವಂತಿ |6|

ನಿನ್ನೊಡಲ ಕಂಡವರು
ಉಂಟೇ! ಪುಂಡಿಯ ಹೂವೇ
ಒರಟು ನಲ್ಲನ ನಗಿಸು
ವಂಥ ಮುಗುದೆ ! |7|

ಅಲೆವ ಪಾತರಗಿತ್ತಿ
ಗೆಲ್ಲಿ ಈ ನಯನೀತಿ
ಮರ್ಯಾದೆ ? ಗುಣವಂತಿ
ಹೇಳು ನೀನೇ ! |8|

ಪಚ್ಚ ಪದಕವ ಹೋಲ್ವ
ದಳದಳದಿ ಬಂಗಾರ
ನಗೆ ಮುಗುಳ ತೆರೆವ
ಹಾಗಲದ ಹೂವೆ ! |9|

ಹಳ್ಳಿ ಹಳ್ಳಿಯ ಹದುಳ
ವಾದ ವಾತಾವರಣ
ದಲ್ಲಿ ನೆಲೆಸಿಹೆ, ನಗರ
ಕೆಂದು ಬರುವೆ? |10|

8th_Kannada_Reader Term I_U4-9.indd 72 18-06-2019 10.47.05 AM

ಕವಿ–ಕಾವ್ಯ ಪರಿಚಯ



'ಹಚ್ಚೇವು ಕನ್ನಡದ ದೀಪ' ಎಂಬ ಕನ್ನಡದ ಕಿಚ್ಚನ್ನು ಹೊತ್ತಿಸಿದ ಪ್ರಸಿದ್ಧ ಕವಿ ಡಿ.ಎಸ್. ಕರ್ಕಿ ಅವರು. ಕನ್ನಡ ಜನಮನದಲ್ಲಿ ಪ್ರಸಿದ್ಧರಾದ ಕವಿ ಕರ್ಕಿಯವರ ಪೂರ್ತಿ ಹೆಸರು ದುಂಡಪ್ಪ ಸಿದ್ಧಪ್ಪ ಕರ್ಕಿ. ಉತ್ತರ ಕರ್ನಾಟಕದ ಬೆಳಗಾವಿಯ ರಾಮದುರ್ಗದ ಹಿರೇಕೊಪ್ಪದಲ್ಲಿ 1907 ನವೆಂಬರ್ 15ರಂದು ಜನಿಸಿದ ಇವರು ಶಿಕ್ಷಕರಾಗಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ನಕ್ಷತ್ರಗಾನ, ಗೀತಗೌರವ, ಭಾವತೀರ್ಥ, ಕರಿಕೆ ಕಣಿಗಳು, ಕನ್ನಡ ಛಂದೋ ವಿಕಾಸ ಇವು ಇವರ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಇವರು ಗಳಿಸಿದ್ದಾರೆ. ಇರುವಷ್ಟರವರೆಗೆ ಕನ್ನಡ ತಾಯಿಯ ಸೇವೆ ಮಾಡಿದ ಇವರು 1984, ಜನವರಿ 16ರಂದು ನಿಧನರಾದರು.

ಪದಗಳ ಅರ್ಥ

ಚೊಕ್ಕ–ಅಚ್ಚುಕಟ್ಟಾದ, ಶುದ್ಧವಾದ, ಸುಂದರವಾದ; ಅಂಚಿನಲ್ಲಿ–ತುದಿಯಲ್ಲಿ, ಕೊನೆಯಲ್ಲಿ; ಕುಂಚ–ಚಿತ್ರ ಬಿಡಿಸಲು ಬಳಸುವ ಬ್ರಶ್; ಚದುರ–ಜಾಣ; ಎಸಳು–ಹೂವಿನ ದಳ; ಕುಸುರೆ–ಸೂಕ್ಷ್ಮವಾದ, ನಾಜೂಕದ; ಬೆಡಗು–ಚೆಲುವು; ಎರೆ–ಕಪ್ಪಾದ; ಬಿರಿದ–ಅರಳಿದ; ಪತ್ತಲ–ತೆಳುವಾದ ಸೀರೆ; ಗರತಿ–ಪತಿವ್ರತೆ; ಸುಗ್ಗಿ–ಸಮೃದ್ಧಿ, ವಸಂತಕಾಲ; ಒಡಲು–ದೇಹ, ಶರೀರ; ಪಚ್ಚೆ–ಹಸಿರು; ಹದುಳ–ಕ್ಷೇಮ, ನೆಮ್ಮದಿ, ಸೌಖ್ಯ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಚೊಕ್ಕ ನಗೆಯನ್ನು ತುಂಬಿದ್ದ ಹೂವು ಯಾವುದು ?
2. ಕಣಿಗಿಲೆಯು ಎಲ್ಲಿ, ಹೇಗಿತ್ತು ?
3. ಹತ್ತಿಯ ಹೂವನ್ನು ಎಲ್ಲಿ ಬೆಳೆಯುವರು ?
4. ಹಾಗಲದ ಹೂ ಹೇಗಿದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ತುಂಬೆಯ ಹಾಗೂ ಕಣಿಗಿಲೆಯ ಹೂವನ್ನು ವರ್ಣಿಸಿ ?
2. ಚದುರಂಗಿ ಹೂವನ್ನು ಕವಿ ಹೇಗೆ ವರ್ಣಿಸಿದ್ದಾರೆ ?
3. ಪುಂಡಿಯ ಹೂವನ್ನು ಕವಿ ಹೇಗೆ ವರ್ಣಿಸಿದ್ದಾರೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಈ ಪದ್ಯದಲ್ಲಿ ಮೂಡಿ ಬಂದಿರುವ ಹೂಗಳನ್ನು ಹೆಸರಿಸಿ, ವರ್ಣಿಸಿ.
2. ಈ ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. **ಕೆಳಗಿನ ಪದಗಳ ಅರ್ಥ ಬರೆಯಿರಿ.**

   ಅಂಚು, ಕುಂಚ, ಒಡಲು, ಗರತಿ, ಸುಗ್ಗಿ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

   ತುಂಬಿರುವ, ಮೋಡದೊಳಾಡಿ, ಸೂರೆಗೊಳ್ಳು, ನಿನ್ನೊಡಲ, ಕುಂಚವನೆಳೆಯೆ

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ನಗು, ಹೊಸತು, ಬಾಲಕ, ಹತ್ತಿರ, ಮದುಮಗಳು.

8th_Kannada_Reader Term I_U4-9.indd 73 18-06-2019 10.47.05 AM

4. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

ಬಣ್ಣ, ಚದುರ, ಸಿರಿ, ಮುಗುದೆ, ಬೆಡಗು.

ಚಟುವಟಿಕೆ

1. ಈ ಪದ್ಯದಲ್ಲಿ ಬಂದಿರುವ ಹೂಗಳನ್ನು ಸಂಗ್ರಹಿಸಿ.
2. ಇತರ ಹೂಗಳ ಬಗ್ಗೆ ತಿಳಿದುಕೊಳ್ಳಿ.
3. ಹೂವಿನಿಂದಾಗುವ ಪ್ರಯೋಜನಗಳನ್ನು ಚರ್ಚಿಸಿ, ಪ್ರಬಂಧ ಬರೆಯರಿ.
4. ನಿಮ್ಮ ಊರಿನಲ್ಲಿ ಬೆಳೆಯುವ ಹಳ್ಳಿಯ ಹೂಗಳ ಹೆಸರನ್ನು ಸಂಗ್ರಹಿಸಿ.
5. ಈ ಪದ್ಯವನ್ನು ಕಂಠಪಾಠ ಮಾಡಿ.

ಚಿಂತನೆಗಳು

ಗುರಿಯನ್ನು ಮುಟ್ಟುವುದಕ್ಕಿಂತ ಅದರೆಡೆಗೆ ನಂಬಿಕೆಯಿಂದ ಸಾಗುವುದೇ ಹೆಚ್ಚು ಆನಂದದಾಯಕ – **ರಾಬರ್ಟ್ ಲೂಯಿಸ್**

ಪ್ರಪಂಚದ ವ್ಯಾಮೋಹ ತಗ್ಗಿದಷ್ಟೂ ಮನಸ್ಸಿನಲ್ಲಿ ಶಾಂತಿ ಬೆಳೆಯುತ್ತದೆ – **ಮಾತೆ ಶಾರದಾ ದೇವಿ.**

ಆಡಂಬರವಿಲ್ಲದ ಸರಳ ಜೀವನ ನಡೆಸುವುದೇ ಉತ್ಕೃಷ್ಟವಾದುದು – **ಕೃಷ್ಣನಂದ ವಾರಿಯರ್**

ಸತ್ಯಾನ್ವೇಷಣೆಯೇ ಆತ್ಮ ಸಾಕ್ಷಾತ್ಕಾರದ ಮಾರ್ಗ – **ಗಾಂಧೀಜಿ**

ಪರ್‌ಪಂಚ್ ಇರೋತನ್ಕ ಮುಂದೆ ಕನ್ನಡ್ ಪದ್ಗೊಳ್ ನುಗ್ಲಿ – **ಜಿ.ಪಿ.ರಾಜರತ್ನಂ**

ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ – **ಪಂಪ**

ಸತ್ಯದ ಹಾದಿಯಲ್ಲಿ ನಿಲ್ಲುವವನು ಎಲ್ಲ ಕಾಲದಲ್ಲಿಯೂ ಅಳಿಸಲಾಗದ ಕೀರ್ತಿಯನ್ನು ಪಡೆಯುತ್ತಾನೆ – **ಸ್ವಾಮಿ ವಿವೇಕಾನಂದ**

ಜ್ಞಾನ ಆಗಮಿಸುವಾಗ ಅಹಂಕಾರ ದೂರ ಸರಿಯುತ್ತದೆ – **ರಾಮಕೃಷ್ಣ ಪರಮಹಂಸ**

ಪ್ರಾಮಾಣಿಕತೆಗೆ ಫಲ ದಕ್ಕುತ್ತದೆ. ಆದರೆ ಬಹಳ ಸಮಯ ಕಾದಿರಬೇಕು –**ಗಾಂಧೀಜಿ**

ಎಂತಹ ಕಠಿಣ ಕೆಲಸವನ್ನಾದರೂ ಆತ್ಮವಿಶ್ವಾಸವಿದ್ದರೆ ಮಾಡಿ ಮುಗಿಸಬಹುದು – **ಥಾಮಸ್ ಆಲ್ವ ಎಡಿಸನ್**

ತೆಳ್ಳಗಿನ ದಾರವೊಂದು ಗಾಳಿ ಪಟವನ್ನು ನಿಯಂತ್ರಿಸುವಂತೆ ಮಾನವನ ಸಹನೆ ಆತನನ್ನು ನಿಯಂತ್ರಿಸುತ್ತದೆ – **ಮಹಾವೀರ**

ಆಸೆಗಳ ಮೇಲೆ ನಿಯಂತ್ರಣ ಹೊಂದುವ ಸಾಮರ್ಥ್ಯದಿಂದಲೆ ವ್ಯಕ್ತಿತ್ವ ರೂಪುಗೊಳ್ಳುತ್ತದೆ – **ಜಾಜ್ ಬರ್ನಾಡ್ ಷಾ**

ನೀನು ಮಾಡಿದ ತಪ್ಪುಗಳು ಇತರರಿಗೆ ತಿಳಿಯದಿದ್ದರೂ ನಿನ್ನ ಅಂತರಂಗಕ್ಕೆ ತಿಳಿಯುತ್ತದೆ ಎಂದು ತಿಳಿದಿರು – **ಗೌತಮ ಬುದ್ಧ**

ದುಃಖಕ್ಕೆ ಪರಮೌಷಧವೆಂದರೆ ಕ್ರಿಯಾಶೀಲತೆ – **ಜಾರ್ಜ್ ಹನ್ರಿ ಲೂಯಿಸ್**

ಮಕ್ಕಳನ್ನು ಉತ್ಸಾಹದಲ್ಲಿರುವಂತೆ ನೋಡಿಕೊಳ್ಳುವುದೇ ಅವರಿಗೆ ನೀಡುವ ಉಡುಗೊರೆ – **ಬ್ರೂಸ್ ಬಾರ್ಟನ್**

8th_Kannada_Reader Term I_U4-9.indd 74 18-06-2019 10.47.05 AM

ಪೂರಕ ಪದ್ಯ

ಘಟಕ ಐದು

ನಿನ್ನ ಕರೆಯ ಕೇಳಿ

– ರವೀಂದ್ರನಾಥ ಟ್ಯಾಗೋರ್



ಕಷ್ಟ ಸಂಕಷ್ಟಗಳು ಮಾನವ ಜೀವನದಲ್ಲಿ ಸಹಜವಾದವು. ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ಸಮನಾಗಿ ನಡೆಯುವುದೇ ಮಾನವನ ಜೀವನ ಕ್ರಮವಾಗಬೇಕು. ಆದರೆ ಮಾನವರಾದ ನಾವು ಕಷ್ಟ ಬಂದಾಗ ಬಹುಬೇಗ ಸೋತು ಶರಣಾಗುತ್ತೇವೆ. ಮುಂದೆ ಹೋಗಲು ದಾರಿಗಾಣದೆ ತಟಸ್ಥರಾಗಿ ಬಿಡುತ್ತೇವೆ. ಈ ಸಂದರ್ಭದಲ್ಲಿ ನಾವು ಆಸರೆಯನ್ನು ಬೇಡುವುದು ಸಹಜವಾಗಿರುತ್ತದೆ. ಆದರೆ ನಮ್ಮ ರಾಷ್ಟ್ರಕವಿ ರವೀಂದ್ರನಾಥರು ಯಾವ ಸಹಾಯವನ್ನೂ ಬೇಡದೆ 'ಧೈರ್ಯದಿ ಮುಂದೆ ಸಾಗು, ನಿನ್ನ ಗುರಿ ಮುಟ್ಟುವವರೆಗೆ' ಎಂಬ ಕರೆಯನ್ನು ಇಲ್ಲಿ ನೀಡಿದ್ದಾರೆ.



8th_Kannada_Reader Term I_U4-9.indd 75 18-06-2019 10.47.05 AM

ನಿನ್ನ ಕರೆಯ ಕೇಳಿ ಯಾರು ಬಾರದಿರಲು
ನೀನೊಬ್ಬನೆ ಹೊರಡು, ಒಬ್ಬನೆ ಹೊರಡು
ನಿನ್ನ ಕರೆಯ ಕೇಳಿ... |ಪಲ್ಲವಿ|


ನಿನ್ನ ಜೊತೆಗೆ ಯಾರು ಮಾತನಾಡದಿರಲು,
ನಿನಗೆ ಹೆದರಿಕೊಂಡು ಮುಖವ ತೋರದಿರಲು
ಎಲವೊ ಮಂದಭಾಗ್ಯ, ನಿನ್ನ ಹೃದಯ ಬಿಚ್ಚಿ
ನಿನ್ನ ಮನದ ಕಥೆಯ ನೀನೆ ಬಾಯಿ ಬಿಟ್ಟು
ನೀನೊಬ್ಬನೆ ಹೇಳು, ಒಬ್ಬನೆ ಹೇಳು
ನಿನ್ನ ಕರೆಯ ಕೇಳಿ... |1|

ಗಹನ ಪಥದಿ ನೀನು ಮುಂದೆ ಸಾಗುವಾಗ,
ಮುಳ್ಳು ಚುಚ್ಚಿ ಚುಚ್ಚಿ ಕಾಲಿನಿಂದ ರಕ್ತ
ಸೋರುತಿರುವುದನ್ನು ಯಾರು ನೋಡದಂತೆ
ತಿರುಗಿ ಹೋದರೇನು ? ಎಲವೊ ಮಂದಭಾಗ್ಯ
ನೀನೊಬ್ಬನೆ ಹೊರಡು, ಒಬ್ಬನೆ ಹೊರಡು
ನಿನ್ನ ಕರೆಯ ಕೇಳಿ |2|

ಬೆಳಕು ಇಲ್ಲದಾಗಿ ಕತ್ತಲಾದರೇನು ?
ಭೂತ ಗಾಳಿ ಬೀಸಿ, ಮನೆಯ ಕದವು ಮುಚ್ಚಿ
ಹೋದರೇನು ನಿನ್ನ ಪ್ರಾಣ ವಜ್ರದಿಂದ
ಎದೆಯ ಪಂಜು ಹಚ್ಚಿ ಮುಂದೆ ಮುಂದೆ ಸಾಗು.
ನೀನೊಬ್ಬನೆ ಸಾಗು, ಒಬ್ಬನೆ ಸಾಗು!
ನಿನ್ನ ಕರೆಯ ಕೇಳಿ |3|

8th_Kannada_Reader Term I_U4-9.indd 76 18-06-2019 10.47.05 AM

ಕವಿ–ಕಾವ್ಯ ಪರಿಚಯ



ರವೀಂದ್ರನಾಥ ಟ್ಯಾಗೂರ್ ಅವರು ನಮ್ಮ ರಾಷ್ಟ್ರಗೀತೆಯಾದ ಜನಗಣಮನ ಗೀತೆಯನ್ನು ರಚಿಸಿದ ರಾಷ್ಟ್ರಕವಿ. ಮಕ್ಕಳ ಸಾಹಿತ್ಯದಿಂದ ಹಿಡಿದು, ನೊಬೆಲ್ ಬಹುಮಾನ ಪಡೆದಿರುವ ಗೀತಾಂಜಲಿಯತನಕ ಇವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಮೂಲ ಬಂಗಾಳಿ ಭಾಷೆಯಲ್ಲಿ ಇವರು ಕಾವ್ಯಗಳನ್ನು ರಚಿಸಿದ್ದಾರೆ. ರವೀಂದ್ರರ ಬಾಲ ಸಾಹಿತ್ಯ ಎಂಬ ಅನುವಾದ ಕೃತಿಯಿಂದ ಈ ಕವನವನ್ನು ಆರಿಸಿಕೊಳ್ಳಲಾಗಿದೆ. ಎಸ್.ಜಿ. ಕುಲಕರ್ಣಿಯವರು ಇದನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಪದಗಳ ಅರ್ಥ

ಕರೆ–ಕೂಗು; ಮಂದಭಾಗ್ಯ–ಅದೃಷ್ಟಹೀನ; ಗಹನ–ಭಾರವಾದ; ಪಥ–ಮಾರ್ಗ, ಹಾದಿ; ಕದ–ಬಾಗಿಲು; ಪಂಜು–ದೀಪ

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಹಾಯಕ್ಕೆ ಯಾರೂ ಬಾರದಿರಲು ಏನು ಮಾಡಬೇಕು ?
2. ಮನದ ಕಥೆಯನ್ನು ಹೇಗೆ, ಏಕೆ ಹೇಳಬೇಕು?
3. ಮುಂದೆ ಸಾಗುವಾಗ ಏನೆಲ್ಲ ತೊಂದರೆಯಾಗುತ್ತದೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಹೃದಯ ಬಿಚ್ಚಿ ಕವಿಯು ಏನನ್ನು ಹೇಳು ಎಂದಿದ್ದಾರೆ. ಏಕೆ ?
2. ಒಬ್ಬನೆ ಹೊರಡು ಎನ್ನುವಾಗ ಯಾವ್ಯಾವ ಸಮಸ್ಯೆಗಳು ಬರುತ್ತವೆ ಎನ್ನುತ್ತಾರೆ ಕವಿ ?
3. ಯಾವ ಸಮಯದಲ್ಲಿ ಎದೆಯ ಪಂಜು ಹಚ್ಚಿ ಮುಂದೆ ಸಾಗು ಎಂದಿದ್ದಾರೆ?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಎದೆ, ಮಾತು, ಹೆದರಿಕೆ, ಗಹನ, ಪಥ,

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ಸೋರುತಿರುವುದನ್ನು, ನೀನೊಬ್ಬನೆ, ಮಾತನಾಡದಿರಲು, ಕತ್ತಲಾದರೆ

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಮುಂದೆ, ಕತ್ತಲು, ಇಲ್ಲ, ಅದೃಷ್ಟ, ಧೈರ್ಯ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಹೃದಯ, ಕಥೆ, ಬಾಯಿಬಿಟ್ಟು, ಗಾಳಿಬೀಸಿ, ಹೊರಡು.

5. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಮುಖ, ಪ್ರಯಾಣ, ವಿನೋದ, ಗೋಷ್ಠಿ, ಸಹಸ್ರ.

ಚಟುವಟಿಕೆ

1. ರವೀಂದ್ರರ ಇತರ ಪದ್ಯಗಳನ್ನು ಓದಿರಿ.
2. ಏಕಾಂಗಿಯಾಗಿ ಹೋರಾಡಿ ವಿಜಯ ಸಾಧಿಸಿದವರ ಬಗ್ಗೆ ಚರ್ಚಿಸಿ ತಿಳಿದುಕೊಳ್ಳಿ.

8th_Kannada_Reader Term I_U4-9.indd 77 18-06-2019 10.47.05 AM

ಘಟಕ ಐದು

ಚೋಳರ ಪ್ರಮುಖ ದೇವಾಲಯಗಳು

–ಪ್ರೊ. ತಮಿಳ್ ಸೆಲ್ವಿ

ಪ್ರವೇಶ

ಪ್ರಾಚೀನ ತಮಿಳುನಾಡನ್ನಾಳಿದ ಅರಸರಲ್ಲಿ ಪ್ರಮುಖರಾದವರು ಚೇರ, ಚೋಳ ಹಾಗೂ ಪಾಂಡ್ಯ ಅರಸರು. ಇವರನ್ನು 'ಮೂವೇಂದರ್'(ಮೂರು ಅರಸುಮನೆತನಗಳು) ಎಂದು ಕ್ರಿ.ಶ.ದ ಆರಂಭದಿಂದಲೂ ಗುರುತಿಸಲಾಗುತ್ತಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಚೋಳರು ಹಾಗೂ ಪಲ್ಲವರ ಕಾಲ ಬಹುಮುಖ್ಯವಾದುದು. ಇಡೀ ದಕ್ಷಿಣ ಭಾರತವನ್ನು ಒಂದೇ ಆಡಳಿತಕ್ಕೊಳಪಡಿಸಿದ ಮೊದಲ ಅರಸರು ಇವರು. ದಕ್ಷಿಣಭಾರತದ ಇತಿಹಾಸದಲ್ಲಿ ಇವರ ಸ್ಥಾನ ಚಿರಸ್ಥಾಯಿಯಾದುದು. ಇವರ ಕಾಲದಲ್ಲಿ ನಿರ್ಮಾಣವಾದ ಕೆಲವು ಪ್ರಮುಖ ದೇವಾಲಯಗಳ ಪರಿಚಯವನ್ನು ಇಲ್ಲಿ ಕಾಣಬಹುದು.







8th_Kannada_Reader Term I_U4-9.indd 78 18-06-2019 10.47.05 AM

ತಮಿಳುನಾಡಿನ ಪ್ರಾರಂಭ ಕಾಲದ ಇತಿಹಾಸವನ್ನು ಸಂಗಂ ಯುಗದಿಂದ ಗುರುತಿಸಲಾಗುತ್ತದೆ. ಕ್ರಿಪೂ. ಒಂದನೇ ಶತಮಾನದಿಂದಲೇ ಸಂಗಂ ಕಾಲ ಆರಂಭವಾಗುತ್ತದೆ. ಚೋಳರು ಸಂಗಂ ಕಾಲದಿಂದಲೂ ಕಂಡು ಬರುತ್ತಾರೆ. ಸಂಗ ಕಾಲದಲ್ಲಿದ್ದ ಚೋಳರನ್ನು 'ಸಂಗಂ ಕಾಲದ ಚೋಳರು' ಎಂದೇ ಕರೆಯಲಾಗುತ್ತದೆ. ಕಾವೇರೀ ನದೀ ಮುಖಜ ಭೂಮಿಯಲ್ಲಿದ್ದ 'ಕಾವೇರಿ ಪಟ್ಟಣ' ಚೋಳರ ಪ್ರಮುಖ ನಗರಗಳಲ್ಲೊಂದು. ಸಂಗಂ ಕಾಲದ ಚೋಳ ಅರಸರ ಬಗೆಗಿನ ಮಾಹಿತಿಗಳು ಆ ಕಾಲದ ಸಾಹಿತ್ಯ ಕೃತಿಗಳಲ್ಲಿ ದೊರಕಿವೆ. ಈ ಕಾಲದಲ್ಲಿ ಕರಿಕಾಲನ್, ನಲಂಕಿಳ್ಳಿ, ನೆಡುಂಕಿಳ್ಳಿ, ಸೆಂಗಣನ್ ಮುಂತಾದ ಅರಸರ ಹೆಸರು ಬಹು ಪ್ರಸಿದ್ಧವಾಗಿವೆ. ಇವರ ನಂತರ ಬಂದವರನ್ನು 'ನಂತರದ ಕಾಲದ ಚೋಳರು' ಎಂದು ಗುರುತಿಸಲಾಗುತ್ತದೆ.

ಸಂಗಂ ಕಾಲದ ಅರಸರಲ್ಲಿ ಕರಿಕಾಲ ಚೋಳನು ತುಂಬ ಪ್ರಸಿದ್ಧನಾದವನು. ಇವನು ಬಾಲಕನಾಗಿದ್ದಾಗ ಬೆಂಕಿಯ ಅನಾಹುತಕ್ಕೀಡಾಗಿ ಇವನ ಕಾಲು ಕರುಕಾಗಿ ಹೋದುದರಿಂದ ಇವನಿಗೆ ಕರಿಕಾಲ ಚೋಳನೆಂದು ಹೆಸರಾಯಿತು. ಇವನು ಚೋಳರ ಅಧಿಪತ್ಯವನ್ನು ನೆಲೆ ನಿಲ್ಲಿಸಿ ಒಂದು ಸ್ವತಂತ್ರ ರಾಜ್ಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. 'ಬಾಹ್ಯ ಪರಂದಲೈ' ಎಂಬಲ್ಲಿ ನಡೆದ ಮತ್ತೊಂದು ಕದನದಲ್ಲಿ ಒಂಬತ್ತು ಮಂದಿ ವೈರಿಗಳನ್ನು ಸೋಲಿಸಿ, ಅಲ್ಲಿಂದ ಸೆರೆ ಹಿಡಿದು ತಂದ ಜನರಿಂದ ಕಾವೇರಿ ನದಿಯ ದಡವನ್ನು 100 ಮೈಲಿಗಳಷ್ಟು ಸರಿಪಡಿಸಿ ಕಾವೇರಿ ನದಿಗೆ ಸೇತುವೆ ನಿರ್ಮಿಸಿ ಪ್ರವಾಹದಿಂದ ಅಲ್ಲಿನ ಜನರಿಗೆ ರಕ್ಷಣೆ ಒದಗಿಸಿದನು. ಕಾವೇರಿ ನದಿಗೆ ಸೇತುವೆ ನಿರ್ಮಿಸಿದ ಮೊದಲ ದಾಖಲೆ ಇದು. ಇದರ ಬಗ್ಗೆ ತಮಿಳು ಸಾಹಿತ್ಯಗಳು ಹೆಮ್ಮೆಯಿಂದ ಹಾಡಿ ಹೊಗಳಿವೆ.

ಕರಿಕಾಲನ ನಂತರ ಚೋಳರು ದುರ್ಬಲರಾಗಿ, ಪಲ್ಲವರು, ಪಾಂಡ್ಯರು ಕಾಣಿಸಿಕೊಂಡರು. ಅವನತಿಯ ಹಾದಿ ಹಿಡಿದಿದ್ದ ಚೋಳರು ಪುನಃ ಸುಮಾರು ಒಂಬತ್ತನೆಯ ಶತಮಾನದ ವೇಳೆಗೆ ಪಲ್ಲವರನ್ನು ಹಿಂದಿಕ್ಕಿ ಪುನಃ ತಮಿಳು ಪ್ರಾಂತ್ಯದ ಉತ್ತರ ಭಾಗದಲ್ಲಿ ಪ್ರಾಬಲ್ಯಕ್ಕೆ ಬಂದರು ಹಾಗೂ ಮುಂದಿನ ಮೂರು ಶತಮಾನಗಳ ಕಾಲ ತುಂಗಭದ್ರೆಯ ದಕ್ಷಿಣದಲ್ಲಿ ತಮ್ಮ ಬೃಹತ್ ಸಾಮ್ರಾಜ್ಯವನ್ನು ನೆಲೆಗೊಳಿಸಿದರು.

ಚೋಳ ವಂಶವನ್ನು ಮತ್ತೆ ಏಳಿಗೆಗೆ ತಂದವನು ವಿಜಯಾಲಯ(ಕ್ರಿ.ಶ. 870). ಇವನು ತನ್ನ ಮಗ ಒಂದನೇ ಆದಿತ್ಯನ ನೆರವಿನಿಂದ ಮತ್ತೆ ಚೋಳ ಸಾಮ್ರಾಜ್ಯ ನೆಲೆ ನಿಲ್ಲುವಂತೆ ಮಾಡಿದ. ಇವನನ್ನು ಚೋಳ ಸಾಮ್ರಾಜ್ಯದ ಕರ್ತಾರನೆಂದು ಬಣ್ಣಿಸಲಾಗುತ್ತದೆ. 'ತಂಜಾವೂರನ್ನು ಗೆದ್ದುದರಿಂದ ಇವನು 'ತಂಜೈಕೊಂಡ ಪರಕೇಸರಿ', 'ರಾಜಕೇಸರಿ' ಎಂಬ ಬಿರುದುಗಳನ್ನು ಗಳಿಸಿದ. ಅಲ್ಲಿ ತನ್ನ ವಿಜಯದ ನೆನಪಿಗಾಗಿ ಒಂದು ದೇವಾಲಯವನ್ನು ನಿರ್ಮಿಸಿದ. ಇವನ ಮಗ ಒಂದನೇ ಆದಿತ್ಯ.

ವಿಜಯಾಲಯ ಚೋಳನ ನಂತರ ಬಂದ ಚೋಳ ಅರಸರು ಸುಮಾರು 300 ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ. ಈ ಕಾಲಘಟ್ಟದಲ್ಲಿ ವಿಜಯಾಲಯನನ್ನೂ ಸೇರಿಸಿ ಒಟ್ಟು 21 ಚೋಳ ಅರಸರು ಕಂಡು ಬರುತ್ತಾರೆ. ಒಂದನೇ ಆದಿತ್ಯ, ಒಂದನೇ ಪರಾಂತಕ, ಗಂಡರಾದಿತ್ಯ, ಅರಿಂಜಯನ್, ಸುಂದರ ಚೋಳ (ಮೂರನೇ ಪರಾಂತಕ), ಉತ್ತಮ ಚೋಳ, ಒಂದನೇ ರಾಜರಾಜ (ಅರುಮೊಳಿ ದೇವ), ಒಂದನೇ ರಾಜೇಂದ್ರ ಚೋಳ (ಮಧುರಾಂತಕ), ಒಂದನೇ ರಾಜಾಧಿರಾಜ, ಎರಡನೇ ರಾಜೇಂದ್ರ ಚೋಳ, ಒಂದನೇ ಕುಲೋತ್ತುಂಗ, ವಿಕ್ರಮ ಚೋಳ ಮೊದಲಾದವರು ಚೋಳರ ಪ್ರಮುಖ ಅರಸರಾಗಿದ್ದಾರೆ. ಸಾಹಿತ್ಯ ಕೃತಿಗಳೂ, ಶಿಲಾಶಾಸನಗಳೂ, ತಾಮ್ರಶಾಸನಗಳೂ ಈ ಅರಸರ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ನೀಡುತ್ತವೆ. ಕ್ರಮೇಣ ಉತ್ತರದಲ್ಲಿ ಕೃಷ್ಣಾ, ತುಂಗಭದ್ರಾ ನದಿಗಳವರೆಗೂ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ ಹರಡಿದ ಚೋಳ ಸಾಮ್ರಾಜ್ಯವು ತಂಜಾವೂರನ್ನು ರಾಜಧಾನಿಯನ್ನಾಗಿ

8th_Kannada_Reader Term I_U4-9.indd 79 18-06-2019 10.47.05 AM

ಮಾಡಿಕೊಂಡಿತ್ತು. ಈ ಕಾಲವನ್ನು ಚೋಳರ ಆಡಳಿತದ ಸುವರ್ಣ ಕಾಲ ಎನ್ನಬಹುದು. ಈ ಕಾಲದಲ್ಲಿ ತಮಿಳುನಾಡಿನಲ್ಲಿ ಹಲವು ಕಲಾಪ್ರಕಾರಗಳು ಬೆಳವಣಿಗೆ ಹೊಂದಿದವು.

ಚೋಳರ ದೇವಾಲಯಗಳು

'ದೇವಾಲಯಗಳ ಯುಗ' ಎಂದರೆ ತಮಿಳುನಾಡಿಗೆ ಸಂಬಂಧಿಸಿದಂತೆ ಚೋಳರ ಕಾಲವೆಂದೇ ಅರ್ಥ. ಚೋಳರ ಕಾಲದ ಕಟ್ಟದ ಕಲೆಯ ಸುವರ್ಣಯುಗದಲ್ಲಿ ನಿರ್ಮಿಸಲಾದ ತಂಜಾವೂರಿನ ಬೃಹದೀಶ್ವರ ದೇವಾಲಯ ಹಾಗೂ ಗಂಗೈಕೊಂಡ ಚೋಳೀಶ್ವರ ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣವಾದ ಪ್ರಮುಖವಾದ ದೇವಾಲಯಗಳಾಗಿವೆ.

ಚೋಳರ ಕಾಲದ ದೇವಾಲಯಗಳ ರಚನಾ ವಿನ್ಯಾಸವನ್ನು ಪ್ರಾಚೀನ, ಮಧ್ಯಕಾಲೀನ, ನವೀನ – ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಚಚ್ಚೌಕವಾದ ಪ್ರಾಕಾರದೊಳಗೆ ಒಂದು ವೃತ್ತಾಕಾರದ ಪೀಠ, ಆ ಪೀಠದ ಮೇಲೆ ಒಂದು ವಿಮಾನ, ವಿಮಾನದ ಮೇಲೆ ಒಂದು ಗುಮ್ಮಟಾಕಾರದ ಶಿಖರ, ಶಿಖರದ ಮೇಲೆ ಗುಂಡಗಿರುವ ಒಂದು ಕಲಶ – ಇವು ಚೋಳರ ಕಾಲದ ಕಲಾಶೈಲಿಯ ಪ್ರಮುಖ ಲಕ್ಷಣಗಳು. ಪ್ರಾಚೀನ ಕಾಲದ (ಕ್ರಿ.ಶ. 850–985) ದೇವಾಲಯಗಳು ತುಂಬ ಚಿಕ್ಕದಾಗಿವೆ. ಅವು ಪಲ್ಲವರ ಕಾಲದ ಅನುಕರಣೆಗಳಾಗಿವೆ. ಪುದುಕೋಟ್ಟೈ ಜಿಲ್ಲೆಯ 'ನಾರ್ತಾಮಲೈ'ಯ ಸಮೀಪದಲ್ಲಿರುವ ವಿಜಯಾಲಯ ದೇವಾಲಯ, ಕೊಡುಂಬಾಲೂರಿನ ಐವರ್ ದೇವಾಲಯ, ಪನ್ನೈಮಲೈನಲ್ಲಿರುವ ದೇವಾಲಯ ಮುಂತಾದವು ಪ್ರಾಚೀನ ಕಾಲಕ್ಕೆ ಸೇರಿದವುಗಳು.

ಚೋಳ ವಂಶದ ಮೊದಲ ಅರಸನೆಂದು ತಿಳಿಯಲಾಗಿರುವ ವಿಜಯಾಲಯ ಚೋಳನು ತನ್ನ ವಿಜಯದ ನೆನಪಿಗಾಗಿ ತಂಜಾವೂರಿನ ಬಳಿ ನಿಸುಂಬಸೂತನಿ ಎಂಬ ಹೆಸರಿನ 'ದುರ್ಗೆ'ಯ ದೇವಾಲಯವನ್ನು ನಿರ್ಮಿಸಿದ. ಇವಳನ್ನು 'ವೆಟ್ರಿ ದೈವಂ' ಎಂದರೆ 'ವಿಜಯ ದೇವತೆ' ಎಂದು ತಿರುವಲಂಗಾಟ್ರು ತಾಮ್ರ ಶಾಸನ ಹೇಳುತ್ತದೆ. ಈ ದೇವಾಲಯವು ಈಗಲೂ ಇದೆ.

ವಿಜಯಾಲಯನು 'ನಾರ್ತಾಮಲೈ'ನಲ್ಲಿ ಒಂದು ಶಿವನ ದೇವಾಲಯವನ್ನೂ ನಿರ್ಮಿಸಿದ್ದಾನೆ. ಇದನ್ನು ವಿಜಯಾಲಯ ಚೋಳೀಶ್ವರಂ ಎಂದು ಕರೆಯಲಾಗುತ್ತದೆ. ಇದಷ್ಟೇ ಅಲ್ಲದೆ, ಕಾಳಿಯಾಪಟ್ಟಿಯಲ್ಲಿ ಒಂದು ಶಿವನ ದೇವಾಲಯವನ್ನೂ, ಪಣಸಂಗುಡಿಯಲ್ಲಿ 'ಅಗಸ್ತ್ಯೇಶ್ವರ' ದೇವಾಲಯವನ್ನೂ, 'ವಿರಾಲಿ'ಯಲ್ಲಿ 'ಭೂಮೀಶ್ವರ' ದೇವಾಲಯವನ್ನೂ, 'ವಿಶಾಲ್' ಎನ್ನುವಲ್ಲಿ 'ಮಾರ್ಗಸಹಾಯೇಶ್ವರ' ದೇವಾಲಯವನ್ನೂ, 'ತಿರುಪ್ಪೂರಿ'ನಲ್ಲಿ ಒಂದು ಶೈವ ದೇವಾಲಯವನ್ನೂ, 'ಏನಾದಿ'ಯಲ್ಲಿ ಇನ್ನೊಂದು ಶೈವಾಲಯವನ್ನೂ ಈತನ ಕಾಲದಲ್ಲೇ ನಿರ್ಮಿಸಲಾಗಿದೆ.

ಈ ಕಾಲದ ದೇವಾಲಯಗಳು ಸರಳ ರಚನೆಗಳಾಗಿದ್ದರೂ ಸುಂದರವಾಗಿವೆ. ಪ್ರಾಚೀನ ಕಾಲದ ಚೋಳರ ದೇವಾಲಯಗಳಲ್ಲಿ ಬಹುಪಾಲು ಶೈವ ದೇವಾಲಯಗಳಾಗಿದ್ದು, ನಂತರದ ಸ್ಥಾನ ವೈಷ್ಣವ ದೇವಾಲಯಗಳಿಗೂ; ಮೂರನೇ ಸ್ಥಾನ ಪಿಡಾರಿ(ಶಕ್ತಿ ದೇವತೆ), ಕೊಟ್ರವೈ ಹಾಗೂ ಮುರುಗನ ದೇವಾಲಯಗಳಿಗೂ ಸಲ್ಲುತ್ತವೆ. 'ತಿರುಕಾಟ್ರುತಳೈ'ನಲ್ಲಿರುವ 'ಸುಂದರೇಶ್ವರ ದೇವಾಲಯ', 'ಕುಂಭಕೋಣಂ'ನಲ್ಲಿರುವ 'ನಾಗೇಶ್ವರಾಲಯ', 'ಶ್ರೀನಿವಾಸ ನಲ್ಲೂರು'(ದಕ್ಷಿಣ ಆರ್ಕಾಟ್)ನಲ್ಲಿರುವ 'ಅಗಸ್ತ್ಯೇಶ್ವರ ದೇವಾಲಯ', 'ದಿಂಡಿವನಂ'ನಲ್ಲಿರುವ 'ಶ್ರೀದಿಂಡೀಶ್ವರಾಲಯ', 'ಪುಲ್ಲಮಂಗಲೈ'ನಲ್ಲಿರುವ 'ಬ್ರಹ್ಮಪುರೀಶ್ವರರ್ ದೇವಾಲಯ'... ಮುಂತಾದವು ಈ ಕಾಲದ ಪ್ರಮುಖ ರಚನೆಗಳು.

ಒಂದನೇ ಆದಿತ್ಯನು. 'ತಿರುಪುರಂಬಿಯಂ' ಎಂಬಲ್ಲಿ ಒಂದು ಶೈವ ದೇವಾಲಯವನ್ನು ನಿರ್ಮಿಸಿದ. ಆ ದೇವಾಲಯಕ್ಕೆ ಆದಿತ್ಯೇಶ್ವರ ಎಂಬ ಹೆಸರಾಯಿತು.

8th_Kannada_Reader Term I_U4-9.indd 80 18-06-2019 10.47.05 AM

ಗಂಡರಾದಿತ್ಯನ ರಾಣಿ ಸೆಂಬಿಯನ್ ಮಹಾದೇವಿಯು 'ತಿರುವಲ್ಲಂ'ನಲ್ಲಿ ಗಂಡರಾದಿತ್ಯನ ಸ್ಮಾರಕವಾಗಿ ಒಂದು ದೇವಾಲಯವನ್ನು ಕಟ್ಟಿಸಿದ್ದಾಳೆ. ಈ ಊರಿಗೆ ಮೊದಲು 'ಕೋನೇರಿ ರಾಜಪುರಂ' ಎಂಬ ಹೆಸರಿತ್ತು. ಆ ದೇವಾಲಯದಲ್ಲಿ ಈಕೆ ಗಂಡರಾದಿತ್ಯ ಹಾಗೂ ತನ್ನ ಮೂರ್ತಿಯನ್ನೂ, ದೇವರಿಗೆ ನಮಿಸುತ್ತಿರುವ ಭಂಗಿಯಲ್ಲಿ ನಿರ್ಮಿಸಿದ್ದಾಳೆ.

ಅರಿಂಜಯನ ಮೊಮ್ಮಗ 1ನೇ ರಾಜರಾಜನು ತನ್ನ ತಾತನ ಸ್ಮರಣಾರ್ಥ 'ತಿರುವಳ್ಳಂ'ಗೆ 6 ಮೈಲು ದೂರದಲ್ಲಿರುವ 'ಮೇಲ್‌ಪಾಡಿ'ಯಲ್ಲಿ ಅರಿಂಜಯೇಶ್ವರ ಎನ್ನುವ ದೇವಾಲಯ ನಿರ್ಮಿಸಿದ. ಆ ಊರನ್ನು ಈಗ ಚೋಳೇಶ್ವರ ಎಂದು ಕರೆಯುತ್ತಾರೆ.

ಮಧ್ಯಕಾಲೀನ (ಕ್ರಿ.ಶ.985–1070)ದಲ್ಲಿ ನಿರ್ಮಿಸಲಾದ ದೇವಾಲಯಗಳಲ್ಲಿ ರಾಜರಾಜೇಶ್ವರ ದೇವಾಲಯ (ತಂಜಾವೂರಿನ ಬೃಹದೀಶ್ವರ ದೇವಾಲಯ/ದೊಡ್ಡ ದೇವಾಲಯ), ಗಂಗೈಕೊಂಡ ಚೋಳಪುರಂನಲ್ಲಿರುವ ದೇವಾಲಯಗಳು ತುಂಬ ಪ್ರಮುಖವಾದವುಗಳು ಹಾಗೂ ಇವು ವಿಶ್ವಪ್ರಸಿದ್ಧವಾಗಿವೆ.

ಚೋಳರ ದೇವಾಲಯಗಳಲ್ಲಿ ಆಧುನಿಕ ಕಾಲಕ್ಕೆ ಸೇರಿದವು ಧಾರಾಸುರಂ, ತ್ರಿಭುವನಂ ಮುಂತಾದ ಸ್ಥಳಗಳಲ್ಲಿವೆ. ಧಾರಾಸುರಂನಲ್ಲಿರುವ ಐರಾವತೇಶ್ವರ ದೇವಾಲಯದಲ್ಲಿರುವ ತಿರುತ್ತೊಂಡರ್ ಪುರಾಣದ ದೃಶ್ಯಗಳು ಆಕರ್ಷಕವಾಗಿವೆ.

ಚೋಳರ ಕಟ್ಟಡ ಕಲೆಯ ಸುವರ್ಣ ಯುಗ

ಒಂದನೇ ರಾಜರಾಜ ಹಾಗೂ ಅವನ ಮಗ ಒಂದನೇ ರಾಜೇಂದ್ರನ ಕಾಲವನ್ನು ದೇವಾಲಯಗಳ ಸುವರ್ಣ ಯುಗ ಎಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ದೇವಾಲಯಗಳು ರಚನೆಯಾಗಿವೆ.

ಮೊದಲನೇ ರಾಜರಾಜನ ಕಾಲದಲ್ಲಿ ಚೋಳ ರಾಜ ವಂಶವು ಕಡಲಾಚೆಗೂ ವಿಸ್ತರಿಸಿತ್ತು. ಇದರಿಂದ ವಿಸ್ತಾರವಾಗಿ ಹರಡಿದ ಚೋಳ ವಂಶವು ಆರ್ಥಿಕವಾಗಿಯೂ ಹೆಚ್ಚು ಸಂಪದ್ಭರಿತವಾಯಿತು. ತನ್ನ ವಿಜಯಕ್ಕೂ ಅಭಿವೃದ್ಧಿಗೂ ಸಂಕೇತವಾಗಿ ತಾನು ಪೂಜಿಸುವ ಶಿವನಿಗೆ ಆಗಸದೆತ್ತರ ಗೋಪುರ ನಿರ್ಮಿಸಲು ಯೋಜಿಸಿ ತನ್ನ ರಾಜಧಾನಿಯಾದ ತಂಜಾವೂರಿನಲ್ಲಿ ಅದನ್ನು ಕಟ್ಟಿ ಮುಗಿಸಿದ. ಅದೇ ಬೃಹದೀಶ್ವರ ದೇವಾಲಯ! ಇದನ್ನು ದೊಡ್ಡ ದೇವಾಲಯವೆಂದೂ ಕರೆಯುವರು.

ತಂಜಾವೂರಿನ ಬೃಹದೀಶ್ವರ ದೇವಾಲಯ

ತಂಜಾವೂರಿನ ಬೃಹದೀಶ್ವರ ದೇವಾಲಯವು ಭಾರತದ ದೇಗುಲಗಳಲ್ಲೇ ಅತ್ಯಂತ ದೊಡ್ಡದಾದುದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತೀಯ ದೇವಾಲಯಗಳಲ್ಲೇ ಅತ್ಯಂತ ಎತ್ತರ ಹಾಗೂ ವಿಶಾಲವಾಗಿರುವ ಈ ದೇವಾಲಯದಲ್ಲಿ ದಕ್ಷಿಣ ಭಾರತದ ದ್ರಾವಿಡ ಶೈಲಿಯ ವಾಸ್ತುಶಿಲ್ಪದ ಪರಮಾವಧಿಯನ್ನು ಕಾಣಬಹುದು. ದಕ್ಷಿಣ ಭಾರತದ ಕಟ್ಟಡ ಕಲೆಯ ಉಚ್ಚಘಟ್ಟವನ್ನು ತೋರಿಸುವ ಶ್ರೇಷ್ಠ ರಚನೆಯಾಗಿ ಈ ದೇವಾಲಯ ಕಂಡು ಬರುತ್ತದೆ. ಈ ದೇವಾಲಯ 500 ಅಡಿ ಉದ್ದ, 250 ಅಡಿ ಅಗಲವಿರುವ ಒಂದು ವಿಸ್ತಾರವಾದ ಆವರಣದೊಳಗೆ ನಿರ್ಮಾಣವಾಗಿದೆ. ಮುಂಭಾಗದಲ್ಲಿ ವಿಸ್ತೃತ ನಂದಿ ಮಂಟಪವನ್ನು ಕಾಣಬಹುದು. ಆ ಆವರಣದ ಸುತ್ತಲೂ ನಾಲ್ಕು ದಿಕ್ಕುಗಳಲ್ಲೂ ಎತ್ತರವಾದ ಗೋಡೆಗಳಿವೆ. ಪೂರ್ವ ದಿಕ್ಕಿನ ಮಧ್ಯಭಾಗದಲ್ಲಿ ಒಂದು ಗೋಪುರದ್ವಾರವಿದೆ. ಈ ದೇವಾಲಯದ ಆಕರ್ಷಣೀಯ ಅಂಶವೆಂದರೆ ಗರ್ಭಗುಡಿಯ ಮೇಲಿರುವ ಉತ್ಕೃಷ್ಟ ವಿಮಾನ. ಈ ವಿಮಾನವು 13 ಹಂತಗಳನ್ನು ಹೊಂದಿದ್ದು 216 ಅಡಿ ಎತ್ತರಕ್ಕೆ ಕಟ್ಟಲ್ಪಟ್ಟಿರುವ ಅತ್ಯಂತ ಸುಂದರವಾದ ವಿಮಾನ. ಅದರ ಅಗಾಧ ಪ್ರಮಾಣವು ಜನಾಕರ್ಷಕವಾಗಿದೆ. ಗೋಪುರದ ಮೇಲ್ಭಾಗದಲ್ಲಿ 80 ಟನ್ ತೂಕವಿರುವ ಏಕಶಿಲೆಯೊಂದಿದೆ. ಇದನ್ನು ರಾಜರಾಜನ ದಕ್ಷಿಣ

8th_Kannada_Reader Term I_U4-9.indd 81 18-06-2019 10.47.05 AM

ಮೇರು ಎಂದು ಕರೆಯುವರು. ದ್ವಾರಮಂಟಪವನ್ನು ದಾಟಿದ ಕೂಡಲೇ ಎಡಭಾಗದಲ್ಲಿ 'ಬೃಹದೇಶ್ವರಿ' (ಬೃಹದಾಂಬಾಳ್ ಅಥವಾ ಪ್ರಗದಾಂಬಾಳ್) ದೇವಾಲಯವೂ ಇದೆ.

'ದೇವಾಲಯಗಳ ದೇಗುಲ'ವೆನಿಸಿ ತುಂಬ ಎತ್ತರವಾದ ಗೋಪುರವನ್ನು ಹೊಂದಿರುವ 'ಬೃಹದೇಶ್ವರ' ದೇವಾಲಯದ ಗರ್ಭಗೃಹದೊಳಗೆ 54 ಅಡಿ ಸುತ್ತಳತೆ ಹಾಗೂ 6 ಅಡಿ ಎತ್ತರವಿರುವ ಪೀಠದ ಮೇಲೆ 17 ಅಡಿ ಎತ್ತರವಿರುವ ಲಿಂಗವಿದೆ. ಅದು ಆರಂಭದಲ್ಲಿ ರಾಜರಾಜೇಶ್ವರಲಿಂಗ ಎಂಬ ಹೆಸರನ್ನು ಪಡೆದಿತ್ತು. ಈಗ ಬೃಹದೀಶ್ವರ ಲಿಂಗ ಎಂದು ಅದನ್ನು ಕರೆಯಲಾಗುತ್ತದೆ. ಪೀಠದಿಂದ ತುದಿಯವರೆಗೆ ಅದರ ಎತ್ತರವನ್ನು ನೋಡುವಾಗ ಎರಡು ಮಹಡಿಯಷ್ಟು ಎತ್ತರವಿದೆ. ಗರ್ಭಗೃಹವನ್ನು ತಲುಪಲು ಉತ್ತರದಲ್ಲೂ, ದಕ್ಷಿಣದಲ್ಲೂ ಕೂಡ ದ್ವಾರಗಳಿವೆ. ಅದರ ಎದುರುಗಡೆ ಸ್ವಲ್ಪ ದೂರದಲ್ಲಿ ದ್ವಾರಮಂಟಪವಿದೆ. ಅದರೊಳಗಿರುವ ಏಕಶಿಲೆಯಲ್ಲಿ ಕೆತ್ತಿರುವ ನಂದಿ ದಕ್ಷಿಣ ಭಾರತದಲ್ಲಿರುವ ಏಕಶಿಲೆಯ ಅತ್ಯಂತ ದೊಡ್ಡ ಗಾತ್ರದ ಏಕೈಕ ನಂದಿಯಾಗಿದೆ. ಪ್ರಾಕಾರದಲ್ಲಿರುವ ಈ ನಂದಿಯು ಹತ್ತೊಂಬತ್ತೂವರೆ ಅಡಿ ಉದ್ದ ಹಾಗು 12 ಅಡಿ ಎತ್ತರವಿರುವ ಏಕಶಿಲೆಯಿಂದ ನಿರ್ಮಾಣವಾಗಿದೆ.

ಬೃಹದೇಶ್ವರ ದೇವಾಲಯವನ್ನು ಕಟ್ಟಿ ಮುಗಿಸಲು ಆರು ವರ್ಷಗಳಾದವು. ರಾಜರಾಜನ 19ನೇ ಆಡಳಿತ ವರ್ಷದಲ್ಲಿ (1003ರಲ್ಲಿ) ಆರಂಭವಾಗಿ 25ನೇ ವರ್ಷದಲ್ಲಿ (1009)ರಲ್ಲಿ ಇದು ಮುಕ್ತಾಯವಾಯಿತು. ಈ ದೇವಾಲಯದ ವಿಮಾನದಲ್ಲಿ ರಚಿಸಿರುವ ಶಾಸನವೊಂದು ಈತನ ಆಡಳಿತದ 26ನೇ ವರ್ಷದಲ್ಲಿ ಹಾಕಿಸಿರುವುದು. ಆರು ವರ್ಷಗಳಲ್ಲೇ ಈ ಬೃಹತ್ ದೇವಾಲಯದ ಕಾರ್ಯ ಸಂಪೂರ್ಣ ಪೂರ್ಣಗೊಂಡದ್ದು ಆಶ್ಚರ್ಯ ಹುಟ್ಟಿಸುವ ಸಂಗತಿಯಾಗಿದೆ.

ಗಾತ್ರ ವಿನ್ಯಾಸ, ಭವ್ಯತೆ ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ತಂಜಾವೂರಿನ ದೇವಾಲಯ ಅನ್ಯಾದೃಶವಾದ ಅದ್ಭುತ ನಿರ್ಮಾಣವಾಗಿದೆ. ಕ್ರಿ.ಶ. ಸುಮಾರು 1000ದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಅದರ ವಿಮಾನ ಹಾಗೂ ವಾಸ್ತು ಶೈಲಿಯ ದೃಷ್ಟಿಯಿಂದ ಪ್ರಸಿದ್ಧವಾಗಿದೆ.

ಗಂಗೈಕೊಂಡ ಚೋಳೇಶ್ವರ ದೇವಾಲಯ

ಇದರಂತಹ ಇನ್ನೊಂದು ದೇವಾಲಯ ಅವನ ಮಗನಿಂದ ಗಂಗೈಕೊಂಡ ಚೋಳಪುರಂನಲ್ಲಿ ನಿರ್ಮಾಣವಾಗಿದೆ. 1ನೇ ರಾಜರಾಜನ ನಂತರ ಅಧಿಕಾರಕ್ಕೆ ಬಂದ 1ನೇ ರಾಜೇಂದ್ರನು ತನ್ನ ತಂದೆಯು ತಂಜಾವೂರಿನಲ್ಲಿ ನಿರ್ಮಿಸಿದ ಬೃಹತ್ ದೇವಾಲಯದಂತೆಯೇ ತಾನೂ ತನ್ನ ರಾಜಧಾನಿಯಾದ ಗಂಗೈಕೊಂಡ ಚೋಳಪುರಂನಲ್ಲಿ ಒಂದು ಬೃಹತ್ ದೇವಾಲಯವನ್ನು ನಿರ್ಮಿಸಲು ಯೋಚಿಸಿದ. ಒಂದು ದೊಡ್ಡ ಕುಡಿಯುವ ನೀರಿನ ಕೆರೆಯನ್ನು ನಿರ್ಮಿಸಿ ಅದರ ಪಕ್ಕದಲ್ಲೇ ತಂಜಾವೂರಿನ ದೇವಾಲಯದಂತೆಯೇ ಇದನ್ನು ನಿರ್ಮಿಸಿದ. ಆದರೆ ತಂಜಾವೂರಿನ ದೇವಾಲಯಕ್ಕಿಂತ ವಿಸ್ತಾರ ಹಾಗೂ ಎತ್ತರದಲ್ಲಿ ಸ್ವಲ್ಪ ಚಿಕ್ಕದಾಗಿ ಕಾಣುವ ಈ ದೇವಾಲಯ ಸುಂದರ ಹಾಗೂ ಸೂಕ್ಷ್ಮ ಕಲಾವೈಭವದಿಂದ ಕೂಡಿದೆ. ಈಗ ಇದರ ಹೊರಗೋಡೆ ಶಿಥಿಲಗೊಂಡಿದೆ. ಈ ದೇವಾಲಯದಲ್ಲಿರುವ ಶಿಲ್ಪಗಳು ತಂಜಾವೂರಿನ ದೇವಾಲಯಕ್ಕಿಂತಲೂ ಸುಂದರವಾಗಿವೆ. ಇಲ್ಲಿರುವ ಕಂಚಿನ ಪ್ರತಿಮೆಗಳು ಆ ಕಾಲದ ಕಲೆಗೆ ಅತ್ಯುತ್ತಮ ಉದಾಹರಣೆಯಾಗಿವೆ.

ಇದರ ಸುತ್ತಲೂ ಎತ್ತರವಾದ ಗೋಡೆಗಳಿವೆ. ಗೋಡೆಯು ಒಂದು ರಕ್ಷಣಾತ್ಮಕ ಕೋಟೆಯ ಗೋಡೆಯಂತೆ ಭದ್ರವಾಗಿದೆ. ಇದರಲ್ಲಿ ಸಾಮಾನ್ಯವಾದ ಕೆತ್ತನೆಗಳಿರುವ 150 ಕಂಬಗಳಿವೆ. ನಂತರದ ಕಾಲದಲ್ಲಿ ನಿರ್ಮಾಣವಾದ 1000 ಕಂಬಗಳ ಮಂಟಪಕ್ಕೆ ಇದು ಮಾರ್ಗದರ್ಶಿಯಾಗಿ ರೂಪುಗೊಂಡಿದೆ. ಚೋಳರ ಈ ಕಾಲದ ಕಟ್ಟಡ ಕಲೆ ಇವೆರಡು ದೇವಾಲಯಗಳೊಂದಿಗೆ

8th_Kannada_Reader Term I_U4-9.indd 82 18-06-2019 10.47.05 AM

ಅವನತಿ ಹೊಂದಲಿಲ್ಲ. ಇನ್ನೂ ಹಲವು ನೂರು ವರ್ಷಗಳ ಕಾಲ ಇದರ ಹಿರಿಮೆ ಮೆರೆಯುವಂತೆ ಇತರ ಕೆಲವು ಕಿರು ದೇವಾಲಯಗಳೂ ಇವರ ಕಾಲದಲ್ಲಿ ರೂಪು ತಾಳಿವೆ. ಅವುಗಳಲ್ಲಿ ತುಂಬ ಮುಖ್ಯವಾದುದು ಹಾಗೂ ಮೇಲಿನ ಎರಡು ದೊಡ್ಡ ದೇವಾಲಯಗಳೆಂದರೆ, ತಂಜಾವೂರಿನಲ್ಲಿರುವ ಧಾರಾಸುರಂನಲ್ಲಿರುವ ಐರಾವತೇಶ್ವರ ದೇವಾಲಯ ಹಾಗೂ ಕುಡಂದೈಗೆ ಸಮೀಪದಲ್ಲಿರುವ ತ್ರಿಭುವನೇಶ್ವರ ದೇವಾಲಯಗಳಾಗಿವೆ. ಇವೆರಡೂ ದೇವಾಲಯಗಳೂ ಒಂದೇ ರೀತಿಯ ವಿನ್ಯಾಸವನ್ನು ಹೊಂದಿವೆ. ಐರಾವತೇಶ್ವರ ದೇವಾಲಯವು 2ನೇ ರಾಜರಾಜನ ಕಾಲದಲ್ಲೂ, ತ್ರಿಭುವನೇಶ್ವರ ದೇವಾಲಯವು 3ನೇ ಕುಲೋತ್ತುಂಗನ ಕಾಲದಲ್ಲೂ ಕಟ್ಟಪಟ್ಟವು.

ರಾಜರಾಜನು ಶ್ರೀಲಂಕಾದ ಮಹೇಂದ್ರನ ಮೇಲೆ ದಂಡೆತ್ತಿ ಹೋಗಿ ಅದನ್ನು ವಶ ಪಡಿಸಿಕೊಂಡ ಮೇಲೆ ಅಲ್ಲಿ ಹಲವು ಶೈವ ದೇವಾಲಯಗಳನ್ನು ನಿರ್ಮಿಸಿದ. ಅಲ್ಲಿನ ಒಂದು ನಗರಕ್ಕೆ ರಾಜರಾಜಪುರಂ ಎಂಬ ಹೆಸರಿದೆ. ಈ ಊರಿನಲ್ಲಿ ರಾಜರಾಜೇಶ್ವರಂ ಎನ್ನುವ ಶೈವ ದೇವಾಲಯವನ್ನು ಇವನು ನಿರ್ಮಿಸಿದ. ಶ್ರೀಲಂಕಾದಲ್ಲಿರುವ 'ಪೊಲನರುವಾ' ಎಂಬ ಸ್ಥಳದಲ್ಲೂ ಶೈವ ದೇವಾಲಯವೊಂದನ್ನು ಇವನು ನಿರ್ಮಿಸಿದ್ದಾನೆ.

ಕಣ್ಣನೂರಿನ ಬಾಲಸುಬ್ರಹ್ಮಣ್ಯ ದೇವಾಲಯ

ಒಂದನೇ ಆದಿತ್ಯನು. 'ತಿರುಪುರಂಬಿಯಂ' ಎಂಬಲ್ಲಿ ಒಂದು ಶೈವ ದೇವಾಲಯವನ್ನು ನಿರ್ಮಿಸಿದ. ಆ ದೇವಾಲಯಕ್ಕೆ ಆದಿತ್ಯೇಶ್ವರ ಎಂಬ ಹೆಸರಾಯಿತು.

ಆದಿತ್ಯನ ಕಾಲದ ಶಿಲಾದೇಗುಲಗಳಲ್ಲಿ ತಿರುಚಿಗೆ ಸಮೀಪವಿರುವ ತಿರುಮಯಂ ಜಿಲ್ಲೆಯಲ್ಲಿರುವ ಕಣ್ಣನೂರಿನ ಬಾಲಸುಬ್ರಹ್ಮಣ್ಯ ದೇವಾಲಯ ತುಂಬ ಮುಖ್ಯವಾದುದು. ಇದರ ಮೂಲ ಕಟ್ಟಡ ಕ್ರಿ.ಪೂ. 900ನೇ ಶತಮಾನದ್ದು. ನಂತರ ಇದು ಹಲವು ಸಲ ಜೀರ್ಣೋದ್ಧಾರವಾದಾಗ ಮುಖಮಂಟಪ ಹಾಗೂ ಇತರ ಕೆಲವು ಭಾಗಗಳನ್ನೂ ಮೂರ್ತಿಗಳನ್ನೂ ನಿರ್ಮಿಸಲಾಗಿದೆ.

ಈ ದೇವಾಲಯದ ಗರ್ಭಗುಡಿಯ ಉಪ್ಪರಿಗೆಯ ಮೇಲ್ಭಾಗದಲ್ಲಿ ನಾಲ್ಕು ಪಾರ್ಶ್ವಗಳಲ್ಲಿ 'ನಂದಿ'ಗಳಿಗೆ ಬದಲಾಗಿ 'ಆನೆ'ಗಳ ಪ್ರತಿಕೃತಿಗಳಿವೆ. ಇಲ್ಲಿ ಕಂಡು ಬರುವ ಮುರುಗ(ಸುಬ್ರಹ್ಮಣ್ಯ)ನ ಕೈಯಲ್ಲಿ ಹುಂಜದ ಧ್ವಜವೂ, ಹಿಂಭಾಗದಲ್ಲಿ ಮಯೂರವೂ ಕಂಡು ಬರುತ್ತದೆ.

ಶ್ರೀನಿವಾಸ ನಲ್ಲೂರ್‌ನ ಕುರಂಗನಾಥ ದೇವಾಲಯ

ಒಂದನೇ ಪರಾಂತಕನ ಕಾಲಾವಧಿಯಲ್ಲಿ ತಿರುಚಿನಾಪಳ್ಳಿ ಜಿಲ್ಲೆಯ ಶ್ರೀನಿವಾಸ ನಲ್ಲೂರಿನಲ್ಲಿ 'ಕೊರಂಗನಾಥ' ದೇವಾಲಯವನ್ನು ನಿರ್ಮಿಸಲಾಯಿತು. ಈ ದೇವಾಲಯದಲ್ಲಿರುವ ಶಿಲಾಶಾಸನದಿಂದ ಇದರ ಮೂಲದೇವರಿಗೆ 'ತಿರುಕುರುಕ್ಕತ್ತು ತುರೈ ಪೆರುಮಾನ್ ಅಡಿಗಳ್' ಎಂಬ ಹೆಸರಿತ್ತೆಂದು ತಿಳಿಯುತ್ತದೆ. ಈ ದೇವಾಲಯದಲ್ಲಿರುವ ಶಾಸನಗಳ ಆಧಾರದಿಂದ ಇದು 12ನೇ ಶತಮಾನದವರೆಗೆ ನಿರಂತರವಾಗಿ ಜನರಿಂದ ಪೂಜೆಗೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ.

ದಕ್ಷಿಣ ದಿಕ್ಕಿನಲ್ಲಿರುವ ಗೋಡೆಯ ನಡುವೆ ಕಾಳಿಯ ಮೂರ್ತಿ ಇದೆ. ಅವಳ ಎರಡು ಬದಿಗಳಲ್ಲೂ ಸರಸ್ವತಿ ಹಾಗೂ ಲಕ್ಷ್ಮಿಯರ ಸುಂದರ ಮೂರ್ತಿಗಳಿವೆ. ಕಾಳಿಯ ಪಾದಗಳ ಬಳಿ ರಾಕ್ಷಸರ ಮೂರ್ತಿಗಳೂ, ಸುತ್ತಲೂ ಕಿರು ದೇವತೆಗಳು ಮೂರ್ತಿಗಳೂ ಇವೆ.

ದೊಡ್ಡಮಳೂರು

ಚೋಳರ ಕಾಲದಲ್ಲಿ ನಿರ್ಮಾಣವಾದ ಕೆಲವು ದೇವಾಲಯಗಳು ಕರ್ನಾಟದಲ್ಲೂ ಕಂಡು ಬರುತ್ತವೆ. ಕರ್ನಾಟಕದ ಕೋಲಾರಮ್ಮನ ದೇವಾಲಯ, ಚಾವುಂಡರಾಯ ಬಸದಿ ಮುಂತಾದ ದೇವಾಲಯಗಳ ಮೇಲೆ ಪಲ್ಲವರ ಕಾಲದ ದೇಗುಲಗಳ ಪ್ರಭಾವ ನಿಚ್ಚಳವಾಗಿ ಕಂಡು ಬರುತ್ತದೆ. ಹೀಗೆ ಆರಂಭ ಕಾಲದ ಕರ್ನಾಟಕದ ಹಲವು ದೇವಾಲಯಗಳಲ್ಲಿ ಪಲ್ಲವ

8th_Kannada_Reader Term I_U4-9.indd 83 18-06-2019 10.47.05 AM

ಚೋಳರ ಪ್ರಭಾವವನ್ನು ಕಾಣಬಹುದು.

ದೊಡ್ಡಮಳೂರಿನಲ್ಲಿರುವ ಬಾಲಕೃಷ್ಣನ ದೇವಾಲಯವು ಇವರ ಕಾಲದ ಪ್ರಮುಖ ದೇವಾಲಯಗಳಲ್ಲೊಂದಾಗಿದೆ. ಬೆಂಗಳೂರಿಗೆ ಸೇರಿದ ಚನ್ನಪಟ್ಟಣ ತಾಲೂಕಿನಿಂದ ಸುಮಾರು 5 ಕಿ.ಮೀ. ದೂರದಲ್ಲಿ ಕಣ್ವ ನದಿಯ ದಂಡೆಯ ಮೇಲೆ ಮಳೂರು ಇದೆ. ಕ್ರಿ.ಶ. 1000 ಚೋಳರ ಅಧಿಕಾರಿಯೊಬ್ಬ ಇದನ್ನು ಅಗ್ರಹಾರವಾಗಿ ನಿರ್ಮಿಸಿದ್ದಾನೆ. ಆಗ ಇದಕ್ಕಿದ್ದ ಹೆಸರು ಪೆರಿಯ ಮಳೂರು ಅಗ್ರಹಾರವೆಂಬುದಾಗಿತ್ತು. ಇದಕ್ಕೆ ರಾಜೇಂದ್ರ ಸಿಂಹ ನಗರ ಎಂಬ ಹೆಸರೂ ಇತ್ತು. ಇಲ್ಲಿ ಚೋಳರ ಕಾಲದ ಕೈಲಾಸೇಶ್ವರ, ಅಪ್ರಮೇಯ ದೇವಾಲಯಗಳಿವೆ. ಕ್ರಿ.ಶ.1000ದಲ್ಲಿ ಇದನ್ನು ಅಗ್ರಹಾರದ ಭಾಗವಾಗಿ ಕಟ್ಟಲಾಗಿದೆ.

ಅಂಬೆಗಾಲಿಟ್ಟುಕೊಂಡು ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವ ಇಲ್ಲಿನ ಬಾಲಕೃಷ್ಣನ ವಿಗ್ರಹ ಮೋಹಕವಾದುದು. ಮಹಾದ್ವಾರದಿಂದ ಒಳಗೆ ಪ್ರವೇಶಿಸುತ್ತಿದ್ದಂತೆ ಪಾತಾಳ ಅಂಕಣವಿದೆ. ಎತ್ತರದ ಅಷ್ಟಮುಖ ಕಂಬಗಳಿಂದ ಎತ್ತಿದ ಈ ಭಾಗದಲ್ಲಿ ರಾಮದಾಸ ಮತ್ತು ಅವನ ಪತ್ನಿ ಮಂಚಿಲಕ್ಷಿಯ ಕೈಮುಗಿದು ನಿಂತಿರುವ ವಿಗ್ರಹಗಳಿವೆ. ಈ ಭಾಗ ಚನ್ನಪಟ್ಟಣದ ಜಗದೇವರಾಯನ ಕಾಲದ ರಚನೆ.

ಭಿನ್ನ ಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ, ನೆಲಮಂಗಲಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಭಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯವು ರಾಜರಾಜನ ಕಾಲದಲ್ಲಿ ನಿರ್ಮಾಣವಾಗಿ, ರಾಜೇಂದ್ರ ಚೋಳನಿಂದ ಕ್ರಿ.ಶ. 1110ರಲ್ಲಿ ದಾನ ಪಡೆದಿದೆ. ಹರಿ–ಹರ ಅಬೇಧ ಕಲ್ಪನೆಗೆ ಈ ದೇವಾಲಯವು ಮಹತ್ವದ ಉದಾಹರಣೆಯಾಗಿದೆ. ಹೊರ ಭಿತ್ತಿಯ ಮತ್ತು ನವರಂಗದ ಕಂಬಗಳಲ್ಲಿನ ಶಿಲ್ಪಗಳು ಉದಾಹರಣ ಯೋಗ್ಯವಾಗಿವೆ.

ಕೃತಿ ಕರ್ತೃ ಪರಿಚಯ



ಡಾ. ತಮಿಳ್‌ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕನ್ನಡ ಹಾಗೂ ತಮಿಳು ಎರಡೂ ಭಾಷೆಗಳಲ್ಲೂ ಪರಿಣತಿ ಗಳಿಸಿದ್ದಾರೆ. ಹಳಗನ್ನಡ ಕಾವ್ಯಗಳ ವಾಚನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದಾರೆ. ತಮಿಳು ಹಾಗೂ ಕನ್ನಡ ಎರಡೂ ಭಾಷೆಗಳ ನಡುವೆ ಸೌಹಾರ್ದ ಸಂಬಂಧ ಬೆಸೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೈಚಾರಿಕ ದೃಷ್ಟಿಕೋನ, ಸೃಜನಶೀಲತೆ ಹಾಗೂ ಶೈಕ್ಷಣಿಕ ವಲಯದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಹೆಸರು ಮಾಡಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಪಿಎಚ್.ಡಿ ಪ್ರಬಂಧವನ್ನು ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಇತ್ತೀಚೆಗೆ ತಮಿಳು ಹಾಗೂ ಕನ್ನಡ ಭಾಷೆಗಳ ನಡುವಿನ ಅನನ್ಯತೆಯನ್ನು ಕುರಿತು ಮಾಡಿರುವ ಸಂಶೋಧನಾ ಪ್ರಬಂಧಕ್ಕೆ ಡಿ.ಲಿಟ್., ಪದವಿಯನ್ನೂ ಗಳಿಸಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಲಿ, ಪರೀಕ್ಷಾ ಮಂಡಲಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ತಮಿಳು ನಾಡು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸಂಕ್ರಾಂತಿ, ನೇಪಥ್ಯ, ಪಲ್ಲವ–ಚೋಳ ಶಿಲ್ಪಕಲೆ, ಅಶೋಕ ಮಿತ್ರನ್ ಕಥೆಗಳು, ಅನನ್ಯ, ಅವಲೋಕನ ಮೊದಲಾದ ಮುವ್ವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

8th_Kannada_Reader Term I_U4-9.indd 84 18-06-2019 10.47.05 AM

ಪದಗಳ ಅರ್ಥ

ಮೂವೇಂದರ್–ಮೂವರು ಅರಸರು; ಚಿರಸ್ಥಾಯಿ–ಶಾಶ್ವತ; ಮುಖಜ ಭೂಮಿ–ತೀರ ಪ್ರದೇಶ, ದಡ; ಕಿಳ್ಳಿ–ರಾಜ; ಪ್ರಾಬಲ್ಯ–ಪ್ರಬಲತೆ, ಶಕ್ತಿಶಾಲಿ, ಮುಂಚೂಣಿ;

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಚೋಳರ ಇತಿಹಾಸ ಎಲ್ಲಿಂದ ಕಂಡು ಬರುತ್ತದೆ?
2. ಸಂಗಂ ಕಾಲ ಎಂದರೇನು ?
3. ಚೋಳರ ಮೊದಲ ಅರಸ ಯಾರು ?
4. ಚೋಳ ವಂಶವನ್ನು ಮತ್ತೆ ಏಳಿಗೆಗೆ ತಂದವನು ಯಾರು?
5. ವಿಜಯಾಲನ ಚೋಳನ ನಂತರ ಬಂದ ಅರಸರು ಎಷ್ಟು ವರ್ಷ ಆಳ್ವಿಕೆ ನಡೆಸಿದ್ದಾರೆ?
6. ಚೋಳ ವಂಶದಲ್ಲಿ ಸುಮಾರು ಎಷ್ಟು ಜನ ಅರಸರು ಕಂಡು ಬರುತ್ತಾರೆ ?
7. ದೇವಾಲಯಗಳ ಯುಗ ಎಂದು ಯಾರ ಕಾಲವನ್ನು ಕರೆಯಲಾಗುತ್ತದೆ?
8. ನಾರ್ತಾಮಲೈಯಲ್ಲಿರುವ ದೇವಾಲಯಗಳು ಯಾವುವು? ಅವುಗಳನ್ನು ನಿರ್ಮಿಸಿದವರು ಯಾರು?
9. ಸೆಂಬಿಯನ್ ಮಹಾದೇವಿ ನಿರ್ಮಿಸಿದ ದೇವಾಯಲಯ ಯಾವುದು? ಎಲ್ಲಿ?
10. ಒಂದನೇ ರಾಜರಾಜೇಶ್ವರನು ನಿರ್ಮಿಸಿರುವ ಪ್ರಮುಖ ದೇವಾಲಯ ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಚೋಳರ ಪ್ರಮುಖ ಅರಸರನ್ನು ಹೆಸರಿಸಿ.?
2. ಚೋಳ ಸಾಮ್ರಾಜ್ಯವು ಎಲ್ಲಿಂದ ಎಲ್ಲಿಯವರೆಗೆ ವಿಸ್ತಾರವಾಗಿ ಹರಡಿತ್ತು ?
3. ಕರಿಕಾಲ ಚೋಳನಿಗೆ ಆ ಹೆಸರು ಬರಲು ಕಾರಣವೇನು ?
4. ವಿಜಯಾಲಯನು ಗಳಿಸಿದ ಬಿರುದುಗಳು ಯಾವುವು? ಯಾವ ಕಾರಣದಿಂದ ಅವನಿಗೆ ಆ ಬಿರುದುಗಳು ಲಭಿಸಿದವು ?
5. ಚೋಳರ ಕಾಲದ ದೇವಾಲಯಗಳನ್ನು ಎಷ್ಟು ವಿಧಗಳಾಗಿ ವಿಂಗಡಿಸಬಹುದು ?
6. ಬೃಹದೀಶ್ವರ ದೇವಾಲಯದ ವಿಮಾನದ ಬಗ್ಗೆ ಬರೆಯಿರಿ.
7. ಬೃಹದೀಶ್ವರ ದೇವಾಲಯದ ಶಿವಲಿಂಗವು ಎಷ್ಟು ಎತ್ತರವಿದೆ? ವಿವರಿಸಿ.
8. ಶ್ರೀನಿವಾಸ ನಲ್ಲೂರಿನಲ್ಲಿರುವ ದೇವಾಲಯದ ವಿವಣೆಯನ್ನು ನೀಡಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಪ್ರಾಚೀನ ಕಾಲದ ಚೋಳರ ದೇವಾಲಯಗಳನ್ನು ವಿವರಿಸಿ.
2. ಬೃಹದೀಶ್ವರ ದೇವಾಲಯವನ್ನು ವರ್ಣಿಸಿ.
3. ಗಂಗೈಕೊಂಡ ಚೋಳೇಶ್ವರ ದೇವಾಲಯವನ್ನು ಪರಿಚಯಿಸಿ.
4. ಕರ್ನಾಟಕದಲ್ಲಿ ಕಂಡು ಬರುವ ಚೋಳರ ಪ್ರಮುಖ ದೇವಾಲಯಗಳು ಯಾವುವು? ಅವುಗಳನ್ನು ವಿವರಿಸಿ.
5. ಕಣ್ಣಾನೂರಿನ ಬಾಲಸುಬ್ರಹ್ಮಣ್ಯ ದೇವಾಲಯದ ವಿಶೇಷತೆಗಳೇನು?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ದೇವಾಲಯ, ಅರಸ, ಯುದ್ಧ, ಆನೆ, ಪ್ರತಿಮೆ, ಆದಿತ್ಯ, ಸುವರ್ಣ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ಎತ್ತರದಲ್ಲಿ, ಪರಮಾವಧಿ, ಮಂಟಪವನ್ನು,

8th_Kannada_Reader Term I_U4-9.indd 85 18-06-2019 10.47.05 AM

ಹಂತಗಳನ್ನು, ದೊಡ್ಡದಾದುದು.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಎತ್ತರ, ಆರಂಭ, ದೂರ, ಸರಳ, ಪ್ರಾಚೀನ, ಅವನತಿ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

ನಿರ್ಮಾಣ, ಬೆಳವಣಿಗೆ, ಸಂಬಂಧಿಸಿದಂತೆ, ವಿನ್ಯಾಸ, ಮಧ್ಯಕಾಲೀನ.

ಚಟುವಟಿಕೆ

1. ಚೋಳರ ಪ್ರಮುಖ ದೇವಾಲಯಗಳಿಗೆ ಭೇಟಿ ಕೊಟ್ಟು, ನೀವು ಅಲ್ಲಿ ಏನನ್ನು ನೋಡಿದಿರಿ ಎಂಬುದರ ಬಗ್ಗೆ ಪ್ರಬಂಧ ಬರೆಯಿರಿ.
2. ತಮಿಳುನಾಡಿನ ಪ್ರಖ್ಯಾತ ದೇವಾಲಯಗಳು ಯಾವುವು ಎಂಬುದನ್ನು ಪಟ್ಟಿ ಮಾಡಿ.

ಚಿಂತನೆಗಳು

ಕಾಯಕವೇ ಕೈಲಾಸ – **ಬಸವಣ್ಣ**

ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ – **ಬಸವಣ್ಣ**

ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

ಜ್ಞಾನಿಯಾದರೆ ಸಾಲದು, ಮಾನವೀಯತೆ ಬೇಕು.

ಮಾತೆಂಬುದು ಜ್ಯೋತಿರ್ಲಿಂಗ – **ಅಲ್ಲಮಪ್ರಭು**

ಏನಾದರೂ ಆಗು ಮೊದಲು ನೀ ಮಾನವನಾಗು – **ಕಾವ್ಯಾನಂದ**

ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ – **ವಿವೇಕಾನಂದ**

ನಗಲು ಬರುವವನು ಮಾತ್ರ ಇತರರನ್ನು ನಗಿಸಬಲ್ಲ – **ವಿಟಮನ್**

ನಡತೆ ಮತ್ತು ಜ್ಞಾನವು ಹೃದಯದ ಎರಡು ರೆಕ್ಕೆಗಳು – **ಬುದ್ಧ**

ಅಂದು, ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು, ಸಾಗುತಿತ್ತು ರಣಧೀರರ ದಂಡು

ಇಂದು ಹಿಂದೆ ಗುರುವಿಲ್ಲ, ಮುಂದೆ ಗುರಿಯಿಲ್ಲ, ಸಾಗುತಿದೆ ರಣಹೇಡಿಗಳ ಹಿಂಡು **–ಕುವೆಂಪು**

ಪಂಪ ಪೊನ್ನ ರನ್ನ – **ಕನ್ನಡ ಸಾಹಿತ್ಯದ ರತ್ನತ್ರಯರು**

ಸುವಿಚಾರ ಧಾರೆಗಳು ಎಲ್ಲೆಡೆಯಿಂದ ಹರಿದು ಬರಲಿ – **ವೇದ.**

8th_Kannada_Reader Term I_U4-9.indd 86 18-06-2019 10.47.06 AM

ಉಪಪಠ್ಯ

ಘಟಕ ಐದು

ನಾವು, ನಮ್ಮ ಮಕ್ಕಳು

– (ಸಂಗ್ರಹ)



ಉತ್ತಮವಾದ ಆಚಾರ–ವಿಚಾರ, ಸಂಸ್ಕೃತಿ–ಸಂಪತ್ತು ಹೊಂದಿರುವ ನಾಡು ನಮ್ಮ ಭಾರತ ದೇಶ. ಭಾರತಕ್ಕೆ ತನ್ನದೇ ಆದ ಸಂಸ್ಕೃತಿ, ಆಚಾರ–ವಿಚಾರಗಳಿವೆ. ಪಾಶ್ಚಾತ್ಯ ದೇಶಕ್ಕೆ ಹೋಲಿಸಿದರೆ ಇಂದಿಗೂ ಕೂಡ ನಮ್ಮಲ್ಲಿ ಮಾನವೀಯ ಮೌಲ್ಯಗಳು ಜೀವಂತವಾಗಿವೆ. ಬದಲಾಗುತ್ತಿರುವ ಪ್ರಪಂಚದಲ್ಲಿ ನಮ್ಮ ಇಂದಿನ ಸಂತತಿಯವರು ಮಾನವೀಯ ಮೌಲ್ಯಗಳಿಂದ, ಸಂಬಂಧಗಳಿಂದ ದೂರವಾಗುತ್ತಿದ್ದಾರೆ. ಈ ರೀತಿಯಲ್ಲಿ ನಮ್ಮ ಮಕ್ಕಳೂ ಆಗದೆ ನಮ್ಮ ಸನಾತನ ಸಂಸ್ಕೃತಿ, ಮೌಲ್ಯಗಳನ್ನು ಉಳಿಸಿಕೊಂಡು ಹೋಗಬೇಕೆನ್ನುವ ಅಂಶ ಇಲ್ಲಿ ನಿರೂಪಿತವಾಗಿದೆ.







8th_Kannada_Reader Term I_U4-9.indd 87 18-06-2019 10.47.06 AM

'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' – ಈ ನುಡಿಯನ್ನು ಇನ್ನಷ್ಟು ವಿಸ್ತರಿಸಿ 'ಮಕ್ಕಳ ಹುಟ್ಟಿಗಾಗಿ' ಎಂದರೆ ಸಮಂಜಸವಾದೀತು. ಅಲ್ಲವೇ? ಹೊಟ್ಟೆ ಬಟ್ಟೆಗಳ ನಂತರ ನಮ್ಮ ತರುವಾಯ ಸಂತಾನವಾಹಿನಿ ಮುಂದೆ ಸಾಗಬೇಕು. ನಮ್ಮ ಮಕ್ಕಳಲ್ಲಿಯೇ ಸಂತೃಪ್ತಿ ಹೊಂದಬೇಕು. ಅವರ– ನಮ್ಮ ಸುಖ ಸಂತೋಷಗಳನ್ನು ಕಾಣಬೇಕು ಎಂಬಾಸೆ ಸಕಲರದು. ಅದಕ್ಕಾಗಿಯೇ ಗರತಿಯೊಬ್ಬಳು,

'ತಾಯಿ ಇದ್ರ ತವರು ಹೆಚ್ಚು, ತಂದೆ ಇದ್ರ ಬಳಗ ಹೆಚ್ಚು
ಸಾವಿರಕೆ ಹೆಚ್ಚು ಪತಿರಾಯ । ನಿನಗಿಂತ
ಮಾಣಿಕದ ಹರಳು ಮಗ ಹೆಚ್ಚು ॥

ಎಂದು ಹಾಡಿರುವುದು ಮಕ್ಕಳ ಮೇಲಿರುವ ತಾಯಿಯ ಅಕ್ಕರೆಯನ್ನು ಎತ್ತಿ ತೋರುತ್ತದೆ. ಅಂತೆಯೇ ಅವರ ಬೆಳವಣಿಗೆಗಾಗಿ ಭವ್ಯ ಭವಿಷ್ಯತ್ತಿಗಾಗಿ ನಾವು ಚಿಂತಿಸುತ್ತೇವೆ. ಅವರಿಗಾಗಿ ಹಗಲಿರುಳು ದುಡಿದು ಹಣ ಕೂಡಿ ಹಾಕುತ್ತೇವೆ. ಆಸ್ತಿ ಸಂಪಾದಿಸುತ್ತೇವೆ. ಶಿಕ್ಷಣ ಕೊಡಿಸುತ್ತೇವೆ. ಏನೆಲ್ಲ ತ್ಯಾಗ ಮಾಡುತ್ತೇವೆ. ಇಷ್ಟಾದರೂ ನಮ್ಮ ಆಶೋತ್ತರಗಳಿಗೆ ಅನುಗುಣವಾಗಿ ಮಕ್ಕಳು ಬೆಳೆಯದಿದ್ದರೆ ವಿಶಾದ ಪಡುತ್ತೇವೆ. ನಿರಾಸೆ ಉಳ್ಳವರಾಗುತ್ತೇವೆ. ಮಾನಸಿಕವಾಗಿ ನೊಂದು ಕೊಳ್ಳುತ್ತೇವೆ. ಹಾಗಾದರೆ ನಾವು ಎಲ್ಲಿ ತಪ್ಪುತ್ತಿದ್ದೇವೆ. ಏಕೆ ಹೀಗಾಗುತ್ತಿದೆ ಎಂಬ ವಿಚಾರ ಬರುವುದು ಸಹಜ.

ಹಳ್ಳಿಯ ನನ್ನ ಸ್ನೇಹಿತನೊಬ್ಬ ಆಗಾಗ ತನ್ನ ಮಗನ ಜಾಣತನದ ಬಗೆಗೆ ಅಭಿಮಾನ ಪೂರ್ವಕವಾಗಿ ನನ್ನ ಮುಂದೆ ಹೇಳುತ್ತಿದ್ದ : 'ನೋಡ್ರೀ ಸರ್... ನನ್ನ ಮಗ ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಕೇಂದ್ರಕ್ಕೇ ಒಂದನೆ ನಂಬರದಲ್ಲಿ ಪಾಸಾಗಿದ್ದಾನೆ' ಎಂದು ಹೇಳಿದಾಗ, 'ಆಗಲಿ, ಮುಂದೆ ಚೆನ್ನಾಗಿ ಕಲಿಸು' ಎಂದಿದ್ದೆ. ಎರಡು ವರ್ಷಗಳ ತರುವಾಯ ಅವನು ನನಗೆ ಭೆಟ್ಟಿಯಾಗಿ, 'ಸರ್... ನನ್ನ ಮಗ ಈ ವರ್ಷ ಪಿಯೂಸಿಯಲ್ಲಿ ಜಿಲ್ಲೆಗೇ ಪ್ರಥಮ ಸ್ಥಾನ ಪಡೆದಿದ್ದಾನೆ' ಎಂದು ಅವನು ಅತ್ಯಂತ ಹೆಮ್ಮೆಯಿಂದ ಹೇಳಿದ.

'ಎಷ್ಟೇ ಕಷ್ಟ ಬರಲಿ ಅವನ ಶಾಲೆ ಬಿಡಿಸುವುದಿಲ್ಲ' ಎಂದ ಅವನ ಅಭಿಮಾನ, ಸಂತೋಷಕ್ಕೆ ಎಣೆಯೇ ಇರಲಿಲ್ಲ. ಅದಾದ ಏಳೆಂಟು ವರ್ಷಗಳ ನಂತರ ಪೇಟೆಯಲ್ಲಿ ಜೋಲು ಮೋರೆ ಹಾಕಿಕೊಂಡು ಕಾಲೆಳೆಯುತ್ತಾ ನಡೆಯುತ್ತಿದ್ದುದನ್ನು ಕಂಡು ನಾನೇ ಅವನನ್ನು ನಿಲ್ಲಿಸಿ, 'ಏನಪ್ಪಾ, ಈಗ ನಿನ್ನ ಮಗ ಏನು ಮಾಡುತ್ತಿದ್ದಾನೆ?' ಎಂದು ಕೇಳಿದೆ. 'ಥೂ, ಬಿಡ್ರೀ... ಅವನ ಹೆಸರ ಎತ್ತಬ್ಯಾಡ್ರೀ. ಇದ್ದ ಒಂದು ಹೊಲ ಮಾರಿ ಇಂಜಿನಿಯರನ್ನಾಗಿ ಮಾಡಿದೆ. ಮದುವೇನೂ ಮಾಡಿದೆ. ಈಗ ಅಂವ ಬೇರೆ ಮನಿ ಮಾಡ್ಯಾನ್ರಿ. ಮನಿಗೆ ಹೋದ್ರ ಮಾತಾಡಿಸೂದಿಲ್ರೀ...'

ದುಃಖ ಉಕ್ಕಿ ಬಂದು ಮುಂದೆ ಅವನಿಂದ ಮಾತು ಹೊರಬರಲಿಲ್ಲ.

ಇದು ಯಾರ ತಪ್ಪು? ಅವನನ್ನು ಕಷ್ಟಪಟ್ಟು ಕಲಿಸಿದ ತಂದೆತಾಯಿಗಳದ್ದೇ? ಇಂದಿನ ಶಿಕ್ಷಣದ ದೋಷವೇ? ನನ್ನ ಮನಸ್ಸಿನಲ್ಲಿ ಚಿಂತೆ ಎಡೆ ಮಾಡಿತು. ತನ್ನ ಅಭ್ಯುದಯಕ್ಕಾಗಿ ಸರ್ವವನ್ನೂ ತ್ಯಾಗ ಮಾಡಿದ ಮುಪ್ಪಿನ ತಂದೆತಾಯಿಗಳನ್ನು ನೋಡದ ಮಗ ಎಷ್ಟು ಕಲಿತರೇನು? ಯಾವ ಹುದ್ದೆಯಲ್ಲಿದ್ದರೇನು? ಇಂದು ಹೆಚ್ಚು ಶ್ರೀಮಂತ ವೃದ್ಧರೇ ಮಕ್ಕಳ ಅನಾದರದಿಂದ ವೃದ್ಧಾಶ್ರಮ ಸೇರುತ್ತಿರುವುದನ್ನು ಕಾಣುತ್ತಿದ್ದೇವೆ. ಬುದ್ಧಿಜೀವಿಗಳು ಈ ಬಗ್ಗೆ ಯೋಚನೆ ಮಾಡಬೇಕಾದುದು ತೀರ ಅವಶ್ಯ.

'ಮನೆಯೇ ಮೊದಲ ಪಾಠಶಾಲೆ; ಜನನಿ ತಾನೆ ಮೊದಲು ಗುರುವು' ಎಂಬಂತೆ ಬಾಲ್ಯ ಜೀವನ ತಾಯಿಯ ತೊಡೆಯ ತೊಟ್ಟಿಲಲ್ಲಿಯೇ ಕಳೆಯುತ್ತದೆ. ತಾಯಿಯ ಜೋಗುಳ ಹಾಡಿನ ಪ್ರೀತಿ ವಾತ್ಸಲ್ಯಗಳೊಂದಿಗೆ ಮಗುವಿನ ಮನಸ್ಸು ರೂಪುಗೊಳ್ಳುತ್ತದೆ. ನಡೆಗಲಿಸಿ, ನುಡಿಗಲಿಸಿ ಮುದ್ದಿಸಿ, ಲಾಲನೆಪಾಲನೆ ಮಾಡಿದ ತಾಯಿ ದೇವರೆಂದೂ, ವೇದ ಕೂಡ ಹೇಳಿದೆ. ಮಗುವನ್ನು ಮನುಷ್ಯನನ್ನಾಗಿ ಮಾಡುವಲ್ಲಿ ತಾಯಿಯ ಪಾತ್ರ ದೊಡ್ಡದು.

'ಯಾವನೇ ಒಬ್ಬ ಮಹಾಪುರುಷನ ಶ್ರೇಯಸ್ಸಿನ ಹಿಂದೆ ಒಬ್ಬ ತಾಯಿ ಇದ್ದೇ ಇರುತ್ತಾಳೆ' ಎಂಬುದು ಎಲ್ಲರಿಗೂ ತಿಳಿದ ವಿಷಯ.

ಇಂದು ಜೀವನ ಕ್ರಮ ಬಹಳಷ್ಟು ಬದಲಾವಣೆಯಾಗಿದೆ. ಮಕ್ಕಳು ಮನೆಯಲ್ಲಿ ತಾಯಿ ತಂದೆಗಳ ಹತ್ತಿರ ಇರುವುದಕ್ಕಿಂತ ಹೆಚ್ಚು ಸಮಯ

8th_Kannada_Reader Term I_U4-9.indd 88 18-06-2019 10.47.06 AM

ಹೊರಗೇ ಕಳೆಯುತ್ತಾರೆ. ಇಲ್ಲವೇ ಮನೆಯಲ್ಲಿದ್ದೂ ಟಿ.ವಿ.ಯೊಡನೆ ನಿಕಟ ಸಂಬಂಧವಿರಿಸಿಕೊಳ್ಳುತ್ತಾರೆ. ದೂರದರ್ಶನ ಮಕ್ಕಳನ್ನು ಮಾನಸಿಕವಾಗಿ ತಾಯಿ ತಂದೆಗಳಿಂದ ದೂರ ಮಾಡುತ್ತದೆ. ಭಾವಜೀವಿಗಳಾದ ಮಕ್ಕಳು ಆಕರ್ಷಕವಾದುದನ್ನು ಬಹುಬೇಗ ಸ್ವೀಕರಿಸುತ್ತಾರೆ. ಇದರಿಂದಾಗಿ ಅವರು ಕೆಲವೊಂದು ಕೆಟ್ಟ ಚಟಗಳನ್ನೂ ರೂಢಿಸಿಕೊಳ್ಳಬಹುದು. ಕಳವು, ಹಿಂಸೆಗಳತ್ತ ಅವರ ಮನಸ್ಸು ತಿರುಗಬಹುದು. ಕೆಲ ಕಾಲದ ಹಿಂದೆ, ಅಮೇರಿಕೆಯಲ್ಲಿ ಓರ್ವ ವಿದ್ಯಾರ್ಥಿ ಶಾಲೆಯಲ್ಲಿ ಸಿಕ್ಕ ಹಾಗೆ ಗುಂಡು ಹಾರಿಸಿ, ಹದಿನಾರು ಜನ ವಿದ್ಯಾರ್ಥಿಗಳನ್ನು ಕೊಂದ ಸಂಗತಿ ಪತ್ರಿಕೆಗಳಲ್ಲಿ ಓದಿದ್ದೇವೆ. ಅಲ್ಲಿ ಇಂತಹ ಘಟನೆಗಳು ಸರ್ವೇ ಸಾಮಾನ್ಯ. ಇಂತ ಪಿಡುಗು ನಮ್ಮಲ್ಲಿಯೂ ಹರಡುವ ಕಾಲ ದೂರ ಇಲ್ಲ. ಈ ಬಗ್ಗೆ ಪಾಲಕರು ಎಚ್ಚರಾಗಬೇಕು. ಉತ್ತಮ ಸಂಸ್ಕಾರ ಬೀರುವ ಧಾರವಾಹಿ ಹಾಗೂ ಚಲನಚಿತ್ರಗಳತ್ತ ಅವರು ಗಮನ ಹರಿಸಬೇಕು.

ಓದು ಬಲ್ಲವರೆಲ್ಲ ಒಳ್ಳೆಯವರೇನಲ್ಲ
ಪದವಿ ಪಂಡಿತರೆಲ್ಲ ಅರಿತು ನಡೆದವರಲ್ಲ
ಹೊಟ್ಟೆ ಪಾಡಿನ ವಿದ್ಯೆ ಎಷ್ಟು ಕಲಿತರು ಏನು
ಒಳ್ಳೆ ಮಾನವನಾಗಿ ಬಾಳದಿರೆ ನೀನು ?

ಎಂಬಂತೆ ಇಂದಿನ ಕಾಲದ ವಿದ್ಯೆ ಕೇವಲ ಹೊಟ್ಟೆಪಾಡಿಗಾಗಿ ಹಾಗೂ ತನ್ನ ಸುಖ ಸೌಕರ್ಯಗಳಿಗಾಗಿ ಮಾತ್ರ ಸೀಮಿತವಾಗಿದೆ. ಮಕ್ಕಳ ಚಾರಿತ್ರ್ಯ ನಿರ್ಮಾಣದತ್ತ ಅದು ಗಮನ ಹರಿಸುವುದಿಲ್ಲ. ಮಾನವೀಯ ಭಾವನೆಗಳ ವಿಕಾಸಕ್ಕೆ ಆಸ್ಪದವಿಲ್ಲ. ಹೃದಯ ಅರಳಿಸದ ಬರೀ ತಲೆ ಬೆಳೆಸುವ ಶಿಕ್ಷಣದಿಂದ ಸ್ವಾರ್ಥ ಹೆಚ್ಚುತ್ತಿದೆ. ಹಿಂಸೆ–ಭಯೋತ್ಪಾದನೆಗೆ ಆಸ್ಪದ ಕಲ್ಪಿಸಿ ಕೊಡುತ್ತದೆ. ಓದು, ಹೃದಯ ವೈಶಾಲ್ಯಕ್ಕೆ ಮಾನವೀಯ ಸದ್ಭಾವನೆಗಳಿಗೆ ಕಾರಣವಾಗಬೇಕು. ಆ ರೀತಿಯ ಶಿಕ್ಷಣ ಮಕ್ಕಳಿಗೆ ಅವಶ್ಯಕ.

ನಾವು ಮಕ್ಕಳನ್ನು ಪ್ರೀತಿಸುವಂತೆಯೇ ಅವರನ್ನು ನಮ್ಮ ಬದುಕಿಗೆ ತಕ್ಕಂತೆ ರೂಪಿಸಲು ಯತ್ನಿಸುತ್ತೇವೆ. ಮಕ್ಕಳಲ್ಲಿ ಆ ವಿಷಯದ ಬಗ್ಗೆ ಆಸಕ್ತಿ ಎಳ್ಳಷ್ಟೂ ಇರದಿದ್ದರೂ ಅವರನ್ನು ಇಂಜಿನಿಯರ್ ಅಥವಾ ಡಾಕ್ಟರನ್ನಾಗಿ ಮಾಡುವ... ಓದಿನಲ್ಲಿ ಅವರು ಪ್ರಗತಿ ಕಾಣದಿದ್ದರೆ ನಾವು ನಮ್ಮ ಹಠವನ್ನೇ ಸಾಧಿಸಿ ಮಕ್ಕಳ ಮಾನಸಿಕ ಹಿಂಸೆಗೆ ಕಾರಣರಾಗುತ್ತೇವೆ. ಇದರಿಂದ ಮಕ್ಕಳು ತಂದೆ ತಾಯಿಗಳ ವಾತ್ಸಲ್ಯಕ್ಕೆ ಎರವಾಗುತ್ತಾರೆ. ಆಗ ಮನೆಯಲ್ಲಿ ವಿರಸದ ವಾತಾವರಣ ಹುಟ್ಟುತ್ತದೆ. ನಾವು ನಮ್ಮ ಮಕ್ಕಳಿಗೆ ಅವರ ಅಭಿರುಚಿ, ಆಸಕ್ತಿಗಳಿಗೆ ತಕ್ಕಂತೆ ಶಿಕ್ಷಣ ಕೊಡಿಸಬೇಕು. ಬಲವಂತದಿಂದ ಅವರ ಭವಿಷ್ಯವನ್ನು ಹಾಳು ಮಾಡಬಾರದು.

ದೇಶ ಸ್ವತಂತ್ರವಾಗಿ ಏಳು ದಶಕಗಳೇ ಆದರೂ ಅನೇಕ ಬಡಮಕ್ಕಳು ತಮ್ಮ ಹೊಟ್ಟೆಪಾಡಿಗಾಗಿ ಹೋಟೆಲ್ ಕಾರ್ಖಾನೆಗಳಲ್ಲಿ ಹಗಲಿರುಳೂ ದುಡಿಯುವುದನ್ನು ತಪ್ಪಿಸಲು ಸಾಧ್ಯವಾಗಿಲ್ಲ. ದಿಕ್ಕಿಲ್ಲದ, ಕೆಲಸವಿಲ್ಲದ ಅನಾಥ ಮಕ್ಕಳು ಭಿಕ್ಷೆ ಬೇಡಿ ಜೀವಿಸುವುದು ತಪ್ಪಿಲ್ಲ. ಬೀದಿಯಲ್ಲಿ ಕಸದ ತೊಟ್ಟಿಗಳಲ್ಲಿ ಎಸೆದ ಎಂಜಲೆಲೆಯನ್ನು ಹಂದಿ ನಾಯಿಗಳೊಂದಿಗೆ ನೆಕ್ಕುವ ಕರುಣಾಜನಕ ದೃಶ್ಯವನ್ನು ಈಗಲೂ ಕಾಣಬಹುದಾಗಿದೆ. ಬಾಲ ಕಾರ್ಮಿಕರು ರಾಷ್ಟ್ರದಲ್ಲಿ 3.3 ಕೋಟಿ ಇರುವುದಾಗಿ ತಿಳಿದು ಬರುತ್ತದೆ. ಇಂತಹವರ ಬಾಳಿಗೆ ಬೆಳಕು ಎಂದು? ಹೇಗೆ? ಚಿಂತಿಸಬೇಕಲ್ಲವೇ? ಏನೇನೋ ಸುಂದರ ಕನಸು ಕಾಣುವ ಮಕ್ಕಳು ಈ ರೀತಿ ಬಾಳುವುದಕ್ಕೆ ಯಾರು ಹೊಣೆ. ಒಂದೆಡೆ ಕುಡಿತ, ಮಾದಕ ವಸ್ತುಗಳ ಸೇವನೆ, ಕಳವು, ಹಿಂಸೆಗಳಲ್ಲಿ ತೊಡಗಿರುವ ಶ್ರೀಮಂತ ವರ್ಗದ ಮಕ್ಕಳು. ಇನ್ನೊಂದೆಡೆ ತುತ್ತು ಕೂಳಿಗೂ ದಿಕ್ಕಿಲ್ಲದೆ ನಾಯಿ ಹಂದಿಗಳಂತೆ ಬಾಳುತ್ತಿರುವ ಅನಾಥ ಮಕ್ಕಳು. ಈ ಎರಡೂ ವರ್ಗದ ಮಕ್ಕಳು ನಮ್ಮ ನಡುವೆ ಬೆಳೆಯುತ್ತಿರುವುದು ದೇಶಕ್ಕೆ ದೊಡ್ಡ ಅಪಮಾನ ಹಾಗೂ ಅಪಾಯಕರ. ಈ ದಿಸೆಯಲ್ಲಿ ಜನತೆ, ಸರ್ಕಾರ ಯೋಚಿಸಿ ಪರಿಹಾರ ಕೈಗೊಳ್ಳಬೇಕಾದುದು ತೀರಾ ಅವಶ್ಯಕ.

ಮಾನವೀಯ ಮೌಲ್ಯಗಳನ್ನು ಉತ್ತಮ ಆಚಾರ–ವಿಚಾರಗಳನ್ನು ಕಳೆದುಕೊಂಡು ದಾರಿ ತಪ್ಪುತ್ತಿರುವ ಇಂದಿನ ಪೀಳಿಗೆಯನ್ನು ಸರಿ ದಾರಿಗೆ ತರುವುದು ದೊಡ್ಡ ಸವಾಲಾಗಿದೆ. ಆದುದರಿಂದ ತಂದೆ ತಾಯಿಗಳು ಶಿಕ್ಷಕರು, ಪೋಷಕರು, ಬಾಲ್ಯದಲ್ಲಿಯೇ ಮಕ್ಕಳಿಗೆ ನಮ್ಮ ಸನಾತನ ಧರ್ಮ, ಆಚಾರ–ವಿಚಾರ, ಮೌಲ್ಯಗಳನ್ನು ಬೋಧಿಸಿ ನವ ಭಾರತವನ್ನು ನಿರ್ಮಿಸುವ ಕಾರ್ಯ ಮಾಡಬೇಕಾಗಿದೆ.

8th_Kannada_Reader Term I_U4-9.indd 89 18-06-2019 10.47.06 AM

ಈ ನಿಟ್ಟಿನಲ್ಲಿ ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ನಾವು, ನಮ್ಮ ಮಕ್ಕಳು, ಭವ್ಯ ಭಾರತ ಎನ್ನಿಸಬಹುದಾಗಿದೆ. ಈ ದಿಸೆಯಲ್ಲಿ ಪ್ರಯತ್ನ ಪಡೋಣ....

ಕೃತಿ ಕರ್ತೃ ಪರಿಚಯ

'ನಾವು, ನಮ್ಮ ಮಕ್ಕಳು' ಎಂಬ ಈ ಲೇಖನವನ್ನು ಒಂದು ಹಳೆಯ ದಿನಪತ್ರಿಕೆಯಿಂದ ಆರಿಸಿಕೊಳ್ಳಲಾಗಿದೆ. ಇದನ್ನು ಶ್ರಿ. ಜಾನ್‌ಸನ್ ಸುಕುಮಾರ್ ಅವರು ಸಂಗ್ರಹಿಸಿದ್ದಾರೆ. ಪ್ರಸ್ತುತ ಇವರು ಸರ್ಕಾರಿ ಹಿರಿಯ ಪ್ರೌಢಶಾಲೆ, ಪಣಕಹಳ್ಳಿಯಲ್ಲಿ ಕನ್ನಡ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಂದಿನ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಉತ್ತಮವಾದ ಮಾರ್ಗದರ್ಶನ ನೀಡುವ ಸಲುವಾಗಿ ಈ ಲೇಖನವನ್ನು ಸ್ವಲ್ಪ ಬದಲಾವಣೆಯೊಂದಿಗೆ ರಚಿಸಲಾಗಿದೆ. ಉತ್ತಮ ಸಮಾಜ ನಿರ್ಮಾಣದ ಕರೆ ಇಲ್ಲಿ ವ್ಯಕ್ತವಾಗಿದೆ.

ಪದಗಳ ಅರ್ಥ

ಸಮಂಜಸ–ಸರಿಯಾದ, ಉತ್ತಮವಾದ, ಹೊಂದುವಂತಹ; ವಾಹಿನಿ–ಹರಿಯುವುದು; ಗರತಿ–ಪತಿವ್ರತೆ; ವಿಷಾದ–ದುಃಖ, ನೋವು; ಜೋಲು ಮೋರೆ–ಪೆಚ್ಚು ಮುಖ; ಪೇಟೆ–ಪಟ್ಟಣ; ಮುಪ್ಪು–ವಯಸ್ಸಾದ; ಅಭ್ಯುದಯ–ಏಳಿಗೆ; ಪಿಡುಗು–ರೋಗ; ಕೂಳು–ಆಹಾರ, ಅನ್ನ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ತಂದೆ–ತಾಯಿಗಳ ಬಗ್ಗೆ ಜಾನಪದ ಹಾಡಿನಲ್ಲಿ ಹೆಣ್ಣೊಬ್ಬಳು ವ್ಯಕ್ತ ಪಡಿಸಿರುವ ಅಭಿಪ್ರಾಯವೇನು?
2. ಮನುಷ್ಯರು ವಿಷಾದ ಪಡುವುದು ಏಕೆ?
3. ಅಮೆರಿಕೆಯಲ್ಲಿ ಓರ್ವ ವಿದ್ಯಾರ್ಥಿ ಮಾಡಿದ್ದೇನು?
4. ಬಡ ಮಕ್ಕಳು ಎಲ್ಲೆಲ್ಲಿ ಕೂಲಿ ಮಾಡುತ್ತಲಿದ್ದಾರೆ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ತಂದೆ ತಾಯಿಗಳು ಮಕ್ಕಳ ಏಳಿಗೆಗೆ ಏನೆಲ್ಲ ಮಾಡುತ್ತಾರೆ?
2. ಈ ಲೇಖನದಲ್ಲಿ ಬರುವ ವ್ಯಕ್ತಿ ಜೋಲು ಮೋರೆಯಿಂದಿರಲು ಕಾರಣವೇನು ?
3. 'ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು' ಹೇಗೆ ?
4. ಹೃದಯ ಅರಳಿಸದ ಶಿಕ್ಷಣದಿಂದ ಏನಾಗುತ್ತದೆ?
5. ಇಂದಿನ ಮಕ್ಕಳು ಯಾವ ದಿಸೆಯಲ್ಲಿ ಸಾಗುತ್ತಿದ್ದಾರೆ?

ಚಟುವಟಿಕೆ

1. ಹಿಂದಿನ ಹಾಗೂ ಇಂದಿನ ಕಾಲದಲ್ಲಿರುವ ಕುಟುಂಬ, ಸಂಬಂಧಗಳ ಪರಿಚಯ ಹಾಗೂ ಹೋಲಿಕೆ ಮಾಡಿ, ಚರ್ಚಿಸಿ.
2. ಮಾನವೀಯ ಮೌಲ್ಯಗಳನ್ನು ಹೇಗೆ ಬೆಳೆಸಬೇಕು, ಪ್ರಬಂಧ ಬರೆಯಿರಿ.
3. ನೀವು ನಿಮ್ಮ ಕುಟುಂಬದ ಜೊತೆ ಹೇಗಿದ್ದೀರಿ, ಪ್ರಬಂಧ ಬರೆಯಿರಿ.

8th_Kannada_Reader Term I_U4-9.indd 90 18-06-2019 10.47.06 AM

ವ್ಯಾಕರಣ



ಘಟಕ ಐದು

ಕಾಲಸೂಚಕಗಳು

ಕಾಲಗಳು

ಕಾಲಗಳು ಮೂರು ಬಗೆಯಾಗಿವೆ. ಅವು, 1. ಭೂತ ಕಾಲ 2. ವರ್ತಮಾನ ಕಾಲ ಹಾಗೂ 3. ಭವಿಷ್ಯತ್ ಕಾಲ.

ಭೂತ ಕಾಲ

ಈಗಾಗಲೇ ಮುಗಿದು ಹೋದ ಸಮಯವನ್ನು ಸೂಚಿಸುವ ಕಾಲವನ್ನು ಭೂತಕಾಲವೆನ್ನುವರು. ಈ ಕಾಲದ ಕಾಲ ಸೂಚಕ ಪ್ರತ್ಯಯ 'ದ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡಿದೆನು	ಓಡಿದೆವು
ಮಧ್ಯಮ –	ಓಡಿದೆ	ಓಡಿದಿರಿ
ಪ್ರಥಮ ಪುಲ್ಲಿಂಗ	ಓಡಿದನು	ಓಡಿದರು
ಸ್ತ್ರೀಲಿಂಗ	ಓಡಿದಳು	ಓಡಿದರು
ನಪುಂಸಕ ಲಿಂಗ	ಓಡಿತು	ಓಡಿದವು.

ವರ್ತಮಾನ ಕಾಲ

ಈಗ ನಡೆಯುತ್ತಿರುವ ಕಾಲವನ್ನು ಸೂಚಿಸುವುದಕ್ಕೆ ವರ್ತಮಾನ ಕಾಲವೆನ್ನುವರು. ವರ್ತಮಾನ ಕಾಲದ ಕಾಲಸೂಚಕ ಪ್ರತ್ಯಯ 'ಉತ್ತ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡುತ್ತೇನೆ	ಓಡುತ್ತೇವೆ
ಮಧ್ಯಮ –	ಓಡುತ್ತಿ	ಓಡುತ್ತೀರಿ
ಪ್ರಥಮ ಪುಲ್ಲಿಂಗ	ಓಡುತ್ತಾನೆ	ಓಡುತ್ತಾರೆ
ಸ್ತ್ರೀಲಿಂಗ	ಓಡುತ್ತಾಳೆ	ಓಡುತ್ತಾರೆ
ನಪುಂಸಕ ಲಿಂಗ	ಓಡುತ್ತದೆ	ಓಡುತ್ತವೆ.

ಭವಿಷ್ಯತ್ ಕಾಲ

ಮುಂದೆ ನಡೆಯುವುದನ್ನು ಸೂಚಿಸುವುದೇ ಭವಿಷ್ಯತ್ ಕಾಲ. ಇದರ ಪ್ರತ್ಯಯ 'ವ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡುವೆನು	ಓಡುವೆವು
ಮಧ್ಯಮ –	ಓಡುವಿ	ಓಡುವಿರಿ
ಪ್ರಥಮ ಪುಲ್ಲಿಂಗ	ಓಡುವನು	ಓಡುವರು
ಸ್ತ್ರೀಲಿಂಗ	ಓಡುವಳು	ಓಡುವರು
ನಪುಂಸಕ ಲಿಂಗ	ಓಡುವುದು	ಓಡುವುವು.

8th_Kannada_Reader Term I_U4-9.indd 91 18-06-2019 10.47.06 AM

ಭೂತ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡಿದೆನು	(ನಾವು) ಮಾಡಿದೆವು
ಮಧ್ಯಮ	–	(ನೀನು) ಮಾಡಿದೆ	(ನೀವು) ಮಾಡಿದಿರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡಿದನು	(ಅವರು) ಮಾಡಿದರು
	ಸ್ತ್ರೀಲಿಂಗ	(ಅವಳು) ಮಾಡಿದಳು	(ಅವರು) ಮಾಡಿದರು
	ನಪುಂಸಕಲಿಂಗ	(ಅದು) ಮಾಡಿತು	(ಅವು) ಮಾಡಿದವು

ವರ್ತಮಾನ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡುತ್ತೇನೆ	(ನಾವು) ಮಾಡುತ್ತೇವೆ
ಮಧ್ಯಮ	–	(ನೀನು) ಮಾಡುತ್ತೀ	(ನೀವು) ಮಾಡುತ್ತೀರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡುತ್ತಾನೆ	(ಅವರು) ಮಾಡುತ್ತಾರೆ
	ಸ್ತ್ರೀಲಿಂಗ	(ಅವಳು) ಮಾಡುತ್ತಾಳೆ	(ಅವರು) ಮಾಡುತ್ತಾರೆ
	ನಪುಂಸಕಲಿಂಗ	(ಅದು) ಮಾಡುತ್ತದೆ	(ಅವು) ಮಾಡುತ್ತವೆ

ಭವಿಷ್ಯತ್ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡುವೆನು	(ನಾವು) ಮಾಡುವೆವು
ಮಧ್ಯಮ	–	(ನೀನು) ಮಾಡು/ವಿ	(ನೀವು) ಮಾಡುವಿರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡುವನು	(ಅವರು) ಮಾಡುವರು
	ಸ್ತ್ರೀಲಿಂಗ	(ಅವಳು) ಮಾಡುವಳು	(ಅವರು) ಮಾಡುವರು
	ನಪುಂಸಕಲಿಂಗ	(ಅದು) ಮಾಡುವುದು	(ಅವು) ಮಾಡುವುವು

8th_Kannada_Reader Term I_U4-9.indd 92 18-06-2019 10.47.06 AM

ಘಟಕ
ಆರು

6. ನಾಗರಿಕತೆ, ವೃತ್ತಿ, ವಾಣಿಜ್ಯ









ಕಾವ್ಯ ಕಣಜ	:	ಏಣಿ	– ಸುಕನ್ಯಾ ಮಾರುತಿ
ಪೂರಕ ಪದ್ಯ	:	ಒಗ್ಗಟ್ಟು	– (ಸಂಗ್ರಹ)
ಗದ್ಯ ವಿಹಾರ	:	ಮಲ್ಲಗಂಬ	– (ಸಂಗ್ರಹ)
ಉಪಪಠ್ಯ	:	ಗಂಧರ್ವ ಸೇನ	– (ಸಂಗ್ರಹ)
ವ್ಯಾಕರಣ	:	ಸಂಧಿಗಳು	

8th_Kannada_Reader Term I_U4-9.indd 93 18-06-2019 10.47.07 AM

ಕಾವ್ಯ ಕಣಜ

ಘಟಕ ಆರು

ಏಣಿ

– ಸುಕನ್ಯಾ ಮಾರುತಿ



ನಾಗರಿಕತೆಯು ಬೆಳವಣಿಗೆಯಾದಂತೆ ಶ್ರಮಿಕರು ಮತ್ತು ಜನ ಸಾಮಾನ್ಯರು ಶಿಕ್ಷಣ ಪಡೆದು ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ಮೇಲೇರಿದ ಮೇಲೆ ಕೆಲವರಲ್ಲಿ ಅಹಂ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಅಂತಹವನು ಮರೆಯುತ್ತಾನೆ, ತಿರಸ್ಕರಿಸುತ್ತಾನೆ. ಹಣ ಅಧಿಕಾರ ಅಂತಸ್ತುಗಳು ಎಂದಿಗೂ ಶಾಶ್ವತವಲ್ಲ ಎಂಬುದನ್ನು ಅರಿತು ತನ್ನ ಏಳಿಗೆಗೆ ಕಾರಣರಾದವರನ್ನು ಗೌರವಿಸದಿದ್ದರೆ ಅಂತಹವನು ತನ್ನ ವಿಪತ್ತಿಗೆ ತಾನೇ ಕಾರಣನಾಗುತ್ತಾನೆ ಎಂಬುದನ್ನು 'ಏಣಿ' ಕವಿತೆ ಪ್ರತಿಪಾದಿಸುತ್ತದೆ. ಪ್ರಸ್ತುತ ಕವಿತೆಯಲ್ಲಿ, ರೂಪಕವಾಗಿ ಬಳಸಿರುವ ಏಣಿ ಹಲವು ಆಯಾಮಗಳಲ್ಲಿ ನಮ್ಮ ಕಲ್ಪನೆಯನ್ನು ವಿಸ್ತರಿಸುತ್ತಾ ಹೋಗಲಾಗಿದೆ.



8th_Kannada_Reader Term I_U4-9.indd 94 18-06-2019 10.47.09 AM

ನಾನೊಂದು ಏಣಿ
ಎಷ್ಟೊಂದು ಜನರನ್ನು
ಎತ್ತಿ ಹಿಡಿದಿದ್ದೇನೆ!
ನನ್ನ ಮೇಲೆ ಹತ್ತಿ ಹೋದ
ಕೆಲವರು ನನಗೆ ಕೈ ಬೀಸಿದ್ದಾರೆ,
ನಾನೂ ನೋಡುತ್ತೇನೆ
ಹೇಗೆ ಇಳಿಯುತ್ತಾರೆಂದು! |1|

ಮೇಲಂತಸ್ತು ಶಾಶ್ವತವಲ್ಲ
ಸುರಕ್ಷಿತವೂ ಅಲ್ಲ
ನಾನು ಬುನಾದಿಯನ್ನೇ
ಕೆಡವುತ್ತೇನೆಂದರೆ
ಏನು ಮಾಡುತ್ತಾರೆ
ಈ ತ್ರಿಶಂಕುಗಳು ! |2|

ಒಂದೊಂದು ಹೆಜ್ಜೆಯ ಭಾರ
ಹೊರುವಾಗ ನಾ
ಪಟ್ಟ ಪಾಡು ನನಗೇ ಗೊತ್ತು.
ಲೀಲಾಜಾಲವಾಗಿ ಮೇಲೇರಿದ
ಇವರಿಗೆ ಭಾರ ಹೊತ್ತವರ
ಕಾಳಜಿಯೇ ಇಲ್ಲ.
ಆನೆ ಭಾರ ಹೊತ್ತ ಗಟ್ಟಿ ನೆಲದಲ್ಲಿ
ಕಾಲೂರಿ ನಿಂತ
ನನಗೆ ಬೀಳುವ ಭಯವಿಲ್ಲ |3|

ಕಾಲೂರುವ ನೆಲವನ್ನೇ
ತಿರಸ್ಕರಿಸಿದ ಇವರು
ಆಕಾಶದಲ್ಲಿ ಎಷ್ಟು ಹೊತ್ತು
ಹಾರಾಡುತ್ತಾರೆ ?
ಮತ್ತೆ ನನ್ನ ಆಸರೆ ಬೇಕೇ ಬೇಕು. |4|

ಆಗ,
ನಾನು ತಿರಸ್ಕರಿಸಿದರೆ
ಏನು ಮಾಡುತ್ತಾರೆ ಈ ಶಿಖಂಡಿಗಳು ?
ಮೇಲೇರಿದ್ದೇನೆ ಎಂಬ
ಹಮ್ಮು ಕರಗಿ,
ಭೂಮಿ ಶಾಶ್ವತವೆಂಬ
ಅರಿವು ಮೂಡುವವರೆಗೆ
ನಾನವರಿಗೆ ನಿಲುಕುವುದಿಲ್ಲ. |5|

ನಮ್ರತೆಗೆ ನಾ ಕರಗುತ್ತೇನೆ
ಬೆಳೆಯ ಬಲ್ಲವರನ್ನು ಮಾತ್ರ
ಎತ್ತಿ ಹಿಡಿಯುತ್ತೇನೆ,
ನಾನೊಂದು ಏಣಿ. |6|

8th_Kannada_Reader Term I_U4-9.indd 95 18-06-2019 10.47.09 AM

ಕವಿ–ಕಾವ್ಯ ಪರಿಚಯ

ಸುಕನ್ಯಾ ಮಾರುತಿ 1956ರಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಎಂಬಲ್ಲಿ ಜನಿಸಿದರು. ದಲಿತ–ಬಂಡಾಯ ಕಾವ್ಯ ಮಾರ್ಗದ ಪ್ರಮುಖ ಕವಿಗಳಲ್ಲಿ ಇವರೂ ಒಬ್ಬರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ., ಪದವಿ ಪಡೆದು ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು ಪರಿಸರದಲ್ಲಿ ಪಂಚಾಗ್ನಿಯ ಮಧ್ಯೆ, ನಾನು ನನ್ನವರು, ತಾಜಮಹಲಿನ ಹಾಡು, ಬಿಂಬದೊಳಗಣ ಮಾತು, ನಾನೆಂಬ ಮಾಯೆ ಇತ್ಯಾದಿ ಕವನ ಸಂಕಲನಗಳನ್ನು ಬರೆದಿದ್ದಾರೆ. ಏಣಿ ಕವನವನ್ನು ಇವರ 'ಸಮಗ್ರ ಕವನ ಸಂಕಲನ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಆಸರೆ–ಆಶ್ರಯ; ಏಣಿ–ಮೇಲೇಳಲು ಬಯಸುವ ಸಾಧನ, ನಿಚ್ಚಣಿಕೆ; ಕರಗು–ಸ್ಪಂದಿಸು; ಕಾಳಜಿ–ಜಾಗರೂಕತೆ; ಆಸಕ್ತಿ–ತುಡಿತ; ತ್ರಿಶಂಕು–ಇಕ್ಕಟ್ಟಿನಲ್ಲಿ ಸಿಲುಕಿದವ; ನಮ್ರತೆ–ವಿಧೇಯತೆ, ವಿನಯ, ಬಾಗಿದ; ಪಾಡು–ಅವಸ್ಥೆ; ಬುನಾದಿ–ತಳಪಾಯ, ಅಡಿಪಾಯ; ಶಿಖಂಡಿ–ನಪುಂಸಕ; ಹಮ್ಮು–ಸೊಕ್ಕು, ಮದ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಏಣಿ ಜನರಿಗೆ ಮಾಡಿದ ಉಪಕಾರವೇನು ?
2. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು ?
3. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ ?
4. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ ?
5. ಏಣಿಗೆ ಬೀಳುವ ಭಯವಿಲ್ಲ. ಏಕೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?
2. ಏಣಿ ಹೇಳಿಕೊಳ್ಳುವ ಕಷ್ಟಗಳೇನು ?
3. ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?
4. ಏಣಿ ತಾನು ಎಂತಹವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಏಣಿ ಕವಿತೆ ನೀಡುವ ಸಂದೇಶವೇನು ?
2. ಏಣಿ ಹೇಳಿಕೊಳ್ಳುವ ಸಂಕಟ ಹಾಗೂ ಹಾಕುವ ಸವಾಲುಗಳೇನು ?

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ತಿರಸ್ಕಾರ, ನಮ್ರತೆ, ಸುರಕ್ಷಿತ, ಕಾಳಜಿ, ಏಣಿ.

2. **ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ.**

   ಕೈಬೀಸು, ಮೇಲಂತಸ್ತು, ಆನೆಭಾರ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ತಿರಸ್ಕಾರ, ಶಾಶ್ವತ, ಇಳಿ, ಸುರಕ್ಷಿತ, ಭಾರ, ಕೆಡವು.

ಚಟುವಟಿಕೆ

1. ಪತ್ರಿಕೆಗಳಲ್ಲಿ ಬರುವ ಕವಿತೆಗಳನ್ನು ಓದಿ, ಅರ್ಥ ಮಾಡಿಕೊಳ್ಳಿ. ಅವು ಗದ್ಯದ ಸಾಲುಗಳಿಗಿಂತ ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ಗಮನಿಸಿ.
2. 'ಏಣಿ' ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.

8th_Kannada_Reader Term I_U4-9.indd 96 18-06-2019 10.47.09 AM

ಪೂರಕ ಪದ್ಯ

ಘಟಕ ಆರು

ಒಗ್ಗಟ್ಟು

– (ಸಂಗ್ರಹ)



ನಾಗರಿಕ ಸಮಾಜದಲ್ಲಿ ಬಾಳುತ್ತಿರುವ ನಾವು, ನಾಗರಿಕತೆಯ ವಿಕಾಸದಲ್ಲಿ ಹೊಸ ವಿಚಾರಗಳಿಗೆ ಅನಾವರಣಗೊಂಡಿದ್ದೇವೆ. ಶಿಕ್ಷಣ, ವೈಚಾರಿಕತೆ ಬೆಳೆದಂತೆಲ್ಲ ನಮ್ಮ ಅಭಿಮಾನ ಶೂನ್ಯತೆ ಮತ್ತು ಮಾನಸಿಕ ಜಡತೆ ದೂರವಾಗಿ ಹೊಸ ಹುರುಪೊಂದು ಉದ್ಭವವಾಗಲು ಕಾರಣವಾಗಿದೆ.



8th_Kannada_Reader Term I_U4-9.indd 97 18-06-2019 10.47.09 AM

ಹೆಗಲು ಹೆಗಲು ಹಚ್ಚಿ ನಾವು ಒಂದುಗೂಡಿ ಸಾಗುವಾ|
ಹಗಲು ರಾತ್ರಿ ಗುರಿಯ ಕಡೆಗೆ ವೀರತನದಿ ನುಗ್ಗುವಾ ‖

ಹೇಡಿತನದ ಬೇರುಕಿತ್ತು ಜಗಕೆ ಬೆರಗನೆಸಗುವಾ|
ಕಾಡುತಿರುವ ವೈರಿಗಳನು ಮೆಟ್ಟಿ ವಿಜಯ ಪಡೆಯುವಾ ‖

ಅರಿಯ ಸೀಳುವಾಗ ನಾವು ಸಮರ ಸಿಂಹರೆನಿಸುವಾ|
ಸಿರಿಯ ನಾಡ ಕಟ್ಟುವಾಗ ಸೋದರತ್ವ ಬೆಳೆಸುವಾ ‖

ಜನನಿ ಜನ್ಮಭೂಮಿಗಾಗಿ ತ್ಯಾಗಮಂತ್ರ ಪಠಿಸುವಾ|
ಮನದ ಆಸೆಗೊಂದು ಮೇರೆ ಹಾಕಿ ಬಾಳು ನಡೆಸುವಾ ‖

ಸತ್ಯ ಶಾಂತಿ ನೀತಿಗಳನು ಅರಿತು ಅಮರರಾಗುವಾ|
ನಿತ್ಯ ನಿಯಮ ಪಾಲಿಸುತ್ತ ನಮ್ಮತನವನುಳಿಸುವ‖

ನಾಡ ಹಿರಿಯರೆಮಗೆ ತೋರ್ಪ ಮಾರ್ಗವನ್ನು ಕ್ರಮಿಸುವಾ|
ನಾಡ ಗುಡಿಯನೇರಿಸುತ್ತ ನಾಡಿಗಾಗಿ ಶ್ರಮಿಸುವಾ ‖

ನಾವು ಅಮರಪುತ್ರರೆಂಬ ನುಡಿಯಲಿ ಘನತೆ ಸಾರುವಾ|
ನಾವು ಭಾರತೀಯರೆಂಬ ಹೆಮ್ಮೆ ಜಗಕೆ ತೋರುವಾ‖

ಪದಗಳ ಅರ್ಥ

ಬೆರಗು–ಆಶ್ಚರ್ಯ, ವಿಸ್ಮಯ; ವಿಜಯ–ಗೆಲುವು, ಜಯ; ಅರಿ–ಶತ್ರು, ವೈರಿ; ಮೇರೆ–ಗಡಿ, ಎಲ್ಲೆ; ಅಮರ–ಚಿರಂಜೀವಿ, ಶಾಶ್ವತ; ಕ್ರಮಿಸು–ಸಾಗು, ಪ್ರಯಾಣಿಸು; ಘನತೆ–ಗೌರವ, ಮರ್ಯಾದೆ; ಮೆಟ್ಟಿ–ತುಳಿದು, ಅಡಗಿಸಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ನಾವು ಹೇಗೆ ಮುಂದೆ ಸಾಗಬೇಕು ?
2. ವಿಜಯವನ್ನು ಹೇಗೆ ಪಡೆಯಬೇಕು ?
3. ಸೋದರತ್ವವನ್ನು ಯಾವಾಗ ಬೆಳೆಸಬೇಕು ?
4. ಜನನಿ, ಜನ್ಮಭೂಮಿಗಾಗಿ ಏನನ್ನು ಪಠಿಸಬೇಕು ?
5. ಜಗಕೆ ಏನನ್ನು ತೋರಬೇಕು ?
6. ಮನುಷ್ಯರು ಹೇಗೆ ಅಮರರಾಗಬಹುದು ?
7. ಯಾರ ಮಾರ್ಗವನ್ನು ನಾವು ಕ್ರಮಿಸಬೇಕು?

8th_Kannada_Reader Term I_U4-9.indd 98 18-06-2019 10.47.09 AM

ಗದ್ಯ ವಿಹಾರ

ಘಟಕ ಆರು

ಮಲ್ಲಗಂಬ

– (ಸಂಗ್ರಹ)



ನಾಗರಿಕತೆಯ ವಿಕಾಸಕ್ಕೆ ಹಲವಾರು ಅಂಶಗಳು ಸೇರಿವೆ. ಅವುಗಳಲ್ಲಿ ಕ್ರೀಡೆಯೂ ಒಂದು. ಆಟವೆಂದರೆ ಮಕ್ಕಳಿಂದ ಮುದುಕರವರೆಗೂ ಎಲ್ಲರಿಗೂ ಬಹಳ ಇಷ್ಟ. ನಮ್ಮ ದೇಶದಲ್ಲಿ ಅನೇಕ ಆಟಗಳಿವೆ. ಕೆಲವು ಆಟಗಳು ಬಹಳ ಪ್ರಸಿದ್ಧಿ ಪಡೆದು ಜಗತ್ತಿನ ಎಲ್ಲ ಕಡೆಗೂ ಹಬ್ಬಿವೆ. ಕೆಲವು ದೈಹಿಕ ಕಸರತ್ತಿನ ಆಟಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾಗಿವೆ. ಅವುಗಳಲ್ಲಿ ಕುಸ್ತಿ ಪಂದ್ಯವೂ ಒಂದು. ಕುಸ್ತಿಗೆ ಪೂರಕವಾದ ಪಂದ್ಯವೇ ಮಲ್ಲಕಂಬ ಅಥವಾ ಮಲ್ಲಗಂಬ. ಕುಸ್ತಿ ಆಡುವವನು ತಾನು ಹಾಕುವ ಪಟ್ಟುಗಳನ್ನು ಮಲ್ಲಗಂಬಕ್ಕೆ ಹಾಕಿ ಕಲಿಯುತ್ತಾನೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಲ್ಲಕಂಬ ಬಹಳ ಪ್ರಸಿದ್ಧವಾಗಿದೆ. ಬೆಳಗಾವಿ, ಬಳ್ಳಾರಿ, ಕೊಪ್ಪಳ, ವಿಜಾಪುರ, ಮೈಸೂರು ಜಿಲ್ಲೆಗಳ ಗರಡಿ ಮನೆಗಳಲ್ಲಿ ಮಲ್ಲಗಂಬದ ಆಟಗಳನ್ನು ನಡೆಸಲಾಗುತ್ತದೆ. ಇಲ್ಲಿ ಮಲ್ಲಗಂಬದ ವಿಶೇಷತೆಗಳನ್ನು ಉತ್ತರಕರ್ನಾಟಕದ ಭಾಷೆಯಲ್ಲಿ ಪರಿಚಯಿಸಲಾಗಿದೆ.





8th_Kannada_Reader Term I_U4-9.indd 99 18-06-2019 10.47.09 AM

ಗರಡಿ ಮನಿ. ಕುಸ್ತಿ ಅಖಾಡಾ. ಅಲ್ಲೊಂದು ಮಲ್ಲಗಂಬ. ಆ ಹುಡುಗರು ಆ ಕಂಬಕ್ಕೆ ಕತ್ರಿ ಕಾಲ ಹಾಕಿ ಏರೋ ಯತ್ನ ಮಾಡುತಿದ್ವು. ಆದರಖ... ಸರ್ರಂತ ಜಾರಿ ಬೀಳುತಿದ್ವು. ಮತ್ತಖ... ಅದೇ ಯತ್ನ. ಮತ್ತಖ... ಅದೇ ಜಾರಕಿ. ಮೈಮ್ಯಾಲಿನ ಖಬರಿಲ್ಲದ ಅದನ್ನ ನೋಡ್ತಾ ಇದ್ದ ಶರಬಣ್ಣ ದೇಸಾಯಿ.

'ಅಲಲಲ...! ಯಾನ ಖಟಪಟಿ ಮಾಡ್ತಾ ಅವಾ! ಇನ್ನೇನ್ ಪಟಕ್ಕನ ತುತ್ತತುದಿ ಮುಟ್ಟತಾನಂದ್ರ ಪಸಕ್ಕ ಜಾರಿಬಿಟ್ನ – ದೇಸಾಯರ, ಅದ ಮಲ್ಲಗಂಬ, ಕಂಬ ಏಗದಂ ಸಾಪ ಐತಿ. ಆಮ್ಯಾಲೆ ಅದಕ ಔಡಲೆಣ್ಣೆ ತೆಳ್ಳಗೆ ಸವರ್ತಾರ. ಕೈಯಿಟ್ರ ಮಸ್ತ ಜಾರತೈತ್ರಿ' ಎಂದ ಹಿರೆಮನಿ ಶಂಕ್ರಣ್ಣ. 'ಮುಟ್ಟಿ ನೋಡ ಬರ್ರಿ ಧಣ್ಯಾರ' ಎಂದು ಕರೆದ.

ದೇಸಾಯಿ ಶರಬಣ್ಣ ಹೋಗಿ ಮುಟ್ಟತಾನ 'ಆ ಗರಿಮನಿ ಅಖಾಡ ನೋಡಿ ಇದು ಬಾಳ ಗರ್ದಿಗಮ್ಮತ್ತ ಕಾಣತೈತಿ' ಅಂದ.

'ಖರೋಖರ ಗರ್ದಿಗಮ್ಮತ್ತ ಅಷ್ಟ ಅಲ್ಲ, ಇದೊಂದು ವ್ಯಾಯಾಮ ಸಾಲಿ. ಈ ಮನಿಗೆ ಗರಡಿ ಮನಿ ಅಂತಾರ. ಒಳ ಅಂಗಳ ತೋರಿಸಿ ಇದು ಅಖಾಡ. ಅಲ್ಲಿರುವ ಕೆಂಪು ಮಣ್ಣು ಕೈಯಾಗ ಹಿಡಿದು ಇದನ್ನು 'ಮುಲ್ತಾನ ಮಟ್ಟಿ' ಅಂತಾರ. ಕೆಮ್ಮಣ್ಣಿಗೆ ಕುಂಕುಮ, ಕೇಸರಿ, ಅರಿಶಿಣ, ಕೆಲವು ಗಿಡಮೂಲಿಕೆ ಹಾಕಿ ಈ ಮಟ್ಟಿ ತಯಾರಸ್ತಾರ. ಈ ಮಣ್ಣ ಮೈಮ್ಯಾಲ ಮೆತ್ತಿಕೊಂಡು, ಹಚ್ಕೊಂಡು ಕುತಿಗಿಮಟ ಸವರಕೊಂಡು ಮಟ್ಟಿ ಸ್ನಾನ ಮಾಡ್ತಾರ. ಗಾಯ ಗೀಯ ಆದ್ರ ಇದನ್ನು ಹಚ್ಕೊಂಡು ಸರಿ ಮಾಡ್ತಾರ. ಹರಿವತ್ನಾಗ ಬಂದು ದಂಡ ಹೊಡದು, ಬೈಟಕ ತೆಗೆದು, ಕುಸ್ತಿ ಆಡ್ತಾರ. ಕುಸ್ತಿ ಬಿಗಿ ಪಟ್ಟು ಕಲಿಬೇಕಾದ್ರ, ಈ ಮಲ್ಲಗಂಬ ಹತ್ತತಾರ. ಕುಸ್ತಿ ಪಟ್ಟೆಲ್ಲಾ ಮಲ್ಲಗಂಬದ ಮ್ಯಾಲ ಹಾಕ್ತಾರ, ಹಿಡಿತಾರ, ಹತ್ತತಾರ. ಈ ಅಭ್ಯಾಸದಿಂದ ಮಾಂಸ ಖಂಡದ ಬಲ ಹೆಚ್ಚತದ. ತಾಕತ್ತ ಬೆಳೀತದ. ದೇಹಕ್ಕೆ ಸರಳ ಮಣಿಯುವ ಗುಣ ಬರತೈತೆ. ಕಂಬದ ಮ್ಯಾಲ ಜಾರದ್ಹಂಗ ಹೊಟ್ಟಿ ಆಧಾರ ಕೊಟ್ಕೊಂಡು ಕತ್ತರಿ ಕಾಲ ಹಾಕಿ ಹಿಡಿದು ಏರತಾರ. ಮಲ್ಲಕಂಬ ಏರೋದಕ ದೊಡ್ಡ ಗುದಮುರಗೀನ...! ನೋಡೋರಗಿ ಒಂದು ತರಹ ಮೋಜ... ಮಲ್ಲಗಂಬ ಏರೋದ್ನ ಬಲ್ಲಾಂವ ತನ್ನ ದುಪ್ಪಟ್ಟು ತೂಕದ ಕುಸ್ತಿ ಮಲ್ಲನನ್ನು ಸೋಲಸ್ತಾನ. ಕುಸ್ತಿ ಛಲೋತ್ನಾಗ ಕಲಿಬೇಕಾದ್ರ ಮಲ್ಲಗಂಬಕ್ಕೆ ಪಟ್ ಹಾಕಿ ಅಭ್ಯಾಸ ಮಾಡ್ಬೇಕು'.

'ಮಲ್ಲಗಂಬ ಹ್ಯಾಂಗ? ಎಂತ? ಒಂದೀಟು ಹೇಳು' ಎಂದು ಕೇಳಿದ ದೇಸಾಯಿ. 'ಇತ್ತ ಬರ್ರಿ, ನೋಡ್ರಿ... ಇದು ಅಜಮಾಸು 11 ಮೊಳ ಇರ್ತದ. ನೆಲದೊಳಗೆ ನೆಡತಾರ. ನೆಲದ ಮಟ್ಟದಾಗ ಅದರ ಸುತ್ತಳತೆ 27 ಇಂಚು ಇದ್ರ ಮ್ಯಾಲ ಬಂದ್ಹಂಗ ಸಣ್ಣಾಕ್ಕೋಂತ ಹೋಕ್ಕೈತಿ' ಎಂದ ಶಂಕ್ರಣ್ಣ.

'ಇದರ ಕಸರತ್ತ ಯಾವಾಗ ತೋರಿಸ್ತಾರ?' ಎಂದು ಕೇಳಿದ್ದಕ್ಕೆ 'ಪಾಡವಾದಾಗ, ಜಾತ್ರ್ಯಾಗ, ಹಬ್ಬದಾಗ, ಚಕ್ಕಡ್ಯಾಗ ಮಲ್ಲಗಂಬ ನೆಡತಾರ. ಆವಾಗ ಅವರ ಕಸರತ್ತು ನೋಡಬೇಕಪಾ. ಕಣ್ಣ ಸಾಲೋದಿಲ್ಲ. ಏನ ಭಯಂಕರ ಮಾಡ್ತಾರ! ನಾಲ್ಕೈದು ಹುಡುಗ್ರು ಹೊಟ್ಟಿ ಆನಿಸಿ ಹತ್ತೋದು, ಕಾಲ ಕತ್ರಿ ಹಾಕಿ ಹಿಡಿಯೋದು, ಕಷ್ಟಪಟ್ಟು ಮೈಮಣಿಸಿ ಮ್ಯಾಕ ಹೋಗಿ ಪಟ್ ತಪ್ಪಿ ಅಲ್ಲಿಂದ ಜರ್ರನೆ ಜಾರೋದು, ಮತ್ತ... ಪಟ್ ಸಾಧಿಸಿ ತುದಿಗೆ ಹೋಗಿ ಹೊಟ್ಟಿ ಹಚ್ಚಿ ತಿರಗೋದು, ಚಪ್ಪಾಳೆ ಹೊಡೆಯೋದು. ಏಕ ದೋನ! ರಗಡದಾವ. ನಾಲ್ಕೈದು ಮಂದಿನ್ನ ಸೇರಿಸಿಕೊಂಡು ಮಲ್ಲಗಂಬಕ್ಕ ಪಿರಾಮಿಡ್ ಮಾಡಿದ್ರ ಮೈಯಾಗ ನಡುಕ ಏಳತೈತಿ, ಮೈ ಜುಂ ಅಂತೈತಿ. ಯಾವಾಗ ಏನಾಗ್ತೈತೋ ಏನೋ... ಕೈಯಾಗ ಜೀವ ಹಿಡ್ಕೊಂಡು ನೋಡ್ತಾರ.

ಅಥಣಿ ಹೊಸಗರಡಿ ಉಡಚಪ್ಪನ್ನ ನೋಡಬೇಕ್ರೀ. ಅವನ ಮೈಯಾಗ ಎಲುಬು ಅದಾವ... ಇಲ್ಲ ಅನ್ನೋದ ತಿಳಿಯೋದಿಲ್ಲ. ಕಾಲಿ ಕಂಬ ಹಿಡಿದು ಪಟ್ಟಿನ ಮ್ಯಾಲ ಪಟ್ ಹಾಕಿ ಮಂಗ್ಯಾನಂಗ ಮಲ್ಲಗಂಬ ಹತ್ತೋದ... ಕಣೀಗೆ ಮಸ್ತ ಕಾಣ್ಸತ್ತ!'

'ಈ ಮಲ್ಲಗಂಬದ ಕಥಿ ಏನಾರ ಗೊತ್ತೈತೇನು?' ಎಂದು ಕೇಳಿದ ದೇಸಾಯಿ.

'ಮಹಾರಾಷ್ಟ್ರದಾಗ ಶಿವಾಜಿ ಮಹಾರಾಜರ ಕಾಲಕ್ಕೆ ಸಮರ್ಥ ರಾಮದಾಸರು ಬಾರಾಸೆಂಬರ್ ಗರಡಿಮನಿ ಕಟ್ಟಿದ್ರಂತ. ಅಲ್ಲಿ ಸೂರ್ಯ ನಮಸ್ಕಾರ ಮಾಡೋದು, ಬೈಠಕ್ ಹೊಡೆಯೋದು, ಗದೆ ತಿರುಗಿಸೋದು ಮತ್ತು ಕುಸ್ತಿ ಕಲಿಸ್ತಿದ್ರಂತ. ಕುಸ್ತಿ

8th_Kannada_Reader Term I_U4-9.indd 100 18-06-2019 10.47.09 AM

ಆಡಲು ಮಲ್ಲನೊಬ್ಬ ಸಿಗದಾದಾಗ ಮಲ್ಲಗಂಬಕ್ಕೆ ಪಟ್ ಹಾಕಿ ಕುಸ್ತಿ ಆಡಲಿಕ್ಕೆ ಕಲಿಸಿದ್ರಂತ. ಅವರ್ನ ತಯಾರು ಮಾಡಿ ಸೇನೆ ಕಟ್ಟಿ, ಶಿವಾಜಿಯಿಂದ ಮರಾಠ ರಾಜ್ಯ ಕಟ್ಟಿಸಿದ್ನಂತ. ಗೇರಿಲ್ಲಾ ಗತ್ತು ತೋರ್ಸಿ ಔರಂಗಜೇಬಂಗ ರಗಡ ಮಾಡಿದ. ಇತಿಹಾಸ ಬಲ್ಲವರಿಗೆ ಗೊತ್ರಿ ಆ ಕಥಿ. ಆವಾಗಿಂದ ಇದು ಚಾಲೂ ಅದ'.

ಪದಗಳ ಅರ್ಥ

ಕಬರ–ಲಕ್ಷ್ಯ, ಗಮನ; ಪಟಕ್ನ–ಪಟಕ್ಕನೆ, ಒಮ್ಮಿಂದೊಮ್ಮೆಲೆ, ಕೂಡಲೆ; ಸಾಪ–ನುಣುಪಾಗಿ; ಸವರು–ಹಚ್ಚು; ಸವರ್ಯಾರ–ಹಚ್ಚಿದ್ದಾರೆ; ಮಸ್ತ–ಬಹಳ; ಐತಿ–ಇದೆ; ಮ್ಯಾಲೆ–ಮೇಲೆ; ಖರೋಬರ–ಸತ್ಯ, ನಿಜ, ವಾಸ್ತವ; ಹರಿವತ್ನಾಗ–ನಸುಕಿನಲ್ಲಿಯೇ, ಬೆಳಗಿನ ಜಾವದಲ್ಲಿಯೇ; ಪಟ್ಟು–ವರಸೆ, ಒಂದು ಶೈಲಿ; ತಾಕತ್–ಶಕ್ತಿ, ಬಲ; ಮಣಿ–ಬಾಗು; ಏರೋದ್ನ–ಏರುವುದನ್ನು; ಚಕ್ಕಡಿ–ಎತ್ತಿನ ಬಂಡಿ; ಆನಿಸಿ–ಆಧಾರವಾಗಿಟ್ಟುಕೊಂಡು; ರಗಡ–ಬಹಳ; ಚಾಲು–ಆರಂಭ, ಚಾಲನೆ; ಪಸಕ್ನ–ಬೇಗಬೇಗ, ಶೀಘ್ರ.

ಟಿಪ್ಪಣಿಗಳು

1. **ಅಲಲಲ** : ಅತಿ ಆಶ್ಚರ್ಯವನ್ನು ಸೂಚಿಸುವಾಗ ಹೇಳುವ ಪದ.
2. **ಗರ್ದಿಗಮ್ಮತ್ತು** : ಮೋಜು, ತಮಾಷೆ.
3. **ಅಖಾಡ** : ಗರಡಿ ಮನೆಯ ಒಳ ಅಂಗಳ.
4. **ಮುಲ್ತಾನ ಮಟ್ಟಿ** : ಗರಡಿಮನೆಯ ಒಳ ಅಂಗಳದಲ್ಲಿ ಹಾಕಿರುವ ಮಣ್ಣು, ಮಟ್ಟಿ ಮಣ್ಣು.
5. **ಗುದಮುರಗಿ** : ಕಷ್ಟ ಪಟ್ಟು
6. **ಅಜಮಾಸು** : ಅಂದಾಜು
7. **ಔಡಲೆಣ್ಣೆ** : ಹರಳೆಣ್ಣೆ
8. **ಪಾಡವಾ** : ಯುಗಾದಿ ಪಾಡ್ಯ, ಚೈತ್ರ ಮಾಸದ ಮೊದಲ ದಿನ
9. **ಕಣ್ಣ ಸಾಲೋದಿಲ್ಲ** : ಅಚ್ಚರಿಯಿಂದ ನೋಡುವಾಗ ಹೇಳುವ ಪದ, ನೋಡಲು ಎರಡು ಕಣ್ಣುಗಳು ಸಾಲದು ಎಂದು ಭಾವ.
10. **ಕೈಯಾಗ ಜೀವ**
    ಹಿಡಕೊ : ಗಾಬರಿಯಾಗು, ಹೆದರು, ಎಲ್ಲಿ ತೊಂದರೆಯಾಗುತ್ತದೆಯೋ ಎಂಬ ಭಯ ಆವರಿಸು.
11. **ಬಾರಾಸೆಂಬರ್** : ಹನ್ನೆರಡು ಮಾರು
12. **ರಗಡು ಮಾಡು** : ಕಷ್ಟ ಕೊಡು, ಬೇಕಾದಷ್ಟು ಮಾಡು.
13. **ಗೆರಿಲ್ಲಾ ಗತ್ತು** : ಗೆರಿಲ್ಲ ಕದನದ ಚಾಲಾಕೀ ಹೋರಾಟ, ಬೆಟ್ಟಗುಡ್ಡ ಕಾಡುಗಳ ನಡುವೆ ಹೋರಾಡುವವರು.
14. **ಮಲ್ಲಗಂಬ** : ಜನಪ್ರಿಯ, ವೈಯಕ್ತಿಕ ಹಾಗೂ ಸಾಮೂಹಿಕ ಜನಪದ ಕ್ರೀಡೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಗರಡಿ ಮನೆಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳೇನು?
2. ಹಿರೇಮಣಿ ಶಂಕ್ರಣ್ಣ ಏನೆಂದರು ?
3. ಮಟ್ಟಿಯನ್ನು ಹೇಗೆ ತಯಾರಿಸುತ್ತಾರೆ ?
4. ಮಟ್ಟಿ ಸ್ನಾನ ಎಂದರೇನು ?
5. ಮಲ್ಲಗಂಬ ಹೇಗಿರುತ್ತದೆ ?
6. ಮಲ್ಲಗಂಬಕ್ಕೆ ಮೀರಮಿಡ್ ಮಾಡಿದರೆ ಹೇಗಿರುತ್ತದೆ ?
7. ಹೊಸಗರಡಿ ಉಡಚಪ್ಪನನ್ನು ಪರಿಚಯಿಸಿ ?
8. 'ಮುಲ್ತಾನ ಮಟ್ಟಿ' ಎಂದರೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಲ್ಲಗಂಬ ಅಭ್ಯಾಸ ಮಾಡುವುದರಿಂದ ಆಗುವ ಲಾಭಗಳೇನು ?
2. ಗರಡೀ ಮನೆ ಅಖಾಡಾ ಹೇಗಿರುತ್ತದೆ ?
3. ಮಲ್ಲಗಂಬ ಕಸರತ್ತನ್ನು ಯಾವಾಗ ತೋರಿಸುತ್ತಾರೆ ?

8th_Kannada_Reader Term I_U4-9.indd 101 18-06-2019 10.47.09 AM

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಲ್ಲಗಂಬದ ಕಸರತ್ತಿನ ಹಿನ್ನೆಲೆಯನ್ನು ವಿವರಿಸಿ.
2. ಮಲ್ಲಗಂಬ ಯಾವಾಗ ನೆಡುತ್ತಾರೆ ಮತ್ತು ಅದರ ವಿಶೇಷತೆಗಳೇನು?

ಭಾಷಾಭ್ಯಾಸ

1. ಕೆಳಗಿನ ಆಡುಮಾತಿನ ಪದಗಳನ್ನು ಗ್ರಾಂಥಿಕ ಭಾಷೆಯಲ್ಲಿ ಬರೆಯಿರಿ.

ಅ. ತಿರಂಗಿ ಧ್ವಜ ಏರಸಾಕಬೇಕು.

ಆ. ಮಣ್ಣ ಮೈಮ್ಯಾಲ ಮೆತಕೊಂಡು ಹಚ್ಕೊಂಡು ಕುತಿಗಿಮಟ ಸವರಕೊಂಡು ಮಟ್ಟಿಸ್ನಾನ ಮಾಡ್ತಾರ.

ಇ. ಮಂಗ್ಯಾನಂಗ ಮಲ್ಲಗಂಬ ಹತ್ತೋದ ಕಣ್ಣಿಗೆ ಮಸ್ತ ಕಾಣ್ಸತ್ತ

ಈ. ಅವರ್ನ ಹಿಡಿದು ಮೈ ಹುಣಸಿ ಹಣ್ಣಾಗಂಗ ಹೊಡದ್ರು

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಮಲ್ಲಗಂಬ, ಕೈಯಾಗ, ಹಚ್ಕೊಂಡು, ಶಿವಾಜಿಯಿಂದ, ಮನೆಗಳಲ್ಲಿ.

3. ಕೆಳಗಿನ ಪ್ರಾದೇಶಿಕ ನುಡಿಗಟ್ಟನ್ನು ಬಳಸಿ ಸ್ವಂತ ವಾಕ್ಯ ರಚಿಸಿ

ಗರ್ದಿಗಮ್ಮತ್ತು, ರಗಡಮಾಡಿದ, ಕೈಯಾಗ ಜೀವ ಹಿಡ್ಕೊಂಡು

4. ಕೆಳಗಿನ ಪದಗಳ ಸಮಾಸ ರಚನಾ ವಿನ್ಯಾಸವನ್ನು ಗಮನಿಸಿ.

ಪೂರ್ವ ಪದ	+ ಉತ್ತರಪದ	= ಸಮಾಸಪದ
ಕೈಯ	+ ಅಡಿ	= ಅಂಗೈ
ಕೆಂಪಿನ	+ ಮಣ್ಣು	= ಕೆಮ್ಮಣ್ಣು
ಹಿರಿಯ	+ ಜೇನು	= ಹೆಜ್ಜೇನು
ತಂಪಾದ	+ ಗಾಳಿ	= ತಂಗಾಳಿ
ಅರಸನ	+ ಮನೆ	= ಅರಮನೆ
ಕೆರೆಯೂ	+ ಬಾವಿಯೂ + ಹಳ್ಳವೂ	=ಕೆರೆಬಾವಿಹಳ್ಳಗಳು
ಕಸವೂ	+ ಕಡ್ಡಿಯೂ	= ಕಸಕಡ್ಡಿಗಳು
ಒಂದು	+ ಕಟ್ಟು	= ಒಗ್ಗಟ್ಟು
ಕೋಲು	+ ಊರಿ	= ಕೋಲೂರಿ

5. ಮಾದರಿಯಂತೆ ಜೋಡು ನುಡಿ ಬರೆಯಿರಿ.

ಮಾದರಿ : ಎಣ್ಣೆಗಿಣ್ಣೆ, ಮನೆಗಿನೆ

ಕೆಲಸ

ಅಚ್ಚು

ಅಲ್ಪ

ಅಡ್ಡ

ಚಟುವಟಿಕೆ

1. ಪ್ರಾದೇಶಿಕ ಕ್ರೀಡಾ ಪುಸ್ತಕಗಳನ್ನು ಓದಿ.
2. ನಾಗರಿಕತೆಯ ಬೆಳವಣಿಗೆಯಲ್ಲಿ ಕ್ರೀಡೆಯ ಮಹತ್ವ ಎಂಬ ಶೀರ್ಷಿಕೆಗೆ ಪ್ರಬಂಧ ರಚಿಸಿ.

8th_Kannada_Reader Term I_U4-9.indd 102 18-06-2019 10.47.09 AM

ಘಟಕ ಆರು

ಉಪಪಠ್ಯ

ಗಂಧರ್ವಸೇನ!

– (ಸಂಗ್ರಹ)



ಎಷ್ಟೋ ಸಂದರ್ಭಗಳಲ್ಲಿ ನಾವು ಮಾತನಾಡುವ ಶೈಲಿ, ದೇಹದ ಹಾವಭಾವಗಳು ನಿಜವಾಗಿ ನೀಡಬೇಕಾದ ಅರ್ಥಕ್ಕಿಂತ ಭಿನ್ನವಾದ ಅರ್ಥಗಳನ್ನು ಕೊಡುವುದಿದೆ. ಮಾತಿನ ಹಿನ್ನೆಲೆಯಲ್ಲಿರುವ ನಿಜವಾದ ಅರ್ಥವನ್ನು ಗ್ರಹಿಸಬೇಕಾದರೆ ಆ ಮಾತಿನ ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ ಇರಬೇಕು. ಹಾಗಾದಾಗ ಮಾತ್ರವೇ ಭಾಷೆಯು ಸರಿಯಾದ ರೀತಿಯಲ್ಲಿ ಸಂವಹನಗೊಳ್ಳುವುದು.

ಇದೊಂದು ಜಾನಪದ ಮೂಲದಿಂದ ಆರಿಸಿಕೊಂಡಿರುವ ಕಥೆ. ಯಾರೋ ಹೇಳಿದ್ದನ್ನು ಕೇಳಿ, ಏನೂ ಯೋಚಿಸದೆ ನಡೆದುಕೊಳ್ಳುವ ಮೂರ್ಖ ಮನುಷ್ಯರ ಮಾದರಿಗಳು ಇಲ್ಲಿವೆ. ಇತರರು ಹೇಳಿದ ಮಾತಿನ ಹಿಂದಿರುವ ವಾಸ್ತವವನ್ನು ಅರಿತು ನಡೆದುಕೊಳ್ಳಬೇಕು ಎಂಬ ನೀತಿಯೂ ಈ ಕಥೆಯಲ್ಲಿ ಅಡಕವಾಗಿದೆ.



8th_Kannada_Reader Term I_U4-9.indd 103 18-06-2019 10.47.10 AM

ಒಂದು ದಿನ ಒಬ್ಬ ರಾಜ ಒಡ್ಡೋಲಗದಲ್ಲಿದ್ದಾಗ ಅವನ ಮಂತ್ರಿ ಗಟ್ಟಿಯಾಗಿ ಅಳುತ್ತಾ ಬಂದನು. ಅವನ ರೋದನಕ್ಕೆ ಕಾರಣವೇನೆಂದು ರಾಜ ಪ್ರಶ್ನಿಸಿದ. ಮಂತ್ರಿಯು ಸಿಂಹಾಸನವನ್ನು ಚುಂಬಿಸಿ, ಭೂಮಿಯನ್ನು ಮುಟ್ಟಿ ನಮಸ್ಕರಿಸಿ ತನ್ನ ನಾಲಗೆಯನ್ನು ಉದ್ದ ಮಾಡಿ, 'ಮಹಾರಾಜರೇ, ಗಂಧರ್ವಸೇನರು ತೀರಿಕೊಂಡರಂತೆ' ಎಂದು ಉದ್ಗರಿಸುತ್ತಾ ಮೂರ್ಛೆ ಹೋದ. ಅದನ್ನು ಕೇಳಿ ರಾಜನು ಒಡ್ಡೋಲಗವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿ ಕಣ್ಣೀರು ಸುರಿಸುತ್ತ ಗಂಧರ್ವಸೇನರ ಆತ್ಮಶಾಂತಿಗಾಗಿ ನಾಲ್ಕು ದಿನಗಳ ಕಾಲ ರಾಜ್ಯಾದ್ಯಂತ ಎಲ್ಲರೂ ಶೋಕಾಚರಣೆ ಮಾಡಬೇಕೆಂದು ಆಜ್ಞಾಪಿಸಿದ. ಮಂತ್ರಿಯ ಆರೈಕೆಗೆ ವೈದ್ಯರನ್ನು ಕರೆಸಿ ಉಪಚರಿಸುವಂತೆ ರಾಜಭಟರಿಗೆ ತಿಳಿಸಿ ಅಂತಃಪುರಕ್ಕೆ ಬಂದ. ರಾಜ ಅಲ್ಲಿಯೂ ಗಂಧರ್ವಸೇನ ಸತ್ತು ಸುದ್ದಿಯನ್ನು ನೆನಪಿಸಿಕೊಂಡು ಕರುಳು ಕಿತ್ತು ಬರುವಂತೆ ಅಳತೊಡಗಿದ. ರಾಣಿಯರು ಅವನ ಶೋಕಕ್ಕೆ ಕಾರಣವೇನೆಂದು ಕೇಳಿದರು. 'ಗಂಧರ್ವಸೇನರು ತೀರಿಕೊಂಡರು' ಎಂದು ರಾಜ ಗದ್ಗದ ಕಂಠದಿಂದ ಹೇಳಿದಾಗ, 'ರಾಜನ ದುಃಖ ತಮ್ಮ ದುಃಖ' ಎಂದು ಅವರು ಕೂಡ ಕರುಳು ಹಿಂಡುವಂತೆ ಎದೆ ಬಡಿದುಕೊಂಡು ಅಳಲಾರಂಭಿಸಿದರು. ಇಡೀ ಅಂತಃಪುರ ದುಃಖ ಹಾಗೂ ಗೊಂದಲದಿಂದ ತುಂಬಿತು.

ರಾಣಿಯ ಸೇವಕಿಯೊಬ್ಬಳಿಗೆ ಈ ಎಲ್ಲಾ ಗೊಂದಲ ಏಕೆಂದು ತಿಳಿಯಲಿಲ್ಲ. ಅವಳು, 'ಮಹಾರಾಣಿಯವರೇ, ಎಲ್ಲರೂ ಏಕೆ ಅಳುತ್ತಿದ್ದಾರೆ?' ಎಂದು ಕೇಳಿದಳು. ರಾಣಿ ನಿಟ್ಟುಸಿರು ಬಿಟ್ಟು, 'ಪಾಪ! ಗಂಧರ್ವಸೇನರು ತೀರಿಕೊಂಡರಂತೆ' ಎಂದಳು. ಸೇವಕಿ ಚುರುಕು ಬುದ್ಧಿಯವಳು. ಅವಳು ಆಲೋಚನೆ ಮಾಡಿದಳು. 'ಈ ನಮ್ಮ ಮಹಾರಾಜರಿಗೂ ಆ ಗಂಧರ್ವಸೇನರಿಗೂ ಏನ್ ಸಂಬಂಧ?' ಎಂದು ಆತಂಕದಿಂದ ರಾಣಿಯ ಬಳಿ ಕೇಳಿದಳು. ರಾಣಿ ಅದು ತನಗೆ ಗೊತ್ತಿಲ್ಲವೆಂದು ನುಡಿದು, ರಾಜನ ಬಳಿಗೆ ಹೋಗಿ, 'ಗಂಧರ್ವಸೇನರು ಯಾರು?' ಎಂದು ಕೇಳಿದಳು. ರಾಜನಿಗೂ ಗೊತ್ತಿರಲಿಲ್ಲ! ಆತ ಕಣ್‌ಕಣ್ ಬಿಟ್ಟು, 'ತಾನೆಂಥ ಮೂರ್ಖತನದ ಕೆಲಸ ಮಾಡಿದೆ' ಎಂದುಕೊಂಡು ಕೂಡಲೇ ಆಸ್ಥಾನಕ್ಕೆ ತೆರಳಿದ. ಈಗಾಗಲೇ ವೈದ್ಯರ ಉಪಚಾರದಿಂದ ಸುಧಾರಿಸಿಕೊಂಡಿದ್ದ ಮಂತ್ರಿಯನ್ನು ಕರೆಸಿ, 'ಮಂತ್ರಿಗಳೇ, ಆ ಗಂಧರ್ವಸೇನ ಯಾರು?' ಎಂದು ಪ್ರಶ್ನಿಸಿದ. 'ಮಹಾರಾಜರೇ, ದಯವಿಟ್ಟು ಕ್ಷಮಿಸಿ. ಗಂಧರ್ವಸೇನರು ಯಾರೆಂಬುದು ನನಗೂ ಗೊತ್ತಿಲ್ಲ. ಆದರೆ ಪಡೆಯ ಮುಖ್ಯಸ್ಥನು ಗಂಧರ್ವಸೇನರು ತೀರಿಕೊಂಡರೆಂದು ಗಟ್ಟಿಯಾಗಿ ಗಂಟಲು ಹರಿಯುವಂತೆ ಕೂಗುತ್ತಾ, ಅಳುತ್ತಿರುವುದನ್ನು ಕಂಡು ನಾನೂ ಅತ್ತೆ' ಎಂದು ಹೇಳಿದ. ರಾಜನ ಕೋಪ ನೆತ್ತಿಗೇರಿತು. 'ನೀನೊಬ್ಬ ಮೂರ್ಖ. ಕೂಡಲೇ ಹೋಗಿ ಗಂಧರ್ವಸೇನ ಯಾರೆಂದು ಪತ್ತೆ ಮಾಡಿಕೊಂಡು ಬಾ' ಎಂದ. ಮಂತ್ರಿ ರಾಜನಿಗೆ ವಂದಿಸಿ, 'ಕೇಳಿದ ಕಿವಿ ಊರಿಗೆ ಮಾರಿ ತಂದಿತು' ಅಂದು ಕೊಂಡು ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿದ.

ಪಡೆಯ ಮುಖ್ಯಸ್ಥನನ್ನು ಕಂಡು, 'ಗಂಧರ್ವಸೇನರು ಯಾರು?' ಎಂದು ಪ್ರಶ್ನಿಸಿದ. 'ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು. ಆದರೆ ಅವರು ತೀರಿಕೊಂಡರೆಂದು ಸ್ವತಃ ನನ್ನ ಹೆಂಡತಿಯೇ ಅಳುತ್ತಿದ್ದಳು. ಈ ಸುದ್ದಿಯನ್ನು ನಿಮಗೆ ಹೇಳಬೇಕೆನಿಸಿತು. ಬಂದು ಹೇಳಿದೆ...' ಎಂದ.

ಮಂತ್ರಿ ತಲೆಯ ಮೇಲೆ ಕೈ ಹೊತ್ತು ಕುಳಿತ. ಇರಲಿ, ಇವನ ಹೆಂಡತಿಯನ್ನು ವಿಚಾರಿಸೋಣ ಎಂದು ಇಬ್ಬರೂ ಆತನ ಮನೆಗೆ ಹೋಗಿ, 'ಯಾರಮ್ಮ, ಈ ಗಂಧರ್ವಸೇನ' ಎಂದು ಕೇಳಿದರು. ಅವಳು, 'ಸ್ವಾಮೀ, ಗಂಧರ್ವಸೇನರ ಪರಿಚಯ ನನಗಿಲ್ಲ. ಈ ದಿವಸ ಬೆಳಿಗ್ಗೆ ಸ್ನಾನ ಮಾಡಲಿಕ್ಕೆ ಕೆರೆಗೆ ಹೋಗಿದ್ದೆ. ಅಲ್ಲಿ ಮಡಿವಾಳ್ತಿ ಗಂಧರ್ವಸೇನ ಸತ್ತುಹೋದನೆಂದು ಬಾಯಿ ಬಡಿದುಕೊಂಡು ಒಂದೇ ಸಮನೆ ಅಳುತ್ತಿದ್ದಳು. ಅದನ್ನು ನೋಡಿ ನಾನೂ ಅತ್ತೆ. ಗಂಡನ ಬಳಿಯೂ ಹೇಳಿದೆ' ಎಂದಳು. ಮಂತ್ರಿಗೆ ತಲೆ ಸುತ್ತಿದಂತಾಯ್ತು. ಈ ಗಂಧರ್ವಸೇನ ಯಾರು? ತಲೆತಲೆ ಚಚ್ಚಿಕೊಂಡ. ಏನೇ ಆಗಲಿ ಎಂದುಕೊಂಡು ಅವರೆಲ್ಲರೂ ಮಡಿವಾಳ್ತಿಯ ಮನೆಗೆ ಹೋಗಿ, 'ಗಂಧರ್ವಸೇನ ಯಾರು?' ಎಂದು ಕೇಳಿದರು. ಅವಳು ದುಃಖಿಸತೊಡಗಿದಳು. 'ಸ್ವಾಮಿ, ನನಗೆ ಅದೃಷ್ಟವಿಲ್ಲ. ಈಗಲೂ ನನ್ನ ಹೃದಯ ಅವನಿಗಾಗಿ

8th_Kannada_Reader Term I_U4-9.indd 104 18-06-2019 10.47.10 AM

ಮಿಡಿಯುತ್ತಿದೆ. ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ. ನನ್ನ ಮಗನಿಗಿಂತಲೂ ಹೆಚ್ಚಾಗಿ ಅವನನ್ನು ಮುದ್ದಿನಿಂದ ಬೆಳೆಸಿದ್ದೆ. ನಮ್ಮ ಎಲ್ಲಾ ವ್ಯವಹಾರಗಳನ್ನೂ ಅವನು ನೋಡಿಕೊಳ್ಳುತ್ತಿದ್ದ ಸ್ವಾಮಿ, ನಿನ್ನೆ ರಾತ್ರಿ ಕಣ್ಣು ಮುಚ್ಚೊಂಬಿಟ್ಟ. ನನ್ನ ಹೊಟ್ಟೆ ಮೇಲೆ ಕಲ್ ಹಾಕ್ ಬಿಟ್ಟ' ಎಂದು ಬೊಬ್ಬಿಟ್ಟು ಅತ್ತಳು. ಅದನ್ನು ಕೇಳಿದ ಮಂತ್ರಿ, ಮುಖ್ಯಸ್ಥ, ಅವನ ಹೆಂಡತಿ ಪರಸ್ಪರ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು, ಅಲ್ಲಿಂದ ಹೊರಟು ಬಂದರು.

ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು, ನಿಜಾಂಶವನ್ನು ಹೇಳಿದ. 'ಗಂಧರ್ವಸೇನರು ಸತ್ತರೆಂದು ನಾವೆಲ್ಲ ಶೋಕಿಸಿದೆವಲ್ಲಾ, ಅದು ಬೇರೆ ಯಾರೂ ಅಲ್ಲ. ಮಡಿವಾಳ್ತಿಯ ಪ್ರೀತಿಯ ಕತ್ತೆ' ಎಂದು ಹೇಳಿದ. ರಾಜ ಹಿಗ್ಗಾಮುಗ್ಗಾ ಬೈದನು. ಆದರೆ ಶಿಕ್ಷಿಸದೆ ಬಿಟ್ಟುಬಿಟ್ಟ.

ಈ ಸುದ್ದಿ ಅಂತಃಪುರದ ರಾಣಿಯರ ಕಿವಿಗೂ ಮುಟ್ಟಿತು. 'ಒಂದು ಕುರಿ, ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು' ಎನ್ನುವಂತೆ ರಾಜ ಮತ್ತು ಅವನ ಆಸ್ಥಾನಿಕರ ಮೂರ್ಖತನಕ್ಕಾಗಿ, ರಾಣಿಯರು ತಮ್ಮ ಪಕ್ಕೆಲುಬುಗಳು ನೋಯುವವರೆಗೂ ನಗುತ್ತಲೇ ಇದ್ದರು.

ಪದಗಳ ಅರ್ಥ

ಒಡ್ಡೋಲಗ–ರಾಜಸಭೆ, ದರ್ಬಾರು; ರೋದನ–ಅಳುವಿಕೆ, ಪ್ರಲಾಪ; ಚುಂಬನ–ಮುತ್ತಿಕ್ಕು; ಉದ್ಗರಿಸು–ಹೇಳು; ಪರಿಸಮಾಪ್ತಿ–ಅಂತ್ಯ, ಕೊನೆ, ಮುಕ್ತಾಯ; ಶೋಕ–ಅಳಲು, ದುಃಖ; ಗದ್ಗದ ಕಂಠ–ನಿಂತುನಿಂತು ಬರುವ ಅಸ್ಪಷ್ಟವಾದ ಮಾತು, ಬಿಗಿದ ಕಂಠ; ಅಂತಃಪುರ–ರಾಣಿವಾಸ; ನಿಟ್ಟುಸಿರು–ದೀರ್ಘವಾಗಿ ಬಿಡುವ ಉಸಿರು, ನಿಡಿದಾದ ಶ್ವಾಸ; ಬಡಪಾಯಿ–ಅಶಕ್ತ, ದುರ್ಬಲ, ದರಿದ್ರ; ತೀರಿಕೊಳ್ಳು–ಗತಿಸು, ಮರಣಹೊಂದು; ಮಾರ್ನುಡಿ–ಪ್ರತಿಯಾಗಿ ಮಾತನಾಡು, ಮಾರುತ್ತರ ಕೊಡು; ಪತ್ತೆ–ಗುರುತು, ಸುಳಿವು; ಬೊಬ್ಬಿಡು–ಕೂಗು, ಅರಚು, ಗಟ್ಟಿಯಾಗಿ ಹೇಳು; ನಿಜಾಂಶ–ಸತ್ಯ, ದಿಟ; ಪಕ್ಕೆಲುಬು–ಇಬ್ಬದಿಯ ಎಲುಬುಗಳು.

ಟಿಪ್ಪಣಿಗಳು

1. **ಶೋಕಾಚರಣೆ :** ದುಃಖ ಸೂಚನೆ; ಸತ್ತವರಿಗಾಗಿ ಸಂತಾಪ ಸೂಚಿಸುವುದು.
2. **ನಾಲಗೆಯನ್ನು ಉದ್ದ ಮಾಡಿ ಹೇಳು :** ಒಂದು ವಿಷಯದ ಬಗ್ಗೆ ತನಗೆ ಪೂರ್ಣ ಗೊತ್ತಿದ ಎಂದು ಅಂದುಕೊಳ್ಳುತ್ತಾ, ನಂಬಿಸಿ ಹೇಳುವುದು, ಅತಿಶಯವಾಗಿ ಮಾತನಾಡುವುದು.
3. **ಕರುಳು ಕಿತ್ತು ಬರುವಂತೆ ಅಳು :** ತನಗಾದ ದುಃಖವನ್ನು ತೋರ್ಪಡಿಸಿಕೊಳ್ಳಲು ಅಳುವ ಒಂದು ರೀತಿ, ಅತೀವವಾದ ಅಳು.
4. **ಗಂಟಲು ಹರಿಯುವಂತೆ ಕೂಗು :** ಬೊಬ್ಬೆ ಹಾಕಿ ಹೇಳು, ಜೋರಾಗಿ ಬೊಬ್ಬಿಡು.
5. **ಕಾಲಿಗೆ ಬುದ್ಧಿ ಹೇಳು :** ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದ?
2. ಗಂಧರ್ವಸೇನ ಯಾರು ?
3. ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ ?
4. ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು ?
5. ರಾಣಿಯರು ನಗಲು ಕಾರಣವೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ರಾಜನ ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿ ?
2. ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮಂತ್ರಿ ಮಾಡಿದ ಪ್ರಯತ್ನಗಳೇನು?

8th_Kannada_Reader Term I_U4-9.indd 105 18-06-2019 10.47.10 AM

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ರಾಜನು _____ವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿದ. (ಒಡ್ಡೋಲಗ, ಬಡ್ಡೋಲಗ, ಓಡ್ಡೋಲಗ)
2. ಸೇವಕಿ _____ ಬುದ್ಧಿಯವಳು. (ಮುರುಕು, ತಳುಕು, ಚುರುಕು)
3. ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು _____ ಹೇಳಿದ. (ನಿಜಾಂಶ, ಗುಣಾಂಶ, ಮಿಥ್ಯಾಂಶ)
4. ರಾಜನಿಗೆ _____ ಗಂಧರ್ವಸೇನ ತೀರಿದ ವಿಷಯ ತಿಳಿಸಿದ. (ಮಂತ್ರಿ, ರಾಣಿ, ಸೇವಕ)
5. ಅಂತಃಪುರ ಇದರ ಅರ್ಥ _____ (ರಾಣಿವಾಸ, ಸೇವಕಿಯರ ವಾಸ, ರಾಜಗೃಹ)

ಭಾಷಾಭ್ಯಾಸ

1. ಕೆಳಗಿನ ಪದಗಳ ಅರ್ಥ ಬರೆಯಿರಿ.

ನಿಟ್ಟುಸಿರು, ಪರಿಸಮಾಪ್ತಿ, ಮಾರ್ನುಡಿ, ಉದ್ಗರಿಸು.

2. ಕೆಳಗಿನವುಗಳನ್ನು ನುಡಿಗಟ್ಟು, ಗಾದೆ, ಒಗಟುಗಳಾಗಿ ವಿಂಗಡಿಸಿ ಬರೆಯಿರಿ.

1. ಮೂಗು ತೂರಿಸು
2. ಕೇಳಿದ ಕಿವಿ ಊರಿಗೆ ಮಾರಿ ತಂದಿತು
3. ಕಾಲಿಗೆ ಬುದ್ಧಿಹೇಳು
4. ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ
5. ಬೆನ್ನಿಗೆ ಚೂರಿ ಹಾಕು.
6. ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು.
7. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ
8. ತಲೆ ಹಾಕು
9. ಮುಚ್ಚಿಟ್ಟದ್ದು ಮಣ್ಣಿನ ಪಾಲು
10. ಕರುಳು ಹಿಂಡು
11 ಮಂಕು ಬೂದಿ
12. ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.


ಹೊರಹಾಕು, ಅಶಕ್ತ, ನಿಜಾಂಶ, ಸೇವಕಿ, ಮಡಿವಾಳ್ತಿ.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ

ಸಂಬಂಧ, ಪಕ್ಕೆಲುಬು, ಬೊಬ್ಬಿಟ್ಟು, ಪ್ರಲಾಪ, ಉಪಚಾರ.

ಚಟುವಟಿಕೆ

1. ನಿಮ್ಮ ಸುತ್ತಮುತ್ತ ಇರುವ ಹಿರಿಯರು ಹೇಳುವ ಜಾನಪದ ಕಥೆಗಳನ್ನು ಕೇಳಿ ಸಂಗ್ರಹಿಸಿ.
2. ನಿಮಗೆ ತಿಳಿದಿರುವ ಜಾನಪದ ಕಥೆಗಳನ್ನು ನಿಮ್ಮ ಗೆಳೆಯರಿಗೆ ಹೇಳಿ.



8th_Kannada_Reader Term I_U4-9.indd 106 18-06-2019 10.47.10 AM

ಘಟಕ ಆರು

ವ್ಯಾಕರಣ

ಸಂಧಿಗಳು

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದಂತೆ ಸೇರುವುದನ್ನು ಸಂಧಿ ಎನ್ನುತ್ತೇವೆ. ಸಂಧಿಗಳಲ್ಲಿ ಸ್ವರ ಸಂಧಿ, ವ್ಯಂಜನ ಸಂಧಿ ಎಂಬ ಎರಡು ವಿಧಗಳಿವೆ.

ಸ್ವರ ಸಂಧಿ

ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಅದನ್ನು ಸ್ವರ ಸಂಧಿ ಎನ್ನುವರು.

ಉದಾಹರಣೆಗೆ :

ಅವನ+ಊರು=ಅವನೂರು.

ವ್ಯಂಜನ ಸಂಧಿ

ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನವು ಬಂದು ಸಂಧಿಯಾದರೆ ಅದಕ್ಕೆ ವ್ಯಂಜನ ಸಂಧಿ ಎನ್ನುವರು.

ಉದಾಹರಣೆಗೆ :

ದಿಕ್+ಅಂತ=ದಿಗಂತ.

ಕನ್ನಡ ಸಂಧಿಗಳು

ಪೂರ್ವ ಪದ ಹಾಗೂ ಉತ್ತರ ಪದಗಳೆರಡೂ ಕನ್ನಡ ಪದಗಳೇ ಆಗಿದ್ದು, ಅವೆರಡೂ ಪದಗಳು ಕೂಡಿದಾಗ ಆಗುವ ಸಂಧಿಯನ್ನು ಕನ್ನಡ ಸಂಧಿ ಎನ್ನುವರು. ಎಂದರೆ ಎರಡು ಕನ್ನಡ ಪದಗಳು ಒಟ್ಟು ಸೇರುವುದನ್ನೇ ಕನ್ನಡ ಸಂಧಿಗಳು ಎನ್ನಲಾಗುವುದು. ಕನ್ನಡ ಸಂಧಿಗಳಲ್ಲಿ ಲೋಪ, ಆಗಮ, ಆದೇಶ ಎಂಬ ಮೂರು ವಿಧಗಳಿವೆ.

ಲೋಪ ಸಂಧಿ

ಸ್ವರದ ಮುಂದೆ ಸ್ವರವು ಬಂದಾಗ ಹಿಂದಿನ ಸ್ವರವು ಲೋಪವಾದರೆ, ಅದನ್ನು ಲೋಪ ಸಂಧಿ ಎನ್ನುತ್ತಾರೆ.

ಉದಾಹರಣೆಗೆ :

ಗಾಣ+ಇಗ=ಗಾಣಿಗ (ಇಲ್ಲಿ ಅಕಾರ ಲೋಪವಾಗಿದೆ)

ಮಾತು+ಇಲ್ಲ=ಮಾತಿಲ್ಲ(ಇಲ್ಲಿ ಉಕಾರ ಲೋಪವಾಗಿದೆ)

ಬೇರೆ+ಒಂದು=ಬೇರೊಂದು(ಇಲ್ಲಿ ಎಕಾರ ಲೋಪವಾಗಿದೆ)

ಆಗಮ ಸಂಧಿ

ಸ್ವರದ ಮುಂದೆ ಸ್ವರವು ಬಂದು ಸಂಧಿ ಕಾರ್ಯ ನಡೆದಾಗ ಆ ಎರಡು ಸ್ವರಗಳ ನಡುವೆ ಬೇರೊಂದು ಅಕ್ಷರವು ಹೊಸದಾಗಿ ಬಂದು ಸೇರುವುದನ್ನೇ ಆಗಮ ಸಂಧಿ ಎನ್ನುತ್ತಾರೆ.

8th_Kannada_Reader Term I_U4-9.indd 107 18-06-2019 10.47.10 AM

ಸಂಧಿಯಾಗುವಾಗ 'ಯ'ಕಾರವು ಹೊಸದಾಗಿ ಬಂದು ಸೇರಿದರೆ ಯಕಾರಾಗಮ ಸಂಧಿ ಎನ್ನಲಾಗುವುದು.

ಉದಾಹರಣೆಗೆ :

ಗಾಳಿ+ಅನ್ನು=ಗಾಳಿಯನ್ನು

ಕೆರೆ+ಅಲ್ಲಿ=ಕೆರೆಯಲ್ಲಿ

ಮನೆ+ಇಂದ=ಮನೆಯಿಂದ

ದೊರೆ+ಎಂದು=ದೊರೆಯೆಂದು

ಸಂಧಿಯಾಗುವಾಗ 'ವ'ಕಾರವು ಹೊಸದಾಗಿ ಬಂದು ಸೇರಿದರೆ ಅದನ್ನು ವಕಾರಾಗಮ ಸಂಧಿ ಎನ್ನಲಾಗುವುದು.

ಉದಾಹರಣೆಗೆ :

ಹಸು+ಅನ್ನು=ಹಸುವನ್ನು

ಗುರು+ಇಗೆ=ಗುರುವಿಗೆ

ಹೂ+ಇಂದ=ಹೂವಿಂದ

ಮಗು+ಉ=ಮಗುವು

ಆದೇಶ ಸಂಧಿ

ಸ್ವರಕ್ಕೆ ವ್ಯಂಜನ ಪರವಾದಾಗ ಅಥವಾ ವ್ಯಂಜನಕ್ಕೆ ವ್ಯಂಜನವು ಪರವಾದಾಗ ಮುಂದೆ ಇರುವ ವ್ಯಂಜನದ ಸ್ಥಾನದಲ್ಲಿ ಬೇರೊಂದು ವ್ಯಂಜನಾಕ್ಷರವು ಬರುವುದಕ್ಕೆ ಆದೇಶ ಸಂಧಿ ಎಂದು ಹೆಸರು. ಇದರಲ್ಲಿ ವರ್ಗದ ಪ್ರಥಮಾಕ್ಷರಗಳಾದ ಕ,ತ,ಪ.ಗಳಿಗೆ ವರ್ಗದ ತೃತೀಯಾಕ್ಷರಗಳಾದ ಗ,ದ,ಬ ಅಕ್ಷರಗಳು ಆದೇಶಗಳಾಗಿ ಬರುತ್ತವೆ.

ಉದಾಹರಣೆಗೆ :

ಹಳೆ+ಕನ್ನಡ=ಹಳೆಗನ್ನಡ(ಕಕಾರಕ್ಕೆ ಗಕಾರವು ಆದೇಶವಾಗಿ ಬಂದಿದೆ)

ಬೆಟ್ಟ+ತಾವರೆ+ಬೆಟ್ಟದಾವರೆ(ತಕಾರಕ್ಕೆ ದಕಾರವು ಆದೇಶವಾಗಿದೆ)

ಕಣ್+ಪನಿ=ಕಂಬನಿ(ಪಕಾರಕ್ಕೆ ಬಕಾರವು ಆದೇಶವಾಗಿದೆ)

ಪ್ರಕೃತಿ ಭಾವ ಸಂಧಿ

ಸ್ವರದ ಮುಂದೆ ಸ್ವರವು ಬಂದರೂ ಕೆಲವೆಡೆಗಳಲ್ಲಿ ಸಂಧಿ ಕಾರ್ಯವಾಗದೆ ಹಾಗೆಯೇ ಇದ್ದರೆ ಅದನ್ನು ಪ್ರಕೃತಿ ಭಾವ ಎಂದು ಕರೆಯಲಾಗುವುದು.

ಉದಾಹರಣೆಗೆ :

ಅಣ್ಣಾ+ಅಲ್ಲಿ ನೋಡು=ಅಣ್ಣಾ ಅಲ್ಲಿ ನೋಡು

ಅಕ್ಕಾ+ಇತ್ತ ಬಾ=ಅಕ್ಕಾ ಇತ್ತ ಬಾ

ದೇವರೇ+ಕಾಪಾಡು=ದೇವರೇ ಕಾಪಾಡು

ಅಬ್ಬಾ+ಅದು ಹುಲಿ=ಅಬ್ಬಾ ಅದು ಹುಲಿ

* * * *

8th_Kannada_Reader Term I_U4-9.indd 108 18-06-2019 10.47.10 AM

ಘಟಕ ಏಳು

7. ನಾಡು, ಸಮಾಜ



ಕಾವ್ಯ ಕಣಜ	:	ಮತ್ತೆ ಹುಟ್ಟುವುದಾದರೆ	– ಸವಿತಾ ನಾಗಭೂಷಣ
ಪೂರಕ ಪದ್ಯ	:	ನನ್ನ ಹಾಗೆಯೇ	– ಸು.ರಂ.ಎಕ್ಕುಂಡಿ
ಗದ್ಯ ವಿಹಾರ	:	ಮನದಣಿಯೆ ನೋಡಿ ಮಣಿದೆ	– ಎಂ.ಕೆ.ಇಂದಿರಾ
ಉಪಪಠ್ಯ	:	ಆ ದೇಶವೇ ಅವರ ತಾಯಿ	– ಹೊಯ್ಸಳ
ವ್ಯಾಕರಣ	:	ಸಂಸ್ಕೃತ ಸಂಧಿಗಳು	

8th_Kannada_Reader Term I_U4-9.indd 109 18-06-2019 10.47.10 AM

ಘಟಕ ವಿಳು

ಮತ್ತೆ ಹುಟ್ಟುವುದಾದರೆ

– ಸವಿತಾ ನಾಗಭೂಷಣ



ಕನ್ನಡ ಕವಿಗಳು ನಾಡು–ನುಡಿ, ಸಂಸ್ಕೃತಿ–ಪ್ರಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಕವಿತೆಗಳಲ್ಲಿ ತಂದಿದ್ದಾರೆ. ನಾಡು ನುಡಿಗಳನ್ನು ಕುರಿತು ಅಭಿಮಾನದಿಂದ ರಚಿಸಿದ ಕಾವ್ಯ ಪರಂಪರೆಯೇ ನಮ್ಮ ಮುಂದಿದೆ. ಒಂದಕ್ಕಿಂತ ಇನ್ನೊಂದು ಭಿನ್ನ. ಇಂಥ ಗೀತೆಗಳನ್ನು ಓದಿದಾಗ ನಮ್ಮ ಹೃದಯ ತುಂಬಿ ಬರುತ್ತದೆ. ಪ್ರಸ್ತುತ ಕವನದಲ್ಲಿ ನಮ್ಮ ನಾಡು ನುಡಿಯ ಬಗ್ಗೆ ಅದರ ಭಾವ ಮೂಡುವಂತೆ ಸಮರ್ಥವಾಗಿ ಇಲ್ಲಿ ಚಿತ್ರಿಸಲಾಗಿದೆ.



8th_Kannada_Reader Term I_U4-9.indd 110 18-06-2019 10.47.10 AM

ಮತ್ತೆ ಹುಟ್ಟುವುದಾದರೆ
ಈ ನೆಲವೇ ಇರಲಿ
ಹುಟ್ಟಿದ ಮೇಲೆನ್ನ ನುಡಿಯು
ಕನ್ನಡವೆ ಆಗಿರಲಿ ‖1‖

ತುಂಗೆಯಲ್ಲಿ ನಾನಿರಲು
ಗಂಗೆಯೂ ಬರಲಿ
ಕೃಷ್ಣೆ–ಗೋದಾವರಿ
ಗೆಳತಿಯರು ಸಿಗಲಿ ‖2‖

ಹಿಮಾಲಯವು ಮುಡಿಯಲ್ಲಿ
ಸಹ್ಯಾದ್ರಿಯು ಅಡಿಯಲ್ಲಿ
ಅಲ್ಲಲ್ಲಿಯೆ ಇರಲಿ
ಕಲ್ಕತ್ತೆಯ ಕಾಳಿ
ಶೃಂಗೇರಿಯ ಶಾರದೆಗೆ
ಹೂವ–ಕುಂಕುಮ ಕೊಡಲಿ
ದೂರದಲ್ಲೇಕೆ ಇರಬೇಣಕು ದೆಹಲಿ
'ಶಿವಮೊಗ್ಗೆಗೇ ಬರಲಿ! ‖3‖

ಮತ್ತೆ ಹುಟ್ಟುವುದಾದರೆ
ಈ ನೆಲವೇ ಇರಲಿ
ಮಂಗಳೂರಿನ ಕಡಲು
ಮಡಿಕೇರಿಯ ಮಂಜಿನೊಡಲು
ನನಗೊದಗಿ ಬರಲಿ ‖4‖

ಹಟ್ಟಿ ಚಿನ್ನದ ಬುಗುಡಿ
ಕಾರವಾರದ ಸೀಗಡಿ
ತುಟ್ಟಿಯಾಗದೇ ಇರಲಿ
ಸೊರಗದಿರಲಿ ಬೇಲೂರಿನ ಬಾಲೆ
ಒಣಗದಿರಲಿ ಜೋಗದ ಮೋರೆ
ಇಳಕಲ್ಲಿನ ಸೀರೆಗೆ
ಕಾಶ್ಮೀರದಲ್ಲೂ ಬೆಲೆ ಸಿಗಲಿ ‖5‖

ಮತ್ತೆ ಹುಟ್ಟುವುದಾದರೆ
ಈ ನೆಲವೇ ಇರಲಿ
ಮೇಲುಕೋಟೆಯ ಚೆಲುವ
ನನಗೊಲಿದು ಬರಲಿ! ‖6‖

8th_Kannada_Reader Term I_U4-9.indd 111 18-06-2019 10.47.10 AM

ಕವಿ–ಕಾವ್ಯ ಪರಿಚಯ



ಶ್ರೀಮತಿ ಸವಿತಾ ನಾಗಭೂಷಣ ಅವರು 1961ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು. ತಮ್ಮ ಶಾಲಾ ಹಾಗೂ ಕಾಲೇಜು ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಮುಗಿಸಿದರು. ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸವಿತಾ ನಾಗಭೂಷಣ ಅವರು, 'ನಾ ಬರುತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆ ಮಗಳು' ಮುಂತಾದ ಕವನ ಸಂಕಲನಗಳನ್ನೂ; ಸ್ತ್ರೀಲೋಕ ಎನ್ನುವ ಕಾದಂಬರಿಯನ್ನೂ ಬರೆದು ಪ್ರಕಟಿಸಿದ್ದಾರೆ. ಇವರ 'ನಾ ಬರುತ್ತೇನೆ ಕೇಳು' ಕವನ ಸಂಗ್ರಹಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1987ರಲ್ಲಿ ದೊರೆತಿದೆ. ಪ್ರಸ್ತುತ ಕವನವನ್ನು ಅವರ ಬಿಡಿ ಕವಿತೆಗಳು ಸಂಗ್ರಹದಿಂದ ಆರಿಸಲಾಗಿದೆ.

ಅನ್ಯರ ನೆಲ, ಧರ್ಮ, ಭಾಷೆ ಹಾಗೂ ಸಂಸ್ಕೃತಿಗಳನ್ನು ಗೌರವಿಸುತ್ತಲೇ ತನ್ನ ನೆಲ, ಭಾಷೆ ಹಾಗೂ ಸಂಸ್ಕೃತಿಗಳನ್ನು ಪ್ರೀತಿಸಬೇಕೆನ್ನುವ ಭಾವೈಕ್ಯತೆಯ ಆಶಯ ಈ ಕವನದಲ್ಲಿ ವ್ಯಕ್ತವಾಗಿದೆ.

ಪದಗಳ ಅರ್ಥ

ಬುಗುಡಿ–ಮಹಿಳೆಯರು ಕಿವಿಗೆ ಧರಿಸುವ ಒಂದು ಆಭರಣ; ಸೀಗಡಿ–ಸಮುದ್ರದಲ್ಲಿ ಸಿಗುವ ಒಂದು ಜಾತಿಯ ಸಣ್ಣ ಮೀನು; ಮೋರೆ–ಮುಖ; ತುಟ್ಟಿ–ಹೆಚ್ಚುಬೆಲೆ; ಮುಡಿ–ಮೇಲೆ; ಅಡಿ–ಪಾದ, ಕೆಳಗೆ; ಒಡಲು–ಮೈ, ಶರೀರ, ದೇಹ; ಸೊರಗು–ಬಾಡು, ಕುಂದು; ಒಣಗು–ಬತ್ತು; ಕಡಲು–ಸಮುದ್ರ; ಸಹ್ಯಾದ್ರಿ–ಪಶ್ಚಿಮ ಬೆಟ್ಟಸಾಲು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮರು ಹುಟ್ಟಿನಲ್ಲಿಯೂ ತನ್ನ ಭಾಷೆ ಯಾವುದಾಗಿರಬೇಕೆಂದು ಕವಯಿತ್ರಿ ಬಯಸುತ್ತಾರೆ.?
2. ಗಂಗೆ ಎಲ್ಲಿಗೆ ಬರಬೇಕೆಂದು ಕವಯಿತ್ರಿ ಆಶಿಸುತ್ತಾರೆ?
3. ತುಂಗೆಯ ಗೆಳತಿಯರು ಯಾರು ಯಾರು?
4. ಮುಡಿ ಮತ್ತು ಅಡಿಯಲ್ಲಿರುವ ಪರ್ವತಗಳು ಯಾವುವು?
5. ಕಲ್ಕತ್ತೆಯ ಕಾಳಿ, ಶೃಂಗೇರಿಯ ಶಾರದೆ ಏನೇನು ಕೊಡಬೇಕು?
6. ಹಟ್ಟಿ ಚಿನ್ನದಿಂದ ಯಾವ ಒಡವೆ ಮಾಡಿದೆ?
7. ಕಾರವಾರ ಯಾವುದಕ್ಕೆ ಪ್ರಸಿದ್ಧಿ?
8. ಕಾಶ್ಮೀರದಲ್ಲಿ ಯಾವುದಕ್ಕೆ ಬೆಲೆ ಸಿಗಬೇಕು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. 'ಮತ್ತೆ ಹುಟ್ಟುವುದಾದರೆ' ಕವಿತೆಯಲ್ಲಿ ತುಂಗೆಯ ಬಯಕೆಗಳು ಯಾವುದು?
2. 'ಮತ್ತೆ ಹುಟ್ಟುವುದಾದರೆ' ಕವಿತೆಯಲ್ಲಿ ಯಾವುದು ಅಲ್ಲಲ್ಲಿಯೇ ಇರಬೇಕೆಂದು ಕವಯಿತ್ರಿ ಆಶಿಸುತ್ತಾರೆ?
3. 'ಮತ್ತೆ ಹುಟ್ಟುವುದಾದರೆ' ಕವಿತೆಯಲ್ಲಿ ಬರುವ ಕರ್ನಾಟಕದ ಉತ್ಪನ್ನಗಳು ಯಾವುವು? ಅವು ಹೇಗೆ ಸಿಗಬೇಕೆಂದು ಕವಯಿತ್ರಿ ಬಯಸುತ್ತಾರೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ಮತ್ತೆ ಹುಟ್ಟುವುದಾದರೆ' ಕವಿತೆಯಲ್ಲಿ ಈ ನೆಲವನ್ನು ಪ್ರತಿನಿಧಿಸುವ ಅಂಶಗಳನ್ನು ವಿವರಿಸಿ ಬರೆಯಿರಿ.
2. 'ಮತ್ತೆ ಹುಟ್ಟುವುದಾದರೆ' ಕವಿತೆಯಲ್ಲಿ ಈ ನೆಲ ಮತ್ತು ಭಾಷೆಗೆ ಪೂರಕವಾಗಿ ಭಾವೈಕ್ಯ ಸಾರುವ ಅಂಶಗಳನ್ನು ವಿವರಿಸಿ.

8th_Kannada_Reader Term I_U4-9.indd 112 18-06-2019 10.47.10 AM

ಭಾಷಾಭ್ಯಾಸ

1. ಹೊಂದಿಸಿ ಬರೆಯಿರಿ.

ಅ	ಬ
1. ಕನ್ನಡವೇ	ಎ. ಸಿಗಲಿ
2. ಈ ನೆಲವೇ	ಬಿ. ಬರಲಿ
3. ಗೆಳತಿಯರು	ಸಿ. ಆಗಿರಲಿ
4. ಶಿವಮೊಗ್ಗೆಗೇ	ಡಿ. ಇರಲಿ

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ತುಂಗೆಯಲ್ಲಿ, ಹಿಮಾಲಯ, ಸಹ್ಯಾದ್ರಿ, ಮಂಜಿನೊಡಲು, ಅಲ್ಲಲ್ಲಿ, ಅಡಿಯಲ್ಲಿ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಹುಟ್ಟು, ದೂರ, ಹಗಲು, ಕಠಿಣ, ತುಟ್ಟಿ.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ

ಕನ್ನಡ, ಗೆಳತಿ, ಮುಡಿ, ಸೊರಗು, ಒಣಗು, ಇರಲಿ, ಸಿಗಲಿ.

5. ಆವರಣದಲ್ಲಿರುವ ಸೂಕ್ತ ಪದಗಳನ್ನು ಆರಿಸಿ ಖಾಲಿ ಜಾಗವನ್ನು ತುಂಬಿರಿ.

1. _____ ನಾನಿರಲು ಗಂಗೆಯೂ ಬರಲಿ.
   (ಕೃಷ್ಣೆಯಲ್ಲಿ, ಭದ್ರೆಯಲ್ಲಿ, ತುಂಗೆಯಲ್ಲಿ, ನೇತ್ರೆಯಲ್ಲಿ)
2. ದೂರದಲ್ಲೇಕೆ ಇರಬೇಕು _____
   (ಕಾಶಿ, ಕಲ್ಕತ್ತಾ, ಸಿಮ್ಲಾ, ದೆಹಲಿ)
3. ಕಾರವಾರದ ಸೀಗಡಿ _____ ಇರಲಿ.
   (ತುಟ್ಟಿಯಾಗದೆ, ಗಟ್ಟಿಯಾಗದೆ, ನೆಟ್ಟಗಾಗದೆ, ಕಪ್ಪಗಾಗದೆ)
4. ಹಟ್ಟಿ ಚಿನ್ನದ _____
   (ಕಡಗ, ಬುಗುಡಿ, ಬಂಗಾರ, ಬಳೆ)

6. ಮೊದಲಿನ ಎರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1. ಕಲ್ಕತ್ತೆ = ಕಾಳಿ, ಶೃಂಗೇರಿ = _____
2. ಹಟ್ಟಿ = ಚಿನ್ನ, ಕಾರವಾರ = _____
3. ಕಡಲು = ಮಂಗಳೂರು, ಮಂಜಿನೊಡಲು = _____
4. ಅಡಿಯಲ್ಲಿ = ಸಹ್ಯಾದ್ರಿ, ಮುಡಿಯಲ್ಲಿ = _____

ಚಟುವಟಿಕೆ

1. ಭಾವೈಕ್ಯ ಸಾರುವ ಇತರ ಕವಿತೆಗಳನ್ನು ಓದಿರಿ.

8th_Kannada_Reader Term I_U4-9.indd 113 18-06-2019 10.47.10 AM

ಪೂರಕ ಪದ್ಯ

ಘಟಕ ಏಳು

ನನ್ನ ಹಾಗೆಯೆ

– ಸು.ರಂ.ಎಕ್ಕುಂಡಿ



ಕನ್ನಡ ಕವಿಗಳು ನಾಡು–ನುಡಿ, ಸಂಸ್ಕೃತಿ–ಪ್ರಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಕವಿತೆಗಳಲ್ಲಿ ತಂದಿದ್ದಾರೆ. ನಾಡು ನುಡಿಗಳನ್ನು ಕುರಿತು ಅಭಿಮಾನದಿಂದ ರಚಿಸಿದ ಕಾವ್ಯ ಪರಂಪರೆಯೇ ನಮ್ಮ ಮುಂದಿದೆ. ಒಂದಕ್ಕಿಂತ ಇನ್ನೊಂದು ಭಿನ್ನ. ಇಂಥ ಗೀತೆಗಳನ್ನು ಓದಿದಾಗ ನಮ್ಮ ಹೃದಯ ತುಂಬಿ ಬರುತ್ತದೆ. ಪ್ರಸ್ತುತ ಕವನದಲ್ಲಿ ನಮ್ಮ ನಾಡು ನುಡಿಯ ಬಗ್ಗೆ ಅದರ ಭಾವ ಮೂಡುವಂತೆ ಸಮರ್ಥವಾಗಿ ಇಲ್ಲಿ ಚಿತ್ರಿಸಲಾಗಿದೆ.



8th_Kannada_Reader Term I_U4-9.indd 114 18-06-2019 10.47.11 AM

ಮೊನ್ನೆ ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳಿತೊಂದು ಪುಟ್ಟ ಮಗುವು ಅಜ್ಜನ
'ಈತನಾರು ತಾತ, ಇಲ್ಲಿ ನಿಂತು ನೋಡುತಿರುವನು
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು?'

'ಇವನೆ ಬಾಹುಬಲಿಯು ಮಗು! ಧೀರತನದ ಮೂರ್ತಿಯು!
ನುಡಿಯ ಹೊಳೆಗಳಲ್ಲಿ ತುಂಬಿ ಹರಿವುದಿವನ ಕೀರ್ತಿಯು
ಹತ್ತುವವರ ಇಳಿಯುವವರ ನಿಂತು ನೋಡುತಿರುವನು.
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು'

'ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ! ಎತ್ತರ!
ಭಯವಾಗದೆ ಇವನಿಗಿಲ್ಲಿ ಯಾರು ಇಲ್ಲ ಹತ್ತಿರ'

'ಇವನಿಗೆಲ್ಲಿ ಭಯವು ಮಗು, ಅಭಯ ಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ. ಒಮ್ಮೆ ಆತನು
ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು.
ಗೆದ್ದ ರಾಜ್ಯ ಮರಳಿಸುತ್ತ ನುಡಿದನೊಂದು ಮಾತನು
ನೀನು ಸೋತು ಗೆದ್ದೆ ಅಣ್ಣ, ನಾನು ಗೆದ್ದು ಸೋತೆನು
ಬೆಟ್ಟ ಕರೆಯುತಿಹುದು ನನ್ನ ಮುಗಿಲು ತನ್ನ ಹತ್ತಿರ
ಯಾವುದುಂಟು ಅಣ್ಣ ಇಲ್ಲಿ ಜೀವವೇರದೆತ್ತರ ?
ತಪಸ್ಸೊಂದೆ ತಿಳಿವುದೊಂದೆ ಹುಟ್ಟು ಸಾವಿನೆತ್ತರ.
ನಿಂತ ಹಾಗೆ ನಿಂತುಕೊಂಡು ಘೋರ ತಪವ ಮಾಡಲು
ಹುಟ್ಟು ಸಾವಿನಾಚೆಗಿರುವ ಹೊಳೆವ ಹಾದಿ ನೋಡಲು
ಬಿಸಿಲು ಬಂತು ನೆರಳು ಬಂತು, ಗಾಳಿ ಬಿಚ್ಚಿ ಬೀಸಿತು
ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು
ಸೂರ್ಯನೊಮ್ಮೆ ಚಂದ್ರನೊಮ್ಮೆ ಸುತ್ತು ಹಾಕಿ ನಡೆದರು
ದೀಪದಂತೆ ನಿಂತ ಇವಗೆ, "ನಮೋ" ಎಂದು ನುಡಿದರು'.

'ಇಷ್ಟು ಜನರು ಇಲ್ಲಿಗಿಂದು ಏಕೆ ಬಂದು ನೆರೆದರು?
"ಬಾಹುಬಲಿ", "ಬಾಹುಬಲಿ" ಎಂದು ಕರೆಯುತಿರುವರು?'

8th_Kannada_Reader Term I_U4-9.indd 115 18-06-2019 10.47.11 AM

'ಮಗೂ ಇಂದು ಇವನಿಗಿಲ್ಲಿ ಹಾಲಿನಲ್ಲಿ ಸ್ನಾನವು
ದಾರಿಯಲ್ಲಿ ದಣಿದ ಇವರಿಗೆ, ಇವನದೊಂದೆ ಧ್ಯಾನವು.
ಮುದ್ದು ಮುಖದಿ ಮುಗುಳ್ನಕ್ಕು ಸಿದ್ಧನಾಗಿ ನಿಂತಿಹ
ದುಗ್ಧ ಹಾಸದಲ್ಲಿ ನಲಿವ ಮುಗ್ಧ ಮಗುವಿನಂತಿಹ'

'ತಾತ,
ಎರೆವ ಮುಂಚೆ ಎಣ್ಣೆ ಹಚ್ಚಿ, ಅಮ್ಮ ನನ್ನ ಹೀಗೆಯೇ
ನಿಲ್ಲಿಸುವಳು. ಬಾಹುಬಲಿಯು ಕೂಡ ತನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ'
ಗೊಮ್ಮಟೇಶ ನಕ್ಕು ಬಿಟ್ಟ, ಕಂಡು ಮುಗ್ಧ ನಂಬುಗೆ!

ಕವಿ–ಕಾವ್ಯ ಪರಿಚಯ



ಸು.ರಂ.ಎಕ್ಕುಂಡಿಯವರ ಪೂರ್ಣ ಹೆಸರು ಸುಬ್ಬಣ್ಣ ರಂಗಣ್ಣ ಎಕ್ಕುಂಡಿ. ಇವರು ಹುಟ್ಟಿದ್ದು 1023ರಂದು, ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ. 1944ರಲ್ಲಿ ಬಿ.ಎ., ಆನರ್ಸ್) ಪದವಿ ಪಡೆದ ಎಕ್ಕುಂಡಿಯವರು ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲ ಎಂಬ ಗ್ರಾಮದಲ್ಲಿ ಪ್ರೌಢಶಾಲೆಯ ಅಧ್ಯಾಪಕರಾದರು. 35 ವರ್ಷಗಳ ಸೇವೆಯ ನಂತರ ಅಲ್ಲಿಯೇ ಮುಖ್ಯೋಪಾಧ್ಯಾಯರಾದರು.

ಇವರ ಕೃತಿಗಳು

ಕವನ ಸಂಕಲನ: ಶ್ರೀ ಆನಂದ ತೀರ್ಥರು, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಬಕುಳದ ಹೂಗಳು. ಕಥಾ ಸಂಕಲನ: ನೆರಳು. ಕಾದಂಬರಿ: ಪ್ರತಿಬಿಂಬಗಳು. ಸೋವಿಯತ್ ಲ್ಯಾಂಡ್‌ನ ನೆಹರೂ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ದೊರಕಿವೆ. ಪ್ರಸ್ತುತ ಪದ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನ ಕವನ' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ. ಇವರು 20.08.1995ರಲ್ಲಿ ನಿಧನರಾದರು.

ಪದಗಳ ಅರ್ಥ

ಮಜ್ಜನ–ಸ್ನಾನ, ಜಳಕ; ಅಭಯ–ರಕ್ಷಣೆ; ಸೆಣಸು–ಹೋರಾಡು; ನೆರೆ–ಗುಂಪುಸೇರು; ಹಮ್ಮು–ಅಹಂಕಾರ, ಸೊಕ್ಕು; ಹಚ್ಚಡ–ಹೊದಿಕೆ; ದುಗ್ಧಹಾಸ–ಹಾಲುನಗೆ, ಮುಗುಳ್ನಗೆ.

8th_Kannada_Reader Term I_U4-9.indd 116 18-06-2019 10.47.11 AM

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅಜ್ಜನನ್ನು ಮಗುವು ಏನೆಂದು ಕೇಳಿತು ?
2. ಅಜ್ಜ, ಬಾಹುಬಲಿಯ ಮೂರ್ತಿ ಮತ್ತು ಕೀರ್ತಿಯ ಬಗ್ಗೆ ಏನು ಹೇಳುವನು?
3. ಬಾಹುಬಲಿಗೆ ಭಯವಾಗುವುದಿಲ್ಲವೇ ಎಂದು ಮಗು ಏಕೆ ಕೇಳಿತು ?
4. ಭರತ ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು ?
5. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಮಜ್ಜನ, ಗೆಲುವು, ಕೀರ್ತಿ, ಪುಟ್ಟ, ಹೊನ್ನು, ಹಾಲು.

2. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಭಯವಾಗದೆ, ಈತನಾರು, ಸೂರ್ಯನೊಮ್ಮೆ, ದಾರಿಯಲ್ಲಿ, ತಪಸ್ಸೊಂದೆ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಸೂರ್ಯ, ಭಯ, ನಿಲ್ಲು, ಹತ್ತಿರ, ಶಾಂತಿ.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.

ಬೆಟ್ಟ, ಚಕ್ರವರ್ತಿ, ಎತ್ತರ, ಸುತ್ತುಹಾಕು, ನಂಬಿಗೆ.

ಚಟುವಟಿಕೆ

1. ಸು.ರಂ.ಎಕ್ಕುಂಡಿಯವರ ಇತರ ಕಥನ ಕವನಗಳನ್ನು ಓದಿರಿ.
2. ಬಾಹುಬಲಿಯ ಕಥೆಯನ್ನು ಓದಿ/ಕೇಳಿ ತಿಳಿದುಕೊಳ್ಳಿ.

8th_Kannada_Reader Term I_U4-9.indd 117 18-06-2019 10.47.11 AM

ಘಟಕ ಏಳು

ಮನದಣಿಯೆ ನೋಡಿ ಮಣಿದೆ

– ಎಂ.ಕೆ. ಇಂದಿರಾ



'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬುದು ಜನಪ್ರಿಯವಾದ ನಾಣ್ನುಡಿ. ಹಾಗೆ ಮಾಡುವುದರಿಂದ ಮನುಷ್ಯನ ಅನುಭವ ವಿಸ್ತಾರವಾಗುವುದು. ನಾನಾ ಬಗೆಯ ಜನರ ಜೀವನ, ರೀತಿ–ನೀತಿ, ಸಂಸ್ಕೃತಿಗಳ ಪರಿಚಯ ವಾಗುವುದು. ಮನುಷ್ಯ ತಾನು ನೋಡಿದ ಸ್ಥಳಗಳ ಪರಿಚಯವನ್ನು ಪಡೆದ ಅನುಭವವನ್ನು ಸ್ವಾರಸ್ಯಕರವಾಗಿ ದಾಖಲು ಮಾಡುವುದೇ ಪ್ರವಾಸ ಕಥನ. 'ಮನದಣಿಯೆ ನೋಡಿ ಮಣಿದೆ' ಅಂತಹ ಒಂದು ಪ್ರವಾಸ ಕಥನ.



8th_Kannada_Reader Term I_U4-9.indd 118 18-06-2019 10.47.11 AM

ಒಂದು ಉದ್ದ ಪ್ರಯಾಣದ ನಂತರ ಮಧ್ಯಾಹ್ನ ಊಟದ ವೇಳೆಗೆ ನಾವು ಕನ್ಯಾಕುಮಾರಿ ತಲುಪಿದೆವು. ನನ್ನ ಬಹು ದಿನಗಳ ಕನಸು ಮೂರ್ತ ಸ್ವರೂಪದಲ್ಲಿ ನಿಂತಿತ್ತು. ಮನಸ್ಸಿಗೆ ಏನೋ ತೃಪ್ತಿ.

ಅಲ್ಲಿಗೆ ತಲುಪಿದ ಕೂಡಲೇ ಮೊದಲು ಊಟವಾಯಿತು. ಸ್ವಲ್ಪ ವಿಶ್ರಾಂತಿ ಮುಗಿದೊಡನೆ ಎಲ್ಲರನ್ನೂ ಸ್ವಾಮಿ ವಿವೇಕಾನಂದ ಬಂಡೆಗೆ ಕರೆದುಕೊಂಡು ಹೊರಟರು. ಮೋಟಾರ್ ಬೋಟಿಗೆ ಒಂದೊಂದು ರೂಪಾಯಿ ಟಿಕೆಟ್ಟು. ಮೋಟಾರ್ ಬೋಟು ಹತ್ತಿಯಾಯಿತು. ಎದುರಿಗೆ ಕಾಣುತ್ತಿತ್ತು ಬಂಡೆ. ದಂಡೆಯಿಂದ ಎರಡು ಫರ್ಲಾಂಗ್. ನನ್ನ ಮನದ ಹಂಬಲದ ವಾಂಛೆಯ ತುತ್ತತುದಿಗೆ ನಾನು ಮುಟ್ಟಿದ್ದೆನಾದ್ದರಿಂದ ನಾನು ಒಂದು ರೀತಿಯ ಭಾವ ಪರವಶಳಾಗಿದ್ದೆ. ಈ ಮಾತು ಬಾಕಿಯವರಿಗೆ ಕವಿ ಭಾಷೆ ಅನಿಸಬಹುದು. ಕಾದಂಬರಿ ಭಾಷೆಯೂ ಆಗಬಹುದು. ಏನಾದರೂ ಆಗಲಿ ನನ್ನ ಅನಿಸಿಕೆ ಇಲ್ಲಿಟ್ಟಿದ್ದೇನೆ. ಅಲ್ಲಿ ಬಂದ ನೂರಾರು ಜನರ ದೃಷ್ಟಿಯಲ್ಲಿ ಆ ಸನ್ನಿವೇಶ ನೂರಾರು ಭಿನ್ನ ರೀತಿಯಲ್ಲಿ ಕಾಣಬಹುದು. ಅದು ಅವರವರ ದೃಷ್ಟಿಕೋನ; ಹೃದಯದ ಸಂಸ್ಕೃತಿ; ಭಾವನೆ–ಭಾವುಕತೆಗೆ ಸಂಬಂಧಿಸಿದ್ದು.

ಆದರೆ ಕವಿ, ಸಾಹಿತಿ, ಗಾಯಕ, ಚಿತ್ರಕಾರ, ಶಿಲ್ಪಿ, ಭಾವುಕ ಇಂಥವರ ರೀತಿಯೇ ಬೇರೆ.

ಒಂದು ಕಡೆ ನೋಡಿದರೆ ಅಪಾರ ಕಡಲು! ಮತ್ತೊಂದು ಕಡೆ ಸುಂದರ ನಗರ. ಪಶ್ಚಿಮಕ್ಕೆ ಬಾಗುತ್ತಿದ್ದ ಭಾನುದೇವ, ಸುತ್ತಲೂ ಯಾತ್ರಿಕರ ಹಿಂಡು ಹಿಂಡು. ಊರು ತುಂಬ ವಾಹನಗಳು; ಸಾಗರದ ಸುಳುಗಾಳಿ. ಅನಂತ ಜಲರಾಶಿಯ ನಡುವೆ ಎದ್ದು ನಿಂತ ಹೆಬ್ಬಂಡೆ. ಅದರ ನಡುವೆ ಭಾರತ ಸಂಸ್ಕೃತಿಯ ಮೂರ್ತ ಸ್ವರೂಪವಾದ ಭವ್ಯವಾದ ಮಂಟಪ! ಅಲ್ಲಿಗೀಗ ನಾವು ಹೊರಟಿದ್ದೇವೆ. ಮೋಟಾರ್ ಬೋಟು ನೂರಾರು ಜನರನ್ನು ಹೊತ್ತು ಜಲಧಿಯ ಜುಳುಜುಳು ನಾದಗೈಯ್ಯುತ್ತ ಭಾರತದ ವೀರಪುರುಷನೆಡೆಗೆ ಸಾಗಿತ್ತು... ನಾನೂ ಮುಂದೆ ಮುಂದೆ ಸಾಗುತ್ತಿದ್ದೆ....

ಕೇವಲ ಹತ್ತು ನಿಮಿಷಗಳಲ್ಲಿ ಬೋಟು ಬಂಡೆ ತಲುಪಿತು. ಎಲ್ಲರೂ ದುಬದುಬನೆ ಇಳಿತು ಬಂಡೆ ಏರಿದೆವು. ಬಂಡೆಯ ಸುತ್ತಲೂ ಆಳೆತ್ತರ ಗೋಡೆ, ಹತ್ತಲು ಇಳಿಯಲು ಮೆಟ್ಟಿಲುಗಳು. ಬಹು ವಿಸ್ತಾರವಾದ ಬಂಡೆ. ಒಂದು ಕಡೆಗೆ ಶ್ರೀಪಾದ ಮಂಟಪ. ಅದರ ಎದುರಿಗೆ ಸ್ವಾಮಿ ವಿವೇಕಾನಂದರ ಭವ್ಯ ವಿಗ್ರಹವಿರುವ ದೊಡ್ಡ ಪ್ರಾಂಗಣ.

ಪಾಶ್ಚಿಮಾತ್ಯರಿಗೆ ಭಾರತದ ವೇದಾಂತ ಧರ್ಮವನ್ನು ಸಾರಲು ಸ್ಫೂರ್ತಿ ಮತ್ತು ದಿವ್ಯ ದೃಷ್ಟಿಯನ್ನು ಪಡೆಯಲು ಧ್ಯಾನಕ್ಕೆ ಕೂರಲು ಎಂತಹ ಪವಿತ್ರ ತಾಣವನ್ನು ಆರಿಸಿಕೊಂಡರು ಆ ಮಹಾನುಭಾವ. ದೇವಿ ಕನ್ಯಾಕುಮಾರಿ ದೇವಾಲಯದ ಎದುರಿನ ಮಹಾ ಜಲಧಿಯ ಭವ್ಯ ಶಿಲೆ! ಧ್ಯಾನ ಶಿಲೆ! ಜ್ಞಾನ ಶಿಲೆ! ಅಯಸ್ಕಾಂತ ಶಿಲೆ!

ಅಂದು ಆ ಮಹಾಪುರುಷನನ್ನು ತನ್ನೆಡೆಗೆ ಸೆಳೆದುಕೊಂಡು ಆತನ ಚೈತನ್ಯಕ್ಕೆ ದಿವ್ಯ ದೀಪ್ತಿಯನ್ನು ತುಂಬಿದ ಆ ಅಯಸ್ಕಾಂತ ಶಿಲೆ ಇಂದು ಅನುದಿನವೂ ಸಾವಿರಾರು ಯಾತ್ರಿಕರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿದೆ. ವಿವೇಕಾನಂದರ ನಂತರ ಲಕ್ಷ ಲಕ್ಷ ಮಂದಿ ಆ ಮಂಟಪಕ್ಕೆ ಹೋಗಿ ಬಂದಿರಬಹುದು. ಆದರೆ ಸಿದ್ಧಿ ಮಾತ್ರ ಯಾರಿಗೂ ದೊರೆತಿಲ್ಲ.

ಎಲ್ಲರೂ ಕಲಕಲ ಮಾತನಾಡುತ್ತ ಶ್ರೀಪಾದ ಮಂಟಪವನ್ನು ನೋಡಿಕೊಂಡು ನಂತರ ಸ್ವಾಮೀಜಿಯವರ ಮೂರ್ತಿ ಇರುವ ವಿಸ್ತಾರವಾದ ಮಂಟಪಕ್ಕೆ ಬಂದೆವು. ಮೂರಡಿ ಪೀಠದ ಮೇಲೆ ಆರೂವರೆ ಅಡಿ ಎತ್ತರಕ್ಕೆ ದಿಟ್ಟ ನಿಲುವಿನಲ್ಲಿ ನಿಂತಿರುವ ಆ ಮಹಾಪುರುಷನ ಪ್ರತಿಮೆಯನ್ನು ನೋಡಿದೊಡನೆಯೇ ಮೈ ರೋಮಾಂಚನವಾಯಿತು. ಕಪ್ಪು ಶಿಲೆಯ ವಿಗ್ರಹ. ಡೀಲವಾಗಿ ಸುತ್ತಿದ ದಟ್ಟಿ ಕವೀಶಾಠಿ, ಮೈತುಂಬ ಹೊದ್ದ ದಪ್ಪ ಉತ್ತರೀಯ; ಮೇಲೆ ತುರಾಯಿ, ಕೆಳಗೆ ಉದ್ದ ಚುಂಗು ಬಿಟ್ಟು ಸುತ್ತಿದ ತಲೆಯ ಪಾಗು; ಯಾವುದೋ ಎತ್ತರದ ಅಪೂರ್ವ ದೃಶ್ಯವನ್ನು ನೋಡುತ್ತಿರುವಂತಿರುವ ಪ್ರೋಜ್ವಲ ನೇತ್ರಗಳು! ತಮ್ಮ ಬಾಳ್ವೆಯ ಸಂಕಲ್ಪದ ದೃಢತೆಯನ್ನು ಸಾರುವಂತೆ ಒತ್ತಿ ಕುಳಿತ ತುಟಿಗಳು ಮೊರಡು ಗಲ್ಲ, ತಂಬಿಟ್ಟಿನಂಥ ಗದ್ದ.

ಒಟ್ಟಿನಲ್ಲಿ ಹೇಳುವುದಾದರೆ ಇದುವರೆಗೆ

8th_Kannada_Reader Term I_U4-9.indd 119 18-06-2019 10.47.11 AM

ಪುಸ್ತಕಗಳಲ್ಲಿ ವರ್ಣಿತವಾದ, ಚಿತ್ರದಲ್ಲಿ ಕಂಡ ಆ ಮಹಾನ್ ಪುರುಷನನ್ನು ಸಜೀವವಾಗಿ ಕಾಣುತ್ತಿರುವೆನೇನೋ ಎಂಬ ಭ್ರಮೆಯುಂಟಾಯಿತು.

ನಾವು ವಿವೇಕಾನಂದ ಭವನದೊಳಗೆ ಬಂದೊಡನೆ ಎಲ್ಲರ ಬಾಯಿ ತಂತಾನೆ ಕಡಿವಾಣ ಹಾಕಿಕೊಂಡಿತು. ಕೆಲವರು ಪೂರಾ ಮೌನ; ಮತ್ತೆ ಕೆಲವರ ಪಿಸುಮಾತು. ನಾನು ಮೌನವಾಗಿ ಆ ತೇಜಃಪೂರ್ಣವಾದ ಚೈತನ್ಯವನ್ನು ನೋಡುತ್ತಾ ನಿಂತೆ. ಮನದಲ್ಲಿ ನಾನಾ ಭಾವನೆಗಳ ತುಮಲವಾಗುತ್ತಿತ್ತು. ಒಂದು ಕಡೆ ನನ್ನ ಬದುಕಿನಲ್ಲಿ ಇಂತಹ ಪವಿತ್ರ ಕ್ಷೇತ್ರವನ್ನು ನೋಡಿದೆನಲ್ಲಾ ಎಂಬ ಸಂತೃಪ್ತಿ. ಮತ್ತೊಂದು ಕಡೆ ನಾವು ಸಂತೋಷವಾಗಿ ತಿಂದುಂಡು ಯಾತ್ರೆ ಮಾಡುತ್ತಿರುವಾಗ ದಾರಿಯುದ್ದಕ್ಕೂ ಕಂಡ ಚಂಡಮಾರುತದ ಹಾವಳಿಯಿಂದಾದ ಕರುಳು ಕೊರೆಯುವ ದೃಶ್ಯ. ಕಳೆದು ಉಳಿದವರ ಸಂಕಟಕರ ಗತಿ. ಮರುಗಳಿಗೆ ಮನೆಯ ಕಡೆ ಚಿಂತೆ.

ಅಂತೂ ಕಡೆಗೆ ಮನಸ್ಸನ್ನು ಒಂದು ನಿಲುಗಡೆಗೆ ತಂದು ಮಂಡಿಯೂರಿ ಕುಳಿತು ಆ ಮಹಾಪುರುಷನಿಗೆ ಕರ ಜೋಡಿಸಿದೆ. ಎಂಥವರಿಗೂ ಆ ಪ್ರಶಾಂತ ಪ್ರಜ್ವಲ ಕಣ್ಣುಗಳನ್ನು ಎರಡು ಗಳಿಗೆ ನಿಟ್ಟಿಸಿ ನೋಡಲು ಸಾಧ್ಯವಿಲ್ಲ. ಪಾಶ್ಚಿಮಾತ್ಯರನ್ನು ಒಂದು ಗಳಿಗೆಯಲ್ಲಿ ಮೆತ್ತಗೆ ಮಾಡಿದ ಜ್ಯೋತಿರ್ಮಯ ನೇತ್ರಗಳವು. ಶಕ್ತಿಯುತ ಸ್ಫುಟವಾಕ್ಕು, ದಿಟ್ಟ ನೋಟಗಳಿಂದ ಪಾಶ್ಚಿಮಾತ್ಯರನ್ನು ಬೆರಗುಗೊಳಿಸಿ ತನ್ನೆಡೆಗೆ ಸೆಳೆದುಕೊಂಡ ಧೀರ ಓಜಸ್ವೀ ಸನ್ಯಾಸಿಯನ್ನು ಮನದಣಿಯೆ ನೋಡಿದೆ. ಮನದಲ್ಲೇ ಮಣಿದೆ. ಆಗಲೇ ಎಲ್ಲರೂ ಹೊರಡುತ್ತಿದ್ದರು. ಇಷ್ಟು ಬೇಗ ಅಲ್ಲಿಂದ ಹೊರಡಲು ಮನವಿಲ್ಲ. ಆದರೆ ಅಲ್ಲಿ ಇನ್ನೂ ಹೆಚ್ಚು ಹೊತ್ತು ಕುಳಿತಿರಲು ಸಾಧ್ಯವಿಲ್ಲವಲ್ಲ. ಕಡೆಯ ಬಾರಿ ಶಿರಬಾಗಿ ಹೊರಟೆ.

ಎಲ್ಲರೂ ಸುತ್ತಲಿನ ವಿಶಾಲ ಬಂಡೆಯ ಮೇಲೆ ಸುತ್ತುತ್ತಾ ಸುತ್ತಲಿನ ನಿಸರ್ಗವನ್ನು ನೋಡಿ ಸಂತೋಷಪಟ್ಟೆವು. ಈಗ ನಮ್ಮ ಮನಸ್ಸಿಗೆ ಮುದವನ್ನು ನೀಡುತ್ತಿರುವ ಇದೇ ಜಲಧಿ ಉಕ್ಕಿ ಹರಿದರೆ ಎಂಥ ಅನಾಹುತ!

ಮತ್ತೆ ಬೋಟನ್ನೇರಿ ಇತ್ತಲಿನ ಮತ್ತೊಂದು ಮಂದಿರಕ್ಕೆ ಬಂದು ಸೂರ್ಯಾಸ್ತವನ್ನು ನೋಡಲು ಎಲ್ಲರೂ ಸುತ್ತು ಮೆಟ್ಟಿಲುಗಳನ್ನೇರಿ ಮೇಲಿನ ಕಟ್ಟೆಯ ಹತ್ತಿರ ನಿಂತೆವು. ಆದರೆ ನಮಗೆ ಆ ದಿವ್ಯ ನೋಟವನ್ನು ನೋಡುವ ಭಾಗ್ಯ ಲಭ್ಯವಿರಲಿಲ್ಲ. ಮೋಡರಾಯ ಸೂರ್ಯದೇವನ ಮುಖಕ್ಕೆ ಅಡ್ಡವಾಗಿ ನಿಂತ. ಸೂರ್ಯ ಮೋಡದಲ್ಲಿ ಇಳಿದುದನ್ನು ಮಾತ್ರ ನೋಡಿದೆವು.

ಬಂದವರಿಗೆಲ್ಲಾ ಸೂರ್ಯಾಸ್ತವನ್ನು ನೋಡಲು ಸಿಗದುದರಿಂದ ಬಹಳ ನಿರಾಸೆಯಾಯಿತು. ಆದರೆ ನನಗೆ ತೀರಾ ಅಷ್ಟು ನಿರಾಸೆಯಾಗಲಿಲ್ಲ. ಕನ್ಯಾಕುಮಾರಿಯ ಸೂರ್ಯೋದಯ, ಸೂರ್ಯಾಸ್ತ ಅಷ್ಟು ಜಗತ್ಪ್ರಸಿದ್ಧವಾದದ್ದು ನಿಜ. ಆದರೆ ಅದಕ್ಕಿಂತ ಪ್ರಸಿದ್ಧವಾದದ್ದು ಆಗುಂಬೆಯ ಅಸ್ತಮಯ. ಅದನ್ನು ನಾನು ನನ್ನ ಎಂಟನೆಯ ವರ್ಷದೊಳಗೇ ಎರಡು ಬಾರಿ ನೋಡಿದ್ದೆ. ಆಗ ನಮ್ಮ ಪಾಲಿಗೆ ಜಗತ್ತೇ ಹೊಸದು. ಪ್ರತಿಯೊಂದು ನೋಟವೂ ಹೊಸದೇ. ಆ ಸಮಯದಲ್ಲಿ ಆ ಆಗುಂಬೆ ಘಟ್ಟ ಇಳಿದು ನೂರಾರು ಜನ ಅಲ್ಲಿ ನೆರೆಯುತ್ತಿದ್ದರು. ಆ ಊರಿನವರಿಗೆ ಅದು ನಿತ್ಯದ ನೋಟ. ನಮಗೆ ಅಪೂರ್ವ! ಬಂಗಾರದ ದೊಡ್ಡ ಪರಾತ ಆಗಸವನ್ನು ಬೆಳಗಿ ಗಿರಗಿರನೆ ತಿರುಗುತ್ತಾ ಸುಮಾರು ಹದಿನೈದು ನಿಮಿಷಗಳ ಕಾಲ ಪಶ್ಚಿಮ ದಿಸೆಯನ್ನೇ ಹೊನ್ನಿನ ಲೋಕವನ್ನಾಗಿಸುತ್ತಿತ್ತು. ಎದುರು ನಿಂತ ಜನರೆಲ್ಲ ತಂಗ ಪ್ರತಿಮೆಗಳು! ಜನ ನೋಡ ನೋಡುತ್ತಿರುವಂತೆಯೇ ನಮಗೆ ಪ್ರತ್ಯಕ್ಷ ದೈವವಾದ ಭಾನುದೇವ ಆ ಮಹಾ ಸಾಗರದ ಅಂಚಿನಲ್ಲಿ ಹೊಂಬಣ್ಣವನ್ನು ಮಾತ್ರ ಉಳಿಸಿ ತಾನು ಅದೃಶ್ಯನಾಗುತ್ತಿದ್ದ. ಈಗ ಜ್ಞಾಪಿಸಿಕೊಂಡರೂ ಅಪೂರ್ವ ನೋಟ ನೋಡಲು ಓಡಿ ಹೋಗೋಣ ಎನ್ನಿಸುತ್ತದೆ.

ದ್ರೋಣ ಪರ್ವತದ ಉದಯವನ್ನು ನೋಡುವುದಂತೂ ನಮಗೆ ಲಭ್ಯವಿಲ್ಲ. ಆಗುಂಬೆ ನೋಡಿಯಾಗಿತ್ತು. ಕನ್ಯಾಕುಮಾರಿಯ ಅಸ್ತಮಯ ಈ ಬಾರಿ ಪ್ರವಾಸಿಗರಿಗೆ ಕೈಕೊಟ್ಟಿತು.

'ನಾಳೆ ಬೆಳಿಗ್ಗೆ ಉದಯವನ್ನಾದರೂ ನೋಡೋಣ' – ಎಂಬ ಕಿಂಚಿತ್ ಆಸೆ ಹೊತ್ತು ಎಲ್ಲರೂ ಕೆಳಗಿಳಿದು ಬಂದೆವು. ನಂತರ ದೇವಿ ಕನ್ಯಾಕುಮಾರಿಯ ದರ್ಶನ.

8th_Kannada_Reader Term I_U4-9.indd 120 18-06-2019 10.47.11 AM

ಕೌಮಾರಿಯ ಸುಕುಮಾರ ಸುಂದರ ವಿಗ್ರಹ.

ಕಿಶೋರಿಯ ಮೂಗುತಿ ಪ್ರಜ್ವಲಿಸಿತು. ದೇದೀಪ್ಯಮಾನ ವಜ್ರ. ಆ ಕಮನೀಯ ನಿಲುವಿನ ದೇವಿಯನ್ನು ದರ್ಶನ ಮಾಡಿ, ಛತ್ರಕ್ಕೆ ಹಿಂದಿರುಗಿ ಉಂಡು ಮಲಗಿದೆವು. ಮರುಬೆಳಗ್ಗೆ ಸೂರ್ಯೋದಯ ನೋಡಲು ಹಿಂಡುಹಿಂಡಾಗಿ ಓಡಿದೆವು. ಆದರೆ ಆಗಲೂ ಪೂರ್ವ ದಿಗಂತಕ್ಕೆಲ್ಲ ಕಾರ್ಮೋಡದ ಗೋಡೆ. ನಮಗೆ ಸೂರ್ಯದೇವ ಮುಖ ತೋರಿಸಲಿಲ್ಲ. ಎಲ್ಲರೂ ಗೊಣಗಿಕೊಂಡು ಹಿಂದಿರುಗಿ, ಮತ್ತೊಮ್ಮೆ ದೇವಿಯ ದರ್ಶನ ಮಾಡಿ ಕಾಫಿತಿಂಡಿ ಮುಗಿಸಿ, ಕಡೆಯ ಬಾರಿಗೆ ಕಡಲ ತಡಿಯಲ್ಲಿ ನಿಂತು ಎದುರಿಗೆ ಕಾಣುತ್ತಿದ್ದ ವಿವೇಕಾನಂದ ಮಂಟಪ ನೋಡಿ ಬಸ್ಸನ್ನೇರಿದೆವು.

ಕೃತಿ ಕರ್ತೃ ಪರಿಚಯ



ಶ್ರೀಮತಿ ಎಂ.ಕೆ. ಇಂದಿರಾ ಅವರು 1917ರಲ್ಲಿ ತೀರ್ಥಹಳ್ಳಿಯಲ್ಲಿ ಜನಿಸಿದರು. ಇವರು ಓದಿದ್ದು ಪ್ರಾಥಮಿಕ ಶಾಲೆಯವರೆಗೆ. ಆದರೂ ಇವರ ಕಥೆ ಕಾದಂಬರಿಗಳಲ್ಲಿನ ಭಾಷೆ, ಶೈಲಿ, ತಂತ್ರ, ಅಭಿವ್ಯಕ್ತಿಗಳಲ್ಲಿ ನವೀನ ಪ್ರಯೋಗಗಳ ಮೂಲಕ ಸಮಾಜದ ಸುಶಿಕ್ಷಿತರ ಹಾಗೂ ಬುದ್ಧಿಜೀವಿಗಳ ಮೆಚ್ಚುಗೆಯನ್ನು ಗಳಿಸಿದ ಇವರು ಕನ್ನಡದ ಶ್ರೇಷ್ಠ ಬರಹಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ. ತುಂಗಭದ್ರ, ಸದಾನಂದ, ಗೆಜ್ಜೆಪೂಜೆ, ಮನ ತುಂಬಿದ ಮಡದಿ, ತಾಪದಿಂದ ತಂಪಿಗೆ, ಬ್ರಹ್ಮಚಾರಿ, ಶಾಂತಿಧಾಮ, ಹೂಬಾಣ, ಕಲಾದರ್ಶಿ ಇವು ಇವರ ಪ್ರಮುಖ ಕೃತಿಗಳು. ಸದಾನಂದ, ನವರತ್ನ, ಫಣಿಯಮ್ಮ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 1975ರಲ್ಲಿ ಶ್ರೇಷ್ಠ ಲೇಖಕಿ ಪ್ರಶಸ್ತಿ ಇವರಿಗೆ ಲಭಿಸಿದೆ. ಗೆಜ್ಜೆ ಪೂಜೆ, ಸದಾನಂದ, ಗಿರಿಬಾಲೆ, ಹೂಬಾಣ, ಫಣಿಯಮ್ಮ ಈ ಕಥೆಗಳನ್ನು ಆಧರಿಸಿದ ಚಲನಚಿತ್ರಗಳು ಜನಪ್ರಿಯತೆ ಗಳಿಸಿವೆ. ಇವರು 1994ರಲ್ಲಿ ನಿಧನ ಹೊಂದಿದರು.

'ಮನದಣಿಯೆ ನೋಡಿ ಮಣಿದೆ' ಇದು ಇವರ ಪ್ರವಾಸ ಕಥನ. ಕನ್ಯಾಕುಮಾರಿಗೆ ಹೋದ ಸಂದರ್ಭದಲ್ಲಿ, ಕನ್ಯಾಕುಮಾರಿ ದೇವಿಯ ದರ್ಶನ, ವಿವೇಕಾನಂದರ ಶಿಲಾಮೂರ್ತಿಯ ದರ್ಶನ ಇವುಗಳನ್ನು ನೋಡಿ ವರ್ಣಿಸಿರುವ ಭಾಗವೇ ಮನದಣಿಯೆ ನೋಡಿ ಮಣಿದೆ.

ಪದಗಳ ಅರ್ಥ

ವಾಂಛೆ–ಹಂಬಲ; ಜಲಧಿ–ಸಮುದ್ರ; ಪ್ರಾಂಗಣ–ಅಂಗಳ; ದೀಪ್ತಿ–ಬೆಳಕು, ಕಾಂತಿ; ಅನುದಿನ–ಪ್ರತಿದಿನ; ಡೀಲ–ಸಡಿಲ; ದಟ್ಟಿ–ಸೊಂಟಕ್ಕೆ ಸುತ್ತಿಕೊಳ್ಳುವ ಉದ್ದನೆಯ ಬಟ್ಟೆ, ಪಂಚೆ; ಉತ್ತರೀಯ–ಮೇಲುಹೊದಿಕೆ; ಪಾಗು–ಮುಂಡಾಸು, ರುಮಾಲು, ತಲೆಗೆ ಸುತ್ತಿರುವ ಬಟ್ಟೆ; ಪ್ರೋಜ್ವಲ–ಹೊಳೆಯುವ, ಕಾಂತಿಯುತವಾದ; ಮೊರಡು–ಒರಟು; ತುಮುಲ–ಗೊಂದಲ; ಓಜಸ್ವೀ–ಕಾಂತಿಯಿಂದ ತುಂಬಿರುವ, ಪ್ರಕಾಶಮಾನವಾದ; ಪರಾತ–ಅಗಲವಾದ ಹರಿವಾಣ, ತಟ್ಟೆ; ತಂಗ–ಬಂಗಾರ, ಚಿನ್ನ, ಸುವರ್ಣ; ದೇದೀಪ್ಯಮಾನ–ಹೆಚ್ಚಾಗಿ ಹೊಳೆಯುವ; ಕಮನೀಯ–ಮನೋಹರ, ಆಕರ್ಷಕವಾದ.

8th_Kannada_Reader Term I_U4-9.indd 121 18-06-2019 10.47.11 AM

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕಿಯ ಬಹುದಿನದ ಕನಸು ಯಾವುದಾಗಿತ್ತು ?
2. ಸಮುದ್ರ ದಂಡೆಯಿಂದ ಲೇಖಕರು ವಿವೇಕಾನಂದ ಬಂಡೆಗೆ ಹೇಗೆ ತಲುಪಿದರು?
3. ಮೋಟಾರು ಬೋಟು ಭಾರತದ ವೀರಪುರುಷನೆಡೆ ಹೇಗೆ ಸಾಗಿತ್ತು?
4. ಲೇಖಕಿಗೆ ಕನ್ಯಾಕುಮಾರಿಯಲ್ಲಿ ಸೂರ್ಯೋದಯವನ್ನು ನೋಡಲು ಏಕೆ ಸಾಧ್ಯವಾಗಲಿಲ್ಲ ?
5. ಕನ್ಯಾಕುಮಾರಿಯ ಮೂಗುತಿ ಪ್ರಜ್ವಲಿಸಲು ಕಾರಣವೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಲೇಖಕರು ಸ್ವಾಮಿ ವಿವೇಕಾನಂದ ಬಂಡೆಯ ಸ್ಥಳಕ್ಕೆ ಹೊರಟ ಪ್ರಸಂಗದ ವಿವರವನ್ನು ಬರೆಯರಿ ?
2. ವಿವೇಕಾನಂದ ಹೆಬ್ಬಂಡೆಯ ಪರಿಸರವನ್ನು ಕುರಿತು ಬರೆಯಿರಿ ?
3. ಆಗುಂಬೆಯ ಸೂರ್ಯಾಸ್ತ ದೃಶ್ಯ ಲೇಖಕರ ಮನಸೂರೆಗೊಂಡ ಬಗೆ ಹೇಗೆ?

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

   ಹೆಬ್ಬಂಡೆ, ಹೊಂಬಣ್ಣ, ಕಾಫಿತಿಂಡಿ, ಕಾರ್ಮೋಡ.

2. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ದೃಷ್ಟಿಕೋನ, ರೋಮಾಂಚನ, ಪಿಸುಮಾತು, ಅಡಿಗಲ್ಲು, ಕರಜೋಡಿಸು, ದಿಟ್ಟನಿಲುವು, ಶಿರಬಾಗು, ಕರಳು, ಕೊರೆ, ಜಗತ್ಪ್ರಸಿದ್ಧ.

3. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ತಾಣ, ಆಗಸ, ವಿಸ್ತಾರ, ಪುಸ್ತಕ, ಮೂರ್ತಿ.

4. **ಕೆಳಗಿನವುಗಳಲ್ಲಿ ದ್ವಿರುಕ್ತಿ, ಜೋಡುನುಡಿ ಮತ್ತು ಅನುಕರಣಾವ್ಯಯವನ್ನು ಗುರುತಿಸಿ ಪ್ರತ್ಯೇಕ ಪಟ್ಟಿ ಮಾಡಿರಿ.**

   ಮುಂದೆಮುಂದೆ, ಕಲಕಲ, ಗಿರಗಿರ, ಹಿಂಡುಹಿಂಡು, ತುತ್ತತುದಿ, ಜುಳುಜುಳು, ನೋಡುನೋಡು, ದಬದಬ

5. **ಕೆಳಗಿನ ಕ್ರಿಯಾಪದಗಳ ಮೂಲ ರೂಪಗಳನ್ನು ಬರೆಯಿರಿ.**

   ಊಟ, ನೋಟ, ಓಟ, ತಿನ್ನು, ಆಟ.

6. **ಕೆಳಗಿನ ಪದಗಳಿಗೆ ಸೂಕ್ತ ಪದಗಳನ್ನು ಹಾಕಿ ಪೂರ್ಣಗೊಳಿಸಿರಿ.**

   1. ಚಿತ್ರವನ್ನು ರಚಿಸುವವನು _____
   2. ಹಣ ಉಳ್ಳವನು _____
   3. ಕನ್ನಡವನ್ನು ಬಲ್ಲವನು _____
   4. ಫಲವನ್ನು ಹೊಂದಿರುವವನು _____
   5. ಬಳೆಯನ್ನು ಮಾರುವವಳು _____

7. **ಅಲಂಕಾರವನ್ನು ಗುರುತಿಸಿ ಸಮನ್ವಯ ಮಾಡಿರಿ.**

   1. ತಂಬಿಟ್ಟಿನಂತಹ ಗದ್ದ
   2. ಎದುರಿಗೆ ನಿಂತ ಜನರೆಲ್ಲ ತಂಗ ಪ್ರತಿಮೆಗಳು

ಚಟುವಟಿಕೆ

1. ನಿಮಗೆ ಸಮೀಪದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿರಿ.
2. ನೀವು ಮಾಡಿದ ಪ್ರವಾಸದ ಬಗ್ಗೆ ಲೇಖನ ಬರೆಯಿರಿ.

8th_Kannada_Reader Term I_U4-9.indd 122 18-06-2019 10.47.12 AM

ಉಪಪಠ್ಯ

ಘಟಕ ಏಳು

ಆ ದೇಶವೇ ಅವರ ತಾಯಿ

– ಹೊಯ್ಸಳ



ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸಾಂಪ್ರದಾಯಿಕ ಪುರಾಣ, ಕಾಲ್ಪನಿಕ ಕಥೆಗಳಿಗಿಂತ ಭಿನ್ನವಾದ ಸಾಮಾಜಿಕ ವಸ್ತು ಹಾಗೂ ನೀತಿಯನ್ನಾಧರಿಸಿದ ಕಥೆಗಳು ರಚನೆಯಾದವು. ಮಕ್ಕಳ ಕಥೆಗಳಲ್ಲಿ ನ್ಯಾಯ ನೀತಿ ದೇಶಭಕ್ತಿ ಮೊದಲಾದ ಮೌಲ್ಯಗಳನ್ನು ತರಲಾಯಿತು. ಕಲ್ಪನೆ ಹಾಗೂ ಸಾಹಸ ಇಲ್ಲಿನ ಕಥೆಗಳ ಮುಖ್ಯ ಆಕರ್ಷಣೆಯಾಗಿದ್ದವು. ಪ್ರಸ್ತುತ ಕಥೆಯಲ್ಲಿ ಸರಳತೆಯ ಜೊತೆ ಸಂಕೀರ್ಣತೆಯೂ ಹದವಾಗಿ ಮಿಳಿತವಾಗಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಕಥೆ ಹೇಳುವ ಕಲೆಗಾರಿಕೆ ಇದೆ. ಈ ಕಥೆಯು ಮಕ್ಕಳಿಗೆ ಮುಂದೆ ಸಣ್ಣ ಕಥಾ ಪ್ರಕಾರವನ್ನು ಗ್ರಹಿಸಲು ನೆರವಾಗುತ್ತದೆ.

'ನನ್ನ ತಾಯೀ, ಓ ನನ್ನ ತಾಯೀ...' ಎಂದು ಕೂಗಿದ, ಕೂಗಿದ, ಬಹಳವಾಗಿ ಕೂಗಿದ ಆ ರಾಜಕುಮಾರ. ಇವನ ಕೂಗು ಕೇಳಿ ಗಾಳಿ ಬೀಸುವುದನ್ನೇ ಬಿಟ್ಟು, 'ಏನಯ್ಯಾ, ರಾಜ' ಎಂದಿತು. ನೀರು ಹರಿಯುವುದನ್ನೇ ಬಿಟ್ಟು, 'ಬರಲಿಲ್ಲವೇ ನಿನ್ನ ತಾಯಿ?' ಎಂದು ಕೇಳಿತು. ಬೆಂಕಿ ಉರಿಯುವುದನ್ನೇ ಬಿಟ್ಟು, 'ನನ್ನ ಹೊಗೆಯನ್ನು ಕಳಿಸಿ ಹುಡುಕಿಸಿ ಕೊಡುತ್ತೇನಯ್ಯ ರಾಜಕುಮಾರ, ಅಳಬೇಡಪ್ಪ' ಎಂದಿತು. ಪ್ರಾಣಿಗಳೂ ಪಕ್ಷಿಗಳೂ ಸುತ್ತ ನಿಂತು ಕಣ್ಣೀರನ್ನು ಸುರಿಸಿ ಸುರಿಸಿ ಬಿಟ್ಟುವು.

'ಓ! ನನ್ನ ತಾಯೀ...' ಎಂದು ಕೂಗುತ್ತ ಇದ್ದವರಾರು? ಹೀಗೆ ಕೇಳಬಹುದಲ್ಲವೇ? ಕೇಳಬಹುದು, ಕೇಳಪ್ಪಾ ಕೇಳು...

'ಭಾರತ, ಭಾರತ' ಎಂದು ಒಂದು ದೇಶ. ಅಲ್ಲಿ ಭಾರತೀಯರು ಇದ್ದರು. ಅವರು ಒಂದು ಬಗೆಯ ಜನ. ಅವರು ಜೇನುತುಪ್ಪದ ಬಣ್ಣದವರು. ಆ ದೇಶದಲ್ಲಿ ಗಡ್ಡದ ಸಿಂಹ, ಪಟ್ಟೆ ಹುಲಿ, ಕಾಮಧೇನು, ಆಕಾಶಕ್ಕೆ ಮುತ್ತಿಡುವ ಮರ, ಬಾಲದಲ್ಲಿ ಕಣ್ಣಿರುವ ಹಕ್ಕಿ, ಸಂಜೀವಿನೀ ನದಿ, ನಗು ನಗುವ ನೀರಬೀಳು – ಮೊದಲಾದುವೆಲ್ಲ ಇದ್ದವು. ಅಲ್ಲೊಬ್ಬ ರಾಜಕುಮಾರ ಇದ್ದ. ಅವರ ಹೆಸರು ಭರತ. ಆ ದೇಶದ ಹೆಸರು ಭಾರತ.

ಆ ಭರತನ ತಾಯಿಯನ್ನು, ಭರತನ ತಂದೆ ಒಮ್ಮೆ ಬೈದುಬಿಟ್ಟ. ತಾಯಿ ಸಹಿಸಲಿಲ್ಲ ಬೈಗಳನ್ನು. ತುಂಬಾ ಅತ್ತು ಬಿಟ್ಟಳು. ಕಣ್ಣೀರು ಸುರಿಸೀ ಸುರಿಸೀ ಇಟ್ಟಳು. ಭರತಕುಮಾರ ತಂದೆಯನ್ನಾದರೂ ಕರೆದು ತರೋಣ ಎಂದು ಹೊರಟು ತಿರುಗಿದ. ಎಷ್ಟು ತಿರುಗಿದರೂ ಸಿಕ್ಕಲಿಲ್ಲ ತಂದೆ. ಮತ್ತೆ ಹಿಂದಿರುಗಿ ಬಂದ ಆ ಭರತಕುಮಾರ.

ತಂದೆ ಸಿಗಲಿಲ್ಲ. ಬಂದು ನೋಡಿದರೆ ಇಲ್ಲಿ ಆ ತಾಯಿಯೂ ಇರಲಿಲ್ಲ. ಅವಳ ಕಣ್ಣೀರು ಹರಿದು ಹೋಗಿ ಪಕ್ಷಿ ಪ್ರಾಣಿಗಳು ಅತ್ತು ಸುರಿಸಿದ್ದವಲ್ಲ ಆ ಕಣ್ಣೀರಿಗೆ ಸೇರಿ ಹೋಗಿತ್ತು. ಅದೊಂದು ದೊಡ್ಡ ಹೊಳೆಯಾಗಿತ್ತು. ಭರತಕುಮಾರ ಆ ಕಣ್ಣೀರ ಹೊಳೆಯ ಬಳಿ ನಿಂತು ಹಾಗೇ ನೋಡಿದ. ತಾನೂ ಕಣ್ಣೀರು ಸುರಿಸಿದ. ಸುರಿಸಿ ಸುರಿಸಿ ಸಣ್ಣಗಾಗಿ ಹೋದ. ಆ ನೀರನ್ನೇ ನೋಡಿ ತನ್ನ ತಾಯಿಯನ್ನು ನೆನೆಯುತ್ತಿದ್ದಾಗ ಒಂದು ದೇವತೆ ಬಂತು! ಅದು ಅವನಿಗೆ ಒಂದು ಚಿನ್ನದ ಕೋಲು ಕೊಟ್ಟಿತು. 'ಅಳಬೇಡ ಭರತಕುಮಾರ, ಈ ಕೋಲು ಹಿಡಿದುಕೊಂಡು ನೀನು ಏನು ಬೇಕಾದರೂ ಆಗಬಹುದು. ಎಲ್ಲಿ ಬೇಕಾದರೂ ಹೋಗಬಹುದು.

8th_Kannada_Reader Term I_U4-9.indd 123 18-06-2019 10.47.12 AM

ಹುಡುಕು ನಿನ್ನ ತಾಯಿಯನ್ನು' ಎಂದಿತು. ಕೂಡಲೇ ಆ ರಾಜಕುಮಾರ ಆ ಚಿನ್ನದ ಕೋಲಿನ ಬಲದಿಂದ ಹಾವಾಗಿ ನೆಲ ಹೊಕ್ಕು ಹುಡುಕಿದ. ಹೊಳೆಯಾಗಿ ಕಾಡೆಲ್ಲ ನೋಡಿದ. ಹಕ್ಕಿಯಾಗಿ ಆಕಾಶದಲ್ಲಿ ಹಾರಾಡಿದ. ಬಸವನಾಗಿ ಊರೆಲ್ಲ ತಿರುಗಿದ. ಹಾಗೇ ಸಿಂಹವಾಗಿ ಆರ್ಭಟಿಸಿದ. ಮೀನಾಗಿ ಮೌನದಿಂದ ನೀರಲ್ಲಿ ಹುಡುಕಿದ. ಆ ತಾಯಿ ಸಿಗಲಿಲ್ಲ. ಆಕೆಗೆ ಇವನ ಕರೆ ಕೇಳಲಿಲ್ಲ.

ಮತ್ತೊಮ್ಮೆ ಅಳುತ್ತಾ ಕುಳಿತು ಬಿಟ್ಟ. ಅವನ ದುಃಖವೆಲ್ಲ ಅವನ ತಾಯಿಯ ದುಃಖವಿತ್ತಲ್ಲ, ಅದರ ಸಂಗಡ ಸೇರಿ; ಕಣ್ಣೀರೆಲ್ಲ ಮೋಡವಾಗಿ ಬಾನೆಲ್ಲ ಮುಸುಕಿ ಕತ್ತಲಾಗಿ ಹೋಗಿತ್ತು. ಆಗ ಅವನು, 'ಎಲೆ ಸೂರ್ಯ! ಎಲ್ಲಿದ್ದೀಯ? ನನಗೆ ಬೆಳಕು ಬೇಕು' ಎಂದು ಧೈರ್ಯದಿಂದ ಕೂಗಿದ. ಆಗ ಸೂರ್ಯ ಬಂದು ಹೇಳಿದ : 'ಭರತ ಕುಮಾರ, ನಿನಗಾಗಿ ನನ್ನ ಕೈಲಾದ ಸಹಾಯ ಮಾಡುತ್ತೇನಯ್ಯ' ಎಂದವನು ಆ ಮೋಡಗಳನ್ನೆಲ್ಲ ಕರಗಿಸಿ ಕತ್ತಲೆಯನ್ನೆಲ್ಲ ಸುಟ್ಟು ಬೂದಿ ಮಾಡಿ, 'ಅಯ್ಯಾ! ಭರತಕುಮಾರ, ಅರ್ಧ ದಿನ ನಿನಗಾಗಿ ಕೆಲಸ ಮಾಡಿದ್ದೇನೆ ನೋಡು' ಎಂದು ಹೇಳಿ ಹೊರಟು ಹೋದ. ಅಷ್ಟು ಕೆಲಸ ಮಾಡಿ ಸೂರ್ಯ ಸೋತು ಸಣ್ಣಗಾಗಿ ಹೋಗಿದ್ದ.

ಅಂದಿನಿಂದ ಹಗಲು ಹನ್ನೆರಡು ಗಂಟೆಗಳಾಗಿ ಹೋದವು.

ರಾತ್ರಿ ಕತ್ತಲಾಯಿತು. ಇವನು ಕತ್ತಲಲ್ಲಿ ಹಾಗೇ ಕುಳಿತಿದ್ದ. ಬೆಳಕಾದಾಗ ಭರತ ಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿ ಇತ್ತು. ಹೂ ಬಿಡಿಸಿ ಕಂಪು ಮೂಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ದನಿಯಲ್ಲಿ ತನ್ನ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಹೀಗೆ ಆ ರಾಜಕುಮಾರ ತನ್ನ ಸುತ್ತಮುತ್ತ ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ ಕೂಟ ಪಾಠಗಳನ್ನೇ ಕಂಡ. ಆ ವೇಳೆಗೆ ಮತ್ತೆ ಕತ್ತಲಾಯಿತು. ಅವನು ನಿದ್ರೆ ಮಾಡಿಬಿಟ್ಟ. ಕನಸಿನಲ್ಲಿ ಅವನ ತಾಯಿ ಬಂದು ಹೀಗೆಂದಳು : 'ಭರತ ಕುಮಾರ ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ. ನೀರಿನಲ್ಲಿ ಕರಗಿ ಹೋಗಿದ್ದೇನೆ. ನಿನ್ನ ರೋದನವನ್ನು ಕೇಳಿ ಕೇಳಿ ಕೊರಗಿ ಕೊರಗಿ ಇಲ್ಲೆ ಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೋ...' ಬೆಳಗಾಗಿ ಎದ್ದು ರಾಜಕುಮಾರ ತನ್ನ ನೆಲವನ್ನೇ ತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. ಅವನ ಜನವೆಲ್ಲ ಹಾಗೇ ಕರೆದರು, ಆ ಹಿಂದಿನ ಕಾಲದವರು.

ಈಗಲೂ ಬೆಳಿಗ್ಗೆ ಎದ್ದು ಕಾಲಿಡುವುದಕ್ಕೆ ಮುಂಚೆ ಆ ಜನರು 'ಪಾದಸ್ಪರ್ಷಂ ಕ್ಷಮಸ್ವ ಮೇ' (ಕಾಲು ಮುಟ್ಟಿಸುತ್ತೇನೆ, ಕ್ಷಮಿಸು ತಾಯಿ) ಎಂದು ಎದ್ದು ನಿಲ್ಲುತ್ತಾರೆ. ರಾತ್ರಿ ಮಲಗುವಾಗ, 'ನಿನ್ನ ಮಡಿಲಲ್ಲಿರುತ್ತೇನೆ ತಾಯಿ' ಎನ್ನುತ್ತಾರೆ. ಅಂದಿನಿಂದಲೂ ಅವರ ದೇಶವೇ ಅವರಿಗೆ ತಾಯಿಯಾಗಿದೆ. ಭಾರತಮಾತೆಯಾಗಿದೆ. ತಾಯಿ 'ಭಾರತಿ'ಯಾಗಿದ್ದಾಳೆ. ಯೋಚಿಸಿ ನೋಡಿ. ಆ ದೇಶ ಯಾವುದು? ಆ ಜನರಾರು? ಆ ರಾಜನಾರು? ನೀವು ಬಲ್ಲಿರಾ?

ಕಥೆಯ ಆಶಯ

ಭಾರತವು ಪುರಾಣ ಹಾಗೂ ಸಂಸ್ಕೃತಿಗಳ ನಾಡು; ಪ್ರಾಕೃತಿಕ ಸಂಪತ್ತಿನ ಬೀಡು. ಇಲ್ಲಿ ಭಾರತ ದೇಶದ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಹಿರಿಮೆ ಗರಿಮೆಗಳನ್ನು ಎತ್ತಿ ಹಿಡಿಯಲಾಗಿದೆ. ಭರತ ಭೂಮಿಯೇ ಭಾರತೀಯರಿಗೆ ಮೊದಲ ತಾಯಿ, ದೈವ, ಗುರು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಭರತ ಕುಮಾರನು ತನ್ನ ತಾಯಿಯನ್ನು ಪಂಚೇಂದ್ರಿಯಗಳ ಹಾಗೂ ಪಂಚಭೂತಗಳ ಮೂಲಕ ಕಂಡುಕೊಳ್ಳುವ ಬಗೆಯನ್ನು ಇಲ್ಲಿ ಅದ್ಭುತವಾಗಿ ಚಿತ್ರಿಸಲಾಗಿದೆ. ಮಕ್ಕಳ ಕಥೆಯನ್ನು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಕೊಂಡೊಯ್ದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವುದೇ ಈ ಕಥೆಯ ಆಶಯವಾಗಿದೆ. ಇದೊಂದು ಕಾಲ್ಪನಿಕ ಕಥೆ.

8th_Kannada_Reader Term I_U4-9.indd 124 18-06-2019 10.47.12 AM

ಕೃತಿ ಕರ್ತೃ ಪರಿಚಯ

'ಹೊಯಿಸಳ' ಕಾವ್ಯನಾಮದಿಂದ ಖ್ಯಾತರಾಗಿದ್ದ ದಿವಂಗತ ಲಕ್ಷ್ಮಣರಾಯರ ಸ್ಥಳ ತೀರ್ಥಹಳ್ಳಿ ತಾಲೂಕಿನ ಆರಗಂ ಗ್ರಾಮ. ಜನನ: 1893. ಕೆಲ ಕಾಲ ರವೀಂದ್ರನಾಥ ಟ್ಯಾಗೂರರ ಶಾಂತಿನಿಕೇತನದಲ್ಲಿ ಇವರು ಅಧ್ಯಾಪಕರಾಗಿದ್ದರು. ಅನಂತರ ವಿದ್ಯಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದರು. ಆಕಾಶವಾಣಿ ಮತ್ತು ಪತ್ರಿಕಾ ವಲಯದಲ್ಲೂ ಇವರು ಸೇವೆ ಸಲ್ಲಿಸಿದರು. ಶ್ರೀಯುತರು ಒಳ್ಳೆಯ ಹಾಡುಗಾರರೂ ಚಿತ್ರಕಾರರೂ ಆಗಿದ್ದರು. ಇವರು ಮಕ್ಕಳ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಗಮನಾರ್ಹವಾದುದು.

ಕಥೆ, ಕವನ, ನಾಟಕ ಹಾಗೂ ಸ್ಕೌಟ್ ಗೀತೆಗಳನ್ನು ಬರೆದು ಇವರು ಮಕ್ಕಳ ಮನ ಗೆದ್ದಿದ್ದಾರೆ. ಕೋಗಿಲೆ, ಅಂಜೂರ, ಚಂದಮಾಮ, ಕೋಲುಕುದುರೆ, ಮರಿಗಳ ಕೂಗು – ಇವು ಇವರ ಕವನ ಸಂಗ್ರಹಗಳು. ಪೋರಿ, ವೀರಕುಮಾರ, ರಾಜನ ಬುದ್ಧಿವಂತಿಕೆ, ಕೈದಿಗಳ ಕಷ್ಟ, ಆನೆ–ಇರುವೆ, ಶುಭಾಂಗ, ಬದುಕುವ ಮಂತ್ರ, ಗಂಟೆಗೋಪುರ, ಪಠಾಕ್ಷಿ, ಸಕ್ಕರೆ ಗೊಂಬೆ, ಹೂವಿನ ಹಾಸಿಗೆ – ಇವು ಇವರ ಮಕ್ಕಳ ಕಥೆಗಳು. ವಾತಾಪಿ, ಕಳ್ಳ–ಮಳ್ಳ–ಸುಳ್ಳ, ಚಂದ್ರಹಾಸ, ಅಗಲಿದ ಮಗಳು ಇವು ಮಕ್ಕಳಿಗಾಗಿ ಬರೆದ ನಾಟಕಗಳು. 1959ರಲ್ಲಿ ಇವರು ನಿಧನರಾದರು.

ಪ್ರಸ್ತುತ ಕವನವನ್ನು ಇವರ 'ಬಂದ ಬಂದ ಸಂತಂಮ್ಮಣ್ಣ' ಕೃತಿಯಿಂದ ಆರಿಸಲಾಗಿದೆ.

ಪದಗಳ ಅರ್ಥ

ಬಹಳ–ತುಂಬ, ಹೆಚ್ಚು; ಕಾಮಧೇನು–ದೇವಲೋಕದ ಹಸು, ಇದು ಕೇಳಿದ್ದನ್ನು ಕೊಡುತ್ತದೆ ಎಂದು ನಂಬಿಕೆ; ಹಕ್ಕಿ–ಪಕ್ಷಿ; ಮುಸುಕು–ಆವರಿಸು; ಕಂಪು–ಪರಿಮಳ, ಸುವಾಸನೆ; ಛಾಯೆ–ನೆರಳು; ಕೂಟ–ಸಂಗ, ಜೊತೆ; ಸ್ವರ–ಧ್ವನಿ; ರೋದನ–ದುಃಖ, ಪ್ರಲಾಪ; ಕೊರಗು–ಚಿಂತೆ;

ಟಿಪ್ಪಣಿಗಳು

1. ಕಾಮಧೇನು : ಕೇಳಿದ್ದನ್ನು ಕೊಡುವ
ದೇವಲೋಕದ ಹಸು.
ಸಮುದ್ರ ಮಥನ ಕಾಲದಲ್ಲಿ
ಕಲ್ಪವೃಕ್ಷ, ಐರಾವತ
ಮೊದಲಾದವುಗಳೊಡನೆ
ಇದೂ ಜನಿಸಿತೆಂಬುದು ಒಂದು
ಪೌರಾಣಿಕ ಕಲ್ಪನೆ.

2. ಸಂಜೀವಿನಿ : ಇದು ಸತ್ತವರನ್ನು ಬದುಕಿಸುವ
ಒಂದು ಮೂಲಿಕೆ. ಗರುಡನು
ತನ್ನ ತಾಯಿಗಾಗಿ ಅಮೃತವನ್ನು
ತರುವಾಗ ಅದರಲ್ಲಿಯ ಒಂದು
ಹನಿಯು ದ್ರೋಣ ಪರ್ವತದ
ಮೇಲೆ ಬಿದ್ದು, ಮುದ್ಗಲ ಋಷಿಯ
ತಪಃಶಕ್ತಿಯಿಂದ ಲತೆಯಾಗಿ
ಬೆಳೆಯಿತು ಎಂಬ ಕಥೆಯಿದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ರಾಜಕುಮಾರನ ಕೂಗನ್ನು ಕೇಳಿ ಬೆಂಕಿ ಏನೆಂದು ಹೇಳಿತು ?
2. ಭಾರತೀಯರು ಯಾವ ಬಣ್ಣದವರು ?
3. ಭರತನ ತಾಯಿಯು ಏಕೆ ಅತ್ತಳು ?
4. ತಾಯಿಯ ಕಣ್ಣೀರು ಹರಿದು ಹೋಗಿ ಏನಾಯಿತು ?
5. ಭಾರತೀಯರು ಬೆಳಿಗ್ಗೆ ಎದ್ದು ಭೂಮಿಯ ಮೇಲೆ ಕಾಲಿಡುವ ಮುಂಚೆ ಏನು ಹೇಳುತ್ತಾರೆ?
6. ಮಲಗುವಾಗ ಭಾರತೀಯರು ಭೂಮಿಗೆ ಏನೆಂದು ಹೇಳುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಗಾಳಿ, ನೀರು, ಬೆಂಕಿಗಳು ರಾಜಕುಮಾರನಿಗೆ ಏನು ಹೇಳಿದವು ?

8th_Kannada_Reader Term I_U4-9.indd 125 18-06-2019 10.47.12 AM

2. ಚಿನ್ನದ ಕೋಲಿನ ಮಹಿಮೆ ಏನು ?

3. ಭರತಕುಮಾರನಿಗೆ ಸೂರ್ಯ ಮಾಡಿದ ಸಹಾಯವೇನು ?

4. ಭರತಕುಮಾರನ ಕನಸಿನಲ್ಲಿ ತಾಯಿ ಬಂದು ಏನೆಂದು ಹೇಳಿದಳು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಚಿನ್ನದ ಕೋಲನ್ನು ಬಳಸಿ ರಾಜಕುಮಾರನು ತನ್ನ ತಾಯಿಯನ್ನು ಎಲ್ಲೆಲ್ಲಿ ಹುಡುಕಿದನು.

2. ಭರತಕುಮಾರ ತನ್ನ ತಾಯಿಯನ್ನು ಭೂಮಿಯ ಮೇಲೆ ಕಂಡುಕೊಂಡ ಬಗೆ ಹೇಗೆ ?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ದೇಶ, ನೀರು, ನುಡಿ, ಪಕ್ಷಿ, ಸೂರ್ಯ, ತಾಯಿ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ಸಣ್ಣಗಾಗಿ, ಕತ್ತಲಾಯಿತು, ಹೊಳೆಯಾಗಿತ್ತು, ದುಃಖವೆಲ್ಲ, ತಾಯಿಯೆಂದು.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಪ್ರಾಣಿ, ಕಲ್ಪನೆ, ನ್ಯಾಯ, ದೇಶಭಕ್ತಿ, ಸರಳತೆ, ಬೆಂಕಿ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಗ್ರಹಿಸು, ಸಾಂಪ್ರದಾಯಿಕ, ಶತಮಾನ, ಪುರಾಣ, ಕಾಲ್ಪನಿಕ, ಸಾಹಸ.

ಚಟುವಟಿಕೆ

1. ದುಷ್ಯಂತ–ಶಕುಂತಲೆಯರ ಪುತ್ರ ಭರತನ ಕಥೆಯನ್ನೂ ಕೇಳಿ/ಓದಿ ತಿಳಿದುಕೊಳ್ಳಿ.

2. ಭರತ–ಬಾಹುಬಲಿ ಕಥೆಯನ್ನು ನಿಮ್ಮ ಶಿಕ್ಷಕರಿಂದ ಕೇಳಿ ತಿಳಿಯಿರಿ.

8th_Kannada_Reader Term I_U4-9.indd 126 18-06-2019 10.47.12 AM

ಘಟಕ ಏಳು

ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳನ್ನು ಸ್ವರ ಸಂಧಿಗಳು, ವ್ಯಂಜನ ಸಂಧಿಗಳೆಂದು ಎರಡು ರೀತಿಯಲ್ಲಿ ಗುರುತಿಸಬಹುದು.

ಸಂಸ್ಕೃತ ಸ್ವರ ಸಂಧಿಗಳು

ಸವರ್ಣದೀರ್ಘ ಸಂಧಿ

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘ ಸ್ವರವು ಬರುವುದನ್ನು ಸವರ್ಣದೀರ್ಘ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಸುರ+ಅಸುರ = ಸುರಾಸುರ (ಅ+ಅ=ಆ)

ಕವಿ+ಇಂದ್ರ = ಕವೀಂದ್ರ(ಇ+ಇ=ಈ)

ಗುರು+ಉಪದೇಶ = ಗುರೂಪದೇಶ (ಉ+ಉ=ಊ)

ಗುಣ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಇಈ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏಕಾರವೂ; ಉಊಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಓಕಾರವೂ; ಋಕಾರವು ಪರವಾದರೆ ಅವೆರಡರ ಸ್ಥಾನದಲ್ಲಿ ಅರ್‌ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದೇವ+ಇಂದ್ರ=ದೇವೇಂದ್ರ(ಅ+ಇ=ಏ)

ಸೂರ್ಯ+ಉದಯ=ಸೂರ್ಯೋದಯ(ಅ+ಉ=ಓ)

ಮಹ+=ಋಷಿ=ಮಹರ್ಷಿ(ಅ+ಋ=ಅರ್/ರ್)

ವೃದ್ಧಿ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಉತ್ತರ ಪದದ ಮೊದಲಲ್ಲಿ ಏಐ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐಕಾರವೂ ಒಔ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔಕಾರವೂ ಬರುವುದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಏಕ+ಏಕ=ಏಕೈಕ(ಅ+ಏ=ಐ)

ವನ+ಔಷಧ=ವನೌಷಧ(ಆ+ಔ=ಔ)

ಯಣ್ ಸಂಧಿ

ಸಂಧಿಯಾಗುವಾಗ ಪೂರ್ವ ಪದದ ಕೊನೆಯಲ್ಲಿರುವ ಇಈಉಊಋ–ಕಾರಗಳಿಗೆ ಸವರ್ಣವಲ್ಲದ ಅಕ್ಷರಗಳು ಪರವಾದರೆ, ಇಈ–ಕಾರಗಳಿಗೆ 'ಯ'ಕಾರವೂ; ಉಊ–ಕಾರಗಳಿಗೆ 'ವ'ಕಾರವೂ; ಋಕಾರಕ್ಕೆ 'ಅರ್'ಕಾರವೂ ಆದೇಶವಾಗಿ ಬರುವುದನ್ನು ಯಣ್ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಅತಿ+ಅಂತ=ಅತ್ಯಂತ(ಇ+ಅ=ಯ; ಇಕಾರಕ್ಕೆ ಯಕಾರ)

ಮನು+ಅಂತರ=ಮನ್ವಂತರ(ಉ+ಅ=ವ; ಉಕಾರಕ್ಕೆ ವಕಾರ)

ಪಿತೃ+ಆರ್ಜಿತ(ಋ+ಆ=ಅರ್; ಋಕಾರಕ್ಕೆ ಅರ್‌ಕಾರ)

8th_Kannada_Reader Term I_U4-9.indd 127 18-06-2019 10.47.12 AM

ಸಂಸ್ಕೃತ ವ್ಯಂಜನ ಸಂಧಿಗಳು

ಜಸ್ತ್ವ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಮೊದಲ ಅಕ್ಷರಗಳಾದ ಕ,ಚ,ಟ,ತ,ಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳಾದ ಗ,ಜ,ಡ,ದ,ಬ–ಗಳು ಆದೇಶವಾಗಿ ಬರುವುದನ್ನು ಜಸ್ತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದಿಕ್+ಅಂತ=ದಿಗಂತ(ಕ+ಅ=ಗ; ಕಕಾರಕ್ಕೆ ಗಕಾರ ಆದೇಶವಾಗಿದೆ)

ಅಚ್+ಅಂತ=ಅಜಂತ(ಚ+ಅ=ಜ; ಚಕಾರಕ್ಕೆ ಜಕಾರ ಆದೇಶವಾಗಿದೆ)

ಚಿತ್+ಆನಂದ=ಚಿದಾನಂದ(ತ+ಆ=ದ; ತಕಾರಕ್ಕೆ ದಕಾರಾದೇಶ)

ಷಟ್+ಆನನ=ಷಡಾನನ(ಟ+ಅ=ಡ; ಟಕಾರಕ್ಕೆ ಡಕಾರಾದೇಶ)

ಶ್ಚುತ್ವ ಸಂಧಿ

ಸಂಧಿಯಾಗುವಾಗ ಪೂರ್ವ ಪದದ ಕೊನೆಯಲ್ಲಿ ಸಕಾರ ಹಾಗೂ ತವರ್ಗಾಕ್ಷರಗಳಿಗೆ ಕ್ರಮವಾಗಿ ಶಕಾರ ಮತ್ತು ಚವರ್ಗಾಕ್ಷರಗಳು ಪರವಾದರೆ; ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶವಾಗಿ ಬರುವುದನ್ನೇ ಶ್ಚುತ್ವ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಯಶಸ್+ಚಂದ್ರಿಕೆ=ಯಶಶ್ಚಂದ್ರಿಕೆ (ಸಕಾರಕ್ಕೆ ಶಕಾರಾದೇಶ)

ಮನಸ್+ಶಾಂತಿ=ಮನಶ್ಶಾಂತಿ (ಸಕಾರಕ್ಕೆ ಶಕಾರಾದೇಶ)

ಸತ್+ಚಿತ್ತ=ಸಚ್ಚಿತ್ತ(ತಕಾರಕ್ಕೆ ಚಕಾರಾದೇಶ)

ಅನುನಾಸಿಕ ಸಂಧಿ

ಸಂಧಿಯಾಗುವಗ ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಾದ ಕಚಟತಪ ವ್ಯಂಜನಗಳಿಗೆ ಯಾವುದೇ ವ್ಯಂಜನಗಳು ಪರವಾದರೂ ಅದೇ ವರ್ಗದ ಅನುನಾಸಿಕಗಳಾದ ಙಞಣನಮ ವ್ಯಂಜನಗಳು ಆದೇಶವಾಗಿ ಬರುವುದನ್ನೇ ಅನುನಾಸಿಕ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ :

ವಾಕ್+ಮಯ=ವಾಙ್ಮಯ (ಕಕಾರಕ್ಕೆ ಙ ಆಗಮ)


ಷಟ್+ಮುಖ=ಷಣ್ಮುಖ (ಟಕಾರಕ್ಕೆ ಣ ಆಗಮ)

ಸತ್+ಮಾನ=ಸನ್ಮಾನ (ತಕಾರಕ್ಕೆ ನ ಆಗಮ)

8th_Kannada_Reader Term I_U4-9.indd 128 18-06-2019 10.47.12 AM

ಘಟಕ
ಎಂಟು

8. ಧರ್ಮ–ತತ್ವ–ಚಿಂತನೆ



ಕಾವ್ಯ ಕಣಜ	:	ಮುಂದಕೆ ಲೇಸುಂಟು ನಮಗೆ	– ಹೆಳವನಕಟ್ಟೆ ಗಿರಿಯಮ್ಮ
ಪೂರಕ ಪದ್ಯ	:	ನುಡಿಮುತ್ತುಗಳು	– ಎಸ್.ವಿ.ಪರಮೇಶ್ವರಭಟ್ಟ
ಗದ್ಯ ವಿಹಾರ	:	ಶ್ರೀಕೃಷ್ಣಸಂಧಾನ	– ಎ.ಆರ್.ಕೃಷ್ಣಶಾಸ್ತ್ರಿ
ಉಪಪಠ್ಯ	:	ಸಾಲೊಮನ್ನನ ನ್ಯಾಯ	– (ಸಂಗ್ರಹ: ಬೈಬಲ್)
ವ್ಯಾಕರಣ	:	ದ್ವಿರುಕ್ತಿ ಹಾಗೂ ಜೋಡಿ ಪದಗಳು	

8th_Kannada_Reader Term I_U4-9.indd 129 18-06-2019 10.47.13 AM

ಕಾವ್ಯ ಕಣಜ

ಘಟಕ ಎಂಟು

ಮುಂದಕೆ ಲೇಸುಂಟು ನಮಗೆ

– ಹೆಳವನಕಟ್ಟೆ ಗಿರಿಯಮ್ಮ



ಜೈಮಿನಿ ಭಾರತದಲ್ಲಿ ಬರುವ ಚಂದ್ರಹಾಸನ ಕಥೆ ಬಹಳ ಜನಪ್ರಿಯವಾದುದು. ಪರಪುಟ್ಟನಾಗಿ ಬೆಳೆದ ಚಂದ್ರಹಾಸ ದುಷ್ಟಬುದ್ಧಿಯ ಕುತಂತ್ರದಿಂದ ಕಷ್ಟಕ್ಕೊಳಗಾಗುತ್ತಾನೆ. ಆದರೆ ದೈವಲೀಲೆಯಿಂದ ದುಷ್ಟಬುದ್ಧಿಯ ಮಗಳು ಅವನನ್ನು ನೋಡುವಂತಾಗುತ್ತದೆ. ತಂದೆ ಬರೆದ ಪತ್ರವನ್ನು ತಿದ್ದಿದ ವಿಷಯೆ ಚಂದ್ರಹಾಸನ ಮಡದಿಯಾಗುತ್ತಾಳೆ. ಪುರಾಣ ಪ್ರಸಿದ್ಧವಾದ ಈ ಕಥೆಯನ್ನು ಹೆಳವನಕಟ್ಟೆ ಗಿರಿಯಮ್ಮ ಪದ್ಯ ರೂಪದಲ್ಲಿ ಸೊಗಸಾಗಿ ಹೇಳಿದ್ದಾಳೆ.



8th_Kannada_Reader Term I_U4-9.indd 130 18-06-2019 10.47.13 AM

ಚಿಕ್ಕಪ್ರಾಯದ ಕೋಮಲಾಂಗಿಯು ಹೆ
ಮ್ಮಕ್ಕಳನಗಲಿ ತಾ ಚೂತ
ವೃಕ್ಷದ ನೆರಳಲ್ಲಿ ಮಲಗಿದ್ದಾತನ ಕಂಡು
ಬೆಕ್ಕಸ ಬೆರಗಾಗಿ ನಿಂದಳು ‖1‖

ಅತಿ ಚೆಲುವ ಪುರುಷನ ಕಾಣುತ ಮೂರ್ಛೆ
ಗತಳಾಗಿ ತಿಳಿದು ಎಚ್ಚೆತ್ತು
ಪೃಥುವಿಯೊಳಗೆ ಇಂಥ ಚೆಲುವನಿಲ್ಲೆಂದು
ಮತಿಭ್ರಮೆಯಿಂದ ನೋಡಿದಳು ‖2‖

ಇಂದ್ರನೆಂಬೆನೆ ಬಿಳಿಯಾನೆ ಕೆಲದಲಿಲ್ಲ
ಚಂದ್ರನೆಂಬೆನೆ ಮೃಗವಿಲ್ಲ
ದಶದಿಕ್ಪಾಲನೋ ಯಕ್ಷಗಾಂಧರ್ವನೊ ಎಂದು
ವಿಸ್ಮಿಯಾದಳು ವಿಷಯೆ ‖3‖

ಸುತ್ತ ನೋಡುವಳಾರ ಸಂಚಾರವಿಲ್ಲೆನುತ
ಹತ್ತಿರ ಬಂದು ನಿಲ್ಲುವಳು
ಚಿತ್ತದೊಳೊಮ್ಮೊಮ್ಮೆ ನೆರೆಯೆ ನೇಮಿಸುವಳು
ಹೊತ್ತಲ್ಲವೆಂದು ಸಾರುವಳು ‖4‖

ಸೊಗಸಿಂದ ನಿದ್ರೆಗೈದಿಂದುಹಾಸನು ತೊಟ್ಟ
ಚೊಗೆಯ ಕುಪ್ಪಸದ ಕೊನೆಯಲ್ಲಿ
ಬಿಗಿದು ಕಟ್ಟಿರ್ದ ಪತ್ರಿಕೆಯನು ಮೆಲ್ಲನೆ
ತೆಗೆದುಕೊಂಡಳು ಮಂತ್ರಿ ತನುಜೆ ‖5‖

ನೋಡಿದು ತಮ್ಮ ತಂದೆಯ ಸ್ವಹಸ್ತದ
ಮೋಡಿಯ ಬರೆದ ಬರೆಹವನು
ರೂಢಿಯೊಳತಿಚೆಲುವ ಇವನೆಂದು ಕಳುಹಿದ ನಾ
ಮಾಡಿದ ಸುಕೃತದ ಫಲದಿ ‖6‖

8th_Kannada_Reader Term I_U4-9.indd 131 18-06-2019 10.47.14 AM

ಶ್ರೀಮತು ಮಂತ್ರಿ ದುಷ್ಟಬುದ್ಧಿ ಮದನಗೆ
ನೇಮಿಸಿ ಕಳುಹಿದ ಕಾರ್ಯ
ಸೀಮೆಗರಸು ಇವನಹನು ಕಾಣುತ ಶೀಘ್ರ
ವಿಷವ ಕೊಡುವುದತ್ತಮವು ‖7‖

ಒಂದು ಲಿಖಿತ ಸಹಸ್ರ ಲಿಖಿತವು
ಎಂದು ಭಾವಿಸಿ ನಿನ್ನ ಮನದಿ
ಸಂದೇಹವಿಲ್ಲದೆ ವಿಷವ ಕೊಡುವುದು
ಮುಂದಕ್ಕೆ ಲೇಸುಂಟು ನಮಗೆ ‖8‖

ವಿಪ್ಪನ್ನವಾಗಿರ್ದ ವರನ ಕಾಣುತ ನ
ಮ್ಮಪ್ಪನವರು ಕಳುಹಿದರು
ತಪ್ಪುಂಟು ಇದರೊಳು ಕೆಡುವುದು ಕಾರ್ಯಕ್ಕೆ
ತಪ್ಪೆಂದು ಮನದಲ್ಲಿ ತಿಳಿದು ‖9‖

ವಕಾರವನೆ ಚೆಳ್ಳುಗುರಿಂದಲಿ ತಿದ್ದಿ,
ಏಕಾರವನೆ ಮಾಡಿದಳು
ಜೋಕೆಯಿಂದಲಿ ಎಂದಿನಂದದಿ ಕಟ್ಟಿ ವಿರ
ಹಾಕಾತುರದಿಂದ ಮರುಗಿದಳು ‖10‖

ಬಿಚ್ಚಿ ನೋಡಿದನು ಓಲೆಯನಾಗ ಮಂತ್ರಿಯು
ಉತ್ಸಾಹದೊಸಗೆ ಸಂಭ್ರಮವ
ಅಚ್ಯುತ ಹರಿಯ ಕಿಂಕರ ತಂಗಿಗೆ ವರನೆಂದು
ನಮ್ಮಪ್ಪ ಮೆಚ್ಚಿದನೀ ವರನ ‖11‖

ನಂಬಿದ ಭಕ್ತ ಕುಟುಂಬಿ ರಕ್ಷಕನಹು
ದೆಂಬ ಹೆಳವನಕಟ್ಟೆ ರಂಗ
ಬೆಂಬಿಡದಲೆ ಇಂದುಹಾಸನ ಮದುವೆ ಗಾ
ರಂಭಗಳನೆ ಮಾಡಿಸಿದ ‖12‖

8th_Kannada_Reader Term I_U4-9.indd 132 18-06-2019 10.47.14 AM

ಕವಿ–ಕಾವ್ಯ ಪರಿಚಯ

ಹೆಳವನಕಟ್ಟೆ ಗಿರಿಯಮ್ಮನವರು ಹರಿದಾಸ ಪರಂಪರೆಯಲ್ಲಿ ಕೃತಿ ರಚನೆ ಮಾಡಿರುವ ಮಹಿಳೆಯರಲ್ಲಿ ಬಹಳ ಮುಖ್ಯರಾದವರು. ಇವರ ಜನ್ಮಸ್ಥಳ ಈಗಿನ ಹಾವೇರಿ ಜಿಲ್ಲೆಯ ರಾಣೆ ಬೆನ್ನೂರು. ತಂದೆ ಭೀಷ್ಮಪ್ಪ ಜೋಯಿಸರು. ಇವರ ಕಾಲ ಕ್ರಿ.ಶ.18ನೆಯ ಶತಮಾನ. ಇವರ ಅಂಕಿತ ನಾಮ ಹೆಳವನಕಟ್ಟೆ ರಂಗನಾಥ.

ಪದಗಳ ಅರ್ಥ

ಚೂತವೃಕ್ಷ–ಮಾವಿನಮರ; ಕೋಮಲಾಂಗಿ–ಸುಂದರಿ, ಯುವತಿ; ತನುಜೆ–ಮಗಳು; ಮೃಗ–ಜಿಂಕೆ; ವಿಪ್ಪನ್ನ–ಪೀಡಿತ; ಅಚ್ಯುತ–ವಿಷ್ಣು; ಪ್ರಾಯ–ಹರೆಯ; ಬೆಕ್ಕಸಬೆರಗು–ಆಶ್ಚರ್ಯ; ಚಿತ್ತ–ಮನಸ್ಸು; ಸುಕೃತ–ಪುಣ್ಯ; ಶೀಘ್ರ–ಬೇಗ; ಕಿಂಕರ–ಸೇವಕ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಚಂದ್ರಹಾಸ ಯಾವ ವೃಕ್ಷದ ನೆರಳಿನಲ್ಲಿ ಮಲಗಿದ್ದನು ?
2. ವಿಷಯೆ ಚಂದ್ರಹಾಸನನ್ನು ಯಾವ ಭ್ರಮೆಯಿಂದ ನೋಡಿದಳು ?
3. ಪತ್ರವನ್ನು ಎಲ್ಲಿ ಕಟ್ಟಲಾಗಿತ್ತು ?
4. ಪತ್ರದಲ್ಲಿ ಯಾರ ಹಸ್ತಾಕ್ಷರವಿತ್ತು ?
5. ದುಷ್ಟಬುದ್ಧಿ ಚಂದ್ರಹಾಸನಿಗೆ ಏನು ಕೊಡಬೇಕೆಂದು ಬರೆದಿದ್ದನು ?
6. ಪತ್ರವನ್ನು ಯಾರು ತಿದ್ದಿದರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಚಂದ್ರಹಾಸನನ್ನು ಕಂಡ ವಿಷಯೆ ಏನೆಂದು ಯೋಚಿಸಿದಳು ?
2. ಪತ್ರದಲ್ಲಿ ಏನೆಂದು ಬರೆದಿತ್ತು ?
3. ಪತ್ರವನ್ನೋದಿದ ವಿಷಯೆ ಏನೆಂದು ಚಿಂತಿಸಿದಳು ?
4. ಮಂತ್ರಿಯ ಮಗ ಪತ್ರವನ್ನೋದಿ ಏನು ಮಾಡಿದನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಿಷಯೆ ಚಂದ್ರಹಾಸನಲ್ಲಿ ಹೇಗೆ ಆಕರ್ಷಿತಳಾದಳು ?
2. ಪತ್ರದಲ್ಲಿದ್ದ ಉಲ್ಲೇಖವೇನು? ಅದನ್ನು ವಿಷಯೆ ಏನು ಮಾಡಿದಳು? ಅದರ ಪರಿಣಾಮವೇನಾಯಿತು?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ವೃಕ್ಷ, ಆನೆ, ಅಚ್ಯುತ, ಚಂದ್ರ, ಚಿತ್ತ, ತಂದೆ, ಹಸ್ತ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

   ಕೋಮಲಾಂಗಿ, ಬಿಳಿಯಾನೆ, ಉತ್ಸಾಹದೊಸಗೆ, ಪತ್ರಿಕೆಯನ್ನು, ಲೇಸುಂಟು.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ವಿಷ, ತನುಜೆ, ಚಿಕ್ಕ, ಸುಕೃತ, ಕೊನೆ, ಆರಂಭ, ಉತ್ಸಾಹ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಚಿತ್ತ, ಪತ್ರಿಕೆ, ಸುಕೃತ, ಲಿಖಿತ, ಕಿಂಕರ, ಉತ್ಸಾಹ

5. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಪೃಥ್ವಿ, ಮೃಗ, ಚಂದ್ರ, ಲೋಕ, ವಿಷ, ಉತ್ಸಾಹ.

6. **ಕೆಳಗಿನ ಪದಗಳ ವಿಗ್ರಹ ವಾಕ್ಯ ಬರೆದು, ಸಮಾಸದ ಹೆಸರನ್ನು ತಿಳಿಸಿ.**

   ಬಿಳಿಯಾನೆ, ಯಕ್ಷಗಾಂಧರ್ವರು, ಮಂತ್ರಿತನುಜೆ, ಸ್ವಹಸ್ತ, ಗುಡಿತೋರಣಗಳು, ಭಕ್ತಕುಟುಂಬಿ.

ಚಟುವಟಿಕೆ

1. ಹೆಳವನಕಟ್ಟೆ ಗಿರಿಯಮ್ಮನ ಇತರ ಕಾವ್ಯಗಳನ್ನು ಓದಿರಿ.
2. ಚಂದ್ರಹಾಸನ ಕಥೆಯನ್ನು ಪೂರ್ತಿಯಾಗಿ ತಿಳಿಯಿರಿ.

8th_Kannada_Reader Term I_U4-9.indd 133 18-06-2019 10.47.14 AM

ಪೂರಕ ಪದ್ಯ

ಘಟಕ ಎಂಟು

ನುಡಿಮುತ್ತುಗಳು

– ಎಸ್.ವಿ. ಪರಮೇಶ್ವರ ಭಟ್ಟ



ಸಕ್ಕರೆಗೆ ಇರುವೆ ಮುತ್ತುವಂತೆ ಹಣ ಇದ್ದರೆ ಮಾತ್ರ ಹೆಚ್ಚಾಗಿ ನಂಟರು ಇರುತ್ತಾರೆ. ಮಣ್ಣನ್ನು ತೋಯಿಸಬಲ್ಲವನು ಕುಂಬಾರನಾಗಲಾರ. ಈ ವೃತ್ತಿಗೆ ಹದಗಾರಿಕೆ ಬೇಕು. ಒಬ್ಬರು ಮಾಡಿದ ತಪ್ಪಿನಿಂದ ಮತ್ತೊಬ್ಬರಿಗೆ ಕಷ್ಟವುಂಟಾಗುತ್ತದೆ. ಒಬ್ಬ ವ್ಯಕ್ತಿ ಶ್ರಮ ಪಟ್ಟು ದುಡಿದರೂ ಅದರಿಂದ ಊರಿಗೇ ಹಿತವಾಗುತ್ತದೆ. ಅರ್ಥವತ್ತಾದ ಇಂತಹ ನುಡಿಮುತ್ತುಗಳು ಜನರಿಗೆ ದಾರಿದೀಪಗಳಾಗಿವೆ.

ಊರೆಲ್ಲ ನಂಟರು ಹಣದ ಗಂಟಿದ್ದರೆ
ಕುಣಿದು ಕುಂಬಿಡುವುದು ಜಗವು
ರೊಟ್ಟಿಯ ತುಣುಕೊಂದು ಕೈಯೊಳಗಿದ್ದರೆ
ನಾಯಿಗಳಾರೇಳು ಬಹವು |1|

ಮಣ್ಣನು ನೆನೆಯಿಸಿದಷ್ಟಕೆ ಕುಂಬಾರ
ನಾರೊಬ್ಬನೂ ಆಗಲಾರ
ಕುಡಿಕೆಗೆ ಬೇಕಷ್ಟೆ ಕೋಲು ಕೈಚಳಕವು
ಚಕ್ರವು ಬೆಂಕಿಯ ಕಾವು |2|

ಬಾಳೆಯ ಹಣ್ಣನು ತಿಂದವರೆಸೆವರು
ಸಿಪ್ಪೆಯ ಬೀದಿಯ ಕೊನೆಗೆ
ಕಾಣದೆ ಕಾಲಿಟ್ಟು ಜಾರುವರನ್ಯರು
ಕಷ್ಟವು ಬರುವುದೆ ಹೀಗೆ |3|

ನಾನೊಬ್ಬ ನಿದ್ರೆಯ ಮಾಡಿದೆನಾದರೆ
ಅದು ನನ್ನೊಬ್ಬನ ಸುಖಕೆ
ನಾನೊಬ್ಬನೆಚ್ಚತ್ತು ದುಡಿಯುವುದಾದರೆ
ಅದು ಊರಿನೆಲ್ಲರ ಹಿತಕೆ |4|

8th_Kannada_Reader Term I_U4-9.indd 134 18-06-2019 10.47.14 AM

ಕವಿ–ಕಾವ್ಯ ಪರಿಚಯ



ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರು ತೀರ್ಥಹಳ್ಳಿ ತಾಲೂಕಿನ ಮಾಳೂರಿನಲ್ಲಿ 1914ರಲ್ಲಿ ಜನಿಸಿದರು. ಇವರು ಕನ್ನಡದ ಸುಪ್ರಸಿದ್ಧ ಕವಿಗಳೂ, ವಿಮರ್ಶಕರೂ ಆಗಿದ್ದರು. ಕವಿತೆ, ಗಾದೆ, ಒಗಟು, ವಿಮರ್ಶೆ, ಸಂಸ್ಕೃತ ಕಾವ್ಯಗಳ ಅನುವಾದ ಸೇರಿದಂತೆ ಸುಮಾರು ಅರವತ್ತು ಗ್ರಂಥಗಳನ್ನು ಇವರು ರಚಿಸಿದ್ದಾರೆ. ರಾಗಿಣಿ, ಜಹನಾರ, ಇಂದ್ರಚಾಪ, ಸುರಗಿ, ಸುರಹೊನ್ನೆ, ಚಂದ್ರವೀಧಿ, ಮೊದಲಾದವು ಇವರ ಕವನ ಸಂಕಲನಗಳು. ಉಪ್ಪುಕಡಲು, ಪಾಮರ ಮೊದಲಾದವು ವಚನ ಸಂಗ್ರಹಗಳು. ಕಾಳಿದಾಸನ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಶ್ರೇಯಸ್ಸು ಮತ್ತು ಸಾಹಸ ಇವರದ್ದು. ಪ್ರೊ.ಪರಮೇಶ್ವರ ಭಟ್ಟರು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ಅಲ್ಲಿ ಕನ್ನಡ ಅಧ್ಯಯನಕ್ಕೆ ತಳಪಾಯವನ್ನು ಹಾಕಿದವರು. ಅವರು ಕನ್ನಡ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರೆಂದು ಖ್ಯಾತರಾಗಿದ್ದರು.

'ನುಡಿಮುತ್ತುಗಳು' ಅವರ 'ಇಂದ್ರಚಾಪ' ಕವನ ಸಂಕಲನದಿಂದ ಆಯ್ದ ಬಿಡಿಬಿಡಿ ಮುಕ್ತಕಗಳು. ಇವುಗಳನ್ನು ಅವರು ಸಾಂಗತ್ಯ ಛಂದಸ್ಸಿನಲ್ಲಿ ಬರೆದಿದ್ದಾರೆ.

ಪದಗಳ ಅರ್ಥ

ಕುಂಬಿಡು–ಕುಪ್ಪಳಿಸು, ನೆಗೆದಡು; ಕುಡಿಕೆ–ಚಿಕ್ಕ ಮಡಿಕೆ; ತುಣುಕು–ತುಂಡು; ಬಹವು–ಬರುವುವು; ಎಸೆ–ಬಿಸಾಡು; ಅನ್ಯರು–ಬೇರೆಯವರು; ಕೈಚಳಕ–ಕೈಯ ಚಮತ್ಕಾರ, ನೈಪುಣ್ಯ; ಹಿತ–ಒಳ್ಳೆಯದು, ಪ್ರಯೋಜನ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಊರೆಲ್ಲ ನಂಟರು ಯಾವಾಗ ಆಗುವರು ?
2. ಕುಡಿಕೆಯನ್ನು ತಯಾರಿಸಲು ಏನೇನು ಬೇಕು?
3. ಕಷ್ಟವು ಬರುವುದು ಹೇಗೆ ?
4. ಯಾವುದು ಊರಿನ ಎಲ್ಲರ ಹಿತಕೆ ಮಾಡುವ ಕಾರ್ಯ ?
5. ತನ್ನೊಬ್ಬನ ಸುಖಕೆ ಮಾಡುವುದೇನು ?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಜಗ, ನಾಯಿ, ಬೆಂಕಿ, ಕೊನೆ, ಹಣ್ಣು.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ತುಣುಕೊಂದು, ಕೈಯೊಳಗಿದ್ದರೆ, ತಿಂದವರೆಸೆವರು, ಆರೇಳು, ಊರಿನೆಲ್ಲರ

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಕೊನೆ, ಹಿತ, ಕಷ್ಟ, ಎಚ್ಚರ, ಒಳಗೆ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಹಣದಗಂಟು, ಕುಂಬಾರ, ಬಾಳೆಹಣ್ಣು, ಕೈಚಳಕ, ಜಾರು.

ಚಟುವಟಿಕೆ

1. ನೀತಿಪದ್ಯಗಳನ್ನು ಸಂಗ್ರಹಿಸಿ ಓದಿ, ಅದರಂತೆ ನಡೆದುಕೊಳ್ಳಿ.
2. ಗುರುಹಿರಿಯರಿಗೆ ವಿಧೇಯವಾಗಿರುವುದನ್ನು ರೂಢಿಸಿಕೊಳ್ಳಿ.

8th_Kannada_Reader Term I_U4-9.indd 135 18-06-2019 10.47.14 AM

ಘಟಕ ಎಂಟು

ಶ್ರೀಕೃಷ್ಣ ಸಂಧಾನ

– ಎ.ಆರ್.ಕೃಷ್ಣಶಾಸ್ತ್ರಿ



ಮಹಾಭಾರತ ಕಥೆಯಲ್ಲಿ ಪಾಂಡವರಿಗೂ ಕೌರವರಿಗೂ ಯುದ್ಧ ತೀರ್ಮಾನವಾದ ಸಂದರ್ಭದಲ್ಲಿ ಆ ಯುದ್ಧವನ್ನು ತಡೆಯಲು ಶ್ರೀಕೃಷ್ಣನು ಕೌರವರ ಬಳಿಗೆ, ಯುದ್ಧವನ್ನು ನಿಲ್ಲಿಸುವಂತೆ ಹೇಳಲು ಬರುತ್ತಾನೆ. ಆದರೆ ಕೌರವರು ಸಂಧಾನಕ್ಕೆ ಒಪ್ಪುವುದಿಲ್ಲ. ಆ ಸಂದರ್ಭದಲ್ಲಿ ಶ್ರೀಕೃಷ್ಣ ಮತ್ತು ಕೌರವರ ನಡುವೆ ನಡೆದ ಸಂಭಾಷಣೆಯೇ ಈ ಪಾಠದ ವಸ್ತುವಾಗಿದೆ.



8th_Kannada_Reader Term I_U4-9.indd 136 18-06-2019 10.47.14 AM

ಮರುದಿನ ಬೆಳಿಗ್ಗೆ ಕೃಷ್ಣನು ತನ್ನ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸಿದ್ಧನಾಗಲು ದುರ್ಯೋಧನನೂ ಶಕುನಿಯೂ ಬಂದು, ಧೃತರಾಷ್ಟ್ರನು ಸಭೆಗೆ ಬಂದಿದ್ದಾನೆಂದೂ ಕೃಷ್ಣನನ್ನು ಬರಹೇಳಿದನೆಂದೂ ತಿಳಿಸಿದರು. ಕೃಷ್ಣನೂ ವಿದುರನೂ ಒಂದು ರಥದಲ್ಲಿ ಕುಳಿತು ಹೊರಟರು. ಅವರ ಹಿಂದೆ ದುರ್ಯೋಧನ ಶಕುನಿಗಳೂ, ಸಾತ್ಯಕಿ ಕೃತವರ್ಮ ಮುಂತಾದ ವೃಷ್ಣಿಗಳೂ ಹೊರಟರು. ಕೃಷ್ಣನ ರಥಕ್ಕೆ ಹಿಂದೂ ಮುಂದೂ ಚಿತ್ರ ವಿಚಿತ್ರವಾದ ಉಡುಪುಗಳುಳ್ಳ ಸಾವಿರಾರು ಯೋಧರು ಕತ್ತಿ, ಪ್ರಾಸ ಮುಂತಾದ ಆಯುಧಗಳನ್ನು ಹಿಡಿದು ಹೋಗುತ್ತಿದ್ದರು. ಹೀಗೆಯೇ ಆ ಪರಿವಾರದಲ್ಲಿ ನೂರಾರು ಆನೆಗಳೂ, ಸಾವಿರಾರು ಕುದುರೆಗಳೂ ಇದ್ದವು. ಅವರನ್ನು ನೋಡುವುದಕ್ಕೆ ಸೇರಿದ್ದ ಜನಸಂದಣಿಯ ಮಧ್ಯದಿಂದ ಕೃಷ್ಣನು ಅರಮನೆಗೆ ಬರಲು ಶಂಖಧ್ವನಿಯಾಯಿತು. ಕೊಳಲ ಗಾನವಾಗುತ್ತಿತ್ತು. ಅರಮನೆಯ ಬಾಗಿಲಲ್ಲಿ ಇಳಿದು ಕೃಷ್ಣನು ಸಭಾ ಮಂಟಪಕ್ಕೆ ಬಂದನು. ಒಂದು ಕಡೆ ವಿದುರನೂ, ಇನ್ನೊಂದು ಕಡೆ ಸಾತ್ಯಕಿಯೂ ಅವನ ಕೈಯನ್ನು ಹಿಡಿದುಕೊಂಡಿದ್ದರು. ಅವನ ಮುಂದೆ ಕರ್ಣ ದುರ್ಯೋಧನರೂ; ಹಿಂದೆ ಕೃತವರ್ಮ ಮುಂತಾದ ವೃಷ್ಣಿ ರಾಜರೂ ಹೋಗುತ್ತಿದ್ದರು. ಕೃಷ್ಣನು ಬಂದ ಕೂಡಲೇ ಧೃತರಾಷ್ಟ್ರನೂ, ಭೀಷ್ಮ ದ್ರೋಣಾದಿಗಳೂ ಎದ್ದು ಅವನನ್ನು ಗೌರವಿಸಿದರು. ಅವರೆದ್ದ ಕೂಡಲೇ ಎಲ್ಲ ಕಡೆಯಲ್ಲಿಯೂ ನೆರೆದಿದ್ದ ಸಾವಿರಾರು ರಾಜರೂ ಎದ್ದರು. ಕೃಷ್ಣನು ನಗುನಗುತ್ತಾ ಎಲ್ಲರೊಡನೆಯೂ ಅವನ ವಯಸ್ಸಿಗೆ ಅನುಗುಣವಾಗಿ ಸಂಭಾಷಣೆ ನಡೆಸುತ್ತಾ ತನಗಾಗಿ ಏರ್ಪಡಿಸಿದ್ದ ಬಂಗಾರದ ಆಸನದಲ್ಲಿ ಬಂದು ಕುಳಿತನು. ದುಶ್ಶಾಸನನು ಸಾತ್ಯಕಿಗೂ, ವಿವಿಂಶತಿಯೂ ಕೃತವರ್ಮನಿಗೂ ಉತ್ತಮವಾದ ಆಸನಗಳನ್ನು ಕೊಟ್ಟು ಕುಳ್ಳಿರಿಸಿದರು. ಕೃಷ್ಣನಿಗೆ ಸ್ವಲ್ಪ ದೂರದಲ್ಲಿ ಕರ್ಣ–ದುರ್ಯೋಧನರಿಬ್ಬರೂ ಏಕಾಸನದಲ್ಲಿ ಕುಳಿತರು. ಶಕುನಿಯೂ ಅವನ ಮಗನೂ ಅವರ ಹತ್ತಿರ ಮತ್ತೊಂದು ಆಸನದಲ್ಲಿ ಕುಳಿತರು. ವಿದುರನು ಬಿಳಿಯ ಕೃಷ್ಣಾಜಿನವನ್ನು ಹೊದಿಸಿದ ಒಂದು ಆಸನದಲ್ಲಿ ಕೃಷ್ಣನ ಆಸನಕ್ಕೆ ಅಂಟಿಕೊಂಡಂತೆ ಕುಳಿತನು. ಪೀತಾಂಬರವನ್ನು ಧರಿಸಿದ್ದ ಕೃಷ್ಣನು ಕುಂದಣದಲ್ಲಿ ಕೂರಿಸಿದ್ದ ರತ್ನದಂತೆ ಶೋಭಿಸುತ್ತಿದ್ದನು. ಎಲ್ಲರ ಕಣ್ಣೂ ಅವನ ಮೇಲೆ ನೆಟ್ಟಿದ್ದವು; ಯಾರೂ ತುಟಿಕ್ ಪಿಟಿಕ್ ಎನ್ನದೆ ಇದ್ದರು. ಎಲ್ಲವೂ ಗಂಭೀರವಾಗಿಯೂ, ಮೌನವಾಗಿಯೂ ಇತ್ತು.

ಎಲ್ಲರೂ ಅವರವರ ಆಸನಗಳಲ್ಲಿ ಕುಳಿತ ಮೇಲೆ, ಶ್ರೀ ಕೃಷ್ಣನು ಮುಂಗಾರಿನ ಗುಡುಗಿನಂತೆ ಗಂಭೀರವಾದ ಧ್ವನಿಯಿಂದ ಧೃತರಾಷ್ಟ್ರನನ್ನು ಉದ್ದೇಶಿಸಿ, 'ಮಹಾರಾಜಾ! ಕೌರವ ಪಾಂಡವ ವೀರರಿಗೆ ಸುಲಭವಾಗಿ ಸಂಧಿಯಾಗಲೆಂದು ಯತ್ನಿಸಲು ನಾನು ಬಂದಿದ್ದೇನೆ. ಕುರುಕುಲವು ವಿದ್ಯೆ, ಶೀಲ ಮುಂತಾದ ಗುಣಗಳಿಂದ ರಾಜ್ಯ ಕುಲಗಳಲ್ಲೆಲ್ಲಾ ಪ್ರಸಿದ್ಧವಾಗಿದ್ದು, ಕೃಪೆ ಅನುಕಂಪೆ ಕರುಣೆ ಅಹಿಂಸೆ ಋಜುತ್ವ ತಾಳ್ಮೆ ಸತ್ಯ ಇವು ಅದರ ವಿಶೇಷ ಲಕ್ಷಣಗಳಾಗಿವೆ. ಇಂತಹ ವಂಶದಲ್ಲಿ ದುರ್ಯೋಧನ ಮುಂತಾದ ನಿನ್ನ ಮಕ್ಕಳು ಧರ್ಮಾರ್ಥಗಳನ್ನು ಅಲಕ್ಷ್ಯ ಮಾಡಿ ಕ್ರೂರರಂತೆ ವರ್ತಿಸುತ್ತಿದ್ದಾರೆ. ಲೋಭ ಪರವಶರಾಗಿ ಮರ್ಯಾದೆ ಮೀರಿ ಹತ್ತಿರದ ನೆಂಟರಲ್ಲಿ ಅನಾರ್ಯ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಆದ್ದರಿಂದ ಮಹಾ ಘೋರವಾದ ವಿಪತ್ತು ಸಂಭವಿಸಲಿದೆ. ಅದನ್ನು ಉಪೇಕ್ಷೆ ಮಾಡಿದರೆ ಭೂಮಂಡಲವೇ ನಾಶವಾಗುತ್ತದೆ. ನೀನು ಇಷ್ಟಪಟ್ಟರೆ ಅದನ್ನು ನಿವಾರಿಸಬಲ್ಲೆ. ಶಾಂತಿಯು ಅಸಾಧ್ಯವಲ್ಲವೆಂದು ನಾನು ತಿಳಿದಿದ್ದೇನೆ. ಅದು ನಮ್ಮ ಅಧೀನ. ನೀನು ನಿನ್ನ ಮಕ್ಕಳನ್ನು ಒಡಂಬಡಿಸು; ನಾನು ಪಾಂಡವರನ್ನು ಒಪ್ಪಿಸುತ್ತೇನೆ. ಪಾಂಡವರ ಸಹಕಾರದೊಡನೆ ನೀನು ಧರ್ಮಾರ್ಥಗಳಿಂದ ರಾಜ್ಯವಾಳುವುದಕ್ಕೆ ಮೊದಲು ಮಾಡಿದರೆ ನಿನ್ನನ್ನು ಹಿಡಿಯುವರಾರು? ನೀನು ಶತ್ರುಗಳನ್ನೆಲ್ಲಾ ಗೆದ್ದು ಅಖಂಡ ಭೂಮಂಡಲವನ್ನು ಆಳಬಹುದು. ಹಾಗಲ್ಲದೆ ನಿನ್ನ ಮಕ್ಕಳನ್ನು ನೀನೂ ಅನುಸರಿಸಿದರೆ ಯುದ್ಧ ಒದಗಿ ಕುಲ ಕ್ಷಯವಾಗುತ್ತದೆ. ಇದು ಧರ್ಮವೇ ಮಹಾರಾಜ? ಪಾಂಡವರು ನಿನ್ನ ಮಕ್ಕಳನ್ನು ಕೊಲ್ಲಲಿ, ನಿನ್ನ ಮಕ್ಕಳು ಪಾಂಡವರನ್ನು ಕೊಲ್ಲಲಿ. ನಿನಗೆ ಏನು ಸುಖ ಹೇಳು? ಇಬ್ಬರೂ ಶಸ್ತ್ರಾಸ್ತ್ರ ವಿಶಾರದರು. ಅವರು ಹೊಡೆದಾಡಿ ರಣರಂಗದಲ್ಲಿ ಸತ್ತು ಮಲಗುವುದನ್ನು ನೋಡುವುದು ಬೇಡ. ಅವರು ಯುದ್ಧಕ್ಕೆ ಹೊರಟರೆ ಅವರ ಹಿಂದೆ ನಾನಾ ರಾಜರು ಬರುತ್ತಾರೆ. ಅವರ ಪ್ರಜೆಗಳು ಬರುತ್ತಾರೆ. ಹೀಗೆ ಲೋಕವೇ ನಾಶ ಹೊಂದುತ್ತದೆ.

8th_Kannada_Reader Term I_U4-9.indd 137 18-06-2019 10.47.14 AM

ಈ ಮಹಾ ವಿಪತ್ತನ್ನು ತಪ್ಪಿಸು ಮಹಾರಾಜ! ಈಗ ಸೇರಿರುವ ರಾಜರೆಲ್ಲರೂ ಸುಖವಾಗಿ ಉಂಡು ತಿಂದು ವೈರವನ್ನು ಮರೆತು ಸಂತೋಷದಿಂದ ಬಂದ ದಾರಿ ಹಿಡಿದು, ಅವರವರ ಊರಿಗೆ ಹೋಗಲಿ. ಪಾಂಡವರು ತಂದೆಯಿಲ್ಲದೆ ತಬ್ಬಲಿಗಳಾಗಿದ್ದಾಗ ನೀನು ಅವರನ್ನು ಪೋಷಿಸಿದೆ. ಈಗಲೂ ನೀನೇ ಅವರನ್ನು ಕಾಪಾಡಬೇಕು. ಪಾಂಡವರು ನಿನಗೆ ನಮಸ್ಕಾರ ಹೇಳಿ, "ನಿನ್ನ ಆಜ್ಞೆಯಂತೆ ಹನ್ನೆರಡು ವರ್ಷ ವನವಾಸವನ್ನೂ ಒಂದು ವರ್ಷ ಅಜ್ಞಾತವಾಸವನ್ನೂ ಮಾಡಿ ಮುಗಿಸಿಕೊಂಡು ಬಂದಿದ್ದೇವೆ. ಧರ್ಮ ಅರ್ಥಗಳನ್ನು ಅನುಸರಿಸಿ, ನಮ್ಮ ಪಾಲನ್ನು ಕೊಟ್ಟು ನಮ್ಮನ್ನು ಸಲಹು; ನಾವು ತುಂಬಾ ಕಷ್ಟ ಪಟ್ಟಿದ್ದೇವೆ. ನೀನೇ ನಮ್ಮ ತಾಯಿತಂದೆ ಎಲ್ಲ. ನೀನು ಹಿರಿಯನಾಗಿ ನಮಗೆ ಬುದ್ಧಿಹೇಳು. ದಾರಿತಪ್ಪಿದರೆ ತಿದ್ದು, ನೀನೂ ಸರಿಯಾದ ದಾರಿಯಲ್ಲಿ ನಡೆ!" ಎಂದು ತಿಳಿಸಿದ್ದಾರೆ. ಅವರು ಹೇಳುವುದು ಧರ್ಮವೂ, ನ್ಯಾಯವೂ ಆಗಿದೆ. ಅವರಿಗೆ ಪಾಲು ಕೊಡುವುದನ್ನು ಬಿಟ್ಟು ಇನ್ನೇನಾದರೂ ದಾರಿಯಿದ್ದರೆ ಹೇಳು. ಇಲ್ಲಿ ನೆರೆದಿರುವ ರಾಜರೂ ಹೇಳಲಿ. ಧರ್ಮರಾಜನು ನಿನ್ನಲ್ಲಿಯೂ, ನಿನ್ನ ಮಕ್ಕಳಲ್ಲಿಯೂ ಯಾವಾಗಲೂ ಧರ್ಮದಿಂದಲೇ ನಡೆದುಕೊಳ್ಳುತ್ತಿದ್ದಾನೆ. ನೀನು ಅವರನ್ನು ಸುಡಿಸಿದೆ. ದೇಶ ಬಿಟ್ಟು ಕಳುಹಿಸಿದೆ. ಆದರೂ ಮತ್ತೆ ಬಂದು ನಿನ್ನನ್ನೇ ಆಶ್ರಯಿಸಿದರು. ಇಂದ್ರಪ್ರಸ್ಥಕ್ಕೆ ಕಳುಹಿಸಿದೆ. ಅಲ್ಲಿ ಇದ್ದುಕೊಂಡು ಎಲ್ಲ ರಾಜರನ್ನೂ ಗೆದ್ದು ಅವರನ್ನು ನಿನ್ನ ವಶ ಮಾಡಿದರು. ಇಂತಹವರು ಶಕುನಿಯ ತಂತ್ರಕ್ಕೆ ಒಳಗಾಗಿ ಕಷ್ಟಕ್ಕೆ ಸಿಕ್ಕಿ ದ್ರೌಪದಿಯನ್ನು ಸಭೆಗೆ ಎಳೆ ತಂದರೆ ಅದನ್ನು ನೋಡಿ ಸಹಿಸಿಕೊಂಡಿದ್ದರು. ಕ್ಷತ್ರಿಯ ಧರ್ಮವೆಂದು ಯುಧಿಷ್ಠಿರನು ತುಟಿಪಿಟಕ್ಕೆನ್ನದೆ, ಅಲ್ಲಾಡದೆ ಕುಳಿತಿದ್ದನು. ನಾನು ನಿನಗೂ, ಅವರಿಗೂ ಇಬ್ಬರಿಗೂ ಶ್ರೇಯಸ್ಸನ್ನು ಕೋರಿ ಹೇಳುತ್ತೇನೆ. ಮಹಾರಾಜಾ! ಅರ್ಥವನ್ನು ಅನರ್ಥವನ್ನಾಗಿಯೂ, ಅನರ್ಥವನ್ನು ಅರ್ಥವನ್ನಾಗಿಯೂ ಭಾವಿಸಿ ಧರ್ಮವನ್ನು ಕೆಡಿಸಿಕೊಂಡು ಪ್ರಜೆಗಳನ್ನೆಲ್ಲಾ ನಾಶಕ್ಕೆ ಈಡು ಮಾಡಬೇಡ. ಲೋಭದಿಂದ ದುರ್ಮಾರ್ಗದಲ್ಲಿ ಹೋಗುತ್ತಿರುವ ಮಕ್ಕಳನ್ನು ತಡೆದು ನಿಲ್ಲಿಸು. ಪಾಂಡವರು ನಿನ್ನ ಶುಶ್ರೂಷೆಗೂ ಬದ್ಧರಾಗಿದ್ದಾರೆ. ಯುದ್ಧ ಮಾಡುವುದಕ್ಕೂ ಸಿದ್ಧವಾಗಿದ್ದಾರೆ. ನಿನಗೆ ಯಾವುದು ಸಮ್ಮತವೋ ಅದನ್ನು ಒಪ್ಪಿಕೋ' ಎಂದನು.

ಈ ಮಾತನ್ನು ಎಲ್ಲ ರಾಜರೂ ಮನಸ್ಸಿನಲ್ಲಿಯೇ ಶ್ಲಾಘಿಸಿದರು. ಆದರೆ ಯಾರೂ ಮಾತಾಡುವುದಕ್ಕೆ ಮುಂದುವರೆದು ಬರಲಿಲ್ಲ. ಧೃತರಾಷ್ಟ್ರನು, 'ಕೇಶವಾ! ನೀನು ಹೇಳಿದ್ದು ಧರ್ಮವಾಗಿಯೂ ನ್ಯಾಯವಾಗಿಯೂ ಇದೆ. ಆದರೆ ಇದರಲ್ಲಿ ನಾನು ಸ್ವತಂತ್ರನಲ್ಲ. ದುರ್ಯೋಧನನನ್ನು ಒಪ್ಪಿಸುವುದಕ್ಕೆ ಪ್ರಯತ್ನ ಪಟ್ಟು ನೋಡು. ಹಾಗಾದರೆ ಸಂಧಿಕಾರ್ಯ ಸಾಧ್ಯವಾದೀತು' ಎಂದನು. ಆಗ ಕೃಷ್ಣನು ದುರ್ಯೋಧನನ ಕಡೆಗೆ ತಿರುಗಿ, 'ಕುರುಶ್ರೇಷ್ಠ! ನಿನ್ನ ಮತ್ತು ನಿನ್ನವರ ಹಿತದಲ್ಲಿ ನಾನು ಆಡುವ ಈ ಮಾತನ್ನು ಕೇಳು. ನೀನು ವಿದ್ಯಾವಂತ, ನಡತೆವಂತ, ಗುಣವಂತ. ಇಂತಹವನು ಅಸತ್ಕುಲ ಪ್ರಸೂತರೂ, ದುರಾತ್ಮರೂ, ಘಾತುಕರೂ, ನಾಚಿಕೆಗೆಟ್ಟವರೂ ನಡೆಯುವಂತೆ ನಡೆಯಬಾರದು. ಸಜ್ಜನರು ಲೋಕದಲ್ಲಿ ಧರ್ಮಾರ್ಥ ಸಮ್ಮತವಾದ ದಾರಿಯಲ್ಲಿ ಹೋಗುತ್ತಾರೆ. ನಿನ್ನಲ್ಲಿ ಇದಕ್ಕೆ ವಿರುದ್ಧವಾದ ನಡತೆಯೇ ಆಗಾಗ್ಗೆ ಕಾಣುತ್ತಿದೆ. ಅಧರ್ಮವು ಘೋರವೂ ಪ್ರಾಣಹಾರಕವೂ ಆದದ್ದು. ಆದ್ದರಿಂದ ಅದನ್ನು ಬಿಟ್ಟು, ಶ್ರೇಯಸ್ಸಿಗೆ ಮಾರ್ಗವನ್ನು ನೋಡು. ಪ್ರಾಜ್ಞರೂ, ಶೂರರೂ, ಉತ್ಸಾಹಿಗಳೂ, ಆತ್ಮವಂತರೂ ಆದ ಪಾಂಡವರೊಡನೆ ಸಂಧಿ ಮಾಡಿಕೊ. ಅದು ಧೃತರಾಷ್ಟ್ರ, ಭೀಷ್ಮ, ದ್ರೋಣ, ವಿದುರ ಮುಂತಾದವರಿಗೆ ಇಷ್ಟವಾದದ್ದು. ಅದರಿಂದ ನಿನ್ನ ಜ್ಞಾತಿಗಳಿಗೂ, ಸ್ನೇಹಿತರಿಗೂ, ಲೋಕಕ್ಕೂ ಸುಖವಾಗುವುದು. ನೀನು ತಿಳಿದವನು. ತಾಯಿ–ತಂದೆಗಳು ಹೇಳಿದಂತೆ ಕೇಳಿದರೆ ನಿನಗೆ ಶ್ರೇಯಸ್ಸು. ಇಲ್ಲದಿದ್ದರೆ ಆಮೇಲೆ ಪಶ್ಚಾತ್ತಾಪ ಪಡಬೇಕಾದೀತು. ನೀನು ಪಾಂಡವರನ್ನು ಬಿಟ್ಟು ಅಶಿಷ್ಟರೂ ಅಸಮರ್ಥರೂ ಮೂಢರೂ ಆದವರಿಂದ ರಕ್ಷಣೆಯನ್ನು ನಿರೀಕ್ಷಿಸುತ್ತಿದ್ದೀಯೆ. ಹುಟ್ಟಿದಂದಿನಿಂದ ನೀನು ಅವರನ್ನು ಕಿರುಕುಳಗುಟ್ಟಿಸುತ್ತಿದ್ದರೂ ಅವರು ಧರ್ಮಾತ್ಮರಾದ್ದರಿಂದ ನಿನ್ನ ಮೇಲೆ ಕೋಪಗೊಳ್ಳುತ್ತಿಲ್ಲ. ಅವರು ಎಷ್ಟಾದರೂ ನಿನ್ನ ಬಂಧುಗಳು. ಅವರ ಮೇಲೆ ಕೋಪ ತಾಳಬೇಡ; ಅವರನ್ನು ಒಲಿಸಿಕೊಂಡರೆ ನಿನ್ನ ಇಷ್ಟಾರ್ಥಗಳೆಲ್ಲ ನೆರವೇರುತ್ತವೆ. ಈಗ ನೀನು ಅವರು ಗೆದ್ದು ಕೊಟ್ಟ

8th_Kannada_Reader Term I_U4-9.indd 138 18-06-2019 10.47.14 AM

ರಾಜ್ಯವನ್ನೇ ಅನುಭವಿಸುತ್ತಾ, ಅವರಿಗೆ ವಿರುದ್ಧವಾಗಿ ನಿಂತು ಇತರರಿಂದ ರಕ್ಷಣೆಯನ್ನು ಕೋರುತ್ತಿದ್ದೀಯೆ. ನೀನು ನೆಚ್ಚಿಕೊಂಡಿರುವ ಕರ್ಣ, ದುಶ್ಶಾಸನ, ಶಕುನಿಗಳು ಪಾಂಡವರಿಗೆ ಜ್ಞಾನದಲ್ಲಾಗಲೀ, ಧರ್ಮದಲ್ಲಾಗಲೀ, ಅರ್ಥದಲ್ಲಾಗಲೀ ಪರಾಕ್ರಮದಲ್ಲಾಗಲೀ ಸಮನಲ್ಲ. ಈ ರಾಜರೂ ಭೀಷ್ಮದ್ರೋಣಾದಿಗಳೂ ಭೀಮಾರ್ಜುನರನ್ನು ಸೋಲಿಸಲಾರರು. ವ್ಯರ್ಥವಾಗಿ ಜನಕ್ಷಯ ಉಂಟು ಮಾಡುವುದರಿಂದ ಏನು ಪ್ರಯೋಜನ ದುರ್ಯೋಧನ? ಕುರು ವಂಶದಲ್ಲಿ ಸ್ವಲ್ಪ ಶೇಷ ಉಳಿದಿರಲಿ. "ಕುಲಘ್ನ" ಎಂಬ ಅಪಕೀರ್ತಿಯನ್ನು ತಂದುಕೊಳ್ಳಬೇಡ. ಅವರು ಧೃತರಾಷ್ಟ್ರನನ್ನು ರಾಜನನ್ನಾಗಿ ಮಾಡಿ, ನಿನ್ನನ್ನು ಯುವರಾಜನನ್ನಾಗಿ ಮಾಡುವರು. ಬಂದ ಲಕ್ಷ್ಮಿಯನ್ನು ಅಲ್ಲಗಳೆಯಬೇಡ. ಪಾಂಡವರಿಗೆ ಅರ್ಧ ರಾಜ್ಯ ಕೊಟ್ಟು ಸ್ನೇಹಿತರ ಮಾತಿನಂತೆ ಸಂಧಿ ಮಾಡಿಕೊಂಡು ಸಂತೋಷವಾಗಿ ಚಿರಕಾಲ ಸುಖದಿಂದಿರು!' ಎಂದನು.

ಅದನ್ನು ಅನುಮೋದಿಸಿ ಭೀಷ್ಮ ದ್ರೋಣ ವಿದುರರು ಮಾತನಾಡಿ ದುರ್ಯೋಧನನಿಗೆ ಸಂಧಿ ಮಾಡಿಕೊಳ್ಳುವುದು ಉತ್ತಮವೆಂದು ತಿಳಿಸಿದರು. ಕೊನೆಗೆ ಧೃತರಾಷ್ಟ್ರನು ಅವನನ್ನು ಕುರಿತು, 'ಮಗೂ ದುರ್ಯೋಧನಾ! ಮಹಾತ್ಮನಾದ ಶ್ರೀಕೃಷ್ಣನು ಹೇಳಿದ್ದು ಕ್ಷೇಮಕರವಾಗಿದೆ. ಅದಕ್ಕೆ ಒಪ್ಪಿಕೋ. ಕೃಷ್ಣನ ಸಹಾಯವಿದ್ದರೆ ಯಾವ ರಾಜರಿಂದ ಏನು ಬೇಕಾದರೂ ಪಡೆಯಬಹುದು. ಆದ್ದರಿಂದ ಅವನೊಡನೆ ಯುಧಿಷ್ಠಿರನ ಬಳಿಗೆ ಹೋಗು. ಅವರಾಗಿ ಬಂದು ನಿನ್ನಲ್ಲಿ ಸಂಧಿಯನ್ನು ಬೇಡುತ್ತಿರುವಾಗ ಅದನ್ನು ನಿರಾಕರಿಸಿದರೆ ಮುಂದೆ ನಿನಗೆ ಅಪಜಯವಾಗದೆ ಇರುವುದಿಲ್ಲ' ಎಂದನು.

ದುರ್ಯೋಧನನು ಈ ಮಾತುಗಳನ್ನು ಕೇಳಿ ಕೃಷ್ಣನ ಕಡೆಗೆ ತಿರುಗಿ, 'ಕೃಷ್ಣ! ಈ ಸಂಗತಿಯನ್ನು ನೀನು ಚೆನ್ನಾಗಿ ವಿಚಾರ ಮಾಡಿ ಮಾತನಾಡಬೇಕು. ಇದರಲ್ಲಿ ಮುಖ್ಯವಾಗಿ ನನ್ನನ್ನೇ ಹೆಚ್ಚಾಗಿ ಆಕ್ಷೇಪಿಸಿದ್ದೀಯೆ. ನೀನು ವಿದುರ ಅಪ್ಪ ಅಜ್ಜ ಆಚಾರ್ಯ ಎಲ್ಲರೂ ನನ್ನೊಬ್ಬನನ್ನೇ ದೂಷಿಸುತ್ತೀರಿ. ಇದರಲ್ಲಿ ನನ್ನ ತಪ್ಪೇನು ಎಂದು ಎಷ್ಟು ಯೋಚಿಸಿದರೂ ತಿಳಿಯುವುದಿಲ್ಲ. ಪಾಂಡವರು ಇಷ್ಟ ಪಟ್ಟು ಜೂಜಿಗೆ ಬಂದರು; ಶಕುನಿಯು ಅವರ ರಾಜ್ಯವನ್ನು ಗೆದ್ದ. ಅದರಲ್ಲಿ ನನ್ನ ತಪ್ಪೇನು? ಅವರು ಗೆದ್ದ ಅಲ್ಪಸ್ವಲ್ಪ ಹಣ ಅವರಿಗೇ ಹೋಯಿತು; ಅವರು ಜೂಜಿನಲ್ಲಿ ಸೋತು ಕಾಡಿಗೆ ಹೋದರೆ ಅದು ನನ್ನ ತಪ್ಪಲ್ಲ. ಈಗ ದುರ್ಬಲರಾಗಿರುವ ಅವರು ಸಂಜಯರೇ ಮುಂತಾದ ಶತ್ರುಗಳೊಡನೆ ಸೇರಿಕೊಂಡು ವೈರವನ್ನು ಸಾಧಿಸುತ್ತಿದ್ದಾರೆ. ನಮ್ಮನ್ನು ಕೊಲ್ಲಬೇಕೆಂದಿದ್ದಾರೆ. ನಮ್ಮ ಯಾವ ಅಪರಾಧಕ್ಕೋ ಏನೋ! ನಾವೇನು ಕ್ರೂರವಾದ ಮಾತಿಗಾಗಲೀ ಕೆಲಸಕ್ಕಾಗಲೀ ಹೆದರುವ ಹಾಗಿಲ್ಲ. ಭೀಷ್ಮ, ದ್ರೋಣ, ಕೃಪರನ್ನೂ ದೇವಗತೆಗಳೂ ಜಯಿಸಲಾರರು. ಇನ್ನು ಪಾಂಡವರು ಏನು ಮಾಡಿಯಾರು? ಯುದ್ಧ ಒದಗಿ ಮರಣ ಉಂಟಾದರೆ ವೀರಸ್ವರ್ಗವನ್ನು ಪಡೆಯುತ್ತೇವೆ. ರಣರಂಗದಲ್ಲಿ ಶರಶಯನ ಮಾಡುವುದೇ ಕ್ಷತ್ರಿಯನಿಗೆ ದೊಡ್ಡ ಧರ್ಮ. ಅದಕ್ಕೆ ನಮಗೆ ವ್ಯಥೆ ಇಲ್ಲ. ಕ್ಷತ್ರಿಯನು ಇರಿದಾನೇ ಹೊರತು ಮಣಿಯುವುದಿಲ್ಲ. ಹಿಂದೆ ನಮ್ಮ ತಂದೆ ಅವರಿಗೆ ಕೊಟ್ಟಿದ್ದ ಪಾಲನ್ನು ನಾನು ಬದುಕಿರುವವರೆಗೂ ಮತ್ತೆ ಎಂದಿಗೂ ಅವರಿಗೆ ಕೊಡುವುದಿಲ್ಲ. ಅವರಿಗೆ ಸಲ್ಲದ ರಾಜ್ಯ ನಾನು ಹುಡುಗನಾಗಿದ್ದಾಗ ತಿಳಿಯದೆಯೋ, ಹೆದರಿಕೆಯಿಂದಲೋ ಅವರ ಕೈ ಸೇರಿದ್ದಿರಬಹುದು. ಆದರೆ ಈಗ ನಾನು ಬದುಕಿರುವವರೆಗೂ ಒಂದು ಸೂಜಿ ಮೊನೆಯಷ್ಟು ಭೂಮಿಯೂ ಅವರಿಗೆ ದೊರೆಯಲಾರದು!' ಎಂದನು.

ಕೃಷ್ಣನಿಗೆ ಈ ಮಾತನ್ನು ಕೇಳಿ ಕೋಪ ಬಂತು. ಕಣ್ಣು ಕೆರಳಿತು. ಆದರೆ ನಗುನಗುತ್ತಾ, 'ದುರ್ಯೋಧನಾ! ವೀರ ಶಯನವು ಇಷ್ಟವಾಗಿದ್ದರೆ ಅದನ್ನು ಪಡೆಯುತ್ತೀಯೆ. ಅದನ್ನೆ ಪಡೆದುಕೋ. ಯುದ್ಧ ಒದಗಿ ಬಂದಿದೆ. ಪಾಂಡವರಿಗೆ ನಾನೇನು ಅಪರಾಧ ಮಾಡಿದೆ ಎಂದು ಕೇಳುತ್ತೀಯೆ! ಅವರ ಸಂಪತ್ತನ್ನು ನೋಡಿ ಅಸೂಯೆ ಪಟ್ಟು ಶಕುನಿಯೊಡನೆ ದುರಾಲೋಚನೆ ಮಾಡಿ ಸಾಧುಗಳೂ, ಕಪಟವನ್ನರಿಯದವರೂ ಆದ ಅವರನ್ನು ಜೂಜಿಗೆ ಎಳೆದು ಮೋಸದಿಂದ ಸೋಲಿಸಿದೆ. ಈ ಘೋರ ಕಾರ್ಯ ಸಾಲದೆಂದು ಕುಲೀನೆಯೂ ಶೀಲಸಂಪನ್ನೆಯೂ ಪಾಂಡವರ ಪಟ್ಟ ಮಹಿಷಿಯೂ ಪ್ರಾಣಕ್ಕಿಂತ ಹೆಚ್ಚು ಪ್ರಿಯಳೂ ಆದ ಜ್ಞಾತಿ ಪತ್ನಿಯನ್ನು ಸಭೆಗೆ ಎಳೆಸಿ ತಂದು ಅವಮಾನ ಪಡಿಸಿದೆ. ನೀನೂ ಕರ್ಣ ದುಶ್ಶಾಸನರೂ ಆಡಿದ ದುರ್ಭಾಷೆಗಳನ್ನು ಎಲ್ಲರು ಬಲ್ಲರು. ಪಾಂಡವರನ್ನೂ,

8th_Kannada_Reader Term I_U4-9.indd 139 18-06-2019 10.47.14 AM

ಅವರ ತಾಯಿಯನ್ನೂ ಜೀವ ಸಹಿತವಾಗಿ ವಾರಣಾವತದಲ್ಲಿ ಸುಟ್ಟು ಬಿಡುವುದಕ್ಕೆ ಏರ್ಪಾಡು ಮಾಡಿದೆ. ಅವರನ್ನು ಕೊಲ್ಲುವುದಕ್ಕೆ ಇನ್ನೂ ಏನೇನೋ ತಂತ್ರ ಹೂಡಿದೆ. ಆದರೆ ಅದೊಂದೂ ಕೈಗೂಡಲಿಲ್ಲ. ಹೀಗೆ ಯಾವಾಗಲೂ ಪಾಂಡವರಲ್ಲಿ ದ್ರೋಹದಿಂದ ನಡೆದುಕೊಳ್ಳುತ್ತಿರುವ ನೀನು ಅಪರಾಧಿಯಲ್ಲವೇ? ನಂಟರಲ್ಲಿ ಯಾರು ಹೀಗೆ ನಡೆದುಕೊಳ್ಳುತ್ತಾರೆ? ಶಾಂತಿಯಿಂದ ಇಬ್ಬರಿಗೂ ಸುಖವುಂಟು. ಹಾಗಲ್ಲದೆ ಆಪ್ತ ವಾಕ್ಯವನ್ನು ಕೇಳದೇ ಹೋದರೆ ನಿನ್ನ ಸುಖವನ್ನು ನೀಗಿಕೊಂಡು ಅಧರ್ಮಕ್ಕೂ ಅಪಯಶಸ್ಸಿಗೂ ಗುರಿಯಾಗುವೆ!' ಎಂದನು.

ದುಶ್ಶಾಸನನು, 'ಅಣ್ಣಾ! ಈಗ ನೀನಾಗಿ ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಒಪ್ಪದಿದ್ದರೆ ಅಪ್ಪ, ಅಜ್ಜ, ದ್ರೋಣ ಮುಂತಾದ ಕೌರವರು ನನ್ನನ್ನೂ ನಿನ್ನನ್ನೂ ಕರ್ಣನನ್ನೂ ಸೆರೆ ಹಿಡಿದು ಯುಧಿಷ್ಠಿರನಿಗೆ ಒಪ್ಪಿಸಿ ಬಿಡುತ್ತಾರಂತೆ!' ಎಂದನು. ತಮ್ಮನ ಈ ಮಾತನ್ನು ಕೇಳಿ ದುರ್ಯೋಧನನು ಹೆಬ್ಬಾವಿನಂತೆ ಭುಸುಗುಡುತ್ತಾ ಎದ್ದು, ವಿದುರ ಧೃತರಾಷ್ಟ್ರ ಭೀಷ್ಮ ಕೃಷ್ಣ ಒಬ್ಬರನ್ನೂ ಲಕ್ಷ್ಯ ಮಾಡದೆ, ಮಾನ ಮರ್ಯಾದೆ ನೋಡದೆ ಸಭೆಯನ್ನು ಬಿಟ್ಟು ಹೊರಟು ಹೋದನು. ಅವನ ಹಿಂದೆ ಅವನ ತಮ್ಮಂದಿರೂ ಮಂತ್ರಿಗಳೂ ಎದ್ದು ಹೋದರು. ಭೀಷ್ಮನು, 'ಈ ದುರಭಿಮಾನಿಯೂ ದುರಾತ್ಮನೂ ಆದ ರಾಜಕುಮಾರನು ಕ್ರೋಧ, ಲೋಭ ಪರವಶನಾಗಿ ಎದ್ದು ಹೋದ. ಅವನ ಹಿಂದೆ ಅವನ ಅನುಯಾಯಿಗಳಾದ ರಾಜರೂ ಮಂತ್ರಿಗಳೂ ಹೋದರು. 'ಕ್ಷತ್ರಿಯರಿಗೆ ವಿನಾಶ ಕಾಲ ಒದಗಿ ಬಂದ ಹಾಗೆ ಕಾಣುತ್ತದೆ!' ಎಂದನು ಕೃಷ್ಣ.

ಕೃಷ್ಣನು ಕುರು ವೃದ್ಧರನ್ನು ಕುರಿತು, 'ಇವನನ್ನು ಮೊದಲಿನಿಂದಲೂ ಹೀಗೆ ಬಿಟ್ಟುಕೊಂಡು ಬಂದದ್ದೇ ತಪ್ಪು. ಕಂಸನೂ ಹೀಗೆಯೇ ಇದ್ದ. ಅವನನ್ನು ಅವನ ನಂಟರು ತ್ಯಜಿಸಿ ಬಿಟ್ಟರು. ಎಲ್ಲರ ಹಿತಕ್ಕಾಗಿ ನಾನು ಅವನನ್ನು ಕೊಂದೆ. ಅಂಧಕರೂ, ವೃಷ್ಣಿಗಳೂ ಈಗ ಸುಖವಾಗಿದ್ದಾರೆ. ಅದರಂತೆ ನೀವೂ ದುರ್ಯೋಧನನನ್ನು ಬಂಧನದಲ್ಲಿಟ್ಟು ಪಾಂಡವರೊಡನೆ ಸಂಧಿ ಮಾಡಿಕೊಳ್ಳುವಿರಾದರೆ ಕ್ಷತ್ರಿಯ ಕುಲದ ನಾಶವು ತಪ್ಪುತ್ತದೆ' ಎಂದನು.

ಈ ಮಾತನ್ನು ಕೇಳಿ ಧೃತರಾಷ್ಟ್ರನಿಗೆ ಗಾಬರಿಯಾಗಿ ವಿದುರನಿಗೆ ಹೇಳಿ, ಗಾಂಧಾರಿಗೆ ಹೇಳಿ ಕಳಿಸಿದನು. ಅವಳು ಮಗನನ್ನು ಕರೆಸಿ, 'ವೈರವನ್ನು ಬಿಟ್ಟು ಪಾಂಡವರೊಡನೆ ಸಂಧಿ ಮಾಡಿಕೊಂಡು ಸುಖವಾಗಿರು'ವಂತೆ ಅವನಿಗೆ ಬುದ್ಧಿ ಹೇಳಿದಳು. 'ಯುದ್ಧವು ಒಳ್ಳೆಯದಲ್ಲ. ಅದರಿಂದ ಧರ್ಮಾರ್ಥ ಸಾಧನೆಯಾಗುವುದಿಲ್ಲ. ಜಯದ ನಂಬಿಕೆಯಿಲ್ಲ. ನೀನು ಭೀಷ್ಮ ದ್ರೋಣರನ್ನು ನೆಚ್ಚಿಕೊಂಡಿದ್ದೀಯೆ. ಅವರು ಅನ್ನದ ಋಣಕ್ಕಾಗಿ ಯುದ್ಧ ಮಾಡಬಹುದು. ಆದರೆ ಅವರು ಎರಡು ಕಡೆಗೂ ಸರಿ. ಅವರು ಯುಧಿಷ್ಠಿರನನ್ನು ತಿರಸ್ಕರಿಸುವುದಿಲ್ಲ. ನೀನು ಹಿರಿಯರ ಮಾತಿನಂತೆ ರಾಜ್ಯವನ್ನು ಪಾಂಡವರೊಡನೆ ಪಾಲು ಮಾಡಿಕೊಂಡು ಶಾಂತಿಯಿಂದ ಆಳಿಕೊಂಡು ಬಾ. ಲೋಭ ಬುದ್ಧಿಯಿಂದ ಸಿರಿ ಬರುವುದಿಲ್ಲಪ್ಪ' ಎಂದಳು.

ತಾಯಿಯ ಮಾತೂ ಅವನಿಗೆ ಹಿತವೆನಿಸಲಿಲ್ಲ. ಆದ್ದರಿಂದ ಮುರುತುಕೊಂಡು ಮತ್ತೆ ಸಭೆ ಬಿಟ್ಟು ಹೊರಟು ಹೋದನು. ಹೊರಗೆ ತನ್ನ ಮಂತ್ರಿಗಳೊಡನೆ ಆಲೋಚಿಸಿ, 'ಕೃಷ್ಣನು ನಮ್ಮನ್ನು ಸೆರೆ ಹಿಡಿಸುವುದಕ್ಕಿಂತ ಮುಂಚೆ ನಾವೇ ಅವನನ್ನು ಕಟ್ಟಿ ಹಾಕೋಣ. ಅವನು ಸೆರೆ ಸಿಕ್ಕಿದನೆಂದು ತಿಳಿದ ಕೂಡಲೇ ಪಾಂಡವರು ಹಲ್ಲು ಕಿತ್ತ ಹಾವಿನಂತೆ ಅಸಮರ್ಥರೂ ನಿರುತ್ಸಾಹಿಗಳೂ ಆಗುತ್ತಾರೆ. ಅವರ ಉದ್ಯಮವೆಲ್ಲ ಅಡಗಿ ಹೋಗುತ್ತದೆ' ಎಂದು ನಿಶ್ಚಯ ಮಾಡಿದನು. ಅವರ ಉದ್ದೇಶವನ್ನು ತಿಳಿದುಕೊಂಡ ಸಾತ್ಯಕಿಯು ತನ್ನ ಜೊತೆಯಲ್ಲಿದ್ದ ಕೃತವರ್ಮನನ್ನು ಹೊರಗೆ ಕರೆತಂದು, ಸೇನೆಯನ್ನು ಸಜ್ಜುಗೊಳಿಸಿಕೊಂಡು ಬಾಗಿಲಲ್ಲಿಯೇ ಸಿದ್ಧವಾಗಿರುವಂತೆ ಹೇಳಿ, ಒಳಕ್ಕೆ ಬಂದು ಈ ವಿಷಯವನ್ನೆಲ್ಲ ಕೃಷ್ಣನಿಗೆ ತಿಳಿಸಿದನು. ಆಮೇಲೆ ಧೃತರಾಷ್ಟ್ರನನ್ನೂ ವಿದುರನನ್ನೂ ಕುರಿತು, 'ನಿನ್ನ ಮಕ್ಕಳು ಅಧರ್ಮವೂ ನಿಂದ್ಯವೂ ಆದ ಕಾರ್ಯವನ್ನು ಯೋಚಿಸಿದ್ದಾರೆ. ಆದರೆ ಇದು ಹುಡುಗರು ಬಟ್ಟೆಯಲ್ಲಿ ಬೆಂಕಿಯನ್ನು ಗಂಟು ಕಟ್ಟಿಡುವಂತೆಯೇ!' ಎಂದನು. ಆಗ ಕೃಷ್ಣನು ಧೃತರಾಷ್ಟ್ರನನ್ನು ಕುರಿತು, 'ಮಹಾರಾಜಾ! ಇವರು ಕೋಪಗೊಂಡು ನನ್ನನ್ನು ಕಟ್ಟಿ ಹಾಕುವರಂತೆ. ಅವರು ನನ್ನನ್ನು ಕಟ್ಟಲು ಬಂದರೆ ಅವರೇ ನನ್ನನ್ನು ಕಟ್ಟುತ್ತಾರೋ, ತಾವೇ ಕಟ್ಟಿಗೆ ಸಿಕ್ಕುತ್ತಾರೋ! ಆದರೆ ನಾನು ತುಚ್ಛವಾದ ಪಾಪ

8th_Kannada_Reader Term I_U4-9.indd 140 18-06-2019 10.47.14 AM

ಕೆಲಸಕ್ಕೆ ಹೋಗುವುದಿಲ್ಲ. ಅವರೇನಾದರೂ ರಾಜ್ಯ ಲೋಭದಿಂದಲೂ ಸ್ವಾರ್ಥದಿಂದಲೂ ಅಂತಹ ಕೆಲಸ ಮಾಡಿದರೆ ಯುಧಿಷ್ಠಿರನ ಕೆಲಸ ಕೈಗೂಡಿದಂತೆಯೇ. ದುರ್ಯೋಧನನು ತನಗೆ ಇಷ್ಟವಿದ್ದಂತೆ ಮಾಡಲಿ' ಎಂದನು. ಆಗ ಧೃತರಾಷ್ಟ್ರನು ವಿದುರನಿಗೆ ಹೇಳಿ ದುರ್ಯೋಧನನನ್ನು ಮತ್ತೆ ಕರೆಸಿ, 'ಅಯ್ಯೋ! ಕ್ರೂರಿ, ಪಾಪಿ! ನೀಚರಾದ ಸ್ನೇಹಿತರೊಡನೆ ಸೇರಿಕೊಂಡು ಅಶಕ್ಯವೂ, ಅಕೀರ್ತಿಕರವೂ ಆದ ಕೆಲಸ ಮಾಡಬೇಕೆಂದಿದ್ದೀಯಾ? ನಿನ್ನಂತಹ ಮೂಢನೂ, ಕುಲಗೇಡಿಯೂ ಇನ್ನಿರಲಾರರು. ಏನು?! ಕೃಷ್ಣನನ್ನು ಕಟ್ಟಿಹಾಕಬೇಕೆಂದಿದ್ದೀಯಂತಲ್ಲ? ಅವನನ್ನು ಇಂದ್ರಾದಿ ದೇವತೆಗಳೂ ಕಟ್ಟಿ ಹಾಕಲಾರರು. ಅದು ಗಾಳಿಯನ್ನು ಹಿಡಿಯಲ್ಲಿ ಹಿಡಿದುಕೊಳ್ಳುವ, ಚಂದ್ರನನ್ನು ಕೈಯಿಂದ ಮುಟ್ಟುವ, ಭೂಮಿಯನ್ನು ತಲೆಯಿಂದ ಹೊರುವ ಕೆಲಸದ ಹಾಗೆ' ಎಂದನು. ಅವನನ್ನು ಅನುಮೋದಿಸಿ ವಿದುರನೂ ಮಾತನಾಡಿ, ಕೃಷ್ಣನು ಅದುವರೆಗೆ ಮಾಡಿದ್ದ ಸಾಹಸ ಕಾರ್ಯಗಳನ್ನೆಲ್ಲ ಹೇಳಿದನು. ಆಗ ಕೃಷ್ಣನು ದುರ್ಯೋಧನನನ್ನು ಕುರಿತು, 'ನಾನು ಒಬ್ಬಂಟಿಗನಾಗಿದ್ದೇನೆಂದು ಭಾವಿಸಿ ನನ್ನನ್ನು ಕಟ್ಟೋಣವೆಂದು ಭಾವಿಸಿದೆಯಾ ದುರ್ಯೋಧನಾ? ಪಾಂಡವರೂ ಅಂಧಕ ವೃಷ್ಣಿಗಳೂ ಆದಿತ್ಯರೂ ರುದ್ರರೂ ವಸುಗಳೂ ಎಲ್ಲರೂ ಇಲ್ಲಿಯೇ ಇದ್ದಾರೆ' ಎಂದು ಒಂದು ಸಾರಿ ಗಟ್ಟಿಯಾಗಿ ನಕ್ಕನು. ಆಗ ಅವನ ಮೈಯಿಂದ ದೇವತೆಗಳು ಹೆಬ್ಬೆರಳು ಗಾತ್ರದ ವಿದ್ಯುತ್ ಕಿಡಿಗಳಂತೆ ಹೊರಬಂದರು. ಹಣೆಯಲ್ಲಿ ಬ್ರಹ್ಮನೂ, ಎದೆಯಲ್ಲಿ ರುದ್ರನೂ ಕಂಡರು. ಬೆನ್ನಲ್ಲಿ ಬಲರಾಮಾರ್ಜುನರೂ, ಭೀಮ ನಕುಲ ಸಹದೇವರೂ, ಪ್ರದ್ಯುಮ್ನ ಮುಂತಾದ ಸಾಧ್ಯರೂ ವಸುಗಳೂ, ಮರುತ್ತುಗಳೂ ವಿಶ್ವದೇವತೆಗಳೂ ಯಕ್ಷಗಂಧರ್ವ ರಾಕ್ಷಸರೂ ಕಂಡರು. ಅವರ ಮುಂದೆ ಶಂಖ ಚಕ್ರ ಗದೆ ಶಕ್ತಿ ಶಾರ್ಙ್ಗ ನಂದಕ ಮುಂತಾದ ಆಯುಧಗಳೂ ಬಂದು ನಿಂತವು. ಕಣ್ಣು ಕಿವಿ ಮೂಗುಗಳಿಂದ ಅಗ್ನಿ ಜ್ವಾಲೆಗಳು ಹೊರಡುತ್ತಿದ್ದವು. ಒಂದೊಂದು ರೋಮಕೂಪವೂ ಒಂದೊಂದು ಸೂರ್ಯ ಕಿರಣದಂತೆ ಬೆಳಗುತ್ತಿತ್ತು. ಆ ಘೋರ ರೂಪವನ್ನು ನೋಡಲಾರದೆ ದ್ರೋಣ ಭೀಷ್ಮ ವಿದುರ ಸಂಜಯರು ಹೊರತು ಮಿಕ್ಕವರೆಲ್ಲರೂ ಕಣ್ಣು ಮುಚ್ಚಿಕೊಂಡರು.

ಆಗ ಕೃಷ್ಣನು ತನ್ನ ಮೊದಲಿನ ರೂಪವನ್ನು ತಾಳಿ ಕೃತವರ್ಮ, ಸಾತ್ಯಕಿಗಳೊಡನೆ ಹೊರಕ್ಕೆ ಹೊರಟನು. ಅವನು ರಥದಲ್ಲಿ ಕುಳಿತುಕೊಳ್ಳಲು ಧೃತರಾಷ್ಟ್ರನು ಅಲ್ಲಿಗೆ ಬಂದು, 'ಜನಾರ್ದನಾ! ನನ್ನ ಮಕ್ಕಳ ಮೇಲೆ ನನ್ನ ಅಧಿಕಾರ ಎಷ್ಟರ ಮಟ್ಟಿಗೆ ನಡೆಯುತ್ತದೆ ಎಂಬುದನ್ನು ನೀನೇ ನೋಡಿದೆ! ಪಾಂಡವರ ಸಂಬಂಧವಾಗಿ ನನಗೆ ಯಾವ ದುರುದ್ದೇಶವೂ ಇಲ್ಲ. ನಾನು ಪಾಂಡವರೊಡನೆ ಸಂಧಿಗಾಗಿ ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇನೆಂದು, ಕೌರವರೂ ಈ ರಾಜರೂ ಎಲ್ಲರೂ ಬಲ್ಲರು' ಎಂದು ಸಮಾಧಾನ ಹೇಳಿದನು. ಕೃಷ್ಣನು ಧೃತರಾಷ್ಟ್ರನನ್ನೂ ಭೀಷ್ಮಾದಿಗಳನ್ನೂ ಕುರಿತು, 'ಕೌರವ ಸಭೆಯಲ್ಲಿ ಇದುವರೆಗೆ ಏನು ನಡೆಯಿತೆಂಬುದನ್ನು ನೀವೆಲ್ಲರೂ ಕಣ್ಣಾರೆ ಕಂಡಿರಿ. ಆ ಅವಿವೇಕಿ ಮರ್ಯಾದೆ ಮೀರಿ, ರೋಷದಿಂದ ಎಷ್ಟು ಸಲ ಸಭೆ ಬಿಟ್ಟು ಎದ್ದು ಹೊರಗೆ ಹೋದನೆಂಬುದನ್ನು ನೀವೇ ನೋಡಿದಿರಿ. ಈ ಧೃತರಾಷ್ಟ್ರನಾದರೆ ತನ್ನ ಕೈ ಏನೂ ನಡೆಯುವುದಿಲ್ಲವೆಂದು ಹೇಳುತ್ತಿದ್ದಾನೆ!' ಎಂದು ಅವರೆಲ್ಲರ ಅಪ್ಪಣೆ ಪಡೆದು ಎಲ್ಲರೂ ಪಿಳಪಿಳನೆ ನೋಡುತ್ತಿರಲು ಕುಂತಿಯ ಮನೆಗೆ ಹೋದನು.

ಕೃತಿ ಕರ್ತೃ ಪರಿಚಯ



ಎ.ಆರ್.ಕೃಷ್ಣಶಾಸ್ತ್ರಿಗಳು ಚಿಕ್ಕಮಗಳೂರು ಜಿಲ್ಲೆಯ ಅಂಬಳೆಯಲ್ಲಿ 12.02.1980ರಲ್ಲಿ ಜನಿಸಿದರು. ಇವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಬಿ.ಎ., ಹಾಗೂ ಎಂ.ಎ., ಪದವಿಯನ್ನು ಪಡೆದ ಮೇಲೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮತ್ತು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು ಮತ್ತು ಪ್ರಾಧ್ಯಾಪಕರಾಗಿದ್ದು ಕನ್ನಡ ಭಾಷೆಯ ಏಳಿಗೆಗಾಗಿ ತುಂಬ ಶ್ರಮಿಸಿದ್ದಾರೆ.

8th_Kannada_Reader Term I_U4-9.indd 141 18-06-2019 10.47.14 AM

ಇವರು ಕನ್ನಡ ಕರ್ಮಯೋಗಿಗಳಲ್ಲಿ ಒಬ್ಬರು. ಕನ್ನಡ, ಸಂಸ್ಕೃತ, ಬಂಗಾಳಿ ಭಾಷೆಗಳಲ್ಲಿ ಇವರು ಪಂಡಿತರಾಗಿದ್ದರು. ಇವರು 'ಸಂಸ್ಕೃತ ನಾಟಕ', 'ಭಾಸ ಕವಿ', 'ಸರ್ವಜ್ಞ ಕವಿ', 'ನಾಗ ಮಹಾಶಯ', 'ಕಥಾಮೃತ', 'ಶ್ರೀಪತಿಯ ಕಥೆಗಳು' – ಇತ್ಯಾದಿ ಹಲವು ಕೃತಿಗಳನ್ನು ರಚಿಸಿದ್ದಾರೆ. 'ಪ್ರಬುದ್ಧ ಕರ್ನಾಟಕ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ನೆಟ್ಟು ಬೆಳೆಸಿದ ಕೀರ್ತಿ ಇವರದು. ಇವರ ಬರವಣಿಗೆ ಸರಳ, ಸ್ಪಷ್ಟ, ಸಂಗ್ರಹ, ಸರಸ ಹಾಗೂ ಸಾರಭೂತ. ಇವರ 'ಬಂಕಿಮ ಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಇವರು 1941ರಲ್ಲಿ ಹೈದರಾಬಾದಿನಲ್ಲಿ ನಡೆದ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ಕಥಾ ಭಾಗವನ್ನು ದಿವಂಗತ ಎ.ಆರ್. ಕೃಷ್ಣಶಾಸ್ತ್ರಿಗಳು ರಚಿಸಿರುವ 'ವಚನ ಭಾರತ'ದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ವೃಷ್ಣಿಗಳು–ಯದುವಂಶದವರು; ಪ್ರಾಸ–ಎಸೆಯುವ ಒಂದು ಆಯುಧ; ಕೃಷ್ಣಾಜಿನ–ಜಿಂಕೆಯ ಚರ್ಮ; ಕುಂದಣ–ಚಿನ್ನದಲ್ಲಿ ರತ್ನ ಸೇರಿಸುವುದು; ಋಜುತ್ವ–ಪ್ರಾಮಾಣಿಕತನ, ಸತ್ಯದಿಂದ ನಡೆದುಕೊಳ್ಳುವುದು; ಸತ್ಕುಲ ಪ್ರಸೂತ–ಉತ್ತಮ ಕುಲದಲ್ಲಿ ಜನಿಸಿದ; ಒಡಂಬಡಿಸು–ಒಪ್ಪಿಸು; ಈಡು ಮಾಡು–ಗುರಿ ಮಾಡು; ಕುಲಜ್ಞ–ವಂಶನಾಶಕ; ವೀರಶಯನ–ವೀರಮರಣ, ವೀರಾವೇಶದಿಂದ ಹೋರಾಡಿ ಮಡಿಯುವುದು; ಪಟ್ಟಮಹಿಷಿ–ಪಟ್ಟದ ರಾಣಿ; ಜ್ಞಾತಿ–ದಾಯಾದಿ; ನೀಗು–ಕಳೆದುಕೊಳ್ಳು; ಲೋಭ–ದುರಾಶೆ; ನಿಂದ್ಯ–ನಿಂದನೆಗೆ ಗುರಿಯಾದ; ಕುಲಗೇಡಿ–ವಂಶನಾಶಕ; ಆದಿತ್ಯ–ಸೂರ್ಯ; ಮರುತ್ತು–ವಾಯುದೇವತೆ; ವಸು–ದೇವತೆಗಳಲ್ಲಿ ಒಂದು ವರ್ಗ; ಶಾರ್ಙ್ಗ–ಕೃಷ್ಣನ ಬಿಲ್ಲಿನ ಹೆಸರು; ಧನುಸ್ಸು; ನಂದಕ–ಕೃಷ್ಣನ ಕತ್ತಿಯ ಹೆಸರು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕೃಷ್ಣ ಮತ್ತು ವಿದುರ ರಥದಲ್ಲಿ ಕುಳಿತು ಎಲ್ಲಿಗೆ ಹೊರಟರು ?
2. ಧೃತರಾಷ್ಟ್ರನು ಯಾವಾಗ ಸಂಧಿಕಾರ್ಯ ಸಾಧ್ಯವೆಂದು ಹೇಳಿದನು ?
3. ಭೀಷ್ಮ, ದ್ರೋಣರು ದುರ್ಯೋಧನನಿಗೆ ಯಾವ ಸಲಹೆ ನೀಡಿದರು ?
4. ದುರ್ಯೋಧನನು ಕೃಷ್ಣನನ್ನು ಬಂಧಿಸಲು ಯೋಚಿಸಿದ್ದೇಕೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕೃಷ್ಣನ ಉಪದೇಶಕ್ಕೆ ಧೃತರಾಷ್ಟ್ರನು ಏನು ಹೇಳಿದನು?
2. ಧೃತರಾಷ್ಟ್ರನು ಮಗನಿಗೆ ಹೇಳಿದ ಬುದ್ಧಿವಾದವೇನು?
3. ಗಾಂಧಾರಿಯು ದುರ್ಯೋಧನನಿಗೆ ಯಾವ ಬುದ್ಧಿಮಾತುಗಳನ್ನು ಹೇಳಿದಳು?
4. ಕೃಷ್ಣನನ್ನು ಕಟ್ಟಿ ಹಾಕುವ ಹವಣಿಕೆಯಲ್ಲಿದ್ದ ದುರ್ಯೋಧನನಿಗೆ ಧೃತರಾಷ್ಟ್ರ ಏನೆಂದು ಹೇಳಿದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕೃಷ್ಣನು ಧೃತರಾಷ್ಟ್ರನನ್ನು ಉದ್ದೇಶಿಸಿ ಏನು ಹೇಳಿದನು?
2. ಕೃಷ್ಣನು ದುರ್ಯೋಧನನಿಗೆ ಸಂಧಿಯ ವಿಚಾರದಲ್ಲಿ ಏನು ಹೇಳಿದನು?
3. ದುರ್ಯೋಧನನು ಸಂಧಿಯನ್ನು ವಿರೋಧಿಸಿ ಆಡಿದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.
4. ಕೃಷ್ಣನನ್ನು ಕಟ್ಟಿಹಾಕಲು ದುರ್ಯೋಧನಾದಿಗಳು ಹವಣಿಸಿದ ಸಂದರ್ಭವನ್ನು ವಿವರಿಸಿ.

8th_Kannada_Reader Term I_U4-9.indd 142 18-06-2019 10.47.14 AM

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಕೃಷ್ಣ, ಕರ್ಣ, ಭೀಷ್ಮ, ಅರ್ಜುನ, ದ್ರೌಪದಿ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ಬರೆಯಿರಿ.**

   ವಿಕಾಸನ, ಧರ್ಮಾರ್ಥ, ಕೈಯಿಂದ, ಇಂದ್ರಾದಿ, ಸಜ್ಜನ, ವೈರವನ್ನು, ಸಂಧಿಯಾಗು.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಅನುಮೋದಿಸು, ಅಪಜಯ, ಅನಾರ್ಯ, ಕ್ಷಯ, ಸಜ್ಜನ, ಶೇಷ, ದುರ್ಬಲ, ಅಶಕ್ಯ, ಅವಿವೇಕಿ, ಶ್ರೇಯಸ್ಸು.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಅಸೂಯೆ ಪಡು, ಅಲಕ್ಷ್ಯ ಮಾಡು, ಒಡಂಬಡಿಸು, ಅಲ್ಲಗಳೆ, ಕೈಗೂಡು, ಪರವಶವಾಗು, ಗಂಟುಕಟ್ಟು.

5. **ಕೆಳಗಿನ ಸಮಾಸ ಪದಗಳನ್ನು ಬಿಡಿಸಿ ಬರೆಯಿರಿ.**

   ಮುಂಗಾರು, ಭೀಷ್ಮದ್ರೋಣವಿದುರರು, ಹೆಬ್ಬಾವು, ಶಸ್ತ್ರಾಸ್ತ್ರ, ಅರಮನೆ.

ಚಟುವಟಿಕೆ

1. ಈ ಗದ್ಯಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆದು, ಶಾಲಾ ಸಮಾರಂಭದಲ್ಲಿ ಅಭಿನಯಿಸಿರಿ.
2. 'ವಚನ ಭಾರತ'ವನ್ನು ಸಂಗ್ರಹಿಸಿ ಓದಿರಿ.

8th_Kannada_Reader Term I_U4-9.indd 143 18-06-2019 10.47.14 AM

ಉಪಪಠ್ಯ

ಘಟಕ ಎಂಟು

ಸಾಲೊಮನ್‌ನ ನ್ಯಾಯ

– (ಸಂಗ್ರಹ: ಬೈಬಲ್)



ಒಬ್ಬ ರಾಜನಾದವನು ಪ್ರಜೆಗಳಿಗೆ ಉತ್ತಮ ಆಡಳಿತ ನೀಡುವುದರ ಜೊತೆಗೆ ಸರಿಯಾದ ನ್ಯಾಯವನ್ನೂ ನೀಡಬೇಕು. ಹಿಂದೆ ಇಸ್ರೇಲ್ ದೇಶದ ಈಜಿಪ್ಟಿನಲ್ಲಿ ಸಾಲೋಮನ್ ಎಂಬ ರಾಜ ನ್ಯಾಯ ನೀಡುವುದರಲ್ಲಿ ಬಹಳ ಚಾಣಾಕ್ಷನಾಗಿದ್ದನು. ಅವನು ನ್ಯಾಯಾಸ್ಥಾನದಲ್ಲಿರುವಾಗ ಇಬ್ಬರು ಮಹಿಳೆಯರು ಒಂದು ಮಗುವನ್ನು ಎತ್ತಿಕೊಂಡು ಬಂದು, ಅದು ತನ್ನದು, ಅದು ತನ್ನದು ಎಂದು ವಾದಿಸುತ್ತಾರೆ. ಆ ಮಗುವಿನ ನಿಜವಾದ ತಾಯಿಯನ್ನು ಕಂಡು ಹಿಡಿಯಲು ರಾಜನು ಒಂದು ಪರೀಕ್ಷೆ ಮಾಡುತ್ತಾನೆ. ಈ ಸನ್ನಿವೇಶವನ್ನು ಇಲ್ಲಿ ನಾವು ನೋಡಬಹುದು.



8th_Kannada_Reader Term I_U4-9.indd 144 18-06-2019 10.47.15 AM

ಬಹಳ ವರ್ಷಗಳ ಹಿಂದೆ ಜೆರೂಸಲೇಮಿನಲ್ಲಿ ದಾವಿದ್ ಎಂಬ ಅರಸನಿದ್ದನು. ಅವನು ಬಹಳ ಶೂರನೂ ವೀರನೂ ಧೈರ್ಯಶಾಲಿಯೂ ಆಗಿದ್ದನು. ಅವನಿಗೆ ವೃದ್ಧಾಪ್ಯ ಬಂದಾಗ ಅವನು ತನ್ನ ಮಗನಾದ ಸಾಲೋಮನ್‌ಗೆ ಪಟ್ಟಾಭಿಷೇಕ ಮಾಡಿದನು.

ಸಾಲೋಮನ್ನನು ಧೈರ್ಯಶಾಲಿಯೂ, ಬುದ್ಧಿವಂತನೂ, ಜ್ಞಾನಿಯೂ ಆಗಿ ರಾಜ್ಯವನ್ನು ಆಳುತ್ತಿದ್ದನು. ಒಂದು ದಿನ ಮಲಗಿದ್ದಾಗ ರಾತ್ರಿ ಕನಸಿನಲ್ಲಿ ದೇವರು ಅವನಿಗೆ ಕಾಣಿಸಿಕೊಂಡು, 'ನಿನಗೆ ಯಾವ ವರ ಬೇಕು ಕೇಳು' ಎಂದನು. ಆಗ ಸಾಲೋಮನ್ನನು, 'ಪ್ರಾಮಾಣಿಕವಾಗಿ ನೀತಿಯಿಂದಲೂ, ನಿರ್ಮಲ ಚಿತ್ತದಿಂದಲೂ ನಡೆದುಕೊಂಡು ನ್ಯಾಯಾನ್ಯಾಯಗಳನ್ನು ಕಂಡು ಹಿಡಿಯುವುದಕ್ಕೂ ಪ್ರಜೆಗಳಿಗೆ ಅನ್ಯಾಯವಾಗದಂತೆ ನ್ಯಾಯ ನೀತಿ ನೀಡಲು ನನಗೆ ವಿವೇಕವನ್ನು ದಯಪಾಲಿಸು' ಎಂದು ಕೇಳಿಕೊಂಡನು. ಆಗ ದೇವರು, ಅವನ ಭಿನ್ನಹವನ್ನು ಮೆಚ್ಚಿದನು. 'ನೀನು ದೀರ್ಘಾಯುಷ್ಯವನ್ನಾಗಲೀ, ಸಿರಿಸಂಪತ್ತನ್ನಾಗಲೀ, ಶತ್ರು ವಿನಾಶವನ್ನಾಗಲೀ ಕೇಳಿಕೊಳ್ಳಲಿಲ್ಲ. ಪ್ರಜೆಗಳಿಗೆ ನ್ಯಾಯ ನಿರ್ಣಯಿಸುವುದಕ್ಕೆ ಬೇಕಾದ ವಿವೇಕವನ್ನು ಬೇಡಿಕೊಂಡೆ. ಆದ್ದರಿಂದ ನಿನ್ನ ಭಿನ್ನಹವನ್ನು ನೆರವೇರಿಸಿದ್ದೇನೆ' ಎಂದು ಹೇಳಿ ಮಾಯವಾದನು.

ಸಾಲೋಮನ್ನನು ತನ್ನ ರಾಜ್ಯವನ್ನು ನ್ಯಾಯದಿಂದ ಆಳುತ್ತಿದ್ದನು. ಒಂದು ದಿನ ಅವನು ನ್ಯಾಯಾಸ್ಥಾನದಲ್ಲಿ ಕುಳಿತುಕೊಂಡಿರುವಾಗ ಇಬ್ಬರು ಸ್ತ್ರೀಯರು ಅರಸನ ಸನ್ನಿಧಿಗೆ ಬಂದರು. ಅವರಲ್ಲಿ ಒಬ್ಬಳು ಅರಸನಿಗೆ, 'ಒಡೆಯಾ ಕೇಳಿ, ನಾನೂ ಇವಳೂ ಒಂದೇ ಮನೆಯಲ್ಲಿ ವಾಸಿಸುತ್ತೇವೆ. ಇವಳು ಮನೆಯಲ್ಲಿದ್ದಾಗಲೇ ನಾನು ಒಂದು ಮಗುವನ್ನು ಹೆತ್ತೆ. ಮಾರನೆಯ ದಿನ ಇವಳೂ ಒಂದು ಮಗುವನ್ನು ಹೆತ್ತಳು. ಆ ಎರಡು ಮಕ್ಕಳೂ ನೋಡುವುದಕ್ಕೆ ಒಂದೇ ರೀತಿ ಇದ್ದವು. ಕಣ್ಣು, ಕಿವಿ, ಮೂಗು, ಮುಖ, ಬಣ್ಣ ಎಲ್ಲದರಲ್ಲೂ ಒಂದೇ ರೀತಿಯಾಗಿದ್ದು ಸುಂದರವಾಗಿದ್ದವು. ನಾವಿಬ್ಬರೂ ಒಟ್ಟಿಗೆ ಇದ್ದೆವು. ನಮ್ಮೀರ್ವರ ಹೊರತು ಆ ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಇವಳು ರಾತ್ರಿಯಲ್ಲಿ ತನ್ನ ಕೂಸಿನ ಮೇಲೆ ಹೊರಳಿದ್ದರಿಂದ ಅದು ಸತ್ತಿತು. ಮಧ್ಯರಾತ್ರಿಯಲ್ಲಿ ಇವಳೆದ್ದು, ನಾನು ಗಾಢನಿದ್ರೆಯಲ್ಲಿದ್ದಾಗ ನನ್ನ ಜೀವಂತ ಮಗುವನ್ನು ನನ್ನ ಬಳಿಯಿಂದ ತೆಗೆದು ತನ್ನ ಮಗ್ಗುಲಲ್ಲಿ ಇಟ್ಟುಕೊಂಡಳು. ಸತ್ತು ಹೋದ ತನ್ನ ಮಗುವನ್ನು ನನ್ನ ಮಗ್ಗುಲಲ್ಲಿಟ್ಟಳು. ನಾನು ಬೆಳಿಗ್ಗೆ ಎದ್ದು ನೋಡಿದಾಗ ಅದು ಸತ್ತಿತ್ತು. ಚೆನ್ನಾಗಿ ಬೆಳಕಿನಲ್ಲಿ ನೋಡಿದಾಗ ಅದು ನನ್ನ ಕೂಸಾಗಿರಲಿಲ್ಲ. ನನ್ನ ಮಗುವನ್ನು ನನಗೆ ಕೊಡಿಸಬೇಕು' ಎಂದು ಹೇಳಿದಳು.

ಆಗ ಎರಡನೆಯವಳು, 'ಅಯ್ಯಾ ದೊರೆಯೇ! ಬದುಕಿರುವವನು ನನ್ನ ಮಗ. ಸತ್ತಿರುವವನು ಅವಳ ಮಗ' ಎಂದು ನುಡಿದಳು. ಪುನಃ ಮೊದಲನೆಯವಳು, 'ಇಲ್ಲ ಸತ್ತದ್ದು ಅವಳ ಮಗ. ಬದುಕಿರುವವನು ನನ್ನ ಮಗ' ಎಂದಳು. ಹೀಗೆ ಅವರಿಬ್ಬರೂ ಅರಸನ ಮುಂದೆ ವಾದಿಸುತ್ತಾ ಇದ್ದರು.

ಅವರಿಬ್ಬರ ವಾದವನ್ನು ಕೇಳಿದ ಅರಸನು, 'ಜೀವದಿಂದಿರುವ ಕೂಸು ನನ್ನದು, ಸತ್ತಿರುವುದು ನಿನ್ನದು' ಎಂದು ಒಬ್ಬಳು ಹೇಳುತ್ತಾಳೆ. ಇನ್ನೊಬ್ಬಳು, 'ಸತ್ತಿರುವುದು ನಿನ್ನದು, ಜೀವದಿಂದಿರುವುದು ನನ್ನದು' ಎನ್ನುತ್ತಾಳೆ. ಆದುದರಿಂದ ಇವರಿಬ್ಬರಿಗೂ ನ್ಯಾಯ ದೊರಕಿಸಿಕೊಡಬೇಕು ಎಂದು ಹೇಳಿ ಒಂದು ಕತ್ತಿಯನ್ನು ತೆಗೆದುಕೊಂಡು ಬನ್ನಿ ಎಂದು ಸೇವಕರಿಗೆ ಹೇಳಿದನು. ಸೇವಕರು ಒಂದು ಹರಿತವಾದ ಕತ್ತಿಯನ್ನು ತಂದು ಕೊಟ್ಟರು. ಅರಸನು ಅವರಿಗೆ, 'ಮಗುವನ್ನು ಇಬ್ಬರಿಗೂ ಹಂಚಿಕೊಟ್ಟುಬಿಡೋಣ. ಜೀವದಿಂದಿರುವ ಕೂಸನ್ನು ಕಡಿದು ಎರಡು ಭಾಗ ಮಾಡಿ ಅರ್ಧವನ್ನು ಅವಳಿಗೂ, ಅರ್ಧವನ್ನು ಇವಳಿಗೂ ಕೊಡಿ' ಎಂದು ಅಪ್ಪಣೆ ಮಾಡಿದನು. ಆ ಸೇವಕರು ರಾಜನ ಅಪ್ಪಣೆಯಂತೆ ಮಗುವನ್ನು ಕತ್ತರಿಸಲು ತಯಾರಾದರು. ಆಗ ಜೀವದಿಂದಿದ್ದ ಕೂಸಿನ ನಿಜವಾದ ತಾಯಿಗೆ, ಮಗುವಿನ ವಿಷಯದಲ್ಲಿ ಕರುಳು ಕರಗಿತು. 'ನನ್ನೊಡೆಯಾ! ಮಗುವನ್ನು ಕಡಿಯಬೇಡಿ. ಬದುಕಿರುವ ಕೂಸು ಅವಳದೇ ಆಗಲಿ. ಆದ್ದರಿಂದ ಆ ಮಗುವನ್ನು ಅವಳಿಗೇ ಕೊಟ್ಟು ಬಿಡಿ. ಅದನ್ನು ಕೊಲ್ಲಬೇಡಿ' ಎಂದು ಬೇಡಿಕೊಂಡಳು.

ಎರಡನೆಯವಳು, 'ಅದು ನನ್ನ ಮಗುವೇ ಆಗಿದೆ. ಅದು ನನಗೂ ಬೇಡ. ಅವಳಿಗೂ ಬೇಡ. ನಿಮ್ಮ ತೀರ್ಪಿನಂತೆ ಅದನ್ನು ಕಡಿದು ಇಬ್ಬರಿಗೂ

8th_Kannada_Reader Term I_U4-9.indd 145 18-06-2019 10.47.15 AM

ಅರ್ಧರ್ಧ ಕೊಡಿ' ಎಂದು ಕೂಗಿಕೊಂಡಳು. ಕೂಡಲೇ ಅರಸನು, 'ಬದುಕಿರುವ ಮಗುವನ್ನು ಕೊಲ್ಲಬೇಡಿ. ಆ ಮಗುವನ್ನು ಮೊದಲನೆಯ ಸ್ತ್ರೀಗೆ ಕೊಡಿ. ಅವಳೇ ಅದರ ನಿಜವಾದ ತಾಯಿ' ಎಂದು ಆಜ್ಞಾಪಿಸಿದನು. ಏಕೆಂದರೆ ಮಗು ಎಲ್ಲಾದರೂ ಇರಲಿ, ಅದು ಚೆನ್ನಾಗಿರಬೇಕು, ಬದುಕಿರಬೇಕು ಎಂಬುದು ತಾಯಿಯ ವಾತ್ಸಲ್ಯವಾಗಿರುತ್ತದೆ. ಆದುದರಿಂದಲೇ ಅವಳು ಆ ಮಗುವನ್ನು ಕಡಿಯಲು ಬಂದಾಗ 'ಕಡಿಯಬೇಡಿ' ಎಂದು ಅವಳು ಮಗುವಿಗಾಗಿ ಬೇಡಿಕೊಂಡಳು ಎಂದು ಅರಸನು ಹೇಳಿ, ಮೊದಲನೆಯವಳಿಗೆ ಮಗುವನ್ನು ಕೊಟ್ಟು ಕಳಿಸುತ್ತಾನೆ. ಎರಡನೆಯವಳನ್ನು ಸೆರೆಮನೆಗೆ ಹಾಕುತ್ತಾನೆ.

ಈ ನ್ಯಾಯವನ್ನು ಕೇಳಿದ ಎಲ್ಲಾ ಜನರೂ ಅರಸನ ತೀರ್ಪಿಗೆ, ಅವನ ಜ್ಞಾನಕ್ಕೆ ಮೆಚ್ಚುಗೆ ಪಡುತ್ತಾರೆ.

ಕೃತಿ ಕರ್ತೃ ಪರಿಚಯ

ಇದು ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾದ ಬೈಬಲ್ಲಿನಿಂದ ಆರಿಸಿಕೊಂಡಿರುವ ಒಂದು ಕಥೆಯಾಗಿದೆ. ಇದನ್ನು ಕೆ. ಅಂತೋನಿಮುತ್ತು ಅವರು ಸಂಗ್ರಹ ಮಾಡಿಕೊಟ್ಟಿದ್ದಾರೆ. ಇವರು ತಾಳವಾಡಿಯ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸಾಹಿತ್ಯ ವಿಷಯಗಳಲ್ಲಿ ಆಸಕ್ತರಾಗಿದ್ದು ಕೆಲವು ಕೃತಿಗಳನ್ನು ಬರೆದಿದ್ದಾರೆ.

ಪದಗಳ ಅರ್ಥ

ಗಾಢನಿದ್ರೆ–ಆಳವಾದ ನಿದ್ರೆ; ವೃದ್ಧಾಪ್ಯ–ವಯಸ್ಸಾಗಿರುವುದು; ಪಟ್ಟಾಭಿಷೇಕ–ಪಟ್ಟ ಕಟ್ಟುವುದು, ರಾಜನನ್ನಾಗಿ ಮಾಡುವ ಸಮಾರಂಭ; ಬಿನ್ನಹ–ವಿಜ್ಞಾಪನೆ, ಮನವಿ; ನಿರ್ಮಲ–ಕಲ್ಮಷವಿಲ್ಲದ; ಶತ್ರು–ವೈರಿ; ಸನ್ನಿಧಿ–ಸ್ಥಳ, ಸಮೀಪ; ಕೂಸು–ಮಗು, ಎಳೆಯ ಕಂದ; ಸೆರೆಮನೆ–ಜೈಲುವಾಸ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಾಲೋಮನ್ನನ ತಂದೆಯ ಹೆಸರೇನು?
2. ಸಾಲೋಮನ್ನನಿಗೆ ರಾತ್ರಿ ಕನಸಿನಲ್ಲಿ ಬಂದ ದೇವರು ಏನು ಹೇಳಿದನು?
3. ಸಾಲೋಮನ್ನನು ದೇವರ ಬಳಿ ಏನು ಕೇಳಿಕೊಂಡನು?
4. ಸಾಲೋಮನ್ನನ ಹತ್ತಿರ ಮೊದಲ ಮಹಿಳೆ ಏನು ದೂರು ಹೇಳಿದಳು?
5. ಸ್ತ್ರೀಯರಿಬ್ಬರ ವಾದವನ್ನು ಕೇಳಿದ ಅರಸನು ಏನೆಂದು ಹೇಳಿದನು?
6. ಅರಸನು ಮಗುವನ್ನು ಯಾರಿಗೆ ಕೊಟ್ಟನು? ಏಕೆ?
7. ಮಗುವಿನ ನಿಜವಾದ ತಾಯಿ ಯಾರು? ಅದು ಹೇಗೆ ತಿಳಿಯಿತು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಒಂದನೇ ಮಹಿಳೆ ರಾಜನಲ್ಲಿ ಏನೆಂದು ಬೇಡಿಕೊಂಡಳು ?
2. ಸಾಲೊಮನ್ನನು ಹೇಗೆ ನ್ಯಾಯ ತೀರ್ಮಾನ ಮಾಡಿದನು ?

ಚಟುವಟಿಕೆ

1. ಈ ಕಥೆಯನ್ನು ಸಂಭಾಷಣಾ ರೂಪದಲ್ಲಿ ಬರೆದು ಶಾಲೆಯಲ್ಲಿ ಅಭಿನಯಿಸಿರಿ.

8th_Kannada_Reader Term I_U4-9.indd 146 18-06-2019 10.47.15 AM

ಘಟಕ ಎಂಟು

ದ್ವಿರುಕ್ತಿ ಹಾಗೂ ಜೋಡಿ ಪದಗಳು

ದ್ವಿರುಕ್ತಿ

ನಿರ್ದಿಷ್ಟ ಉದ್ದೇಶಕ್ಕಾಗಿ ಒಂದೇ ಪದವನ್ನು ಎರಡು ಬಾರಿ ಬಳಸಿದರೆ ಅದು ದ್ವಿರುಕ್ತಿ ಎನ್ನಿಸುವುದು.

ಉದಾಹರಣೆ :

ಓಡುಓಡು, ನಡೆನಡೆ, ಹೋಗುಹೋಗು, ಹೇಳುಹೇಳು, ಬಾಬಾ ಮೊದಲಾದವು.

ಜೋಡಿ ಪದ

ಕೆಲವು ಸಾರಿ ವಿಶೇಷ ಉದ್ದೇಶಕ್ಕಾಗಿ ಹೆಚ್ಚಿನ ಮಹತ್ವ ನೀಡಲು ಒಂದು ಪದದ ಜೊತೆ ಮತ್ತೊಂದು ಪದವನ್ನು ಜೋಡಿಯಾಗಿ ಬಳಸುವುದುಂಟು. ಇದನ್ನು ಜೋಡಿ ಪದ ಎನ್ನುವರು.

ಉದಾಹರಣೆ :

ಮನೆ–ಮಠ, ಕಾಡು–ಮೇಡು, ಕೆರೆ–ಕುಂಟೆ ಮೊದಲಾದವು.

ಗಮನಿಸಿ

ಅ. ಜೋಡಿ ಪದವಾಗುವಾಗ ಎರಡನೆಯ ಪದಕ್ಕೆ ಕೆಲವು ಬಾರಿ ಅರ್ಥವಿರಬಹುದು. ಇನ್ನು ಕೆಲವು ಬಾರಿ ಅರ್ಥವಿಲ್ಲದೆಯೇ ಇರಬಹುದು.

ಉದಾಹರಣೆ :

ಮನೆ–ಗಿನೆ, ಶಾಲೆ–ಗೀಲೆ, ಬೆಟ್ಟ–ಗುಡ್ಡ, ಏರಿ–ಕೇರಿ, ಹಾದಿ–ಬೀದಿ, ಊರು–ಗೀರು ಮೊದಲಾದವು.

ಆ. ಜೋಡಿ ಪದವಾಗುವಾಗ ಕೆಲವು ಬಾರಿ ವಿರುದ್ಧ ಪದಗಳ ಬಳಕೆಯೂ ಆಗುವುದು.

ಉದಾಹರಣೆ:

ಲಾಭ–ನಷ್ಟ, ತುದಿ–ಮೊದಲು, ಆದಿ–ಅಂತ್ಯ, ಬಂದು–ಹೋಗು ಮೊದಲಾದವು.

ಗಮನಿಸಿ

ದ್ವಿರುಕ್ತಿ ಹಾಗೂ ಜೋಡಿ ಪದಗಳಂತೆ ಅನುಕರಣಾವ್ಯಯಗಳೂ ಇವೆ. ವಸ್ತುತಃ ಇವು ಅವ್ಯಯಗಳು. ಒಂದು ಶಬ್ದವನ್ನು, ಭಾವವನ್ನು ಅನುಸರಿಸಿ ಹೇಳಲು ಅನುಕರಣಾವ್ಯಯವನ್ನು ಬಳಸುವರು.

ಉದಾಹರಣೆ : ಹಾವು ಸರಸರ ಹರಿದು ಹೋಯಿತು.

ರಕ್ತ ಛಿಲ್ಲನೆ ಚಿಮ್ಮಿತು.

ಕೆಲವು ಪ್ರಚಲಿತ ರೂಪಗಳು

ದ್ವಿರುಕ್ತಿ	ಜೋಡಿಪದ	ಅನುಕರಣಾವ್ಯಯ
ಬೇಗ ಬೇಗ	ಆಟ ಊಟ	ಡಬ ಡಬ
ಬಾ ಬಾ	ನಗು ನಲಿವು	ಕಿರ್ ಕಿರ್
ತಿನ್ನು ತಿನ್ನು	ಪರ ವಿರೋಧ	ಪಟ ಪಟ
ಹೆಚ್ಚು ಹೆಚ್ಚು	ಆಕಾರ ವಿಕಾರ	ಢಣ ಢಣ
ಕೇರಿ ಕೇರಿ	ಆನೆ ಅಂಬಾರಿ	ಟಿಕ್ ಟಿಕ್
ಮತ್ತೆ ಮತ್ತೆ	ಮನೆ ಮಠ	ಫಳ್ಳನೆ
ಸಾಕು ಸಾಕು	ಹೊಲ ಗದ್ದೆ	ಸರ್ರನೆ

8th_Kannada_Reader Term I_U4-9.indd 147 18-06-2019 10.47.15 AM

ಘಟಕ ಒಂಬತ್ತು

9. ಮಾನವೀಯತೆ



ಕಾವ್ಯ ಕಣಜ	:	ನೇಸರು ನಗುತಾನೆ	– ಡಾ.ದೊಡ್ಡರಂಗೇಗೌಡ
ಪೂರಕ ಪದ್ಯ	:	ನನ್ನ ದೇಹದ ಬೂದಿ	– ದಿನಕರ ದೇಸಾಯಿ
ಗದ್ಯ ವಿಹಾರ	:	ಗುರುದಕ್ಷಿಣೆ	– (ಸಂಗ್ರಹ)
ಉಪಪಠ್ಯ	:	ಮಕ್ಕಳ ಮಹತ್ವ	– ಸದಾಶಿವಮೂರ್ತಿ ಗುಮಟಾಪುರ
ವ್ಯಾಕರಣ	:	ಗಾದೆಗಳು	

8th_Kannada_Reader Term I_U4-9.indd 148 18-06-2019 10.47.15 AM

ಕಾವ್ಯ ಕಣಜ

ಘಟಕ ಒಂಬತ್ತು

ನೇಸರು ನಗುತಾನೆ

– ಡಾ. ದೊಡ್ಡರಂಗೇಗೌಡ



'ರವಿ ಕಾಣದ್ದನ್ನು ಕವಿ ಕಂಡ' ಎಂಬುದು ಹಿರಿಯರ ಜಾಣ್ನುಡಿ. ಕಾರಣ ರವಿಯ ಕಣ್ಣಿಗೆ ಕಾಣದ ವಸ್ತುಗಳನ್ನೂ ಕವಿ ತನ್ನ ಪ್ರತಿಭೆಯಿಂದ ಕಂಡು ಅದರ ಸೊಬಗನ್ನು ಅನುಭವಿಸಿ ಇತರರಿಗೂ ತನ್ನ ಕಾವ್ಯದ ಮೂಲಕ ಉಣಬಡಿಸುತ್ತಾನೆ. ಪ್ರಕೃತಿಯು ಮಾನವ ಕುಲಕ್ಕೆ ಒಂದು ವರವಾಗಿದೆ. ಸೂರ್ಯ ಚಂದ್ರರು, ಗಾಳಿ ನೀರು, ಬುವಿಬಾನು, ಗಿಡಮರಗಳು, ಪ್ರಾಣಿ ಪಕ್ಷಿಗಳು ನಿಸ್ವಾರ್ಥವಾಗಿ ಮನುಕುಲಕ್ಕೆ ನೆರವಾಗುತ್ತಿವೆ. ಆದರೆ ಮಾನವ ಇದನ್ನು ಮರೆತು ಬದುಕುತ್ತಿರುವುದು ಒಂದು ವಿಪರ್ಯಾಸವಾಗಿದೆ.

ಪ್ರಸ್ತುತ ಕವನದಲ್ಲಿ ಕವಿ ಸೂರ್ಯೋದಯದ ರಸಮಯ ಸಂದರ್ಭವನ್ನು ಬಣ್ಣಿಸುತ್ತಾ, ನಾವು ಪ್ರಕೃತಿಯಲ್ಲಿ ಪರಮಾತ್ಮನನ್ನು ಕಾಣುತ್ತಾ ಮಾನವೀಯ ಗುಣಗಳಿಂದ ಕೂಡಿ ತೃಪ್ತಿಯಿಂದ ಜೀವಿಸುವಂತೆ ಕರೆ ನೀಡುತ್ತಾರೆ.



8th_Kannada_Reader Term I_U4-9.indd 149 18-06-2019 10.47.15 AM

ತೇರ ಏರಿ ಅಂಬರದಾಗೆ ನೇಸರ ನಗುತಾನೆ
ಮರಗಿಡ ತೂಗ್ಯಾವೆ – ಹಕ್ಕಿ ಹಾಡ್ಯಾವೆ |ಪಲ್ಲವಿ|

ಬೀರ್ಯಾವೇ – ಚೆಲುವ ಬೀರ್ಯವೇ
ಬಾ ನೋಡಿ ನಲಿಯೋಣ ತಮ್ಮಾ
ನಾವು ಹಾಡಿ ಕುಣಿಯೋಣ ತಮ್ಮಾ |ಅನುಪಲ್ಲವಿ|

ಬೇಲಿ ಮ್ಯಾಗೆ ಬಣ್ಣಬಣ್ಣದ ಹೂವು ಅರಳ್ಯಾವೆ
ಆ ಹೂವಿನ ತುಂಬ ಸಣ್ಣ ಚಿಟ್ಟೆ ಕುಂತಾವೆ –
ಬಾಗಿ ಬೀಗಿ ಅತ್ತ ಇತ್ತ ಬಾಳೆ ಬಳುಕ್ಯಾವೆ
ಆ ಬಾಳೆವನವೇ ನಕ್ಕು ಹಣ್ಣು ತಂದಾವೆ –
ಕುಂತರೆ ಸೆಳೆವಾ
ಸಂತಸ ತರುವಾ
ಹೊಂಗೆ ಟೊಂಗೆ ತೂಗಿ ಬಾಗಿ – ಗಾಳಿ ಬೀಸ್ಯಾವೆ |1|

ಭೂಮಿ ಮ್ಯಾಗೆ ಹಚ್ಚ ಹಚ್ಚಗೆ ಹಾದಿ ತೆರೆದಾವೆ
ಆ ಹಾದಿ ಅಕ್ಕ– ಪಕ್ಕ ಬಳ್ಳಿ ಬೆಳೆದಾವೆ –
ಸಾಲು ಸಾಲು ಬೆಟ್ಟ–ಗುಡ್ಡ ಮೌನ ತಳೆದಾವೆ
ಆ ಮೌನದ ಗಾನ ಎಲ್ಲರ ಮನಸ ಸೆಳೆದಾವೆ –
ಭಾವ ಬಿರಿದು
ಹತ್ತಿರ ಕರೆದು
ಮಾವು–ಬೇವು, ತಾಳೆ–ತೆಂಗು ಲಾಲಿ ಹಾಡ್ಯಾವೆ |2|

ಭೇದ ಭಾವ ಮುಚ್ಚು ಮರೆ ಒಂದೂ ಮಾಡ್ದೇನೆ
ಆ ಸೂರ್ಯ ಒಂದೇ ಬೆಳಕ ನಮಗೆ ನೀಡ್ಯಾನೆ –
ಗಾಳಿ ನೀರು ಎಲ್ಲ ಕೊಟ್ಟು ಜಗವ ನಡೆಸ್ಯಾನೆ
ಆ ಸಿರಿಯ ಹಂಚಿಕೊಂಡರೆ ಬಾಳು ಸವಿಜೇನೆ –
ಪ್ರೀತಿ ಬೆಳೆದು
ಸ್ನೇಹ ತಳೆದು
ನಗ್ತಾ ನಗ್ತಾ ನಾವು ನೀವು – ಸವಿಯುವ ಸುಖವನ್ನೆ |3|

8th_Kannada_Reader Term I_U4-9.indd 150 18-06-2019 10.47.15 AM

ಕವಿ–ಕಾವ್ಯ ಪರಿಚಯ



ಡಾಕ್ಟರ್ ದೊಡ್ಡರಂಗೇಗೌಡರು ಪ್ರಸಿದ್ಧ ಸಾಹಿತಿ ಮತ್ತು ಲೇಖಕರು. ಇವರು ಫೆಬ್ರವರಿ 07, 1946ರಂದು ಜನಿಸಿದರು. ಇವರು ಕರ್ನಾಟಕ ರಾಜ್ಯದ ಹಲವಾರು ವಿದ್ಯಾಲಯಗಳಲ್ಲಿ ಕನ್ನಡ ಉಪನ್ಯಾಸಕರಾಗಿಯೂ, ಕನ್ನಡ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜಗಲಿ ಹತ್ತಿ ಇಳಿದು, ಗೀತ ಗಾರುಡಿ, ಹೋಳಿ ಹುಣ್ಣಿಮೆ, ಮಾವು ಬೇವು, ಪ್ರೀತಿ ಪ್ರಗಾಥ ಇತ್ಯಾದಿ ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ. ಇವರು ಚಲನಚಿತ್ರ ಗೀತೆಗಳನ್ನು ರಚಿಸಿ ಪ್ರಖ್ಯಾತರಾಗಿದ್ದಾರೆ. ಇವರ ಕಣ್ಣು ನಾಲಿಗೆ ಎನ್ನುವ ಕೃತಿಗೆ 1972ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಆಲೆಮನೆ ಎಂಬ ಚಲನಚಿತ್ರಕ್ಕೆ 1982ರಲ್ಲಿ ಅತ್ಯುತ್ತಮ ಗೀತ ರಚನಕಾರರೆಂದು ಕರ್ನಾಟಕ ರಾಜ್ಯ ಸರಕಾರ ಇವರನ್ನು ಗೌರವಿಸಿದೆ.

ಪದಗಳ ಅರ್ಥ

ತೇರು–ರಥ; ಅಂಬರ–ಆಕಾಶ; ನೇಸರು–ಸೂರ್ಯ; ಹಕ್ಕಿ–ಪಕ್ಷಿ; ಚೆಲುವು–ಸೌಂದರ್ಯ; ನಲಿ–ಸಂತೋಷಪಡು; ಹೂವು–ಪುಷ್ಪ; ಸಂತಸ–ಸಂತೋಷ; ಭೂಮಿ–ಇಳೆ; ಗಾನ–ಸಂಗೀತ; ಜಗ–ಪ್ರಪಂಚ; ಸಿರಿ–ಐಶ್ವರ್ಯ, ಸಂಪತ್ತು; ಸವಿ–ರುಚಿ; ಸ್ನೇಹ–ಗೆಳೆತನ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ನೇಸರನು ಎಲ್ಲಿ ನಗುತ್ತಾನೆ ಎಂದು ಕವಿ ಹೇಳುತ್ತಾರೆ ?
2. ಯಾವುದು ತೂಗಿ ಉಯ್ಯಾಲೆಯಾಡುತ್ತಿದೆ ?
3. ಯಾವುದನ್ನು ನೋಡಿ ನಲಿಯೋಣ ಎಂದಿದ್ದಾರೆ ಕವಿ ?
4. ಬಣ್ಣಬಣ್ಣದ ಹೂಗಳು ಎಲ್ಲಿ ಅರಳಿ ನಿಂತಿವೆ ?
5. ಬಾಳೆಯ ಗಿಡಗಳು ಹೇಗೆ ಬಳುಕುತ್ತಿವೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸೂರ್ಯೋದಯದ ಚೆಲುವಿನಿಂದ ನಿಸರ್ಗದಲ್ಲಿ ಏನೆಲ್ಲ ಸೊಬಗು ತುಂಬಿದೆ?
2. ಅರಳಿ ನಿಂತ ಹೂಗಿಡಗಳಿಗೆ ಚಿಟ್ಟೆಗಳು ಏನು ಮಾಡುತ್ತಿವೆ ?
3. ಬೆಟ್ಟಗುಡ್ಡಗಳ ಸಾಲು ಯಾವ ರೀತಿಯಲ್ಲಿ ನಿಂತಿದೆ ಎಂದು ಕವಿ ತಿಳಿಸಿದ್ದಾರೆ ?
4. ಯಾವ ಯಾವ ಗಿಡಮರಗಳು ಲಾಲಿ ಹಾಡುತ್ತಿವೆ ಎಂದು ಕವಿ ಬಣ್ಣಿಸಿದ್ದಾರೆ ?
5. ಸೂರ್ಯನು ಯಾವ ರೀತಿಯ ಬೆಳಕನ್ನು ಜಗತ್ತಿಗೆ ನೀಡುತ್ತಿದ್ದಾನೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನೇಸರು ನಗುತಾನೆ ಕವನದಲ್ಲಿ ಕವಿ ಸೂರ್ಯೋದಯವನ್ನು ಹೇಗೆ ಬಣ್ಣಿಸಿದ್ದಾರೆ ?
2. ಸೂರ್ಯೋದಯದ ಸಮಯದಲ್ಲಿ ಪ್ರಕೃತಿ ದೇವಿಯು ಯಾವ ರೀತಿಯ ಚೆಲುವಿನಿಂದ ಶೋಭಿಸುತ್ತಾಳೆ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ.**
   ಅಂಬರ, ನೇಸರ, ವನ, ಗಾನ, ಮೌನ, ಜಗ, ಸಿರಿ.
2. **ಕೆಳಗಿನ ಗ್ರಾಮ್ಯಪದಗಳ ಗ್ರಾಂಥಿಕ ರೂಪವನ್ನು ಬಿಡಿಸಿ ಬರೆಯಿರಿ.**
   ತೂಗ್ಯಾವೆ, ಹಾಡ್ಯಾವೆ, ಅರಳ್ಯಾವೆ, ಮ್ಯಾಗೆ,
3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ನಗು, ಸಂತಸ, ಹತ್ತಿರ, ಬೆಳಕು, ಪ್ರೀತಿ, ಸುಖ, ಸವಿ.
4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**
   ಭೇದ–ಭಾವ, ಮುಚ್ಚು–ಮರೆ, ಬೆಟ್ಟ–ಗುಡ್ಡ, ಅತ್ತ–ಇತ್ತ.

ಚಟುವಟಿಕೆ

1. ಸೂರ್ಯೋದಯ, ಸೂರ್ಯಾಸ್ತಗಳನ್ನು ಕುರಿತು ಇತರ ಕವಿಗಳು ಬರೆದಿರುವ ಕವನಗಳನ್ನು ಸಂಗ್ರಹಿಸಿ.
2. ಪ್ರಕೃತಿಯಲ್ಲಿನ ಸಹಜ ಸೌಂದರ್ಯ ಚಿತ್ರಗಳನ್ನು ಸಂಗ್ರಹಿಸಿ.

8th_Kannada_Reader Term I_U4-9.indd 151 18-06-2019 10.47.15 AM

ಪೂರಕ ಪದ್ಯ

ಘಟಕ ಒಂಬತ್ತು

ನನ್ನ ದೇಹದ ಬೂದಿ

– ದಿನಕರ ದೇಸಾಯಿ



'ಪರೋಪಕಾರಾರ್ಥಂ ಇದಂ ಶರೀರಂ' ಎಂಬುದು ಆರ್ಯೋಕ್ತಿ. ಪರೋಪಕಾರಕ್ಕಾಗಿಯೇ ನಾವು ಧರೆಯಲ್ಲಿ ಮಾನವರಾಗಿ ಜನಿಸಿದ್ದೇವೆ. ಪರೋಪಕಾರವಿಲ್ಲದ ಬದುಕು ಸಲ್ಲದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವಮಾನ ಕಾಲದಲ್ಲಿ ಮಾನವೀಯತೆಯಿಂದ ಬದುಕಿ, ಪರೋಪಕಾರಿಯಾಗಿ ಬದುಕಬೇಕಾದುದು ಅನಿವಾರ್ಯ. ಪ್ರಸ್ತುತ ಕವನದಲ್ಲಿ ಕವಿ ತಾನು ವಿಧಿವಶನಾದ ಮೇಲೂ ತನ್ನ ದೇಹವು ಪರೋಪಕಾರಿಯಾಗಲೆಂದು ಬಯಸಿರುವುದು ಉತ್ತಮ ನಿದರ್ಶನವಾಗಿದೆ.



8th_Kannada_Reader Term I_U4-9.indd 152 18-06-2019 10.47.15 AM

ನನ್ನ ದೇಹದ ಬೂದಿ ಗಾಳಿಯಲಿ ತೂರಿ ಬಿಡಿ
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ
ಬೂದಿ ಗೊಬ್ಬರದಿಂದೆ ತೆನೆಯೊಂದು ನೆಗೆದು ಬರೆ
ಧನ್ಯವಾಯಿತು ಹುಟ್ಟು, ಸಾವಿನಲ್ಲಿ |1|

ನನ್ನ ದೇಹದ ಬೂದಿ ಹೊಳೆಯಲ್ಲಿ ಹರಿಯ ಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ
ಮುಷ್ಟಿ ಬೂದಿಯ ತಿಂದು ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು, ಸಾವಿನಲ್ಲಿ |2|

ನನ್ನ ದೇಹದ ಬೂದಿ ಕೊಳದಲ್ಲಿ ಬೀರಿ ಬಿಡಿ
ತಾವರೆಯು ದಿನದಿನವು ಅರಳುವಲ್ಲಿ
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ
ಧನ್ಯವಾಯಿತು ಹುಟ್ಟು, ಸಾವಿನಲ್ಲಿ |3|

ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ
ನಿಜ ಸೇವೆ ಮಾಡಲಿಕೆ ಬರಲಿ ಮುಂದು |4|

ಕವಿ–ಕಾವ್ಯ ಪರಿಚಯ



ಹೊಸಗನ್ನಡ ಸಾಹಿತ್ಯದಲ್ಲಿ ಶಿಶುಗೀತೆಗಳನ್ನು ಬರೆದ ಮೊದಲಿಗರಲ್ಲಿ ದಿನಕರ ದೇಸಾಯಿಯವರೂ ಒಬ್ಬರು. ಇವರು ಕುಮಟ ತಾಲೂಕಿನ ಅಂತರವಳ್ಳಿ ಗ್ರಾಮದ ಹಂಡದೊಕ್ಕಲ ದೇಸಾಯಿ ಮನೆತನಕ್ಕೆ ಸೇರಿದವರು. 10.09.1909ರಂದು ಅಂಕೋಲದಲ್ಲಿ ಜನಿಸಿದರು. ಇವರ ತಂದೆ ಶಾಲಾ ಶಿಕ್ಷಕ ಶ್ರೀ ದತ್ತಣ್ಣನವರು. ಇವರ ಪತ್ನಿಯ ಹೆಸರು ಇಂದು. ಇವರ ಚುಟುಕುಗಳು ತುಂಬ ಶ್ರೇಷ್ಠವಾದವುಗಳು. ಎಂ.ಎ., ಎಲ್.ಎಲ್.ಬಿ., ಪದವೀಧರರಾಗಿದ್ದರು. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಸದಸ್ಯರಾಗಿದ್ದರು. 1928ರಿಂದಲೇ ಪದ್ಯ ರಚಿಸತೊಡಗಿದರು. ಕರ್ನಾಟಕದ ಇತಿಹಾಸ'ವನ್ನು ಕುರಿತು ಇಂಗ್ಲಿಷ್‌ನಲ್ಲೂ; 'ಭಾರತೀಯ ಪ್ರಾಥಮಿಕ

8th_Kannada_Reader Term I_U4-9.indd 153 18-06-2019 10.47.16 AM

ಶಿಕ್ಷಣ ಹಾಗೂ ಕೂಲಿಕಾರರ ಸಮಸ್ಯೆಗಳು' ಎಂಬ ಎರಡು ದೊಡ್ಡ ಗ್ರಂಥಗಳನ್ನು ಇವರು ಪ್ರಕಟಿಸಿದ್ದಾರೆ. ಇವರ ಮಕ್ಕಳ ಕವಿತಾ ಪುಸ್ತಕಗಳಿಗೆ ಮುಂಬಯಿ ಸರ್ಕಾರವು ಗೌರವ ಧನವಿತ್ತು ಮನ್ನಿಸಿದೆ. ಇವರು ಕಾರ್ಮಿಕ ಚಳುವಳಿಯ ಮುಖಂಡರಲ್ಲೊಬ್ಬರು. ಜಿನೀವಾದಲ್ಲಿ ನಡೆದ ಅಂತರರಾಷ್ಟ್ರೀಯ ಕೂಲಿಕಾರರ ಸಮ್ಮೇಳನಕ್ಕೆ ಇವರು ಕೂಲಿಕಾರರ ಪ್ರತಿನಿಧಿಯಾಗಿ ಭಾರತದ ಪರವಾಗಿ ಭಾಗವಹಿಸಿದ್ದರು. 'ದಿ ಕೆನರಾ ವೆಲ್‌ಫೇರ್ ಟ್ರಸ್ಟ್' ಎಂಬ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ಅದರ ಮುಖಾಂತರ ಕೆಲವು ಹೈಸ್ಕೂಲುಗಳನ್ನೂ, ವೃತ್ತಿ ಶಿಕ್ಷಣಾಲಯಗಳನ್ನು ನಡೆಸಿದರು. ಹೀಗೆ ಇವರು ಶಿಕ್ಷಣ ತಜ್ಞರಾಗಿಯೂ, ಕಾರ್ಮಿಕ ಮುಖಂಡರಾಗಿಯೂ, ಕವಿಯಾಗಿಯೂ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದರು. ಇವರು ಕನ್ನಡದ ಚುಟುಕು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹತ್ವದ ಕವಿಯಾಗಿದ್ದಾರೆ. ಆದುದರಿಂದ ಇವರಿಗೆ 'ಚುಟುಕು ಬ್ರಹ್ಮ' ಎಂಬ ಬಿರುದೂ ಲಭಿಸಿದೆ. ಚುಟುಕುಗಳ ಮೂಲಕ ಜೀವನದ ಸತ್ಯವನ್ನು ಸರಳವಾಗಿ ತೆರೆದು ತೋರುವ ಪ್ರಯತ್ನವನ್ನು ಇವರು ಮಾಡಿದ್ದಾರೆ.

ಭೂಮಿಯಲ್ಲಿ ಉಸಿರಿರುವಾಗ ಮಾಡುವ ಸಮಾಜ ಸೇವೆ ಹಿರಿದಾದುದು, ನಿಜ. ಅದಕ್ಕಿಂತಲೂ ಸತ್ತ ಮೇಲೂ ತಮ್ಮ ಬಾಳು ಧನ್ಯವಾಗಲು ಏನು ಮಾಡಬೇಕೆಂದು ಹಾತೊರೆಯುವುದು ಅತ್ಯಂತ ಶ್ಲಾಘ್ಯ ವಿಚಾರ. ಇಂದು ಮಾನವ ಸತ್ತ ಮೇಲೆ, ತನ್ನ ಕಣ್ಣು ಹಾಗೂ ದೇಹದ ಇನ್ನಿತರ ಭಾಗಗಳನ್ನು ಇತರರಿಗೆ ದಾನ ಮಾಡುವುದಾಗಿ ಉಯಿಲು ಬರೆದಿಡುವುದನ್ನು ಕಾಣುತ್ತೇವೆ. ಅದು ಇಂದು ಬದುಕಿನಲ್ಲಿ ಕಂಡುಕೊಂಡ ವೈಜ್ಞಾನಿಕ ಸತ್ಯದ ಪ್ರಭಾವದಿಂದ ಮೂಡಿದ ವಿಚಾರ. ಆದರೆ ತಮ್ಮ ದೇಹದ ಭಾಗಗಳನ್ನು ಸತ್ತ ಮೇಲೆ ಕತ್ತರಿಸಿ ತೆಗೆಯುವುದು ಮಹಾಪಾಪ ಎಂದು ತಿಳಿದಿದ್ದ ಕಾಲಘಟ್ಟದಲ್ಲಿ ತಮ್ಮ ದೇಹದ ಬೂದಿಯನ್ನು ಪಾಪ ಪರಿಹಾರಕ್ಕಾಗಿ ಪುಣ್ಯ ನದಿಗಳಲ್ಲಿ ಹರಿಯಬಿಡಿ ಎನ್ನದೆ, ಗಾಳಿ, ಹೊಳೆ, ಕೊಳಗಳಲ್ಲಿ ತೂರಿಬಿಡಿ ಅದರಿಂದ ಕೆಲವರಿಗಾದರೂ ಸಹಾಯವಾಗಬಹುದೆಂದು ಭಾವಿಸುವುದು ಕವಿಯ ಉತ್ತಮ ಮನಸ್ಸಿಗೆ ನಿದರ್ಶನವಾಗಿದೆ.

ಪದಗಳ ಅರ್ಥ

ಪರೋಪಕಾರ–ಪರರಿಗೆ ಉಪಕಾರ ಮಾಡುವುದು, ಇತರರಿಗೆ ಸಹಾಯ ಮಾಡುವುದು; ಧರೆ–ಭೂಮಿ; ಜೀವಮಾನ–ಜೀವಿತಾವಧಿ, ಬದುಕಿರುವ ಸಮಯ; ಸಲ್ಲ–ಸಲ್ಲದು, ಸರಿಯಲ್ಲ; ವಿಧಿವಶ–ಮರಣಹೊಂದು, ನಿಧನವಾಗು; ತೂರು–ಎಸೆ, ಚೆಲ್ಲು; ಹೊಳೆ–ನದಿ; ಮುಷ್ಟಿ–ಒಂದು ಕೈಹಿಡಿ; ತೆನೆ–ಧಾನ್ಯದ ಹೊಡೆ, ಕದಿರು; ನೆಗೆ–ಮೇಲಕ್ಕೆ ಹಾರು, ಮೇಲೆ ಬರುವುದು, ಕಾಣಿಸಿಕೊಳ್ಳುವುದು; ಬೀರು=ಎಸೆ, ಚೆಲ್ಲು, ತೂರು; ಪಂಕಜ–ತಾವರೆ, ಸರೋಜ; ಮೂಡು–ಹುಟ್ಟು; ಸ್ವಾರ್ಥ–ಸ್ವಹಿತ, ತನ್ನ ಬಗ್ಗೆ ಮಾತ್ರ ಯೋಚಿಸುವುದು; ತನಗೆ ಪ್ರಯೋಜನವಾಗುವಂತೆ ನಡೆದುಕೊಳ್ಳುವುದು; ವ್ಯರ್ಥ–ನಿರರ್ಥಕ, ಉಪಯೋಗವಿಲ್ಲದ; ಚುಟುಕುಪದ್ಯ–ಚಿಕ್ಕ ಪದ್ಯ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ದೇಹದ ಬೂದಿಯನ್ನು ಗಾಳಿಯಲ್ಲಿ ತೂರಿದರೆ ಏನು ಬೆಳೆಯುತ್ತದೆ?
2. ದೇಹದ ಬೂದಿಯನ್ನು ತಿಂದ ಮೀನು ಹೇಗೆ ಬೆಳೆಯುತ್ತದೆ?
3. ದೇಹದ ಬೂದಿಯನ್ನು ಕೊಳದಲ್ಲಿ ಬೀರಿದರೆ ಏನು ಮೂಡುವುದೆಂದು ಕವಿ ಹೇಳುತ್ತಾರೆ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸತ್ತ ಮೇಲೆ ದೇಹದ ಬೂದಿಯ ಮೂಲಕ ಜನ ಸೇವೆಯನ್ನು ಹೇಗೆ ಮಾಡಬಹುದೆಂದು ಕವಿ ತಿಳಿಸಿದ್ದಾರೆ?
2. ನನ್ನ ದೇಹದ ಬೂದಿ ಕವನದ ಆಶಯವೇನು ?

ಚಟುವಟಿಕೆ

1. ನನ್ನ ಜೀವನದ ಧ್ಯೇಯ ಎಂಬ ಶೀರ್ಷಿಕೆಯಲ್ಲಿ ಒಂದು ಕಿರು ಪ್ರಬಂಧವನ್ನು ಬರೆಯಿರಿ.
2. ದಿನಕರ ದೇಸಾಯಿಯವರು ಬರೆದ ಇತರ ಪುಸ್ತಕಗಳನ್ನು ಓದಿ.

8th_Kannada_Reader Term I_U4-9.indd 154 18-06-2019 10.47.16 AM

ಗದ್ಯ ವಿಹಾರ


ಘಟಕ ಒಂಬತ್ತು

ಗುರು ದಕ್ಷಿಣೆ

– (ಸಂಗ್ರಹ)



ರಾಮಾಯಣ ಹಾಗೂ ಮಹಾಭಾರತ ಗ್ರಂಥಗಳು ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಮೇರುಕೃತಿಗಳಾಗಿವೆ. ಮಹಾಭಾರತ ಕುರುವಂಶದ ಅರಸರ ಕಥೆಯಾಗಿ ಕಂಡು ಬಂದರೂ, ಅದರಲ್ಲಿ ಅನೇಕ ಉಪಕಥೆಗಳೂ ಹೆಣೆದುಕೊಂಡು, ಧರ್ಮ ಜಿಜ್ಞಾಸೆಯೂ ಬೆರೆತಿದೆ. ಈ ಮಹಾಕೃತಿಯ ಅರ್ಧ ಭಾಗ ಧರ್ಮ, ನೀತಿ ಹಾಗೂ ಮಾನವೀಯತೆಯ ಪ್ರತೀಕವಾದ ಕಥೆಗಳೇ ತುಂಬಿಕೊಂಡಿದೆ. ಇದು ಭಾರತೀಯ ಸಂಸ್ಕೃತಿಯ ವಿಶ್ವಕೋಶವೂ ಹೌದು. ಪ್ರಸ್ತುತ ಕಥೆಯು ಬೇಡರ ಹುಡುಗನಾದ ಏಕಲವ್ಯ ತಾನು ವಾಸಿಸುವ ತಾಣವಾದ ಕಾಡನ್ನು, ಕಾಡಿನಲ್ಲಿನ ಸಾಧು ಪ್ರಾಣಿಗಳನ್ನು ರಕ್ಷಿಸಲು ಬಿಲ್ವಿದ್ಯೆ ಕಲಿತು ಮಾನವೀಯತೆಯನ್ನು ಮೆರೆದ ಸನ್ನಿವೇಶದ ನಿರೂಪಣೆಯಾಗಿದೆ.



8th_Kannada_Reader Term I_U4-9.indd 155 18-06-2019 10.47.16 AM

ಒಂದು ದಿನ ಬೆಳಿಗ್ಗೆ ಗುರು ದ್ರೋಣಾಚಾರ್ಯರು ತಮ್ಮ ಆಶ್ರಮದಲ್ಲಿ ರಾಜಕುಮಾರರಿಗೆ ಬಿಲ್ಲು ವಿದ್ಯೆಯನ್ನು ಕಲಿಸುತ್ತಿದ್ದರು. ರಾಜಕುಮಾರರು ತುಂಬ ಆಸಕ್ತಿಯಿಂದ ಗುರುಗಳು ಹೇಳಿದ್ದನ್ನು ಕೇಳುತ್ತಿದ್ದರು ಮತ್ತು ಅವರ ಮಾರ್ಗದರ್ಶನದಲ್ಲಿ ಬಾಣ ಪ್ರಯೋಗ ಮಾಡುತ್ತಿದ್ದರು.

ಅಷ್ಟರಲ್ಲಿ ಒಬ್ಬ ಯುವಕ ಗುರು ದ್ರೋಣಾಚಾರ್ಯರಲ್ಲಿಗೆ ಬಂದು ಶ್ರದ್ಧೆಯಿಂದ ನಮಸ್ಕರಿಸಿದ. ಶಾಮಲ ಬಣ್ಣದ ಯುವಕ. ಕಾಡು ಮನುಷ್ಯನಂತೆ ಕಾಣುತ್ತಿದ್ದ. ತಲೆಗೂದಲು ಉದ್ದವಾಗಿ ಬೆಳೆದಿತ್ತು. ಮೈಮೇಲೆ ಲಂಗೋಟಿಯನ್ನು ಬಿಟ್ಟು ಬೇರೆ ಬಟ್ಟೆ ಇರಲಿಲ್ಲ.

ದ್ರೋಣರು ಚಕಿತರಾಗಿ ಯುವಕನನ್ನು ನೋಡಿದರು. ಆಶೀರ್ವದಿಸಿದರು. 'ನೀನು ಯಾರು ಯುವಕ? ಇಲ್ಲಿಗೇಕೆ ಬಂದೆ...?' ಎಂದು ದ್ರೋಣರು ಕೇಳಿದರು.

'ನಾನು ಬೇಡರವನು. ಕಾಡಿನಲ್ಲಿ ವಾಸಿಸುತ್ತೇನೆ. ನನ್ನ ಹೆಸರು ಏಕಲವ್ಯ. ಬಿಲ್ಲು ವಿದ್ಯೆ ಕಲಿಯುವ ಮಹದಾಸೆಯಿಂದ ತಮ್ಮಲ್ಲಿಗೆ ಬಂದಿದ್ದೇನೆ. ಕೃಪೆ ಮಾಡಿ ನನಗೆ ವಿದ್ಯೆಯನ್ನು ಕಲಿಸಿ ಕೊಡಿ' ಯುವಕ ವಿನೀತ ಧ್ವನಿಯಲ್ಲಿ ಕೈಮುಗಿದು ಕೇಳಿದ.

ದ್ರೋಣಾಚಾರ್ಯರು ಯುವಕನನ್ನು ಎವೆಯಿಕ್ಕದೆ ನೋಡಿದರು. 'ನೀನು ಬೇಡರ ಕುಲದವನು. ನಿನಗೆ ನಾನು ವಿದ್ಯೆ ಕಲಿಸಲಾರೆ. ನಾನು ರಾಜಕುಮಾರರಿಗೆ ಗುರು. ರಾಜಕುಮಾರರನ್ನು ಬಿಟ್ಟರೆ ನಾನು ಬೇರೆ ಯಾರಿಗೂ ಬಿಲ್ಲು ವಿದ್ಯೆ ಕಲಿಸುವುದಿಲ್ಲ'

'ನಾನು ರಾಜಕುಮಾರ ಅಲ್ಲ, ಕಾಡಿನಲ್ಲಿ ವಾಸಿಸುವ ಬೇಡರ ಕುಲದ ಒಬ್ಬ ಮನುಷ್ಯ. ನನಗೆ ಬಿಲ್ಲು ವಿದ್ಯೆ ಕಲಿಯುವ ಆಸೆಯಿದೆ. ತಮ್ಮ ಬಳಿ ತುಂಬ ಆಸೆಯಿಟ್ಟುಕೊಂಡು ಬಂದಿದ್ದೇನೆ. "ಇಲ್ಲ" ಎನ್ನಬೇಡಿ. ಕೃಪೆ ಮಾಡಿ' ಏಕಲವ್ಯ ಪ್ರಾರ್ಥಿಸಿದ.

ದ್ರೋಣರು ಒಂದು ಕ್ಷಣ ಯೋಚಿಸಿ ಹೇಳಿದರು : 'ವಿದ್ಯೆ ಕಲಿಯುವ ನಿನ್ನ ಆಸಕ್ತಿಯನ್ನು ಕಂಡು ನನಗೆ ಸಂತೋಷವಾಗಿದೆ. ಆದರೆ ರಾಜಕುಮಾರರನ್ನು ಬಿಟ್ಟು ಅನ್ಯರಿಗೆ ವಿದ್ಯೆ ಕಲಿಸುವುದಿಲ್ಲವೆಂದು ನಿರ್ಧರಿಸಿದ್ದೇನೆ'.

'ದ್ರೋಣಾಚಾರ್ಯರು ಮಹಾನ್ ಧನುರ್ಧಾರರು ಎಂದು ಕೇಳಿದ್ದೇನೆ. ಆದರೆ ರಾಜಕುಮಾರರಂತಹ ಸಿರಿವಂತರಿಗೆ ಮಾತ್ರ ವಿದ್ಯೆ ಕಲಿಸಿದರೆ ನಮ್ಮಂತಹ ಬಡ ಜನರಿಗೆ ವಿದ್ಯೆ ಕಲಿಸುವವರು ಯಾರು? ತಮ್ಮ ವಿದ್ಯೆ ಕೇವಲ ಶ್ರೀಮಂತರ ಪಾಲಾಗುತ್ತದೆ... ಅದು ಸರಿಯಲ್ಲ. ವಿದ್ಯೆ ಕಲಿಯುವ ಮಹದಾಸೆ ಹೊತ್ತು ತಮ್ಮಲ್ಲಿಗೆ ಬರುವವರಿಗೆ ತಾವು ಮುಕ್ತವಾಗಿ ವಿದ್ಯೆ ಹೇಳಿಕೊಡಬೇಕಲ್ಲವೇ?' ಏಕಲವ್ಯ ಅಳುಕದೆ ಹೇಳಿದ.

ದ್ರೋಣರು ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಮೌನವಾಗಿದ್ದರು. ಏಕಲವ್ಯ ಒಂದು ಕ್ಷಣ ಯೋಚಿಸಿ ಹೇಳಿದ : 'ಈಗಾಗಲೇ ನಾನು ನಿಮ್ಮನ್ನು ಗುರುಗಳು ಎಂದು ಒಪ್ಪಿಕೊಂಡಿದ್ದೇನೆ. ನೀವು ವಿದ್ಯೆ ಕಲಿಸದಿದ್ದರೂ ನನಗೆ ನೀವೇ ಆಚಾರ್ಯರು... ವಿದ್ಯಾಗುರುಗಳಿಗೆ ನನ್ನ ನಮಸ್ಕಾರಗಳು'

ಏಕಲವ್ಯ ದ್ರೋಣರಿಗೆ ನಮಸ್ಕರಿಸಿ ದಟ್ಟವಾದ ಕಾಡಿನೊಳಗೆ ನಡೆದ. ದೊಡ್ಡ ಮರವೊಂದರ ಕೆಳಗೆ ಮಣ್ಣಿನಲ್ಲಿ ಗುರು ದ್ರೋಣರ ಮೂರ್ತಿಯನ್ನು ಮಾಡಿ ಪ್ರತಿಷ್ಠಾಪಿಸಿದ. ದಿನವೂ ದ್ರೋಣರ ಆಶ್ರಮದ ಹೊರಗೆ ನಿಂತು ಅವರು ರಾಜಕುಮಾರರಿಗೆ ಕಲಿಸುತ್ತಿದ್ದ ಬಿಲ್ಲು ವಿದ್ಯೆಯನ್ನು ತದೇಕ ಚಿತ್ತದಿಂದ ನೋಡುತ್ತಿದ್ದ ಮತ್ತು ದ್ರೋಣರ ಪ್ರತಿಮೆಯೆದುರು ಅದನ್ನು ಅಭ್ಯಾಸ ಮಾಡುತ್ತಿದ್ದ. ದಿನೇದಿನೇ ಏಕಲವ್ಯ ಬಿಲ್ಲು ವಿದ್ಯೆಯಲ್ಲಿ ಪ್ರೌಢಿಮೆಯನ್ನು ಪಡೆದ. ಶ್ರೇಷ್ಠ ಧನುರ್ಧರನಾದ.

ಹೀಗೆ ವರ್ಷಗಳು ಉರುಳಿದವು. ಒಂದು ದಿನ ದ್ರೋಣಾಚಾರ್ಯ ತಮ್ಮ ಶಿಷ್ಯರ ಜೊತೆ ಅರಣ್ಯದಲ್ಲಿ ಸಂಚರಿಸುತ್ತಿದ್ದರು. ಜೊತೆಯಲ್ಲಿ ಸಾಕಿದ ಒಂದು ನಾಯಿ ಸಹ ಇತ್ತು... ನಾಯಿ ಮುಂದೆ ಮುಂದೆ ಹೋಯಿತು. ರಾಜಕುಮಾರರು, ದ್ರೋಣರು ತುಂಬ ಹಿಂದೆ ಉಳಿದರು.

ನಾಯಿ ಸಂಯೋಗವಶಾತ್ ದ್ರೋಣರ ಪ್ರತಿಮೆ ಇದ್ದಲ್ಲಿಗೆ ಬಂದಿತು. ವಿಚಿತ್ರ ವೇಷದಲ್ಲಿ ಬಿಲ್ಲು ಹಿಡಿದಿದ್ದ ಏಕಲವ್ಯನನ್ನು ಕಂಡು ಅದು ಬೊಗಳತೊಡಗಿತು. ಇದರಿಂದ ಶರಸಂಧಾನಕ್ಕೆ ಸಿದ್ಧವಾಗಿದ್ದ ಏಕಲವ್ಯನ ಏಕಾಗ್ರತೆಗೆ ಭಂಗ ಉಂಟಾಯಿತು. ಏಕಲವ್ಯ ಕೂಡಲೇ ಒಂದಾದ ಮೇಲೊಂದರಂತೆ ಅನೇಕ

8th_Kannada_Reader Term I_U4-9.indd 156 18-06-2019 10.47.16 AM

ಬಾಣಗಳನ್ನು ಪ್ರಯೋಗ ಮಾಡಿದ. ನಾಯಿಯ ಬಾಯಿ ಬಂದ್ ಆಯಿತು. ಅದಕ್ಕೆ ಮೊದಲಿನಂತೆ ಬೊಗಳುವುದು ಸಾಧ್ಯವಾಗಲಿಲ್ಲ. ವಿಶೇಷವೆಂದರೆ ನಾಯಿಗೆ ಒಂದಿಷ್ಟೂ ಪೆಟ್ಟಾಗಲಿಲ್ಲ. ಒಂದು ಹನಿ ರಕ್ತವೂ ಒಸರಲಿಲ್ಲ. ನಾಯಿ ಏಕಲವ್ಯನಿಗೆ ಹೆದರಿ ಮತ್ತೆ ದ್ರೋಣರು ಮತ್ತು ರಾಜಕುಮಾರರು ಇದ್ದಲ್ಲಿಗೆ ಓಡುತ್ತಾ ಬಂದಿತು.

ನಾಯಿಯ ಬಾಯಿ ಬಾಣಗಳಿಂದ ಮುಚ್ಚಿರುವುದನ್ನು ಕಂಡು ದ್ರೋಣರಿಗೆ ತುಂಬ ಆಶ್ಚರ್ಯವಾಯಿತು. ಇಂಥ ಕೌಶಲ್ಯ, ಚಾಕಚಕ್ಯತೆಯಿರುವ ಧನುರ್ಧರ ಯಾರಿರಬಹುದು ಎಂದು ಮೂಕವಿಸ್ಮಿತರಾಗಿ ನಾಯಿಯನ್ನು ಮತ್ತೊಮ್ಮೆ ದಿಟ್ಟಿಸಿದರು. ಗಾಯವಾಗಲಿ, ರಕ್ತ ಚಿಹ್ನೆಯಾಗಲೀ ಇರಲಿಲ್ಲ. ದ್ರೋಣರಂತೆಯೇ ಅವರ ಶಿಷ್ಯ ಸಮೂಹಕ್ಕೂ ಆಶ್ಚರ್ಯವಾಗಿತ್ತು. 'ಗುರುವರ್ಯಾ! ಬಾಣ ಪ್ರಯೋಗದ ಈ ಕೌಶಲ್ಯ ನನಗೂ ಸಹ ಇನ್ನೂ ಕರತವಾಗಿಲ್ಲ...' ಅರ್ಜುನ ಹುಬ್ಬೇರಿಸಿ ಹೇಳಿದ.

'ಹೌದು...! ನನಗೂ ಇದು ಸೋಜಿಗವಾಗಿದೆ. ಅದ್ಭುತ ಕೌಶಲ್ಯ! ಇಂಥ ಚಾಕಚಕ್ಯತೆಯಿಂದ ಬಾಣ ಪ್ರಯೋಗಿಸಿದ ಧನುರ್ಧರ ಯಾರೆಂದು ನೋಡಬೇಕು. ಬಹುಶಃ ಅವನು ಇಲ್ಲೇ ಹತ್ತಿರದಲ್ಲಿ ಇರಬೇಕು' ದ್ರೋಣರು ಒಂದು ಕ್ಷಣ ಯೋಚಿಸಿ ಹೇಳಿದರು.

ದ್ರೋಣರು ಮತ್ತು ರಾಜಕುಮಾರರು ನಾಯಿ ಓಡುತ್ತಾ ಬಂದಿದ್ದ ದಿಕ್ಕಿನಲ್ಲಿ ದಾಪುಗಾಲು ಹಾಕುತ್ತಾ ನಡೆದರು. ದ್ರೋಣರ ಪ್ರತಿಮೆಯೆದುರು ನಿಂತು ಬಿಲ್ಲು ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದ ಏಕಲವ್ಯ ಇದ್ದೆಡೆಗೆ ಅವರು ಬಂದರು.

ದ್ರೋಣಾಚಾರ್ಯರು ಪ್ರತಿಮೆಯನ್ನು ಗುರುತಿಸಿದರು. ಆದರೆ ಏಕಲವ್ಯನ ಗುರುತು ಕೂಡಲೇ ಹತ್ತಲಿಲ್ಲ. 'ನಮ್ಮ ನಾಯಿಯ ಬಾಯನ್ನು ಬಾಣಗಳಿಂದ ಕಟ್ಟಿ ಹಾಕಿದ್ದು ನೀನೇ?' ಎಂದು ದ್ರೋಣರು ಕೇಳಿದರು.

'ಗುರುವರ್ಯಾ! ತಮಗೆ ನನ್ನ ಗುರುತು ಸಿಕ್ಕಲಿಲ್ಲವೇ?' ಏಕಲವ್ಯ ಅವರಿಗೆ ನಮಸ್ಕರಿಸುತ್ತಾ ಹೇಳಿದ : 'ಬೇಡರ ಯುವಕ. ಈ ಹಿಂದೆ ತಮ್ಮಲ್ಲಿಗೆ ಬಿಲ್ಲು ವಿದ್ಯೆಯನ್ನು ಕಲಿಯುವ ಆಸೆಯಿಂದ ಬಂದಿದ್ದೆ. ಅದು ತಮಗೆ ನೆನಪಿದೆಯೇ...? ಆ ಬೇಡರ ಯುವಕ ನಾನೇ. ತಾವು ನನಗೆ ವಿದ್ಯೆ ಕಲಿಸಲು ನಿರಾಕರಿಸಿದಿರಿ. ಈಗ ಈ ನಾಯಿಯ ಬಾಯಿ ಕಟ್ಟಿ ಹಾಕಿದ್ದು ನಾನೇ... ಬಾಣ ಪ್ರಯೋಗಿಸಿದ್ದೇನೆ'

'ಇಂಥ ಬೆರಗುಗೊಳಿಸುವ ಬಾಣ ವಿದ್ಯೆಯನ್ನು ನೀನು ಯಾರಿಂದ ಕಲಿತೆ? ಗುರು ದ್ರೋಣರು ಕುತೂಹಲದಿಂದ ಕೇಳಿದರು.

'ಇಲ್ಲಿರುವ ಪ್ರತಿಮೆ ನನ್ನ ಗುರು... ಇವರ ಆಶೀರ್ವಾದದಿಂದ!'

'ಈ ಮೂರ್ತಿ ನನ್ನದು...? ನನ್ನಿಂದ ವಿದ್ಯೆ ಕಲಿತಿದ್ದೀಯಾ?' ಚಕಿತರಾಗಿ ಕೇಳಿದರು.

'ಹೌದು ಗುರುದೇವ...! ನಿಮ್ಮ ಅನುಗ್ರಹದಿಂದಲೇ ವಿದ್ಯೆ ಸಾಧಿಸಿದ್ದೇನೆ. ಆ ದಿನವೇ ನಿಮಗೆ ಹೇಳಿದ್ದೇನೆ. ನೀವೇ ನನಗೆ ಗುರುಗಳು ಎಂದು. ನಿಮ್ಮ ಆಶ್ರಮದಿಂದ ಹಿಂದಿರುಗಿದ ಮೇಲೆ ಇಲ್ಲಿ ನಿಮ್ಮ ಪ್ರತಿಮೆಯನ್ನು ಇಟ್ಟು ಧನುರ್ವಿದ್ಯಾಭ್ಯಾಸ ನಡೆಸಿದ್ದೇನೆ' ಏಕಲವ್ಯ ಸಹಜವಾಗಿ ಹೇಳಿದ. 'ಆಶ್ರಮದ ಹೊರಗೆ ನಿಂತು, ನೀವು ರಾಜಕುಮಾರರಿಗೆ ಬಿಲ್ಲು ವಿದ್ಯೆ ಹೇಳಿ ಕೊಡುವಾಗ ನೋಡಿ, ಅದರಂತೆಯೇ ಇಲ್ಲಿ ಅಭ್ಯಾಸ ನಡೆಸಿದ್ದೇನೆ'

ಬೇಡರ ಯುವಕನ ಶ್ರದ್ಧಾ ಭಕ್ತಿಯನ್ನು ಕಂಡು ದ್ರೋಣರಿಗೆ ತುಂಬಾ ಸಂತೋಷವಾಯಿತು. 'ಅರ್ಜುನನನ್ನು ಬಿಲ್ಲು ವಿದ್ಯೆಯಲ್ಲಿ ಅದ್ವಿತೀಯನನ್ನಾಗಿಸುತ್ತೇನೆ' ಎಂದು ಈಗಾಗಲೇ ಅರ್ಜುನನಿಗೆ ನಾನು ವಾಗ್ದಾನ ಮಾಡಿದ್ದೇನೆ. ಆದರೆ ಏಕಲವ್ಯನ ಈ ಬಿಲ್ಲು ವಿದ್ಯೆಯ ಕೌಶಲ್ಯವನ್ನು ಕಂಡಾಗ ಅರ್ಜುನ ಅದ್ವಿತೀಯ ಆಗಲಾರ. ಆದ್ದರಿಂದ ಅರ್ಜುನನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಈಗ ಏನಾದರೊಂದು ಉಪಾಯವನ್ನು ಮಾಡಲೇ ಬೇಕು ಎಂದು ದ್ರೋಣರು ಮನಸ್ಸಿನಲ್ಲೇ ಲೆಕ್ಕ ಹಾಕಿದರು.

'ಏಕಲವ್ಯ! ನಿನ್ನ ಶ್ರದ್ಧೆ, ಆಸಕ್ತಿ, ಸಾಹಸ ನನಗೆ ತುಂಬ ಮೆಚ್ಚುಗೆಯಾಗಿದೆ' ಎಂದು ದ್ರೋಣರು ಹೇಳಿದರು. 'ನನ್ನಿಂದ ನೀನು ಬಾಣ ವಿದ್ಯೆಯನ್ನು ಕಲಿತಿರುವೆ. ಈಗ ನೀನು ನನಗೆ ಗುರುದಕ್ಷಿಣೆಯನ್ನು

8th_Kannada_Reader Term I_U4-9.indd 157 18-06-2019 10.47.16 AM

ಕೊಡಬೇಕು. ಇಲ್ಲದಿದ್ದರೆ ನಿನ್ನ ಬಾಣ ವಿದ್ಯೆ ಸಫಲವಾಗುವುದಿಲ್ಲ'

'ಹೇಳಿ ಗುರುದೇವಾ! ಏನು ಗುರುದಕ್ಷಿಣೆ ಬೇಕು. ತಾವು ಕೇಳಿದ್ದನ್ನು ಕೂಡಲೇ ಕೊಡುತ್ತೇನೆ' ಏಕಲವ್ಯ ದೃಢ ಧ್ವನಿಯಲ್ಲಿ ಕೇಳಿದ.

'ಸಂತೋಷ! ನಿನ್ನ ಬಲಗೈ ಹೆಬ್ಬೆರಳನ್ನು ನನಗೆ ಗುರುದಕ್ಷಿಣೆಯಾಗಿ ಕೊಡು' ದ್ರೋಣರು ಕ್ಷಣಕಾಲ ಯೋಚಿಸಿ ಕೇಳಿದರು.

'ಬಲಗೈ ಹೆಬ್ಬೆರಳು...!' ಏಕಲವ್ಯ ಚಕಿತನಾದ. ದ್ರೋಣರ ಆಂತರ್ಯವನ್ನು ಗುರುತಿಸಿದ.

'ಗುರುದೇವಾ! ನನ್ನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯನ್ನಾಗಿ ಕೇಳಿ ನನ್ನನ್ನು ಬಿಲ್ಲುವಿದ್ಯೆಯಿಂದ ವಂಚಿತನನ್ನಾಗಿಸುತ್ತಿದ್ದೀರಿ. ಹೆಬ್ಬೆರಳಿನ ಸಹಾಯವಿಲ್ಲದೆ ಬಾಣವನ್ನು ಗುರಿ ಮುಟ್ಟಿಸುವುದು ಅಸಾಧ್ಯ ಎಂದು ನೀವು ಬಲ್ಲಿರಿ' ಎಂದು ಹೇಳಿ, ಏಕಲವ್ಯ ಕ್ಷಣವೂ ಯೋಚಿಸದೆ ಬಲಗೈ ಹೆಬ್ಬೆರಳನ್ನು ಕತ್ತರಿಸಿ ದ್ರೋಣರ ಮುಂದಿಟ್ಟ.

'ಏಕಲವ್ಯ! ನಿನ್ನ ಗುರುಭಕ್ತಿ ಅಮೋಘವಾದದ್ದು. ಅನಿವಾರ್ಯ ಕಾರಣದಿಂದ ನಿನ್ನಲ್ಲಿ ಈ ಗುರುದಕ್ಷಿಣೆ ಕೇಳಬೇಕಾಯಿತು.... ನಿನ್ನ ಈ ತ್ಯಾಗ ಯುಗಯುಗ ಕಳೆದರೂ ಪ್ರಶಂಸೆಗೆ ಪಾತ್ರವಾಗಲಿ!' ಎಂದು ಅವನನ್ನು ಹರಸಿದರು.

ಕೃತಿ ಕರ್ತೃ ಪರಿಚಯ

'ಗುರು ದಕ್ಷಿಣೆ' ಎಂಬ ಕಥೆಯು ಮಹಾಭಾರತ ಕಥೆಯಿಂದ ಆಯ್ದ ಸಂಗ್ರಹವಾಗಿದೆ.

ಪದಗಳ ಅರ್ಥ

ಕಾಡು–ವನ, ಕಾನನ, ಅರಣ್ಯ; ಕೃಪೆ–ದಯೆ, ವಿದ್ಯೆ–ಜ್ಞಾನ; ಅಳುಕದೆ–ಭಯಪಡದೆ; ಆಚಾರ್ಯ–ಗುರು. ಸರ–ಬಾಣ; ಪೆಟ್ಟು–ಗಾಯ; ಬಿಹ್ನೆ–ಗುರುತು; ಅನುಗ್ರಹ–ಕೃಪೆ, ಆಶೀರ್ವಾದ; ಆಶ್ರಮ–ಮುನಿಗಳ ವಾಸಸ್ಥಳ; ಕೌಶಲ್ಯ–ಕುಶಲತೆ, ಚುರುಕುತನ; ಪ್ರಶಂಸೆ–ಹೊಗಳಿಕೆ, ಮೆಚ್ಚಿಗೆಯ ಮಾತು; ಹರಸು–ಆಶೀರ್ವದಿಸು, ಹಾರೈಸು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಏಕಲವ್ಯ ದ್ರೋಣಾಚಾರ್ಯರಲ್ಲಿ ಏನನ್ನು ಬೇಡಿದನು ?
2. ಏಕಲವ್ಯನಿಗೆ ದ್ರೋಣರು ಕೊಟ್ಟ ಉತ್ತರವೇನು ?
3. ಆಚಾರ್ಯ ದ್ರೋಣರ ನಿರ್ಧಾರ ಏನಾಗಿದ್ದಿತು ?
4. ಏಕಲವ್ಯನ ಏಕಾಗ್ರತೆಗೆ ಏಕೆ ಭಂಗ ಉಂಟಾಯಿತು ?
5. ದ್ರೋಣಾಚಾರ್ಯರಿಗೆ ಆಶ್ಚರ್ಯವಾಗಲು ಕಾರಣವೇನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ದ್ರೋಣಾಚಾರ್ಯರಲ್ಲಿಗೆ ಬಂದ ಯುವಕ ಯಾರು? ಆತ ಏಕೆ ಬಂದನು?
2. ದ್ರೋಣಾಚಾರ್ಯರು ಏಕಲವ್ಯನಿಗೆ ಬಿಲ್ವಿದ್ಯೆ ಕಲಿಸಲು ಏಕೆ ಒಪ್ಪಲಿಲ್ಲ ?
3. ಏಕಲವ್ಯ ಬಿಲ್ವಿದ್ಯೆಯನ್ನು ಹೇಗೆ ಅಭ್ಯಾಸ ಮಾಡಿದನು ?
4. ದ್ರೋಣಾಚಾರ್ಯರಿಗೆ ಸಂತೋಷವಾಗಲು ಕಾರಣವೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಏಕಲವ್ಯನು ಬಿಲ್ವಿದ್ಯೆಯನ್ನು ಕಲಿತ ಸನ್ನಿವೇಶವನ್ನು ವಿವರಿಸಿ.
2. ತನ್ನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ದ್ರೋಣರಿಗೆ ಏಕಲವ್ಯನು ಕೊಟ್ಟ ಸನ್ನಿವೇಶವನ್ನು ವಿವರಿಸಿ.

ಭಾಷಾಭ್ಯಾಸ

1. ಈ ಕೆಳಕಂಡ ಪದಗಳಿಗೆ ವಿರುದ್ಧ ಪದವನ್ನು ಬರೆಯಿರಿ.

ಆಸಕ್ತಿ, ಆಸೆ, ಸಂತೋಷ, ಉಪಾಯ, ಸಫಲ, ಸಹಾಯ, ತ್ಯಾಗ

8th_Kannada_Reader Term I_U4-9.indd 158 18-06-2019 10.47.16 AM

2. ಈ ಕೆಳಕಂಡ ಪದಗಳಿಗೆ ತತ್ಸಮ–ತದ್ಭವ ರೂಪವನ್ನು ಬರೆಯಿರಿ.
ವಿದ್ಯೆ, ಧ್ವನಿ, ಕ್ಷಣ, ಮುಕ್ತಿ, ಮೂರ್ತಿ, ರಕ್ತ, ಭಕ್ತಿ, ಸಂತೋಷ

3. ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರನ್ನು ತಿಳಿಸಿ
ತಲೆಗೂದಲು, ಬಲಗೈ, ದ್ರೋಣಾಚಾರ್ಯ, ಮಹದಾಸೆ, ಚಾಕಚಕ್ಯತೆಯಂದ, ದಾಪುಗಾಲು, ಪ್ರತಿಮೆಯೆದುರು, ವಿದ್ಯೆಯನ್ನು, ವಾಗ್ದಾನ.

4. ಈ ಪದಗಳ ಸಮನಾರ್ಥಕ ಪದಗಳನ್ನು ಬರೆಯಿರಿ.
ಬೆರಗು, ಪ್ರತಿಮೆ, ಹರಸು, ಅನುಗ್ರಹ, ಗುರು, ನಾಯಿ, ರಕ್ತ, ಶ್ರೀಮಂತ, ಕೃಪೆ.

5. ಈ ಪದಗಳಿಗೆ ಸ್ವಂತ ವಾಕ್ಯ ರಚಿಸಿ.
ಪ್ರಯೋಗ, ಚಾಕಚಕ್ಯತೆ, ಕೈಮುಗಿ, ಪ್ರಾರ್ಥಿಸು, ವಿದ್ಯಾಗುರುಗಳು, ಪ್ರೌಢಿಮೆ, ವಿಚಿತ್ರವೇಷ, ಏಕಾಗ್ರತೆ.

ಚಟುವಟಿಕೆ

1. ಮಹಾಭಾರತದ ಕಥೆಗಳನ್ನು ಓದಿ ತಿಳಿದುಕೊಳ್ಳಿ.
2. ಈ ಗದ್ಯಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆದು, ನಾಟಕೀಯವಾಗಿ ಅಭಿನಯಿಸಿ.

ಒಡೆಯದಿರು ತಳಹದಿಯ ಸರಿವಡಿಪೆನದನೆಂದು
ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ?
ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೆ?
ದುಡುಕದಿರು ತಿದ್ದಿಕೆಗೆ – ಮಂಕುತಿಮ್ಮ



8th_Kannada_Reader Term I_U4-9.indd 159 18-06-2019 10.47.16 AM

ಉಪಪಠ್ಯ


ಘಟಕ ಒಂಬತ್ತು

ಮಕ್ಕಳ ಮಹತ್ವ

– ಸದಾಶಿವಮೂರ್ತಿ ಗುಮಟಾಪುರ



'ಮಕ್ಕಳಿರಲ್ಲವ್ವ ಮನೆತುಂಬ' ಎಂದು ನಮ್ಮ ಹಿರಿಯರು ಮಕ್ಕಳ ಮಹತ್ವದ ಬಗ್ಗೆ ಹೇಳಿದ್ದಾರೆ. ಮಕ್ಕಳು ಇರುವ ಮನೆಯಲ್ಲಿ ಸಂತೋಷ ತಾಂಡವವಾಡುತ್ತಿರುತ್ತದೆ. ಮಕ್ಕಳ ಜಗತ್ತು ಸುಂದರಮಯವಾದುದು, ಆನಂದಮಯವಾದುದು. ಅವರ ಆಟ–ಪಾಠಗಳನ್ನು ನೋಡುವುದೇ ಚೆಂದ. ಮಕ್ಕಳ ಬಾಲ್ಯ ಅಮೂಲ್ಯವಾದುದು. ಶ್ರೀ ಕೃಷ್ಣ, ಕೋಳೂರ ಕೊಡಗೂಸು, ಶಿವಭಕ್ತ ಮಾರ್ಕಂಡೇಯ, ಭಕ್ತ ಪ್ರಹ್ಲಾದ ಮೊದಲಾದವರು ತಮ್ಮ ಬಾಲ್ಯದಲ್ಲೇ ಮೆರೆದ ಚತುರತೆ ಅದ್ಭುತವಾದುದು. ಮಕ್ಕಳಲ್ಲಿ ಪ್ರತಿಯೊಬ್ಬರು ಯಾವುದಾದರೊಂದು ಪ್ರತಿಭೆಯನ್ನು ಹೊಂದಿರುತ್ತಾರೆ. ಮಕ್ಕಳಿಗೆ ಬದುಕಿನ ಗತಿಯನ್ನೇ ಬದಲಿಸುವ, ಜಗತ್ತನ್ನೇ ಬೆಳಗಿಸುವ ಚೈತನ್ಯ ಶಕ್ತಿ ಇದೆ ಎಂಬುದನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ.



8th_Kannada_Reader Term I_U4-9.indd 160 18-06-2019 10.47.16 AM

ನವೆಂಬರ್ 14 ರಂದು ನಾವು ಮಕ್ಕಳ ದಿನಾಚರಣೆಯನ್ನು ಆಚರಿಸುತ್ತೇವೆ. ನಮ್ಮ ಭಾರತದ ಮೊದಲ ಪ್ರಧಾನಮಂತ್ರಿಯಾಗಿದ್ದ ಜವಾಹರಲಾಲ್ ನೆಹರೂರವರಿಗೆ ಮಕ್ಕಳೆಂದರೆ ಬಲು ಅಕ್ಕರೆ, ಆದ್ದರಿಂದಲೇ ಅವರು ತಮ್ಮ ಜನ್ಮ ದಿನವನ್ನು ಕೇವಲ ವ್ಯಕ್ತಿ ಪೂಜೆಗೆ ಮೀಸಲಿಡದೆ ಮಕ್ಕಳ ದಿನವನ್ನಾಗಿ ಆಚರಿಸಲು ತಿಳಿಸಿದರು. ಮಕ್ಕಳು ಜವಾಹರಲಾಲ್ ನೆಹರೂರವರನ್ನು 'ಚಾಚಾಜೀ' ಎಂದು ಪ್ರೀತಿಯಿಂದ ಸಂಬೋಧಿಸಿ ಅವರಿಗೆ ಗುಲಾಬಿ ಹೂವನ್ನು ಕೊಡುತ್ತಿದ್ದರು. ಒಬ್ಬ ಪ್ರಧಾನಿಯ ಜನ್ಮ ದಿನವನ್ನು 'ಮಕ್ಕಳದಿನ' ವನ್ನಾಗಿ ಆಚರಿಸುತ್ತಿರುವುದು ಮಕ್ಕಳ ಮಹತ್ವವನ್ನು ಸಾರುತ್ತದೆ.

ಮಕ್ಕಳು ಮುಗ್ಧರು, ಅವರ ಮನಸ್ಸು ಹೂವಿನಂತೆ ಕೋಮಲವಾದದ್ದು, ಬಾಲ್ಯದಲ್ಲಿ ಅವರು ಯಾವುದೇ ರಾಗ–ದ್ವೇಷಗಳಿಲ್ಲದ, ಕಾಮ ಕ್ರೋಧ, ಮದ, ಮಾತ್ಸರ್ಯಗಳ ಸೋಂಕಿಲ್ಲದ ನಿಷ್ಕಲ್ಮಶ, ನಿರ್ಮಲ ಮನಸ್ಸಿನಿಂದ ಕೂಡಿರುತ್ತಾರೆ. ಆದುದರಿಂದಲೆ ಮಕ್ಕಳನ್ನು ದೇವರೆಂದು ಕರೆಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಕ್ಕಳು ದೇವರಿಗೂ ಮಿಗಿಲು ಎನ್ನಬಹುದು. ಇದು ನಿಮಗೆ ಅತಿಶಯವೆನಿಸಬಹುದು. ಮಹಾಭಾರತ ಯುದ್ಧದಲ್ಲಿ ತನ್ನ ಶೌರ್ಯ, ಪರಾಕ್ರಮ, ಚಾಣಾಕ್ಷತೆಯಿಂದ ಚಕ್ರವ್ಯೂಹ ಪ್ರವೇಶಿಸಿ ಅತಿರಥ ಮಹಾರಥರೆಲ್ಲರನ್ನೂ ನಡುಗಿಸಿದ ಅಷ್ಟೇ ಏಕೆ ದೇವನೆನಿಸಿದ ಶ್ರೀ ಕೃಷ್ಣನಿಗೆ ದಿಗ್ಭ್ರಮೆಯನ್ನು ಹುಟ್ಟಿಸಿದವನು ಅರ್ಜುನನ ಮಗ ವೀರ ಅಭಿಮನ್ಯು. ಶಿವನ ಪ್ರೀತಿಗೆ ಪಾತ್ರಳಾದ ಶಿವಭಕ್ತೆ ಕೋಳೂರ ಕೊಡಗೂಸು, ಭಕ್ತಪ್ರಹ್ಲಾದ, ಸಾವನ್ನೇ ಗೆದ್ದ ಶಿವಭಕ್ತ ಮಾರ್ಕಂಡೇಯ ಇವರೆಲ್ಲರೂ ಮಕ್ಕಳೇ ಅಲ್ಲವೇ? ತಮ್ಮ ಶ್ರದ್ಧಾ, ಭಕ್ತಿ ಚಾತುರ್ಯ ಬಲದಿಂದ ದೇವರ ಪ್ರೀತಿಗೆ ಪಾತ್ರರಾದ ಈ ಮಕ್ಕಳು ದೇವರಿಗೂ ಮಿಗಿಲಲ್ಲದೆ ಮತ್ತೇನು?

ತಂದೆ ತಾಯಿಗಳೇ ಆಗಲಿ, ಗುರು ಹಿರಿಯರೇ ಆಗಲಿ ತಮ್ಮ ಜೀವನದಲ್ಲಿ ಎಷ್ಟೇ ಜ್ಞಾನಾನುಭವಗಳನ್ನು ಪಡೆದಿದ್ದರೂ ಸಹ ಮಕ್ಕಳಿಂದ ಕಲಿಯುವಂತಹದ್ದು, ತಿಳಿಯುವಂತಹದ್ದು ಎಷ್ಟೋ ಆಶ್ಚರ್ಯಕರ ಸಂಗತಿಗಳಿವೆ. ಅಂತಹ ಮಹಾನ್ ಚಾತುರ್ಯ ಶಕ್ತಿ ಮಕ್ಕಳಲ್ಲಿ ಮಾತ್ರವಿದೆ. ಬಾಲಕ ಶ್ರೀ ಕೃಷ್ಣ ತನ್ನ ಬಾಯಿಯಲ್ಲಿ ಬ್ರಹ್ಮಾಂಡವನ್ನೇ ತೋರಿಸಿ ತನ್ನ ತಾಯಿಯನ್ನು ಆಶ್ಚರ್ಯ ಚಕಿತಳನ್ನಾಗಿಸಿದ! ಇನ್ನು ಏಕಲವ್ಯನೋ ಗುರುವಿಲ್ಲದೆಯೇ, ಗುರು ದ್ರೋಣಾಚಾರ್ಯರರ ಪ್ರತಿಮೆಯನ್ನೇ ಮುಂದಿಟ್ಟುಕೊಂಡು ಅಸ್ತ್ರ ವಿದ್ಯೆ ಕಲಿತು ಶ್ರೇಷ್ಠ ವೀರನೆನಿಸಿದ, ಪಾರ್ಥನಾದ ಅರ್ಜುನನೇ ಬೆಚ್ಚಿ ಬೀಳುವಂತೆ ಮಾಡಿದ. ಅಷ್ಟೇಕೆ ಒಂದು ಚಿಕ್ಕ ನಿದರ್ಶನ ನೋಡಿ – ಅಳುವ ಕಂದನಿಗೆ ನೀವು ಅದು ಅಳು ನಿಲ್ಲಿಸಲು ಆಕಾಶದಲ್ಲಿ ಕಾಣುತ್ತಿರುವ ಚಂದಮಾಮನನ್ನು ತೋರಿಸಿದರೆ ಮಗು ಅಳು ನಿಲ್ಲಿಸುವ ಬದಲು ಮತ್ತಷ್ಟು ಜೋರಾಗಿ ಅಳುತ್ತ ಚಂದ್ರನೇಬೇಕೆಂದು ಹಠ ಹಿಡಿದು ಅಳುತ್ತದೆ. ಈ ವೇಳೆಗಾಗಲೇ ಮಗುವನ್ನು ಸಮಾಧಾನಪಡಿಸಲು ಯತ್ನಿಸಿ ತಾಳ್ಮೆ ಕಳೆದುಕೊಂಡಿರುವ ನೀವು ಕೋಪದ ಉತ್ತುಂಗ ಶಿಖರದಲ್ಲಿರುತ್ತೀರಿ. ಶತ್ರುವಿನ ಮೇಲೆ ಗುರಿಯಿಟ್ಟ ಸೈನಿಕನಂತೆ ದಾರಿಗಾಣದೆ ಮಗುವನ್ನು ಬೈದು, ಹೊಡೆದು, ಬೆದರಿಸಿ ಸುಮ್ಮನಾಗಿಸಲು ಯತ್ನಿಸುತ್ತೀರಿ. ಆದರೆ ಅದು ಫಲಿಸುವುದೇ? ಖಂಡಿತ ಇಲ್ಲ. ಆದರೆ ಕೆಲ ನಿಮಿಷಗಳ ನಂತರ ಮಗುವೇ ಸಮಾಧಾನ ತಂದುಕೊಂಡು 'ಚಂದ್ರ ನಾಳೆ ಹತ್ತಿರ ಬಂದಾಗ ಕೊಡುತ್ತೀಯಾ'? ಎಂದು ನಿಮ್ಮಿಂದಾಗದ ಉತ್ತರವನ್ನು, ಪರಿಹಾರವನ್ನು ತಾನೇ ಹೇಳಿ ಅಳು ನಿಲ್ಲಿಸಿ ಸುಮ್ಮನಾಗಿ ಮಲಗಿ ಬಿಡುತ್ತದೆ. ಮಗುವಿನ ಇಂತಹ ಚಾತುರ್ಯದ ಮುಂದೆ ನಮ್ಮ ಜ್ಞಾನ ಅಲ್ಪವೆನಿಸಿಬಿಡುತ್ತದೆ.

ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಪಠ್ಯಪುಸ್ತಕದಲ್ಲಿನ ಮಹಾಭಾರತ ಯುದ್ಧದ ಸನ್ನಿವೇಶವನ್ನು ಬೋಧಿಸಿ ಅರ್ಥೈಸಿ ಮುಗಿಸಿದರೆ, ಹಾಗೆಯೇ ಮನೆಯಲ್ಲಿ ಹಿರಿಯರು ಮಹಾಭಾರತದ ಕುರಿತಾದ ಕಥೆಗಳನ್ನು ಮಕ್ಕಳಿಗೆ ಹೇಳಿ ನಿಲ್ಲಿಸಿದರೆ ಮಕ್ಕಳು ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಪಾಂಡವರಾರು? ಕೌರವರಾರು? ಇವರ ತಂದೆ–ತಾಯಿಗಳಾರು? ಅಷ್ಟೇ ಅಲ್ಲ, ಅಜ್ಜ, ಅಜ್ಜಿ!..... ಹೀಗೆ ಕುತೂಹಲದಿಂದ ಕೇಳುತ್ತಾ ಹೋಗುತ್ತಾರೆ. ಹೊಸ ವಿಸ್ಮಯಗಳನ್ನು ಸೃಷ್ಟಿಸಿ ನಮ್ಮ ಸ್ಮೃತಿಪಟಲಕ್ಕೆ ಸೇರಿಸಿಬಿಡುತ್ತಾರೆ. ಮಕ್ಕಳ ಈ ಚತುರತೆಯ ಮುಂದೆ ನಮ್ಮ ಈ ಅನುಭವದ ಪಾಠ ಏನೇನು ಅಲ್ಲ ಎನಿಸಿ ಬಿಡುತ್ತದೆ. ಅವರ ಮುಂದೆ

8th_Kannada_Reader Term I_U4-9.indd 161 18-06-2019 10.47.16 AM

ನಾವು ಸಣ್ಣವರಾಗಿ ಬಿಡುತ್ತೇವೆ. ಮಕ್ಕಳ ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ನಾವು ಅನಿವಾರ್ಯವಾಗಿ ಹೆಚ್ಚು ಹೆಚ್ಚು ತಿಳಿದು ಕೊಳ್ಳಬೇಕಾಗುತ್ತದೆ. ಆ ಮೂಲಕ ನಮಗೆ ಮತ್ತಷ್ಟು ಜ್ಞಾನ ಲಭಿಸುತ್ತದೆ. ಹೀಗೆ ಮಕ್ಕಳಿಂದ ಕಲಿಯುವ, ತಿಳಿಯುವ ಎಷ್ಟೋ ಆಶ್ಚರ್ಯಕರ ಸಂಗತಿಗಳಿವೆ.

ಇಂದು ಬಾಲಕಾರ್ಮಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅಂದು ಬಡತನದಿಂದ ಬದುಕು ದೂಡುತ್ತಿದ್ದ ತಂದೆ ದೋಣಿ ನಡೆಸಿ ಹೊಟ್ಟೆ ಹೊರೆಯಲು ಮಗನನ್ನು ಬಳಸಿಕೊಂಡಿದ್ದರೆ ಅದೇ ಬಾಲಕ ಅಬ್ದುಲ್ ಕಲಾಂ, ಮುಂದೊಂದು ದಿನ ಶ್ರೇಷ್ಠ ವಿಜ್ಞಾನಿಯಾಗಿ, ರಾಷ್ಟ್ರಪತಿಯಾಗಿ ಭಾರತವೆಂಬ ಮಹಾ ನೌಕೆಯನ್ನು ಮುನ್ನಡೆಸುವ ನಾವಿಕರಾಗುತ್ತಿದ್ದರೆ? ಇಂತಹ ನಿದರ್ಶನಗಳನ್ನು ಎಲ್ಲರೂ ಮನಗಾಣಬೇಕು. 'ಇಂದಿನ ಮಕ್ಕಳು ನಾಳೆಯ ಪ್ರಜೆಗಳು' ಎಂಬ ಜವಹಾರಲಾಲ ನೆಹರೂರವರ ತತ್ವ ಫಲಿಸಬೇಕಾದರೆ ನಾವೆಲ್ಲರೂ ಮಕ್ಕಳಲ್ಲಿ ಪ್ರೀತಿ–ವಿಶ್ವಾಸ ತೋರಿಸಿ ಅವರ ಏಳಿಗೆಗೆ ಟೊಂಕ ಕಟ್ಟಿ ಶ್ರಮಿಸಬೇಕು. ಮಕ್ಕಳು ಭವಿಷ್ಯದಲ್ಲಿ ಮಹಾ ನಕ್ಷತ್ರಗಳಾಗಿ ಪ್ರಜ್ವಲಿಸಬೇಕಾದರೆ ಮಕ್ಕಳೆಂಬ ಪೈರಿಗೆ ಬಾಲ್ಯದಿಂದಲೇ ನೀತಿ, ಆಚಾರ, ಸಂಸ್ಕೃತಿ ಮೊದಲಾದ ಮೌಲ್ಯಗಳ ಗೊಬ್ಬರ ಹಾಕಿ, ಶಿಕ್ಷಣವೆಂಬ ನೀರೆರದು ಪ್ರೀತಿ–ವಾತ್ಸಲ್ಯವೆಂಬ ಬೆಳಕ ತಳಕಿ ಬೆಳೆಸಬೇಕೇ ಹೊರತು ಅವುಗಳನ್ನು ಮೊಳಕೆಯಲ್ಲೇ ಚಿವುಟಬಾರದು.

ನಮ್ಮ ಜನಪದಗೀತೆಗಳಲ್ಲಿ ಒಬ್ಬ ತಾಯಿ ತನ್ನ ಮಗುವನ್ನು

ಆಚಾರಕರನಾಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಮಣಿಯಾಗು! ನನ ಕಂದ
ಜ್ಯೋತಿಯೇ ಆಗು ಜಗಕೆಲ್ಲ॥

ಎಂದು ಹಾಡಿ ಹರಸಿರುವಂತೆ ತಂದೆ ತಾಯಿಯರು, ಗುರು ಹಿರಿಯರೂ ಮಕ್ಕಳನ್ನು ಹರಸಿ ಹಾರೈಸಬೇಕು.

ಕೃತಿ ಕರ್ತೃ ಪರಿಚಯ

ಸದಾಶಿವಮೂರ್ತಿ ಗುಮಟಾಪುರ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ ಪದವೀಧರರಾಗಿದ್ದಾರೆ. ಶ್ರೀಯುತರು ಬೆಂಗಳೂರಿನ ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಹಾಗೂ ಜೈನ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರು ಪ್ರಸ್ತುತ ತಾಳವಾಡಿಯ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಸ್ನಾತಕೋತ್ತರ ಪದವೀಧರ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆ ಮೂಲಕ ತಮ್ಮ ಜನ್ಮಭೂಮಿಯನ್ನೇ ಕರ್ಮಭೂಮಿಯನ್ನಾಗಿಸಿಕೊಂಡು ಶೈಕ್ಷಣಿಕ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ವಿದ್ಯಾರ್ಥಿದೆಸೆಯಿಂದಲೇ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡಿರುವ ಇವರು ಎರಡೂವರೆ ದಶಕಗಳಿಂದಲೂ ಕನ್ನಡ ಸಾಹಿತ್ಯಕೃಷಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡ ನಾಡು–ನುಡಿ, ಸಾಹಿತ್ಯ–ಸಂಸ್ಕೃತಿ ಕುರಿತಾದ ಇವರ ಹಲವಾರು ಲೇಖನಗಳು ಪ್ರಜಾವಾಣಿ, ವಿಜಯ ಕರ್ನಾಟಕ, ಉದಯವಾಣಿ ಮೊದಲಾದ ದಿನ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 'ಪ್ರಾಥಮಿಕ ಶಾಲಾ ಶಿಕ್ಷಕರ ಕೈಪಿಡಿ', 'ಪ್ರೌಢಶಾಲಾ ಶಿಕ್ಷಕರ ಕೈಪಿಡಿ', 'ಕನ್ನಡ ವ್ಯಾಕರಣ', 'ಕನ್ನಡ ಗಾದೆಗಳು ಮತ್ತು ಪ್ರಬಂಧಗಳು' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. 'ಹಲವು ಬಣ್ಣದ ಹಕ್ಕಿ', 'ಗರಿಗಳು', 'ದಾರಿಬಿಡಿ', 'ಕೊಟ್ಟಕಥೆ–ಕಟ್ಟಿದಕಥೆ', 'ಸಂಗಡ' ಇವು ಇವರ ಸಂಪಾದಿತ ಕೃತಿಗಳು. 'ಕನ್ನಡ ರತ್ನ ಶಿಕ್ಷಕ' ಪ್ರಶಸ್ತಿ, 'ಉತ್ತಮ ಸಂಘಟಕ' ಪ್ರಶಸ್ತಿ ಮೊದಲಾದ ಗೌರವಗಳಿಗೆ ಇವರು ಭಾಜನರಾಗಿದ್ದಾರೆ.

'ಮಕ್ಕಳ ಮಹತ್ವ' ಎಂಬ ಈ ಪಾಠಭಾಗವನ್ನು 14.11.2002 ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸದಾಶಿವಮೂರ್ತಿ ಗುಮಟಾಪುರ ಅವರ 'ಮಕ್ಕಳ ದಿನಾಚರಣೆ' ಎಂಬ ಲೇಖನದಿಂದ ಆಯ್ದುಕೊಳ್ಳಲಾಗಿದೆ. ಮಕ್ಕಳ ದಿನಾಚರಣೆಯ ಮಹತ್ವ ಮತ್ತು ಮಕ್ಕಳ ಮಹತ್ವವನ್ನು ಅರಿಯಬೇಕು. ಮಕ್ಕಳ ಚತುರತೆ ಮೆಚ್ಚುವಂತಹದ್ದು. ಮಕ್ಕಳ ಬಾಲ್ಯ

8th_Kannada_Reader Term I_U4-9.indd 162 18-06-2019 10.47.17 AM

ಅಮೂಲ್ಯವಾದದು 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂದರಿತು ಅವರ ಲಾಲನೆ–ಪಾಲನೆ ಮಾಡಿ ಮಕ್ಕಳೆಂಬ ಪೈರಿಗೆ ಶಿಕ್ಷಣವೆಂಬ ನೀರನ್ನು ಎರೆದು ಪೋಷಿಸಿ ಅವರನ್ನು ಸಾಧಕರನ್ನಾಗಿ ಮಾಡಬೇಕು ಎಂಬುದರ ಬಗ್ಗೆ ಈ ಲೇಖನವು ಬೆಳಕು ಚಲ್ಲುತ್ತದೆ.

ಪದಗಳ ಅರ್ಥ

ಅಕ್ಕರೆ–ಪ್ರೀತಿ; ಸಂಬೋಧಿಸು–ಕರೆಯುವುದು, ಇತರರನ್ನು ಉದ್ದೇಶಿಸಿ ಹೇಳುವುದು; ಮಹತ್ವ–ಪ್ರಾಮುಖ್ಯತೆ; ಮುಗ್ಧ–ಕಪಟವನ್ನು ತಿಳಿಯದವನು; ಕೋಮಲ–ಸುಕುಮಾರವಾದ;ಇಂಪಾದ; ರಾಗ–ಪ್ರೀತಿ; ದ್ವೇಷ–ವೈರ, ಹಗೆತನ; ಕಾಮ–ಬಯಕೆ; ಕ್ರೋಧ–ಸಿಟ್ಟು, ಕೋಪ; ಮದ–ಸೊಕ್ಕು; ಮಾತ್ಸರ್ಯ–ಹೊಟ್ಟೆಕಿಚ್ಚು; ಸೋಂಕು–ತಾಗು; ಸ್ಪರ್ಶ; ನಿರ್ಮಲ–ಶುದ್ಧ; ಅತಿಶಯ–ಹೆಚ್ಚಳ; ಶೌರ್ಯ–ಪರಾಕ್ರಮ, ಕೆಚ್ಚು; ಪರಾಕ್ರಮ–ಶೌರ್ಯ; ಚಕ್ರವ್ಯೂಹ–ಒಂದು ಬಗೆಯ ಸೇನಾಚರಣೆ; ಅತಿರಥ–ರಥಿಕರಲ್ಲಿ ಅತ್ಯಂತ ಶ್ರೇಷ್ಠನಾದವನು; ಮಹಾರಥ–ಒಬ್ಬನೇ ರಥದಲ್ಲಿದ್ದುಕೊಂಡು ಹತ್ತು ಸಾವಿರ ಬಿಲ್ಲುಗಾರರನ್ನು ಹೆದುರಿಸಬಲ್ಲ ಯೋಧ; ದಿಗ್ಭ್ರಮೆ–ಗಾಬರಿ; ಶ್ರದ್ಧೆ–ವಿಶ್ವಾಸ, ನಂಬಿಕೆ; ಚಾತುರ್ಯ–ಜಾಣತನ; ಪ್ರತಿಮೆ–ವಿಗ್ರಹ; ಅಸ್ತ್ರವಿದ್ಯೆ–ಬಿಲ್ವಿದ್ಯೆ; ನಿದರ್ಶನ–ದೃಷ್ಟಾಂತ; ಉತ್ತುಂಗ–ಎತ್ತರವಾದ; ಶಿಖರ–ತುದಿ; ಯತ್ನಿಸು–ಪ್ರಯತ್ನಿಸು; ಫಲಿಸು–ಕೈಗೂಡು; ಅಲ್ಪ–ಚಿಕ್ಕದಾದ; ಸನ್ನಿವೇಶ–ಪರಿಸರ; ಬೋಧಿಸು–ಕಲಿಸು; ವಿಸ್ಮಯ–ಆಶ್ಚರ್ಯ; ಸ್ಮೃತಿಪಟಲ–ನೆನಪಿನ ಪರದೆ; ಚತುರತೆ–ಜಾಣತನ; ಹೊಟ್ಟೆಹೊರೆ–ಜೀವನಕ್ಕೆ ಮಾರ್ಗವನ್ನು ಕಂಡುಕೊಳ್ಳು; ನೌಕ–ಹಡಗು; ನಾವಿಕ–ಹಡಗು ನಡೆಸುವವನು; ತಳುಕು–ಹೊಳಪು; ಟೊಂಕಕಟ್ಟು–ಸಿದ್ಧವಾಗು; ಪ್ರಭು–ರಾಜ; ಚೂಡಾಮಣಿ–ಶ್ರೇಷ್ಠವ್ಯಕ್ತಿ; ಹರಸು–ಆಶೀರ್ವಾದ ಮಾಡು; ಹಾರೈಸು–ಶುಭಕೋರು

ಅಭ್ಯಾಸ

I. ಈ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಕ್ಕಳ ದಿನಾಚರಣೆಯನ್ನು ಯಾವ ದಿನದಂದು ಆಚರಿಸುತ್ತಾರೆ?
2. ಭಾರತದ ಮೊದಲ ಪ್ರಧಾನಮಂತ್ರಿ ಯಾರು?
3. ಲೇಖಕರು ಯಾರನ್ನು ದೇವರೆಂದು ಕರೆದಿದ್ದಾರೆ?
4. ಮಹಾಭಾರತ ಯುದ್ಧದಲ್ಲಿ ಅತಿರಥ ಮಹಾರಥರನ್ನು ನಡುಗಿಸಿದ ವೀರನಾರು?
5. ದೇವರ ಪ್ರೀತಿಗೆ ಪಾತ್ರರಾದವರ ಹೆಸರುಗಳನ್ನು ತಿಳಿಸಿ.
6. ತನ್ನ ತಾಯಿಗೆ ಬಾಯಿಯಲ್ಲೆ ಬ್ರಹ್ಮಾಂಡವನ್ನು ತೋರಿಸಿದವರಾರು?
7. ಏಕಲವ್ಯನು ಅಸ್ತ್ರವಿದ್ಯೆಯನ್ನು ಕಲಿತ ಬಗೆ ಹೇಗೆ?

II. ಈ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಕ್ಕಳ ದಿನಾಚರಣೆಯ ಮಹತ್ವವೇನು?
2. ಮಕ್ಕಳ ಮನಸ್ಸು ಎಂತಹದು ಎಂದು ಲೇಖಕರು ಹೇಳಿದ್ದಾರೆ?
3. ಯುದ್ಧದಲ್ಲಿ ಅಭಿಮನ್ಯುವಿನ ಪರಾಕ್ರಮವನ್ನು ವಿವರಿಸಿ.
4. ದೇವರ ಪ್ರೀತಿಗೆ ಪಾತ್ರಾದವರನ್ನು ಬಣ್ಣಿಸಿ.
5. ಶ್ರೀಕೃಷ್ಣ ಹಾಗೂ ಏಕಲವ್ಯರ ಚಾತುರ್ಯವನ್ನು ವರ್ಣಿಸಿ.
6. ಮಗು ಅಳುವ ನಿದರ್ಶನವನ್ನು ವಿವರಿಸಿ.
7. ಮಕ್ಕಳ ಮುಂದೆ ನಾವು ಸಣ್ಣವರೆನಿಸುವ ಸಂದರ್ಭಗಳಾವುವು?
8. ತಾಯಿ ತನ್ನ ಮಗುವನ್ನು ಏನೆಂದು ಹರಸಿದ್ದಾಳೆ?

III. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಕ್ಕಳ ಚತುರತೆಯನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ?
2. ಮಕ್ಕಳಿಂದ ತಿಳಿಯುವ ಆಶ್ಚರ್ಯಕರ ಸಂಗತಿಗಳನ್ನು ವಿವರಿಸಿ.
3. ಮಕ್ಕಳನ್ನು ಹೇಗೆ ಬೆಳೆಸಬೇಕೆಂದು ಲೇಖಕರು ಹೇಳಿದ್ದಾರೆ?

8th_Kannada_Reader Term I_U4-9.indd 163 18-06-2019 10.47.17 AM

ವ್ಯಾಕರಣ

ಘಟಕ ಒಂಬತ್ತು

ಗಾದೆಗಳು

ಗಾದೆಗಳು, ನಾಣ್ನುಡಿ, ನಾಡ ನುಡಿ, ಲೋಕೋಕ್ತಿಗಳೆಂತಲೂ ಪ್ರಸಿದ್ಧವಾಗಿವೆ. ಜನಸಾಮಾನ್ಯರ ಅನುಭವದ ಸಾರವೇ ಗಾದೆಗಳಾಗಿ ರೂಪ ತಾಳಿವೆ. ಸರಳವಾಗಿಯೂ, ಸಂಕ್ಷಿಪ್ತವಾಗಿಯೂ ಪ್ರಾಸಬದ್ಧವಾಗಿರುವ ಗಾದೆಗಳು ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವಂತಹವು. ಗಾದೆಗಳು ಮೇಲ್ನೋಟಕ್ಕೆ ಒಂದು ಅರ್ಥವನ್ನು ನೀಡಿದರೆ, ಅವುಗಳ ಅಂತರಾಳದಲ್ಲಿ ಬೇರೊಂದು ಅರ್ಥ ಅಡಗಿರುತ್ತದೆ. ಆಲೋಚಿಸಿ ಅರ್ಥ ಮಾಡಿಕೊಂಡಂತೆಲ್ಲ ಗಾದೆಗಳ ಸ್ವಾರಸ್ಯ ಹೆಚ್ಚುತ್ತದೆ, ಸಂತೋಷವಾಗುತ್ತದೆ.

ಗಾದೆಗಳನ್ನು ವೇದಕ್ಕೆ ಹೋಲಿಸುವುದಿದೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನಾಣ್ನುಡಿಯೂ ಇದೆ. ಆಡುಮಾತುಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ ಲೇಖನಗಳಲ್ಲಿಯೂ ಗಾದೆಗಳ ಪ್ರಯೋಗ, ಅವುಗಳ ಸ್ವಾರಸ್ಯವನ್ನು ಹೆಚ್ಚಿಸುತ್ತದೆ.

ಗಾದೆಗಳ ಹುಟ್ಟು ಹೇಗಾಯಿತೆಂದು ನಿರ್ಧಾರ ಮಾಡಲು ಸರಿಯಾದ ಆಧಾರಗಳಿಲ್ಲ. ಜನಪದ ಸಾಹಿತ್ಯ ಸೃಷ್ಟಿಯಾದಂತೆಯೇ ಜನರ ಅನುಭವ ಈ ಬಗೆಯ ಲೋಕೋಕ್ತಿಗಳ ರೂಪದಲ್ಲಿ ಹೊರಹೊಮ್ಮಿರಬೇಕು ಎನ್ನಿಸುತ್ತದೆ.

ಬದುಕಿನ ಎಲ್ಲ ವಿಚಾರಗಳಿಗೂ ಮಾರ್ಗದರ್ಶನ ಮಾಡುವ ಅಸಂಖ್ಯಾತ ಗಾದೆಗಳಿವೆ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವುದು ಕೂಡ ಒಂದು ಗಾದೆಯೇ. ಗಾದೆಗಳು ಹೇಳದ ವಿಚಾರಗಳೇ ಇಲ್ಲ ಎನ್ನಬಹುದು. ಗಾದೆಗಳಲ್ಲಿ ನೇರವಾದ ನುಡಿಗಳುಳ್ಳವು, ಹೋಲಿಕೆಗಳುಳ್ಳವು, ಪುರಾಣ ಪ್ರಸಂಗಗಳನ್ನು ಅವಲಂಬಿಸಿರುವುಗಳು, ನೀತಿ ನಿರೂಪಿಸುವಂತಹವುಗಳು ಹೀಗೆ ಹಲವು ಬಗೆಗಳಿವೆ.

ಜನಪದರ ವೇದಗಳೆಂದೇ ಹೆಸರಾದ ಅನುಭವದ ನುಡಿಗಳು ಇವು. 'ಸಿಂಧುವನ್ನು ಬಿಂದುವಿನಲ್ಲಿ ಹಿಡಿದಿಡುವ ಮಹತ್ತರವಾದ ಕಾರ್ಯವನ್ನು ಗಾದೆಗಳು ಮಾಡುತ್ತವೆ'. ಇವು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಸಮಷ್ಟಿ ಪ್ರಜ್ಞೆಯನ್ನು ತೋರುತ್ತವೆ. ಗಾದೆಗಳ ಅರ್ಥವನ್ನು ಅರಿತು ಸಾರ್ಥಕ ಅರ್ಥವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ.

ಗಾದೆಗಳನ್ನು ವಿಸ್ತರಿಸಿ ಬರೆಯುವ ವಿಧಾನ

ಗಾದೆಗಳನ್ನು ಎರಡು ಅಥವಾ ಮೂರು ಬಾರಿ ಓದಿ ಅದರ ವಾಚ್ಯಾರ್ಥವನ್ನು ಮೊದಲು ತಿಳಿದುಕೊಳ್ಳಬೇಕು.

ವಾಚ್ಯಾರ್ಥದೊಂದಿಗೆ ಆ ಗಾದೆಯು ಬೇರೆ ಅರ್ಥವನ್ನೂ, ವಿಚಾರವನ್ನೂ ಸೂಚಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಗಾದೆಗಳನ್ನು ಓದಿ ಅರ್ಥವಾದ ವಿಷಯವನ್ನು ಸೂಕ್ತವಾದ ಪದಗಳನ್ನು ಬಳಸಿ ವಾಕ್ಯಗಳ ರೂಪದಲ್ಲಿ ವಿಸ್ತರಿಸಿ ಬರೆಯಬೇಕು. ವಿಚಾರಗಳ ಸರಿಯಾದ ವಿಸ್ತರಣೆ ಮತ್ತು ವಾಕ್ಯ ರಚನಾ ಕ್ರಮಗಳಿಗೆ ಪ್ರಾಶಸ್ತ್ಯವನ್ನೀಯಲಾಗುತ್ತದೆ.

8th_Kannada_Reader Term I_U4-9.indd 164 18-06-2019 10.47.17 AM

ಗಾದೆಗಳ ವಿಸ್ತರಣೆ

1. ತುಂಬಿದ ಕೊಡ ತುಳುಕುವುದಿಲ್ಲ

ನದಿಯಿಂದ, ಬಾವಿಯಿಂದ ಇಲ್ಲವೇ ನಲ್ಲಿಯಿಂದ ನೀರನ್ನು ಕೊಡದಲ್ಲಿ ತುಂಬಿಕೊಂಡು ತೆಗೆದುಕೊಂಡು ಬರುವಾಗ, ತಲೆಯ ಮೇಲೆ ಹೊತ್ತು ತರುವಾಗ ಈ ಹೇಳಿಕೆಯು ಅನುಭವವಾಗುತ್ತದೆ. ಕೊಡದ ತುಂಬ ನೀರಿದ್ದಾಗ ಅದು ತುಳುಕಾಡುವುದಿಲ್ಲ, ಸದ್ದು ಮಾಡುವುದಿಲ್ಲ. ಆದರೆ ಅರ್ಧ ತುಂಬಿದ ಕೊಡದಲ್ಲಿ ನೀರು ತುಳುಕಾಡುತ್ತದೆ. ಇದು ಸಹಜವಾದುದಾಗಿದೆ.

ಅದೇ ರೀತಿಯಾಗಿ ಅನುಭಾವಿಗಳು ಪಂಡಿತರು, ವಿದ್ಯಾವಂತರು, ಜ್ಞಾನಿಗಳು ಅನಗತ್ಯವಾಗಿ ಮಾತನಾಡುವುದಿಲ್ಲ. ಅಗತ್ಯವಿದ್ದಾಗ ಮಾತ್ರ ತಾವು ಹೇಳಬಯಸುವ ವಿಷಯವನ್ನು ನೇರವಾಗಿ ತಿಳಿಸುತ್ತಾರೆ. ಆದರೆ ಅಲ್ಪ ಜ್ಞಾನವುಳ್ಳವರು, ಅರ್ಧಂಬರ್ಧ ವಿಷಯ ಜ್ಞಾನವುಳ್ಳವರು ತಾವು ಎಲ್ಲವನ್ನೂ ತಿಳಿದ ಮಹಾಪಂಡಿತರೆಂದು ಗರ್ವದಿಂದ ಮೆರೆಯುತ್ತಾರೆ. ಈ ಗಾದೆ ಮಾತಿನಲ್ಲಿ ವಿದ್ಯಾವಂತರಾದವರು ಗಾಂಭೀರ್ಯದಿಂದ ನಡೆದುಕೊಳ್ಳುತ್ತಾರೆಂದೂ, ಅಲ್ಪಜ್ಞಾನಿಗಳು ಅರ್ಧ ತುಂಬಿದ ಕೊಡದಂತೆ ನಡೆದುಕೊಳ್ಳುತ್ತಾರೆಂದೂ ಹೋಲಿಸಲಾಗಿದೆ.

2. ಮನಸ್ಸಿದ್ದರೆ ಮಾರ್ಗ

ಯಾವುದೇ ಕೆಲಸವನ್ನು ಮಾಡಲು ದೃಢವಾದ ನಿರ್ಧಾರ ಬೇಕು. ಇಂತಹ ನಿರ್ಧಾರದಿಂದ ಕೆಲಸವನ್ನು ಸಫಲವಾಗಿ ಮಾಡಬಹುದೆಂದು ಈ ಗಾದೆ ಹೇಳುತ್ತದೆ. ಕೆಲಸ ಮಾಡುವಾಗ ಅದರ ಬಗ್ಗೆ ಆಸಕ್ತಿ, ನಿಷ್ಠೆ ಇದ್ದರೆ ಇನ್ನೂ ಸುಲಭವಾಗಿ ಆ ಕೆಲಸವನ್ನು ಸಾಧಿಸಬಹುದು. 'Where there is a will, there is a way' ಎಂಬ ಆಂಗ್ಲ ಗಾದೆಯೂ ಇದನ್ನೇ ಹೇಳುತ್ತದೆ. ಮನಸ್ಸಿಟ್ಟು ಕೆಲಸ ಮಾಡಿದರೆ ಬೆಟ್ಟವನ್ನೂ ಸಹ ಕುಟ್ಟಿ ಪುಡಿ ಮಾಡಬಹುದು.

3. ಶಕ್ತಿಗಿಂತ ಯುಕ್ತಿಮೇಲು

ದೈಹಿಕ ಶಕ್ತಿಗಿಂತ ಹೆಚ್ಚು ಸಮರ್ಥವಾದುದು ಬುದ್ಧಿಶಕ್ತಿ. ಬೌದ್ಧಿಕ ಸಾಮರ್ಥ್ಯದಿಂದ ಎಂತಹ ಕಷ್ಟಕರ ಸಮಸ್ಯೆಯನ್ನೂ ಸಹ ಸುಲಭವಾಗಿ ಮಾಡಿ ಮುಗಿಸಬಹುದು. ಕಥೆಯೊಂದರಲ್ಲಿ ಬರುವ ಮೊಲವು ತನ್ನ ಬುದ್ಧಿಶಕ್ತಿಯಿಂದ ಬಲಿಷ್ಠ ಸಿಂಹವನ್ನೇ ನಾಶ ಮಾಡಿತು. ಶಕ್ತಿಯಿದ್ದರೂ ಬುದ್ಧಿಯ ಪ್ರಭಾವವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಯುಕ್ತಿಗಿಂತ ಶಕ್ತಿ ಮೇಲು ಎಂಬುದು ಈ ಗಾದೆಯ ಅರ್ಥ.

ಈ ಗಾದೆಗಳನ್ನು ನಿಮ್ಮ ಮಾತುಗಳಲ್ಲಿ ವಿಸ್ತರಿಸಿ ಬರೆಯಿರಿ.

1. ಆಳಾಗ ಬಲ್ಲವನು ಅರಸಾಗ ಬಲ್ಲ
2. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು
3. ಬೆಳ್ಳಗಿರುವುದೆಲ್ಲಾ ಹಾಲಲ್ಲ
4. ಗಾಳಿ ಬಂದಾಗ ತೂರಿಕೋ
5. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ
6. ಆರೋಗ್ಯವೇ ಭಾಗ್ಯ
7. ದೂರದ ಬೆಟ್ಟ ನುಣ್ಣಗೆ
8. ಹಿತ್ತಲ ಗಿಡ ಮದ್ದಲ್ಲ
9. ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ
10. ಕೈಕೆಸರಾದರೆ ಬಾಯಿ ಮೊಸರು
11. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು
12. ಅತಿಯಾಸೆ ಗತಿಗೇಡು
13. ಆಪತ್ತಿಗಾದವನೇ ನಂಟ
14. ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
15. ಹಾಸಿಗೆ ಇದ್ದಷ್ಟು ಕಾಲು ಚಾಚು
16. ದುಡ್ಡೇ ದೊಡ್ಡಪ್ಪ, ವಿದ್ಯೆ ಅವರಪ್ಪ
17. ಕೆಟ್ಟ ಮೇಲೆ ಬುದ್ಧಿ ಬಂತು
18. ಬೆಳೆವ ಸಿರಿ ಮೊಳಕೆಯಲ್ಲಿ
19. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?
20. ನಾಳೆಯೆಂಬುದು ಹಾಳು
21. ಮಾತು ಬೆಳ್ಳಿ, ಮೌನ ಬಂಗಾರ
22. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ
23. ಸಜ್ಜನರ ಸಂಗ ಹೆಜ್ಜೇನು ಸವಿದಂತೆ
24. ಮಾಡಿದ್ದುಣ್ಣೋ ಮಹರಾಯ

8th_Kannada_Reader Term I_U4-9.indd 165 18-06-2019 10.47.17 AM

Kannada Reader – Class VIII

Text Book Development Team

Academic Advisor

Dr. P. Kumar
Joint Director (Syllabus),
State Council of Education Research and Training Tamilnadu,
Chennai 600 006,

Reviewer

DR. TAMIL SELVI
Professor and Head,
Department of Kannada
University of Madras, Marina,
Chennai – 600 005.

Co-ordinator

K.CHANDRASEKARAN
Lecturer, DIET, Chennai

Art and Design Team

Layout
Rajesh Thangappan
Gopinath Ragupathi
Madhan
Adison
S. Ashok kumar

QC
P. Arun Kamaraj
Jerald Wilson

Cover Design
Kathir Arumugam

Coordination
Ramesh Munisamy

Authors

Mr. K. KUMAR ACHAR
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

Mr. C. SADASHIVAMURTHY
P.G. Asst. in Kannada
Govt. Hr. Sec. School
Thalavadi, Erode Dt. 638461.

Mr. N. BASAVARAJU
B.T. Asst. in Kannada
Govt. Hr. Sec. School
Thalavadi, Erode Dt. 638461

Mr. JOHNSON SUKUMAR
B.T. Asst. in Kannada
Govt. Hr. Sec. School
Panakahalli Thalavadi, Erode Dt. 638461

Mr. T.R. KANNAN
B.T. Asst. in Kannada
Govt. Hr. Sec. School
Madhagondapalli, Krishnagiri Dt. 635114

Mr. K. ANTHONY MUTHU
B.T. Asst. in Kannada
Govt. Hr. Sec. School
Thalavadi, Erode Dt. 638461

This book has been printed on 80 G.S.M.
Elegant Maplitho paper.

Printed by offset at:

8th_Kannada_Reader Term I_U4-9.indd 166 18-06-2019 10.47.17 AM